ಬಿದ್ರಿ ಕಲೆ

ಬಹಮನಿ ಸುಲ್ತಾನರ ಕೊಡುಗೆ

ಫೆಲೋಶಿಪ್‌ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡಮಿಗೆ
ಸಾದರಪಡಿಸಿದ ಸಂಶೋಧನ ಪ್ರಬಂಧ

....

ಸಂಶೋಧಕ
ಡಾ. ರೆಹಮಾನ್ ಪಟೇಲ್

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು
೨೦೧೫-೧೬

ಬಿದ್ರಿ ಕಲೆ

ಬಹಮನಿ ಸುಲ್ತಾನರ ಕೊಡುಗೆ

....

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಕನ್ನಡದ ನೆಲ ಹತ್ತು ಹಲವು ವಿಶೇಷಣಗಳಿಂದ ಕೂಡಿದ ಕರಿನೆಲ. ಕರ್ನಾಟಕದ ದಕ್ಷಿಣದಲ್ಲಿ ಚಾಮರಾಜನಗರ ಜಿಲ್ಲೆ ಕೊನೆಯದಾದರೆ, ಉತ್ತರದಲ್ಲಿ ಬೀದರ್ ಜಿಲ್ಲೆ ಕೊನೆಯದು. ಈ ಜಿಲ್ಲೆಯ ಗಡಿಯಾಚೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ರಾಜ್ಯಗಳುಂಟು. ಹೀಗಾಗಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಸಂಸ್ಕೃತಿಗಳೆಲ್ಲವೂ ಇಲ್ಲಿ ಸಮ್ಮಿಳಿತಗೊಂಡಿವೆ. ವಿಶೇಷವಾಗಿ ಹೈದ್ರಾಬಾದ್ ನಿಜಾಮ ಸಂಸ್ಕೃತಿ ಅಚ್ಚಳಿಯದ ಪ್ರಭಾವವನ್ನು ಇಲ್ಲಿನ ಜನರಲ್ಲಿ, ನಡೆ-ನುಡಿಗಳಲ್ಲಿ, ಸಂಸ್ಕಾರ-ಸಂಸ್ಕೃತಿಗಳಲ್ಲಿ, ಸಂಪ್ರದಾಯಗಳಲ್ಲಿ ಅಷ್ಟೇ ಏಕೆ? ವಿವಿಧ ಕಲೆಗಳಲ್ಲೂ ಸಹ ಕಾಣಬಹುದು. ಈ ಕಲೆ ಹಲವಾರು ಮಾಧ್ಯಮಗಳಲ್ಲಿ ಸೃಷ್ಟಗೊಂಡು ಆಯಾ ಕಾಲದ ಜನರ ಅಗತ್ಯದ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ. ಮಣ್ಣು, ಮರ, ಶಿಲೆ, ಮುಂತಾದ ಮಾಧ್ಯಮಗಳಲ್ಲಿ ದೃಶ್ಯಕಲೆ ಬೆಳೆದುಬಂದಂತೆ ಲೋಹ ಮಾಧ್ಯಮದಲ್ಲಿ ಅನೇಕ ಕರಕುಶಲ ಕಲೆಗಳು ಬೆಳೆದು ಬಂದಿದ್ದಲ್ಲದೇ ಅವುಗಳದೇ ಆದ ನೆಲೆ-ನೆಲೆಯಲ್ಲಿಯನ್ನು ಹೊಂದಿವೆ.

ಭಾರತದಲ್ಲಿ ಲೋಹದ ಕಸಬು ತುಂಬ ಪ್ರಾಚೀನವಾದುದು. ಒಂದು ಲೋಹವನ್ನು ಇನ್ನೊಂದು ಲೋಹದಲ್ಲಿ ಹುದುಗಿಸುವ ಕುಶಲಕಲೆ ವಿಶಿಷ್ಟವಾದುದು. ವರ್ಣಚಿತ್ರ, ವಸ್ತ್ರಾಭರಣ, ಮುಂತಾದವುಗಳು ತಮ್ಮ ವೈವಿಧ್ಯ ಹಾಗೂ ಸೌಂದರ್ಯಗಳಿಂದ ಮನಮೋಹಕವೆನಿಸಿರುವಂತೆ ಒಂದರಲ್ಲಿ ಇನ್ನೊಂದು ಲೋಹವನ್ನು ಹುದುಗಿಸುವ ಕಲೆಯೂ ಪ್ರಾದೇಶಿಕ ಚರಿತ್ರೆ ಮತ್ತು ರೂಢಿಗಳನ್ನು ನೆನಪಿಸುತ್ತದೆ. ಉಳಿ ಮತ್ತು ಸುತ್ತಿಗೆಗಳ ಭಾಷೆಯ ಮೂಲಕ ಅದು ರಕ್ತಪಾತ ಮತ್ತು ವಿಜಯಗಳ, ಭಕ್ತಿ ಮತ್ತು ತೀವ್ರತರವಾದ ಭಾವಗಳ ಕಥೆಗಳನ್ನು ಹೇಳುತ್ತದೆ.[೧]

ಕುಶಲಕಲೆಗಳ ಹಲವಾರು ಪರಂಪರೆಗಳು ಈ ದೇಶದಲ್ಲಿ ರೂಢವಾಗಿದ್ದವು. ಲೋಹ, ಮಿಶ್ರಲೋಹ, ರತ್ನ, ಕಲ್ಲು ಮತ್ತು ಕಟ್ಟಿಗೆಗಳನ್ನು ಆಧಾರವಾಗಿಟ್ಟುಕೊಂಡು ಬೆಳೆದು ಬಂದ ಕುಶಲಕಲೆಗಳುಅಸಂಖ್ಯ. ಇವುಗಳಲ್ಲಿ ಬಹಳಷ್ಟು ಪರಂಪರೆಗಳು ಪ್ರಾಚೀನ ಕಾಲದಲ್ಲಿ ಹುಟ್ಟಿದವುಗಳಾಗಿದ್ದು, ಇಂದೂ ಕೂಡ ಸತ್ವಪೂರ್ಣವಾಗಿ ಮುಂದುವರಿದುಕೊಂಡು ಬಂದಿವೆ. ಅಂಥವುಗಳಲ್ಲಿ ಬೀದರನ "ಬಿದ್ರಿ ಕಲೆ"ಯೂ ಒಂದು.

ಬೀದರ ಒಂದರ್ಥದಲ್ಲಿ ಪಶ್ಚಿಮದ ಮಲೆನಾಡಿನ ಪರಿಸರವನ್ನು ನೆನಪಿಸುವ ಶೀತ ವಲಯ. ಐತಿಹಾಸಿಕವಾಗಿ ರಾಷ್ಟ್ರದ ಪುಟಗಳಲ್ಲಿ ಗೋಚರಿಸಿದರೆ, ಬಿದ್ರಿ ಕಲೆಯಿಂದ ಜಾಗತಿಕ ಮನ್ನಣೆಯನ್ನು ಪಡೆದ ಸ್ಥಳವಿದು. ಬಿದ್ರಿ ಕಲೆ ವಿಶೇಷವಾಗಿ ಮುಸ್ಲಿಂ ರಾಜರುಗಳ ರಾಜ ವೈಭವವನ್ನು ಬಿಂಬಿಸುವ, ಅರಮನೆಗಳ ಪಡಸಾಲೆಗಳನ್ನು ಮತ್ತು ದರ್ಬಾರುಗಳನ್ನು ಅಲಂಕರಿಸುವ, ಹಾಗೂ ಗೃಹೋಪಯೋಗಿ

ವಸ್ತುಗಳ ರೂಪದಲ್ಲಿ ಮೈದಳೆದ ಕಲೆ ಇದು. ಈ ಮುಖೇನವಾಗಿ ಸಾವಿರಾರು ಜನ ಕುಶಲಕರ್ಮಿಗಳಿಗೆ ಉದರವನ್ನು ತುಂಬಿಸುವುದರೊಂದಿಗೆ, ರಾಷ್ಟ್ರ–ಅಂತರಾಷ್ಟ್ರೀಯ ಖ್ಯಾತಿಯನ್ನೂ, ಮನ್ನಣೆಯನ್ನು ತಂದು ಕೊಟ್ಟಿದ್ದು ಬೀದರನ 'ಬಿದ್ರಿ ಕಲೆ' ಎಂದರೆ ಅತಿಶಯೋಕ್ತಿಯಾಗಲಾರದು.

'ಬೀದರ' ಶಬ್ದದ ನಿಷ್ಪತ್ತಿ 'ಬಿದ್ರಿ'. ('ಬಿದ್ರಿ' ಈ ಶಬ್ದದ ಕುರಿತು ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದೆ) ಈ 'ಬಿದ್ರಿ' ಕಲೆ ಕೇವಲ ಬೀದರಗೆ ಮಾತ್ರ ಸೀಮಿತವಾಗಿಲ್ಲ. ಭಾರತದ ದೆಹಲಿ, ಜೈಪುರ, ಅಜ್ಮೀರ್, ಜಾವಾರ್, ಲಖ್ನೌ, ಫೈಜ್‌ಬಾದ್, ಬನಾರಸ್, ಪೂರ್ಣಿಯಾ, ಮುರ್ಶಿಯಾಬಾದ್, ಮುರದಾಬಾದ್, ಕೋಲ್ಕತ್ತಾ, ಸೂರತ್, ಮುಂಬಯಿ, ಅಹಮದ್‌ನಗರ, ಗೋಲ್ಕೊಂಡ, ಹೈದರಾಬಾದ್ ಮತ್ತು ವಿಜಯಪುರಗಳಲ್ಲಿ ಹಾಗೂ ಪಾಕಿಸ್ತಾನ, ಬಾಂಗ್ಲಾದೇಶ, ಇಂಡೋನೇಶಿಯಾ, ಪರ್ಶಿಯಾ ಹೀಗೆ ಅನೇಕ ಮುಸ್ಲಿಂ ದೇಶಗಳಲ್ಲಿ ಈ ಬಿದ್ರಿ ಕಲೆ ಬಾಳಿ ಬೆಳಗಿದ್ದುಂಟು. ಆದರೆ ಬೀದರನ ಬಿದ್ರಿ ಕಲೆಯಷ್ಟು ಮೌಲ್ಯ, ಖ್ಯಾತಿ ಇತರ ಕೇಂದ್ರಗಳ ಬಿದ್ರಿ ಕಲೆಗಳಿಗೆ ಪ್ರಾಪ್ತವಾಗಿಲ್ಲವೆಂಬುದು ದಿಟ.

ಬೀದರಿನ ಬಿದ್ರಿ ಕಲೆಗೆ ಅಂತರಾಷ್ಟ್ರೀಯ ಖ್ಯಾತಿಯೊಂದಿಗೆ, ಮಾರುಕಟ್ಟೆಯೂ ಇದೆ. ಏಕೆಂದರೆ ಇಲ್ಲಿನ ಬಿದ್ರಿ ಕುಶಲ ಕರ್ಮಿಗಳು ಅನುಸರಿಸುವ ರಚನಾ ತಂತ್ರಗಾರಿಕೆ ಜೊತೆಗೆ ಆಕರ್ಷಕ ವಿನ್ಯಾಸಗಳು ಇತರ ಕೇಂದ್ರಗಳ ಬಿದ್ರಿ ಕಲೆಗಳಲ್ಲಿ ಕಂಡುಬರುವುದಿಲ್ಲ. ಬಹುಬಗೆಯ ವಿನ್ಯಾಸಗಳು ಕಾಲ–ದೇಶಗಳಿಗನುಗುಣವಾಗಿ ಪರಿವರ್ತನೆಯಾಗುವದರ ಜೊತೆಗೆ ತನ್ನ ಮೂಲ ಪಾರಂಪರಿಕ ಸತ್ವವನ್ನು ಉಳಿಸಿಕೊಂಡ ಈ ಬಿದ್ರಿ ಕಲೆ, ಇಂದಿನ ಆಧುನಿಕ ಸಂದರ್ಭದಲ್ಲಿಯೂ ತನ್ನ ಅಂತಃಸ್ವತ್ವವನ್ನು ಬಿಟ್ಟುಕೊಡದೇ ಗಟ್ಟಿಯಾಗಿ ನಿಂತ ಕಲೆ. ಹೀಗಾಗಿ ಬಿದ್ರಿ ಕಲೆಗೆ ಸಲ್ಲುವ ಮೌಲ್ಯ, ಗೌರವಗಳು ಬಿದ್ರಿ ಕಲಾವಿದರಿಗೂ ಸಹ ಸಲ್ಲುತ್ತಿರುವುದು ಸರ್ವವಿಧಿತವಾದರೂ ಸರಕಾರದ ಮಟ್ಟದಲ್ಲಿ ಇವರಿಗೆ ದೊರಕುತ್ತಿರುವ ಸೌಲಭ್ಯಗಳು ಅತ್ಯಲ್ಪ.

ಬೀದರನ ಬಿದ್ರಿ ಕಲೆಯಲ್ಲಿ ಏನುಂಟು ಏನಿಲ್ಲ. ಪಾರಂಪರಿಕ ಶೈಲಿಯಿಂದ ಹಿಡಿದು ಆಧುನಿಕ ಬದುಕಿನ ಮಜಲಿಗೆ ತಕ್ಕಂತೆ ಅನೇಕ ಬಗೆಯ ಕಲಾವಸ್ತುಗಳನ್ನು ಇಲ್ಲಿ ಕುಶಲಕರ್ಮಿಗಳು ರಚಿಸುವುದರಲ್ಲಿ ಸಿದ್ಧಹಸ್ತರು. ಬಹಮನಿ ಸುಲ್ತಾನ್ ಹಾಗೂ ನಿಜಾಮರ ಕಾಲವನ್ನು ನೆನಪಿಗೆ ತರುವ ಹೂಜಿ, ಹುಕ್ಕಾ ತಟ್ಟೆ, ಸುಗಂಧದ್ರವ್ಯವನ್ನು ಸಿಂಪಡಿಸುವ ಹೂಜಿ, ಆಭರಣಗಳ ಪೆಟ್ಟಿಗೆ, ಖಡ್ಗಗಳು, ಅಲಂಕಾರಿಕ ತಟ್ಟೆಗಳು ಹೀಗೆ ಹತ್ತು ಹಲವಾರು ಕಲಾವಸ್ತುಗಳನ್ನು ತಯಾರಿಸುವುದರಲ್ಲಿ ಕುಶಲಕರ್ಮಿಗಳ ಬೆವರು ಬೆಂಕಿಯಲ್ಲಿ ಆವಿಯಾದರೆ, ಕಲಾವಸ್ತುಗಳನ್ನು ಕೊಂಡ ಸ್ಥಿತಿವಂತರ ಮನಕ್ಕೆ ತಂಪರೆಯುತ್ತವೆ.

ಪ್ರಸ್ತುತ ಸ್ಥಿತಿಯಲ್ಲಿ ಬಿದ್ರಿ ಕಲೆ–ಕಲಾವಿದರ ಕುರಿತಾದ ವಿವರ ಮತ್ತು ಅವರ ಭಾವನಾತ್ಮಕ ತುಡಿತಗಳನ್ನು ಹಾಗೂ ಪ್ರಕಟಿತ ವಿಮರ್ಶೆಗಳನ್ನು ಇಂದು ನಾವು ದಾಖಲಿಸುವ ಕಾರ್ಯ ಮಾಡಬೇಕಾಗಿದೆ. ನಾಡಿನ ಉದ್ದಗಲಕ್ಕೂ ಬಿದ್ರಿ ಕಲಾವಿದರಂಥ ಕಲಾ ಸಾಧನೆ ಇವು ನಮ್ಮ ಗಮನಕ್ಕೆ

ಎಷ್ಟೋ ಸಲ ಬಾರದೇ ಮಸುಕಾಗಿ ಹೋಗಿವೆ. ಆದರೆ ಅವು ನಿರಂತರವಾಗಿ ಮುಂದಿನ ಜನಾಂಗಕ್ಕೂ ಪರಿಚಯವಾಗಬೇಕಾದರೆ ಅವರುಗಳ ಅಧ್ಯಯನ ಕ್ರಮವನ್ನು ಹಾಗೂ ಅವರ ರಚನಾ ಕೈಂಕರ್ಯವನ್ನು ಕಾರ್ಯರೂಪಕ್ಕೆ ತರುವುದು ಇಂದು ತೀರಾ ಅವಶ್ಯಕವಾಗಿದೆ.

ಸಾಂಪ್ರದಾಯಿಕ ನೆಲೆಯ ಈ ಬಿದ್ರಿ ಕಲೆಯಲ್ಲಿ ಬಹುತೇಕವಾಗಿ ಪ್ರಾಕೃತಿಕ ವಿನ್ಯಾಸಗಳೇ ಪ್ರಮುಖ ಸ್ಥಾನದಲ್ಲಿವೆ. ಒಂದರ್ಥದಲ್ಲಿ ಆಭರಣಗಳಲ್ಲಿ ಬಳಸಿಕೊಳ್ಳುವ ವಿನ್ಯಾಸಗಳನ್ನೇ ಇಲ್ಲಿಯೂ ದುಡಿಸಿಕೊಂಡರೂ, ತಂತ್ರಗಾರಿಕೆ ಅದಕ್ಕಿಂತ ವಿಭಿನ್ನವಾಗಿರುವ ಬಗೆಯ ಹಿನ್ನೆಲೆಯಲ್ಲಿ ಈ ಕಲೆಗೆ ಇರುವ ಪ್ರಾಚೀನತೆಯ ಅರಿವು ನಮಗಾಗುತ್ತದೆ. ಅತ್ಯಂತ ಪ್ರಾಚೀನ ಕಲಾ ಪರಂಪರೆಯೊಂದರ ಸೌಂದರ್ಯ ಪ್ರಧಾನ ಆಶಯಗಳು ಹೇಗೆ ರಾಜ ಮಹಾರಾಜರುಗಳಿಂದ ಪೋಷಿಸಲ್ಪಟ್ಟವು. ನಂತರದಲ್ಲಿ ಅವು ಅರಮನೆಯ ಪಡಸಾಲೆಯಿಂದ ಪ್ರಜೆಗಳ ಮನೆಯ ಪಡಸಾಲೆಯವರೆಗೆ ಬಿದ್ರಿ ಕಲಾಕೃತಿಗಳು ಹೇಗೆ ಪರಿವರ್ತನೆ ಹೊಂದಿದವು ಎಂಬುದನ್ನು ಸಹ ಈ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಸೌಂದರ್ಯಾನುಭವ ಎಂಬುದು ಕೇವಲ ರಾಜ ಮಹಾರಾಜರುಗಳಿಗೆ ಸೀಮಿತಗೊಳ್ಳದೇ ಜನಸಾಮಾನ್ಯರಿಗೂ ಸಹ ಸೌಂದರ್ಯವನ್ನು ಸವಿಯುವ, ತನ್ಮೂಲಕ ಬಿದ್ರಿ ಕುಶಲಕರ್ಮಿಗಳ ಬದುಕಿಗೆ ದಾರಿ ಮಾಡಿಕೊಟ್ಟಿರುವುದನ್ನು ಸಹ ಇಂತಹ ಅಧ್ಯಯನಗಳಲ್ಲಿ ಕಾಣಬಹುದಾಗಿದೆ.

ಬಿದ್ರಿ ಕಲೆಯ ಕುರಿತಾಗಿ ವಿದ್ವಾಂಸರಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿರುವುದರ ಹಿನ್ನೆಲೆಯಲ್ಲಿ ಈ ಕಲೆಗೆ ಇರುವ ಪ್ರಾಚೀನತೆಯ ಅರಿವು ನಮಗಾಗುತ್ತದೆ. ಇಂತಹ ಪ್ರಾಚೀನ ಕಲೆಯ ಕುರಿತು ದೇಸೀ ಹಾಗೂ ವಿದೇಶಿ ವಿದ್ವಾಂಸರು ಈಗಾಗಲೇ ಅಧ್ಯಯನ ನಡೆಸಿದ್ದಾರೆ. (ಇಂತಹ ವಿದ್ವಾಂಸರಲ್ಲಿ ಜಾರ್ಜ ಮೈಕೆಲ್, ಜಿಬ್ರೋವಿಸ್ಕಿ ಪ್ರಮುಖರಾಗಿದ್ದು, ಇವರೊಂದಿಗೆ ಕೆ.ಎಲ್.ರಾಜಶೇಖರ ಇನ್ನೂ ಮುಂತಾದವರು. ಜಾರ್ಜ ಮೈಕೆಲ್ ಮತ್ತು ಜಿಬ್ರೋವಿಸ್ಕಿ ಅವರ "ದಿ ನ್ಯೂ ಕ್ಯಾಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ಆರ್ಕಿಟೆಕ್ಚರ್ ಆ್ಯಂಡ್ ಆರ್ಟ್ ಆಫ್ ದಿ ಡೆಕ್ಕನ್ ಸುಲ್ತಾನೇಟ್ಸ್" ಈ ಗ್ರಂಥವೇ ಬಹುತೇಕ ಹೊಸ ಮುಖದ ವಿದ್ವಾಂಸರಿಗೆ ಮಹತ್ವದ ಆಕರ ಗ್ರಂಥವಾಗಿದ್ದು ಅವರ ಬಿದ್ರಿ ಕಲೆಯ ಕುರಿತಾದ ಪುಸ್ತಕ/ಲೇಖನಗಳಲ್ಲಿನ ಮಾಹಿತಿಗಳೆಲ್ಲವೂ ಬಹುತೇಕವಾಗಿ ಈ ಗ್ರಂಥದಿಂದ ಆಯ್ದುಕೊಂಡಿವೆ.) ಈ ವಿದ್ವಾಂಸರ ಅಧ್ಯಯನದ ಹಿನ್ನೆಲೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಯದ್ದು ಎಂಬುದು ಅವರಿಂದ ಪ್ರಕಟವಾಗಿರುವ ಗ್ರಂಥಗಳಿಂದ ತಿಳಿಯಬಹುದು.

ಆದರೆ...ಇತಿಹಾಸಕ್ಕೆ ಸೀಮಿತಗೊಳಿಸಿದ ಅಧ್ಯಯನಗಳ ನಡುವೆ ದೃಶ್ಯಾತ್ಮಕವಾಗಿ ಕೇಂದ್ರೀಕೃತಗೊಂಡ ಅಧ್ಯಯನಗಳು ಈ ಬಿದ್ರಿ ಕಲೆಯ ಕುರಿತಾಗಿ ನಡೆದಿರುವುದು ಅಪರೂಪವೆನ್ನಬಹುದು. ಈ ಹೊತ್ತಿನವರೆಗೆ ಪ್ರಕಟವಾಗಿರುವ ಗ್ರಂಥಗಳನ್ನು ಮತ್ತು ಲೇಖನಗಳನ್ನು

ಗಮನಿಸಿದಾಗ ದೃಶ್ಯಾತ್ಮಕ ನೆಲೆಯಲ್ಲಿಯೇ ಕೇಂದ್ರೀಕೃತಗೊಳಿಸಿರುವ ಬಿದ್ರಿ ಕಲೆಯ ಅಧ್ಯಯನದ ಅವಶ್ಯಕತೆ ಸಹಜವಾಗಿಯೇ ಕಂಡುಬರುತ್ತದೆ.

ಚಾರಿತ್ರಿಕ ದೃಷ್ಟಿಕೋನದ ಹಿಂದಿನ ಅಧ್ಯಯನಗಳಿಗಿಂತ ವಿಭಿನ್ನವಾಗಿ ಇನ್ನೊಂದು ದೃಶ್ಯಾತ್ಮಕ ನೆಲೆಯ ಅಧ್ಯಯನದ ಅವಶ್ಯಕತೆಯನ್ನು ಪೂರೈಸುವ ನಿಟ್ಟಿನಲ್ಲಿ ಈ ಅಧ್ಯಯನ ಕೈಗೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಏಕೆಂದರೆ ಬಿದ್ರಿ ಕಲೆಯ ರಚನಾ ತಂತ್ರಗಳು, ವಿನ್ಯಾಸಗಳು, ಶೈಲಿಗಳು, ಲಕ್ಷಣಗಳು ಹಾಗೂ ಕುಶಲಕರ್ಮಿಗಳ ಬದುಕು ಬವಣೆಯನ್ನು ಸಂಶೋಧನಾತ್ಮಕವಾಗಿ ದಾಖಲಿಸದಿದ್ದರೆ ನಮ್ಮ ಮುಂದಿನ ಪೀಳಿಗೆಯ ಪಾಲಿಗೆ ಬಿದ್ರಿ ಕಲೆ ಒಂದು ದಂತ ಕಥೆಯಾಗಿ ಹಿರಿಯರಿಂದ ಕೇಳುವಂಥ ಪರಿಸ್ಥಿತಿ ಬರಬಹುದು. ಈ ಹಿನ್ನೆಲೆಯಲ್ಲಿ ಸಮಗ್ರವಾದ ದೃಶ್ಯಾತ್ಮಕ ಅಧ್ಯಯನದೊಂದಿಗೆ ಈ ಪ್ರಬಂಧವನ್ನು ಮಂಡಿಸುವ ಉದ್ದೇಶವನ್ನು ಹೊಂದಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಅನುಕೂಲತೆಗಾಗಿ ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಅವುಗಳ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಚರ್ಚಿಸುವ ಮತ್ತು ವಿಷಯದ ಕುರಿತಂತೆ ಅವರ ಸಂಕ್ಷಿಪ್ತ ರೂಪದ ವಿವರವನ್ನು ಇಲ್ಲಿ ನೀಡಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಮತ್ತು ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿಯ ಕುರಿತಾಗಿ ವಿವರಣೆಯನ್ನು ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬಿದ್ರಿ ಕಲೆಯ ಶಬ್ದ ನಿಷ್ಪತ್ತಿಯನ್ನು ವಿವರಿಸುವುದರೊಂದಿಗೆ ಆ ಕಲೆಯ ಬೆಳೆದು ಬಂದ ಪ್ರಾಚೀನತೆಯನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಬಿದ್ರಿ ಕಲಾಕೃತಿಗಳನ್ನು ರಚಿಸುವ ಸಂದರ್ಭದಲ್ಲಿ ಬಳಸಲಾಗುವ ಪರಿಕರಗಳನ್ನು ಹಾಗೂ ರಚಿಸುವ ವಿಧಿ ವಿಧಾನಗಳ ವಿವರವನ್ನು ಈ ಅಧ್ಯಾಯ ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಈ ಮಹಾಪ್ರಬಂಧದ ಪ್ರಮುಖ ಅಧ್ಯಾಯವಾಗಿದ್ದು, ಬಿದ್ರಿ ಕಲಾಕೃತಿಗಳನ್ನು ಶೈಲಿಗಳಲ್ಲಿ, ವಸ್ತು ವಿಷಯಗಳಲ್ಲಿ ವರ್ಗೀಕರಿಸಿಕೊಂಡು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬಿದ್ರಿ ಕಲಾಕೃತಿಗಳಿಗೆ ಇರುವ ಜಾಗತಿಕ ಮಾರುಕಟ್ಟೆ, ಪ್ರದರ್ಶನ ವ್ಯವಸ್ಥೆ, ಸರಕಾರದ ಪ್ರೋತ್ಸಾಹಗಳ ಕುರಿತಾಗಿ ಇಲ್ಲಿ ವಿವರಗಳನ್ನು ದಾಖಲಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಿದ್ರಿ ಕಲೆಯ ಕುಶಲಕರ್ಮಿಗಳ ಸ್ಟುಡಿಯೋ, ಕುಟುಂಬ ಮತ್ತು ಅವರ ಕಲಾಬದುಕಿನ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ಏಳೂ ಅಧ್ಯಾಯಗಳಲ್ಲಿ ಚರ್ಚಿತವಾದ ಫಲಿತಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ವಿಶೇಷವಾಗಿ ಬೀದರ ಜಿಲ್ಲೆಯ ವ್ಯಾಪ್ತಿಯನ್ನೇ ಹೊಂದಿದ್ದರೂ ದೇಶ–ವಿದೇಶಗಳ ವಸ್ತು ಸಂಗ್ರಹಾಲಯದ ಬಿದ್ರಿ ಕಲೆಯ ವಸ್ತುಗಳೇ ಪ್ರಮುಖ ಆಕರಗಳಾಗಿವೆ. ಏಕೆಂದರೆ ಪ್ರಾಚೀನ ಬಿದ್ರಿ ಕಲೆಯ ವಿನ್ಯಾಸ, ರಚನಾ ಪರಂಪರೆಗಳನ್ನು ಅಧ್ಯಯನಕ್ಕೆ ಮೂಲವಾಗಿಟ್ಟುಕೊಂಡು ಇತ್ತೀಚಿನ ಆಧುನಿಕ ಬಿದ್ರಿ ಕಲೆಗಳನ್ನು, ಬಿದ್ರಿ ಕಲೆಯ ಚರಿತ್ರೆ ಹಾಗೂ ಬಿದ್ರಿ ಕಲಾವಿದರನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಬೀದರ ನಗರವನ್ನೇ ವಿಶೇಷವಾಗಿ ಅಧ್ಯಯನದ ಕೇಂದ್ರವನ್ನಾಗಿಸಿಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ

ಈ ಅಧ್ಯಯನದಲ್ಲಿ ಎರಡು ವಿಧವಾದ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡು ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿ ತಿಳಿಯಪಡಿಸಲಾಗುವುದು.

ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯವಾಗಿದ್ದು. ಇದರಲ್ಲಿ. ಸಂದರ್ಶನ, ಛಾಯಾ ಚಿತ್ರಣ, ಧ್ವನಿಗ್ರಹಣ, ಹಾಗೂ ಚಿತ್ರಕಲಾವಿದರ ಸಂದರ್ಶನಗಳ ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ದಪಡಿಸಿ ಬೇರೆ ಬೇರೆ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ

ಬೀದರನ ಬಿದ್ರಿ ಕಲೆಯ ಕುಶಲಕರ್ಮಿಗಳನ್ನು ಸ್ವತಃ ಸಂದರ್ಶಿಸಿ, ಈ ಕಲೆಯ ರಚನಾ ವಿಧಿ ವಿಧಾನಗಳನ್ನು, ಕಲಾಕೃತಿಗಳಿಗೆ ಇರುವ ಬೇಡಿಕೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಹಾಗೂ ಅವರ ಬದುಕಿನ ಮಜಲುಗಳನ್ನು ಸಂದರ್ಶನದ ಮೂಲಕ ಧ್ವನಿ ಸುರುಳಿಯ ರೂಪದಲ್ಲಿ ದಾಖಲಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಛಾಯಾಗ್ರಹಣ

ಬೀದರನ ಬಿದ್ರಿ ಕಲೆಯ ಕುಶಲಕರ್ಮಿಗಳ ಸ್ಟುಡಿಯೋ, ಈ ಕಲಾಕೃತಿಗಳನ್ನು ರಚಿಸುವ ರಚನಾ ವಿಧಾನಗಳನ್ನು ಹಾಗೂ ಅಧ್ಯಯನಕ್ಕೆ ಪ್ರಧಾನವಾಗಿರುವ ಬಿದ್ರಿ ಕಲಾಕೃತಿಗಳನ್ನು ದೃಶ್ಯಾತ್ಮಕವಾಗಿ ದಾಖಲಿಸಲು ಛಾಯಾಗ್ರಹಣ ಮಾಧ್ಯಮವನ್ನು ಪ್ರಧಾನವಾಗಿ

ದುಡಿಸಿಕೊಳ್ಳಲಾಗುವುದು. ನಂತರ ಈ ಛಾಯಾಚಿತ್ರಗಳನ್ನು ಗಣಕೀಕರಣಗೊಳಿಸಿ ಪ್ರಬಂಧದ ಸ್ವರೂಪಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳಲಾಗುವುದು.

ಆನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ನಿಘಂಟುಗಳು, ಗೆಝೆಟೇರಿಯರಗಳು. ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾ ಲೇಖನಗಳು ಹಾಗೂ ಅಭಿಪ್ರಾಯಗಳು ಸಂಶೋಧನಾ ಲೇಖನಗಳು ಬೇರೆ ಬೇರೆ ಗ್ರಂಥಾಲಯಗಳಿಂದ ವಿಷಯವನ್ನು ಸಂಗ್ರಹಿಸಿಕೊಂಡು ಈ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ : ಎರಡು

ಬಿದ್ರಿ ಕಲೆಯ : ಅರ್ಥಸ್ವರೂಪ ಮತ್ತು ಚಾರಿತ್ರಿಕ ಹಿನ್ನೆಲೆ

ಬಿದ್ರಿ ಕಲೆಯ ಶಬ್ದ ನಿಷ್ಪತ್ತಿಯ ಕುರಿತು ವಿದ್ವಾಂಸರಲ್ಲಿ ಅನೇಕ ಬಗೆಯ ಗೊಂದಲಗಳಿವೆ. ಇದು ಸಹಜ. ಪ್ರಾಚೀನ ಕಲೆಯೊಂದರ ಕುರಿತು ಚರ್ಚಿಸಬೇಕಾದ ಸಂದರ್ಭದಲ್ಲಿ ಸೂಕ್ತ ದಾಖಲೆಗಳು, ಸಾಕ್ಷಾಧಾರಗಳು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಇಂತಹ ಗೊಂದಲಗಳು ಹುಟ್ಟುತ್ತವೆ. ಬೀದರನ ನಿಷ್ಪತ್ತಿ 'ಬಿದ್ರಿ' ಎಂಬುದು ಕೆಲ ವಿದ್ವಾಂಸರ ಅಭಿಪ್ರಾಯವಾಗಿದ್ದು ಇಂತಹ ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಷ್ಟೇ ಅಲ್ಲದೇ ಬಿದ್ರಿ ಕಲೆಯ ಪ್ರಾಚೀನತೆ ಮೇಲ್ನೋಟಕ್ಕೆ ಅದು ಆರೇಳು ಶತಮಾನಗಳಿಂದ ನಮ್ಮ ದೇಶದಲ್ಲಿ ನೆಲೆಯೂರಿದ್ದನ್ನು ಇತಿಹಾಸಕಾರರು ಗುರುತಿಸುತ್ತಾರೆ. ಸಾಧ್ಯವಾದಷ್ಟು ಅದರ ಪ್ರಾಚೀನತೆಯನ್ನು ಗುರುತಿಸುವ ಪ್ರಯತ್ನವನ್ನು ಈ ಮಹಾಪ್ರಬಂಧಲ್ಲಿ ಮಾಡಲಾಗಿದೆ. ಜೊತೆಗೆ ಭಾರತದಲ್ಲಿ ಪ್ರಚಲಿತವಿರುವ ಬಿದ್ರಿಕಲೆಯ ಶೈಲಿಗಳನ್ನು ಸಹ ಇಲ್ಲಿ ದಾಖಲಿಸುವ ಪ್ರಯತ್ನವನ್ನು ಆಕರ ಗ್ರಂಥಗಳಿಂದ ಮಾಡಲಾಗಿದ್ದು, ರಾಜ ಮಹಾರಾಜರ ಪೋಷಣೆ, ಪ್ರೋತ್ಸಾಹದಲ್ಲಿ ಅದು ಹಂತ ಹಂತವಾಗಿ ಬೆಳದು ಬಂದ ಬಗೆಯನ್ನು ಸವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ : ಮೂರು

ಬಿದ್ರಿ ಕಲೆಯ : ರಚನಾ ಪರಿಕರಗಳು ಮತ್ತು ರಚನಾ ವಿಧಿ ವಿಧಾನಗಳು

ಕಲಾಕೃತಿಯೊಂದರ ಹುಟ್ಟಿನ ಹಿಂದೆ ಮೊದಲು ಮಾನವನ ಸೃಜನಶೀಲ ಪ್ರಜ್ಞೆ ಪ್ರಮುಖವಾಗಿ ಕಾರ್ಯನಿರ್ವಹಿಸಿದರೆ, ಎರಡನೆಯದಾಗಿ ಕಲಾಕೃತಿಯೊಂದರ ನಿರ್ಮಾಣಕ್ಕೆ ಬೇಕಾಗುವ ಮಾಧ್ಯಮಗಳು, ಆ ಮಾಧ್ಯಮದ ಹಿಡಿತ ಸಾಧಿಸಿಕೊಳ್ಳಲು ಬೇಕಾಗುವ ಪರಿಕರಗಳು ಬಹಳ ಮುಖ್ಯ. ಬಿದ್ರಿ ಕಲೆ ಸುಲಭದಲ್ಲಿ ರಚಿಸಬಹುದಾದ ಕಲೆಯಲ್ಲ. ಅದು ಬೌದ್ಧಿಕ, ಭೌತಿಕ ಮತ್ತುದೈಹಿಕ ಶಕ್ತಿ–ಯುಕ್ತಿಗಳ ಸಮ್ಮಿಲನದಿಂದ ಹುಟ್ಟುವ ಕಲೆ. ಕಠಿಣತಮವಾದ ಲೋಹದ ಸಲಕರಣೆಗಳನ್ನು

ಬಳಸುವುದರ ಜೊತೆಗೆ ಅನೇಕ ರಾಸಾಯನಿಕಗಳನ್ನು ಪ್ರಮಾಣಬದ್ಧವಾಗಿ ದುಡಿಸಿಕೊಂಡಾಗ ಒಂದು ಸುಂದರ ಬಿದ್ರಿ ಕಲಾಕೃತಿ ರಚನೆಯಾಗಬಹುದು. ಈ ಬಿದ್ರಿ ಕಲಾಕೃತಿಯನ್ನು ರಚಿಸುವಾಗ ಬಳಸುವ ಪರಿಕರಗಳನ್ನು ಸಚಿತ್ರವಾಗಿ, ಸವಿವರವಾಗಿ ಈ ಅಧ್ಯಾಯದಲ್ಲಿ ದಾಖಲಿಸಲಾಗುವುದು. ಎರಡನೆಯದಾಗಿ ಸೂಕ್ತ ಪರಿಕರಗಳನ್ನು ಸಮರ್ಥವಾಗಿ ದುಡಿಸಿಕೊಳ್ಳುವುದರ ಮೂಲಕ ಬಿದ್ರಿ ಕಲಾಕೃತಿ ನಿರ್ಮಾಣವಾಗುವ ಹಂತಗಳನ್ನು ಇಲ್ಲಿ ಚಿತ್ರ ಸಹಿತವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಾಯ : ನಾಲ್ಕು

ಬಿದ್ರಿ ಕಲೆಯ : ದೃಶ್ಯಾತ್ಮಕ ಅಧ್ಯಯನ

ಈ ಮಹಾಪ್ರಬಂಧದಲ್ಲಿ ಪ್ರಸ್ತುತ ಅಧ್ಯಾಯವು ಬಹು ಪ್ರಮುಖವಾದುದು. ವೈವಿಧ್ಯಮಯ ಪ್ರಾಕೃತಿಕ ವಿನ್ಯಾಸಗಳಿಂದ ರಚನೆಗೊಂಡ ಬಿದ್ರಿ ಕಲೆಯಲ್ಲಿ ಹಲವಾರು ಬಗೆಗಳಿವೆ. ವಿಶೇಷವಾಗಿ ಗೃಹ ಅಲಂಕಾರಿಕ ದೃಷ್ಟಿಕೋನದ ಕಲಾವಸ್ತುಗಳು ಮತ್ತು ಸಾಂದರ್ಭಿಕವಾಗಿ ಉಪಯೋಗಿಸುವ ಕಲಾವಸ್ತುಗಳನ್ನು ಬಿದ್ರಿ ಕಲೆಯಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಹೀಗೆ ಗುರುತಿಸಬಹುದಾಗಿದೆ. ಹೂವಿನ ಹೂಜಿಗಳು, ನೀರುದಾನಿಗಳು, ಹುಕ್ಕಾಗಳು, ಆಭರಣ ಪೆಟ್ಟಿಗೆ, ಭಿಕ್ಷಾ ಪಾತ್ರೆ, ದೀಪದ ಲಾಂದ್ರಗಳು, ಭಿತ್ತಿ ಶಿಲ್ಪಗಳು, ಭಿತ್ತಿಚಿತ್ರಗಳು, ಕನ್ನಡಿ, ಸಿಗರೇಟ್ ಪೆಟ್ಟಿಗೆ, ಆಶ್ ಟ್ರೇ, ಎಲೆತಟ್ಟೆ, ಜಾಮ, ಬಹುಪಯೋಗಿ ಪೆಟ್ಟಿಗೆ, ಪಾದರಕ್ಷೆಗಳು, ರಾಶಿಚಕ್ರಗಳು, ತಟ್ಟೆ, ಅಂಗಿಯ ಗುಂಡಿಗಳು, ಕತ್ತರಿ, ಪೇಪರ್ ಕ್ಲಿಪ್‌ಗಳು, ಪೀಠೋಪಕರಣಗಳು ಇನ್ನೂ ಮುಂತಾದ ವಸ್ತುಗಳು ಬಿದ್ರಿ ಕಲೆಯ ವಸ್ತುಗಳು ವಿವಿಧ ಬಗೆಯ ಲೋಹಗಳ ಸಮ್ಮಿಶ್ರಣದಿಂದ ತಯಾರಿಸಿರುತ್ತಾರೆ. ಅಷ್ಟೇ ಅಲ್ಲದೇ ಈಗಾಗಲೇ ಅಪರೂಪವಾದ, ಪ್ರತಿಷ್ಠಿತ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಚಿನ್ನದ, ಬೆಳ್ಳಿಯ, ತಾಮ್ರದ ಬಿದ್ರಿ ಕಲಾ ವಸ್ತುಗಳ ಅಲಂಕಾರಿಕ ವಿನ್ಯಾಸಗಳನ್ನು ಪಾರಂಪರಿಕ ಮತ್ತು ಆಧುನಿಕ ನೆಲೆಯ ವರ್ಗೀಕರಣದೊಂದಿಗೆ ದೃಶ್ಯಾತ್ಮಕ ನೆಲೆಯಲ್ಲಿ ಇಲ್ಲಿ ಈ ಕೆಳಗಿನಂತೆ ವಗೀಕರಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ವರ್ಗೀಕರಣ

೫.೧. ಪ್ರಾಚೀನ ಬಿದ್ರಿ ಕಲೆಗಳು

೦೧. ಅಲಂಕಾರಿಕ ತಟ್ಟೆಗಳು

೦೨. ಆಯುಧಗಳು

೦೩. ಉಗುಳುವ ಪಾತ್ರೆಗಳು (ಪೀಕದಾನಿ)

೦೪. ಊರುಗೋಲು

೦೫. ಕೈತೊಳೆಯುವ ಪಾತ್ರೆಗಳು

೦೬. ನೆಲಹಾಸು ಭಾರದ ವಸ್ತುಗಳು

೦೭ ಪಾನದಾನಗಳು

೦೮. ಬಟ್ಟಲುಗಳು

೦೯. ಭರಣಿಗಳು

೧೦. ಸುರಾಹಿಗಳು —

೧೧. ಹುಕ್ಕಾಗಳು

೧೨. ಹೂಜಿಗಳು

೧೩. ಹೂದಾನಿಗಳು

೫.೨. ಆಧುನಿಕ ಬಿದ್ರಿ ಕಲೆಗಳು

೧. ಅಲಂಕಾರಿಕ ವಸ್ತುಗಳ ಸಮೂಹ

ಅ. ಹೂದಾನಿಗಳು

ಬ. ಪ್ರಾಣಿ, ಪಕ್ಷಿ ವಸ್ತುಗಳು

೨. ಕಛೇರಿ ವಸ್ತುಗಳು

ಅ. ಕಾಗದ ಕತ್ತರಿಸುವ ಚಾಕು

ಬ. ಕಾಗದ ಹಿಡಿ (ಕ್ಲಿಪ್)

ಕ. ಕಾಗದದ ಮೇಲಿಡುವ ಭಾರದ ವಸ್ತು (ಪೇಪರ್ ವೇಟ್)

ಡ. ಲೇಖನಿ ಪೆಟ್ಟಿಗೆ (ಪೆನ್ ಬಾಕ್ಸ್)

೩. ಗೃಹೋಪಯೋಗಿ ವಸ್ತುಗಳು

ಅ. ಆಭರಣ ಪೆಟ್ಟಿಗೆ

ಬ. ಕುಂಕುಮ ಭರಣಿಗಳು

ಕ. ಉಮರ್ ಖಯಾಮ್

ಡ. ಬಟ್ಟಲುಗಳು

ಇ. ಮೇಣಬತ್ತಿ ನಿಲುವು

ಈ. ಪೂಜಾ ಸಾಮಗ್ರಿ

೪. ಪುರುಷರು ಬಳಸುವ ವಸ್ತುಗಳು

ಅ. ಅಂಗಿಯ ಗುಂಡಿಗಳು

ಬ. ಸೊಂಟ ಪಟ್ಟಿಗಳು (ಬೆಲ್ಟ್‌ಗಳು)

ಕ. ಕೀ ನಿಲುವು / ಕೀ ಹಿಡಿಗಳು

ಡ. ಸಿಗರೇಟ್ ಬೂದಿಯ ಪೆಟ್ಟಿಗೆ

೫. ಕ್ರೀಡಾ ಸಾಮಗ್ರಿಗಳು

ಅ. ಚದುರಂಗ ಸಾಮಗ್ರಿ

ಅಧ್ಯಾಯ : ಐದು

ಬಿದ್ರಿ ಕಲೆಯ : ಪ್ರದರ್ಶನ ಮತ್ತು ಮಾರಾಟ ಹಾಗೂ ಪ್ರೋತ್ಸಾಹ

ಬಿದ್ರಿ ಕಲೆಯ ಕುಶಲ ಕರ್ಮಿಗಳಿಗೆ ಮಾರುಕಟ್ಟೆ ಒದಗಿಸುವ ಅನೇಕ ಸರಕಾರಿ/ಸರಕಾರೇತರ ಸಂಸ್ಥೆಗಳು ಭಾರತದಲ್ಲಿ ಇವೆ. ಆದರೂ ಬಿದ್ರಿ ಕಲಾವಿದರಿಗೆ ಬರುವ ಲಾಭ ಕೇವಲ ಶೇ ಶಿರಷ್ಟು ಮಾತ್ರ, ಇನ್ನುಳಿದಿದ್ದು ಮಧ್ಯವರ್ತಿಗಳ ಪಾಲಾಗುವುದೇ ಹೆಚ್ಚು. ಇಂತಹ ಭಾರತದ ಆರ್ಥಿಕ ನೀತಿಯಿಂದ ಬಿದ್ರಿ ಕಲಾವಿದರು ಸ್ಥಿತಿವಂತರಾಗದೇ ಹಿಂದಿನ ಸ್ಥಿತಿಯಲ್ಲಿಯೇ ಮುಂದುವರೆದಿದ್ದಾರೆ. ರಾಷ್ಟ್ರೀಯ ಕರಕುಶಲ ನಿಗಮ, ಕರ್ನಾಟಕ ಕರಕುಶಲ ನಿಗಮ, ಕಾವೇರಿ ಎಂಪೋರಿಯಮ್‌ನಂಥಸಂಸ್ಥೆಗಳು ಬಿದ್ರಿ ಕಲಾವಿದರಿಂದ ಕಲಾವಸ್ತುಗಳನ್ನು ಖರೀದಿಸಿ ಹೆಚ್ಚಿನ ಲಾಭಾಂಶದಲ್ಲಿ ಮಾರಾಟ ಮಾಡಿ ಬಿದ್ರಿ ಕಲಾವಿದರಿಗೆ ಶೇಶಿರಷ್ಟು ಲಾಭಾಂಶ ದೊರಕುವಂತೆ ಆರ್ಥಿಕ ನೆರವನ್ನು ನೀಡುತ್ತಾರೆ. ಇವರು ನೀಡುವ ಲಾಭಾಂಶದಲ್ಲಿ ಬಿದ್ರಿ ಕಲಾವಿದರು ತಮ್ಮ ಕುಟುಂಬ ನಿರ್ವಹಣೆ ಮತ್ತು ಬಿದ್ರಿ ಕಲಾವಸ್ತುಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ ಅಂದದ ಮನೆಗೆ ಚೆಂದದ ವಸ್ತುಗಳನ್ನು ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಬಿದ್ರಿ ಕಲೆಗೆ ಮತ್ತು ಕುಶಲಕರ್ಮಿಗಳಿಗೆ ಇರುವ ಪ್ರದರ್ಶನ, ಮಾರಾಟ ಮತ್ತು ಪ್ರೋತ್ಸಾಹದ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ಆರು

ಬಿದ್ರಿ ಕಲೆಯ : ಕುಶಲಕರ್ಮಿಗಳು

ಬೀದರನ ಬಿದ್ರಿ ಕಲೆಯ ಕುಶಲಕರ್ಮಿಗಳು ಸ್ಥಿತಿವಂತರಾಗದಿದ್ದರೂ ಕೆಲವರು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಗಳಿಸಿದವರು ಇದ್ದಾರೆ. ಬಿದ್ರಿ ಕಲೆಯನ್ನು ಕೇವಲ ವ್ಯಾವಹಾರಿಕ ನೆಲೆಯಲ್ಲಿ ಸ್ವೀಕರಿಸದೇ ಅದನ್ನು ತಮ್ಮ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಅನೇಕ ಮಾದರಿಯ ಸಾಂಪ್ರದಾಯಿಕ ಮತ್ತು ಆಧುನಿಕ ನೆಲೆಯ ಬಿದ್ರಿ ಕಲಾವಸ್ತುಗಳನ್ನು ರಚಿಸಿದವರು ರಾಷ್ಟ್ರೀಯ ಮಟ್ಟದ ಖ್ಯಾತಿಗೆ ಭಾಜನರಾದ ಹಲವರು. ಇನ್ನು ಕೆಲವರು ಇನ್ನೊಬ್ಬರ ಮಾಲಕತ್ವದಲ್ಲಿ ನಡೆಸಲ್ಪಡುವ ಉದ್ಯಮದಲ್ಲಿ ದಿನಗೂಲಿಗಳಂತೆ ಕೆಲಸ ಮಾಡುವರೂ ಇದ್ದಾರೆ. ಇಂತಹವರನ್ನು ಹುಡುಕಿ ಅವರ ಬದುಕಿನ ಸಾಧನೆಗಳನ್ನು, ಅವರ ಸ್ಥಿತಿ-ಗತಿಗಳನ್ನು, ಕೌಟುಂಬಿಕ ವಿರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ದಾಖಲಿಸಲಾಗುವುದು.

ಅಧ್ಯಾಯ : ಏಳು

ಸಮಾರೋಪ

ಪ್ರಸ್ತುತ ಅಧ್ಯಾಯ ಒಟ್ಟು ಪ್ರೌಢ ಪ್ರಬಂಧದ ಎಲ್ಲಾ ಅಧ್ಯಾಯಗಳ ಅಧ್ಯಯನದ ಫಲಿತಗಳ ಸಮೀಕ್ಷೆ ಹೊಂದಿದೆ.

******

ಅಧ್ಯಾಯ : ಎರಡು

ಬಿದ್ರಿ ಕಲೆಯ ಅರ್ಥಸ್ವರೂಪ ಮತ್ತು ಐತಿಹಾಸಿಕ ಹಿನ್ನೆಲೆ

ಬಿದ್ರಿ ಕಲೆಗೆ ಇದೇ ಹೆಸರು ಮೊದಲಿಗೆ ಹೇಗೆ ಬಂತೆಂಬುದಕ್ಕೆ ಜನಪದರು ಹಲವಾರು ರೀತಿಯಲ್ಲಿ ಘಟನಾ ಕಥೆಗಳನ್ನು ಹೇಳುತ್ತಾರೆ. ಯಾವುದೋ ರೀತಿಯಲ್ಲಿರುವ ಒಂದು ಕಲೆ ಈಗಿರುವ ಬಿದ್ರಿಕಲೆಯ ರೂಪದಲ್ಲಿ ಕಂಡುಕೊಂಡಾಗ ಕಂಡುಕೊಂಡವನು ತನ್ನ ಭಾಗ್ಯ, ವಿಧಿ (ಅದೃಷ್ಟ)ಯಿಂದಲೇ ಕಲೆ ಕರಗತವಾಯಿತು. ಎಂದು ತಿಳಿದ. ಆದ್ದರಿಂದ ಇದಕ್ಕೆ 'ವಿಧಿ' ಎಂದು ಕರೆದ. ಅದು ವಿಧಿ>ಬಿದಿ ಎಂದು ಅಪಭ್ರಂಶ ಹೊಂದಿ 'ಬಿದ್ರಿ' ಆಯಿತು ಎನ್ನುವುದಿದೆ. ಮತ್ತೆ ಕೆಲವರು ಈ ಕಲೆಯ ರೂಪ ಕಂಡುಕೊಂಡವನು ಮುಂದೆ ಬಣ್ಣ ಏರಿಸುವುದಕ್ಕಾಗಿ ತಡಕಾಡುವಾಗ ಅದ್ಹೇಗೋ ಕೆಳಗೆ ಬಿದ್ದ ಹಾಗೆ ಬಿದ್ದಾಗ ಅವನ ಕೈಯಲ್ಲಿರುವ ಕಲೆಯೂ ಕೆಳಗೆ ಬಿತ್ತು. ಆಗ ಕ್ವಾಟಿ (ಕೋಟೆ) ಮಣ್ಣಿನಾಂಶದಲ್ಲಿ ಕಲೆಯ ಬಣ್ಣ ಬದಲಾಗುವುದನ್ನು ಗಮನಿಸಿದ. ಹೀಗೆ ಕಲೆಗಾರ ಕಲೆಗೆ ಬಣ್ಣ ಏರಿಸಲು ಬೀದರ ಕ್ವಾಟಿಯ ಮಣ್ಣನ್ನು ಬಳಸಿಕೊಳ್ಳಲು ಪ್ರಾರಂಭಿಸಿದ.[೧] ಈ ರೀತಿಯಾಗಿ ಇವನು ಬಿದ್ದಾಗಲೇ ಒಂದು ಹೊಸ ಶೋಧವಾಯ್ತು. ಆದ್ದರಿಂದ ಆತನು ಬಿದ್ದೆ, ಬಿದ್ದಿವಿ, ಬಿದ್ದಿವಿರಿ, ಬಿದ್ದಿರಿ, ಬಿದ್ರಿ ಎಂದು ಹೇಳುತ್ತಾ ಅದೇ ಹೆಸರು ಕಲೆಗೆ ಕರೆಯಲು ಪ್ರಾರಂಭಿಸಿದ. ಆದರೆ ಭಾಷೆ ರೀತ್ಯದ ಪ್ರಕಾರ ಈ ಪ್ರದೇಶದಲ್ಲಿ ಬಿದ್ರಿ ಕಲೆಯಲ್ಲಿ ನಿಪುಣತೆಯನ್ನು ಪಡೆದ ಪರಿಣಾಮವಾಗಿ ಬೀದರಿನ ಮೂಲ ಶಬ್ಧ ಬಿದಿರು>ಬಿದರೆ>ಬಿದಿರೆ>ಬಿದಿರುಪುರ>ಬಿದಿರೂರು>ಬೀದರ್ ಆಗಿದೆ ಎಂದು ರಾಜಶೇಖರ್ ಕೆ.ಎಲ್. ಅವರು ಉಲ್ಲೇಖಿಸುತ್ತಾರೆ.[೨] ಬಹುತೇಕವಾಗಿ ಇದೇ ಬಗೆಯ ಉಲ್ಲೇಖಗಳು ಬಿದ್ರಿ ಕಲೆಯ ಕುರಿತಂತೆ ವಿವಿಧ ಗ್ರಂಥಗಳಲ್ಲಿ/ಲೇಖನಗಳಲ್ಲಿ ಪುನರಾವರ್ತಿತಗೊಂಡಿವೆ. ಆದರೆ ನಿಜಾಮರ ಕಾಲದ ನಕ್ಷೆಯೊಂದರಲ್ಲಿ ಆಂಗ್ಲ ಭಾಷೆಯಲ್ಲಿ ಃಜಜಜಡ ಎಂದು ನಮೂದಾಗಿದೆ. ಇದನ್ನು ಕನ್ನಡದಲ್ಲಿ ಬಳಸಿಕೊಂಡಾಗ 'ಬೇಡರ್'/ಬೇದರ್ ಎಂದೂ ಬಳಸಬಹುದಾಗಿದೆ. ಖಚಿತ್ವವಾಗಿ ಬಿದ್ರಿ ಶಬ್ದದ ನಿಷ್ಪತ್ತಿಯ ಬಗ್ಗೆ ಹಲವಾರು ಬಗೆಯ ಗೊಂದಲಗಳಿರುವುದು ದಿಟ.

ಬೀದರನ ಬಿದ್ರಿ ಕಲೆಯ ಚಾರಿತ್ರಿಕ ಹಿನ್ನೆಲೆ

ಶಿಲಾಯುಗದಿಂದಲೂ ಬಿದ್ರಿ ಕಲೆಯ ಪ್ರಕಾರ ಕಾಣಿಸುತ್ತದೆ. ಮುಂದಿನ ಯುಗಗಳಲ್ಲಿ ಕಲೆ ಹಂತಹಂತವಾಗಿ ಬದಲಾವಣೆ ಹೊಂದಿರುವುದು ಇತಿಹಾಸದ ಪುಟಗಳಿಂದ ವೇದ್ಯವಾಗುತ್ತದೆ. ಮಣ್ಣಿನ ಮಡಕೆಗಳ ಮೇಲೆ ಲೋಹದ ವಸ್ತುಗಳ ಮೇಲೆ ಚಿತ್ತಾರಗಳನ್ನು (ನಕ್ಷೆ) ಬಿಡಿಸುವ ಕಲೆಯನ್ನೂ ಮಾನವ ಬಹು ಹಿಂದೆಯೇ ಬೆಳಸಿಕೊಂಡಿದ್ದ. ಇದು ಮಾನವನ ವಿಕಾಸದ ಸಂಕೇತವಾಗಿ ರಾಜಾಶ್ರಯದಲ್ಲಿ ಈ ಕಲೆಗಳು ಹುಲುಸಾಗಿ ಬೆಳೆದು ಜನ ಮನ್ನಣೆಗಳಿಸಿವೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕಳಚೂರಿ ಅರಸರ ಕಾಲದಲ್ಲಿ ವಿವಿಧ ಪರಿಕರಗಳ ಮೇಲಲ್ಲದೇ ಕಜ್ಜಿಣದ ವಸ್ತುಗಳ ಮೇಲೆ ಬೆಳ್ಳಿ, ಬಂಗಾರ ಲೇಪಿಸುವ ಹಾಗೂ ಚಿತ್ತಾರ ಕೆತ್ತಿ ಅದರಲ್ಲಿ ಕೂಡಿಸುವ ಕಲೆ ಜಾರಿಯಲ್ಲಿದ್ದುದು ಕಂಡುಬರುತ್ತದೆ.[೩]

ಬಿದ್ರಿ ಕಲೆಯ ತಂತ್ರ, ಕೌಶಲ್ಯ ಮತ್ತು ನಿರ್ಮಾಣ ವಿಧಾನಗಳನ್ನು ಕುರಿತು ಚರ್ಚಿಸುವುದಕ್ಕಿಂತ ಮೊದಲು ಅದರ ಹೆಸರು ಮತ್ತು ಉತ್ಪತ್ತಿಯ ಬಗೆಗೆ ನಮಗೆ ದೊರೆವ ಆಕರಗಳನ್ನು ಗಮನಿಸಬಹುದು. ಸುಮಾರು ೮೦೦ ವರ್ಷಗಳಿಂದ ಬೆಳದು ಬಂದ ಸಂಪ್ರದಾಯದ ಪ್ರಕಾರ ದಕ್ಷಿಣದ ಬಹಮನಿ ವಂಶದೊಂದಿಗೆ ಬಿದ್ರಿ ಕಲೆ ಸಂಬಂಧವಿದೆ. ಬಾಯಿಂದ ಬಾಯಿಗೆ ಹರಡುತ್ತ ಹೋದಂತೆ ಹೆಚ್ಚಿನ ಅಂಶಗಳು ಸೇರ್ಪಡೆಯಾಗುವುದೂ ಉಂಟು. ಈ ಬಗೆಗಿನ ವಿವರಣೆಯು ಸಾಕಷ್ಟು ಗೋಜಲಾಗಿದೆ.

ಒಂದು ಸಂಪ್ರದಾಯದ ಪ್ರಕಾರ ಬಿದ್ರಿಯ ಕಲಾತಂತ್ರವು ಇರಾನದಿಂದ ಇರಾಕಿನ ಮೂಲಕ ಬಹುಮನಿ ರಾಜ್ಯವನ್ನು ಬಂದು ಸೇರಿತು. ಇದನ್ನು ಭಾರತಕ್ಕೆ ತಂದವರು ಸಿಜಿಸ್ತಾನ್(ಇರಾನ್) ದಿಂದ ಧರ್ಮ ಪ್ರಚಾರಕ್ಕೆ ಬಂದ ಸೂಫಿ ಖ್ವಾಜಾ ಮೊಯಿನುದ್ದೀನ್ ಹಸನ ಚಿಸ್ತಿ.[೪] ಕ್ರಿ.ಶ. ೧೧೯೨ (ಆ.ಹಿ.೫೮೭)ನಲ್ಲಿ ಅವರ ಮೂಲಕ ಇದು ಮೊದಲಿಗೆ ಅಜಮೀರನ್ನು ಪ್ರವೇಶಿಸಿತು. ಅಲ್ಲಿಂದ ಅದು ವಿಜಾಪುರವನ್ನು ಪ್ರವೇಶಿಸಿತು. ಅನಂತರ ಎರಡನೆಯ ಅಲ್ಲಾವುದ್ದೀನ ಬಹಮನಿಯು (ಕ್ರಿ.ಶ.೧೪೩೬-೫೭) ಕರಕುಶಲ ವಸ್ತುಗಳನ್ನು ನಿರ್ಮಿಸುತ್ತಿದ್ದ ಕಲಾಕಾರರನ್ನು ವಿಜಾಪುರದಿಂದ ಕರೆತಂದು ಬೀದರಿನಲ್ಲಿ ನೆಲೆಗೊಳಿಸಿದ.[೫]

ಮತ್ತೊಂದು ಕಥೆಯ ಪ್ರಕಾರ ಈ ಕಲೆಯು ಮೂಲನೆಲೆ (ಇರಾಕ್) ಡಮಾಸ್ಕಸ್. ಅಲ್ಲಿನ ಕೆಲವರು ಬೆಳ್ಳಿ ಬಂಗಾರವನ್ನು ಹುದುಗಿಸಿ ಕುಸುರಿ ಕೆಲಸವನ್ನು ಮಾಡುವುದರಲ್ಲಿ ನಿಪುಣರಾಗಿದ್ದರು. ಅವರ ಒಂದು ಗುಂಪು ಸಿರಿಯಾ ಅಥವಾ ಇರಾಕಿನ ಮೂಲಕ ಭಾರತಕ್ಕೆ ಬಂದಿತು.[೬] ಅವರಲ್ಲಿ ಕೆಲವರು ರಾಜಸ್ಥಾನದ ಅಜಮೀರಿನಲ್ಲಿ ವಾಸವಾಗಿದ್ದರು. ಅವರು ಝಿಂಕ್ ಹಾಗೂ ತಾಮ್ರದ ಮಿಶ್ರಣವುಳ್ಳ ಪಾತ್ರೆಗಳ ಮೇಲೆ ಡಮಾಸ್ಕಿನ್ ಚಿತ್ತಾರವನ್ನು ರಚಿಸುವ ವಿಚಾರವು ಹೊಳೆಯಿತು. ಮಧ್ಯಯುಗದಲ್ಲಿ ರಾಜಸ್ಥಾನದ ಜವಾರ್ ಝಿಂಕ್‌ನ ಉತ್ಪಾದನೆ ಮಾಡುವಲ್ಲಿಪ್ರಮುಖ ಭಾಗವಾಗಿತ್ತು.[೭] ಅಲ್ಲಿಂದ ಈ ಕುಶಲಕರ್ಮಿಗಳು ಕಾರಣಾಂತರಗಳಿಂದ ೧೫ನೆಯ ಶತಮಾನದಲ್ಲಿ ದಕ್ಷಿಣದತ್ತ ವಲಸೆ ಹೊರಟರು. ಅವರು ಬಂದು ನೆಲೆಸಿದ್ದು ಹೈದರಾಬಾದಿನ ಸಮೀಪದ ಬೀದರಿನಲ್ಲಿ. ಮುಂದೆ ಅನೇಕ ಶತಮಾನಗಳವರೆಗೆ ಈ ಕಲೆಯು ಆ ಪ್ರದೇಶದಲ್ಲಿ ಪಸರಿಸಿ ಗಟ್ಟಿಗೊಂಡಿತು. ಅದಕ್ಕೆ ಬಿದ್ರಿ ಕಲೆಯೆಂಬ ಹೆಸರು ರೂಢವಾಯಿತು. ಅತ್ಯಂತ ಪ್ರಾಚೀನನಾದವನು ಕಲಾವಿದ ಅಬ್ದುಲ್ಲಾ ಬಿನ್ ಖೈಸರ್.[೮] ಅವನು ಮತ್ತು ಅವನ ಶಿಷ್ಯ ಶಿವಣ್ಣ ಇದ್ದುದು ವಿಜಾಪುರದಲ್ಲಿ. ಎರಡನೆಯ ಅಲ್ಲಾವುದ್ದೀನ ಬಹಮನಿಯ (೧೪೩೮-೧೪೫೭) ಪಟ್ಟಾಭಿಷೇಕದ ಸಂದರ್ಭದಲ್ಲಿ ಕಾಣಿಕೆಗಳ ರೂಪದಲ್ಲಿ ಅರ್ಪಿಸಲಾದ ಕಲಾಕೃತಿಗಳನ್ನು ಕಂಡು ಸುಲ್ತಾನನು ಪ್ರಭಾವಿತನಾಗಿ ಕುಶಲಕರ್ಮಿಗಳನ್ನು ವಿಜಾಪುರದಿಂದ ಕರೆಯಿಸಿಕೊಂಡು ಬೀದರಿನಲ್ಲಿ ನೆಲೆಸುವಂತೆ ಮಾಡಿದನು.[೯]

ಅನೇಕ ವಿದ್ವಾಂಸರು ಬಿದ್ರಿಕಲೆಯ ಬಗ್ಗೆ ಹಲವು ರೀತಿಯಲ್ಲಿ ಉಲ್ಲೇಖಿಸಿದ್ದಾರೆ. ಬಿದ್ರಿ ಕರಕುಶಲ ಕಲೆಯು ಬೀದರದಲ್ಲಿ ಮೊಟ್ಟಮೊದಲಿಗೆ ಪರಿಚಯಿಸಿದ್ದು ೧೫ನೆಯ ಶತಮಾನದ

ಆರಂಭದಲ್ಲಿಯೇ ಎನ್ನಬಹುದು. ಬಹಮನಿ ಸುಲ್ತಾನ ಅಹಮದ್ ಶಹವಲಿ ಬಹಮನಿ (ಕ್ರಿ.ಶ.೧೪೨೨–೧೪೩೬) ತನ್ನ ರಾಜಧಾನಿಯನ್ನು ಕಲಬುರ್ಗಿಯಿಂದ ಬೀದರಿಗೆ ವರ್ಗಾಯಿಸಿದಾಗ ರಂಗೀನ ಮಹಲ್ ಹಾಗೂ ಇತರ ಕಲಾತ್ಮಕ ಕಟ್ಟಡಗಳನ್ನು ಕಟ್ಟಿಸಲು ಇರಾನ್‌ನಿಂದ ಕುಶಲಕರ್ಮಿಗಳನ್ನು ಕರೆಸಿದ. ಇವರಲ್ಲಿ ಅಬ್ದುಲ್ಲಾ ಬಿನ್ ಖೈಸರ್[೧೦] ಎಂಬಾತ ಸತುವಿನ ಮಿಶ್ರಲೋಹದ ಮೇಲೆ ಚಿನ್ನದ ಕುಸುರಿ ಕೆಲಸವನ್ನು ಮಾಡಿ ಸುಂದರ ಕಲಾತ್ಮಕ ವಸ್ತುಗಳನ್ನು ತಯಾರಿಸಬಲ್ಲವನಾಗಿದ್ದ. ಸತುವು ಬಿಳಿಯದಾಗಿರುವುದರಿಂದ ಅದರಲ್ಲಿ ಬೆಳ್ಳಿ ಕೂಡಿಸಿದ್ದರೂ ಅದು ಕಾಣುತ್ತಿರಲಿಲ್ಲ. ಕಾರಣ ಅವೆರಡರ ಬಣ್ಣ ಒಂದೇಯಾಗಿದ್ದವು. ಈ ಸಂಪ್ರದಾಯದ ಅಧಿಕಾಂಶವು ಉಳಿದುಕೊಂಡು ಬಂದಿರುವುದರಿಂದ ಪ್ರಬಂಧಕ್ಕೆ ಮಂಡಿಸಿರುವ ಸಾಕ್ಷಿ ಆಧಾರಗಳನ್ನು ಬಿದ್ರಿ ಕಲೆಯ ಪುರಾತನತೆವನ್ನು ತೋರಿಸಿಕೊಡುತ್ತದೆ. ಆದರೆ ಇದರ ಸರಿಯಾದ ಸಾಕ್ಷಾಧಾರಗಳು ಇನ್ನೂ ದೊರೆಯಬೇಕಾಗಿವೆ.

ಪ್ರವಾದಿ ಮೊಹಮ್ಮದ (PBUH)ರ ಮರಣದ ನಂತರ ಸುಮಾರು ಐದು ನೂರು ವರ್ಷಗಳ ಮೇಲೆ ಅಂದರೆ ಕ್ರಿ.ಶ. ೬೩೨ರ ಇಸ್ಮಾಂ ಧರ್ಮವು ತನ್ನ ಮೂಲಸ್ಥಾನವಾದ ಅರೇಬಿಯದಿಂದ ದೂರದೂರದ ಪ್ರದೇಶಗಳಿಗೆ ಪಸರಿಸಿತು. ಮಧ್ಯ ಪೂರ್ವದ ಇನ್ನಿತರ ಭಾಗಗಳು. ಉತ್ತರ ಆಫ್ರಿಕಾ ಸ್ಪೇನ್, ಮಧ್ಯ ಏಷಿಯಾ, ಮತ್ತು ಭಾರತದ ಉತ್ತರ ಮತ್ತು ಮಧ್ಯ ಭಾಗಗಳನ್ನು ಮೊಹಮ್ಮದರ ಅನುಯಾಯಿಗಳಾದ ಮುಸಲ್ಮಾನರು ಜಯಿಸಿದರು. ಇಸ್ಲಾಂ ಧರ್ಮದ ಪ್ರಚಾರದೊಂದಿಗೆ ಮುಸ್ಲಿಂ ಕಲೆಯ ವಿಶೇಷವಾದ ಶೈಲಿಯು ಕ್ರಮೇಣ ವಿಕಾಸ ಹೊಂದಿತು. ಅದು ಪ್ರಮುಖವಾಗಿ ಧಾರ್ಮಿಕ ವಾಸ್ತುಶಿಲ್ಪ, ಪುಸ್ತಕಗಳಲ್ಲಿ ಚಿತ್ರರೂಪದ ನಿದರ್ಶನಗಳು, ಮಡಕೆಗಳ ಅಲಂಕರಣ, ಧಾತು ಪಾತ್ರೆ ಮತ್ತು ಇನ್ನಿತರ ನಿತ್ಯೋಪಯೋಗಿಯಾದ ವಸ್ತುಗಳಲ್ಲಿ ಬಳಕೆಗೊಂಡಿತು. ಮುಸ್ಲಿಂ ಕಲೆಯ ಮೇಲೆ ರೋಮನ್, ಬೈಝುಂಟಾಯಿನ್ ಮತ್ತು ಪರ್ಶಿಯನ್ ಕಲೆಗಳು ಪ್ರಭಾವ ಬೀರಿದ್ದವು.

ಮುಸ್ಲಿಂ ಕಲೆಯ ಬೆಳವಣಿಗೆಯ ಮೇಲೆ ಎರಡು ಧಾರ್ಮಿಕ ನಿಬಂಧನೆಗಳು ಕೂಡ ಪ್ರಭಾವ ಬೀರಿವೆ. ಜೀವಂತವಾಗಿರುವ ಪ್ರಾಣಿಗಳು ಪ್ರತಿಮೆ ಅಥವಾ ಪ್ರತಿಕೃತಿಯನ್ನು ನಿರ್ಮಿಸುವುದು. ಜೀವಿಗಳನ್ನೆಲ್ಲ ಸೃಷ್ಟಿಸಿದ ಎಲ್ಲಾ ಹೂವಿನ ಅನುಕರಣೆಯೆನಿಸುವುದರಿಂದ ಅದನ್ನು ಮಾಡಬಾರದೆಂದು ಮಹಮ್ಮದರು ಕಲಾವಿದರಿಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಹಾಗಾಗಿ ಹೆಚ್ಚಿನ ಧಾರ್ಮಿಕ ಕಲೆಯಲ್ಲಿ ಮನುಷ್ಯ ಅಥವಾ ಪ್ರಾಣಿಗಳ ಚಿತ್ರಣವಿಲ್ಲದ ಇತರ ಆಲಂಕಾರಿಕ ವಿನ್ಯಾಸಗಳು ತುಂಬಿಕೊಂಡಿವೆ. ಎರಡನೆಯ ನಿಬಂಧನೆಯು ಕಲಾಕೃತಿಗಳ ನಿರ್ಮಾಣಕ್ಕೆ ಬೆಲೆ ಬಾಳುವ ವಸ್ತುಗಳ ಬಳಕೆಗೆ ಉತ್ತೇಜನವಿಲ್ಲ. ಹಾಗಾಗಿ ಮುಸ್ಲಿಂ ಕಲಾವಿದರು ಬಹುಮಟ್ಟಿಗೆ ಹಿತ್ತಾಳೆ, ಮಣ್ಣು ಮತ್ತು ಕಟ್ಟಿಗೆಯಂಥ ಅಗ್ಗದ ವಸ್ತುಗಳನ್ನು ಅಲಂಕರಿಸುವ ಕೌಶಲ್ಯವನ್ನು ಕರಗತಗೊಳಿಸಿಕೊಂಡು, ಅವು ಬೆಲೆ ಬಾಳುವ ಬೆಳ್ಳಿ ಬಂಗಾರದ ವಸ್ತುಗಳಂತೆ ಸುಂದರವಾಗಿ ಕಾಣುವಂತೆ ಮಾಡಿದನು.

ಪ್ರತಿಮೆ ಅಥವಾ ಪ್ರತಿಕೃತಿಗಳನ್ನು ನಿರ್ಮಿಸಬಾರದೆಂಬ ನಿಬಂಧನೆಯ ಕಾರಣದಿಂದ ಮುಸ್ಲಿಂ ಕಲೆಯಲ್ಲಿ ಎದ್ದು ಕಾಣುವ ಗುಣ ಲಕ್ಷಣವೊಂದು ಬೆಳೆದು ಬಂದಿತು. ಕಲಾವಿದರು ಜೀವಿಗಳನ್ನು ಹೋಲುವ ಆಕೃತಿಗಳನ್ನು ಚಿತ್ರಿಸುವುದನ್ನು ತ್ಯಜಿಸಿದರು. ಬದಲಿಗೆ ಅರೇಬಸ್ಕ ಎಂದು ಕರೆಯಲಾಗುವ ಅತ್ಯಂತ ಸಂಕೀರ್ಣವಾದ, ವಿಶಿಷ್ಟವಾದ ಅಲಂಕರಣ ಪ್ರಕಾರವನ್ನು ಬೆಳೆಸಿದರು. ಅಲ್ಲಲ್ಲಿ ತಿರುವುಗಳನ್ನು ಪಡೆದುಕೊಳ್ಳುವ ಬಳ್ಳಿ, ಎಲೆ ಮತ್ತು ಹೂವುಗಳನ್ನು ಚಿತ್ರಿಸಬಹುದು. ಹಾಗೆಯೇ ಅಲ್ಲಿ ಜ್ಯಾಮಿತಿಯ ಆಕೃತಿಗಳಿರಬಹುದು; ನೇರವಾದ ರೇಖೆಗಳ ರಚನೆಯಿರಬಹುದು; ಅಥವಾ ಪರಸ್ಪರ ಬೆಸೆದುಕೊಂಡಿರುವ ರೇಖಾ ವಿನ್ಯಾಸಗಳನ್ನು ಕೊರೆಯಬಹುದಾಗಿದೆ. ಕೆಲವೊಮ್ಮೆ ಪ್ರಾಣಿಗಳ ಆಕಾರಗಳನ್ನು ರಚಿಸಬಹುದಾದರೂ ಅವು ತುಂಬಾ ಶೈಲೀಕೃತವಾಗಿದ್ದು ಜೀವಿಗಳ ಹೋಲಿಕೆಯನ್ನು ಹೊಂದಿರುವುದಿಲ್ಲ.[೧೧]

ಧಾತುಕರ್ಮಿಗಳು ತುಂಬಾ ಸುಂದವಾದ ಕೆತ್ತನೆಯುಳ್ಳ ಹಿತ್ತಾಳೆ ಮತ್ತು ಕಂಚಿನ ವಸ್ತುಗಳನ್ನು ಬಳಸಿದರು. ಕೆಲವೊಮ್ಮೆ ಅವರು ಕುಂಭ, ಪೆಟ್ಟಿಗೆ ಮತ್ತು ತಾಟು ಮುಂತಾದ ವಸ್ತುಗಳ ಮೇಲೆ ಬೆಳ್ಳಿ ಅಥವಾ ಬಂಗಾರದ ಕುಸುರಿ ಕೆಲಸಗಳನ್ನು ಇನ್‌ಲೇ ಮಾಡಿದರು. ಅನಂತರ ಅತ್ಯಂತ ಕೌಶಲ್ಯದಿಂದ ವಸ್ತು ಅಥವಾ ಧಾತುವಿನೊಂದಿಗೆ ಸೇರಿಕೊಂಡವು.

ಇರಾಕ (ಡೆಮಾಸ್ಕಸ್) (೭ನೆಯ ಶತಮಾನ)

ಕ್ರಿ.ಶ. ೭೦೦ರಲ್ಲಿ ಮುಸ್ಲಿಂ ಜಗತ್ತಿನ ರಾಜಧಾನಿಯ ಡಮಾಸ್ಕಸ್‌ನಿಂದ (ಸಿಯಿರಯಾ) ಬಗದಾದಿಗೆ ಬದಲಾಯಿತು. ಬಗದಾದ ನಗರವನ್ನು ಒಂದು ಕಾಲದಲ್ಲಿ ಮೆಸೋಪೆಟೋಮಿಯಾ ಎಂದು ಕರೆಯುತ್ತಿದ್ದರು. ಅದು ನೈರುತ್ಯ ಏಷಿಯಾದ ಒಂದು ದೇಶ. ಮಧ್ಯ ಯುಗದಲ್ಲಿ ಅದು ಅರಬರ ವಿದ್ಯಾಕೇಂದ್ರವೆನಿಸಿತ್ತು. ಅಲ್ಲಿನ ಸಾಹಿತ್ಯ, ಕಲೆ ಮತ್ತು ಸಂಗೀತಗಳು[೧೨] ಇಂದಿಗೂ ಅರಬ ಸಂಸ್ಕೃತಿಯ ಭಾಗಗಳೇ ಆಗಿವೆ. ಇರಾಕಿನ ಜೊತೆಗೆ ಸಹಯೋಗವನ್ನು ಹೊಂದಿದ ಒಂದು ವಿಶಿಷ್ಟವಾದಕಲಾತ್ಮಕ ಕೃತಿಯೆಂದರೆ ಇರಾಕಿನ ಜೀವನ ಹಾಗೂ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ದೃಶ್ಯಗಳು ಅಥವಾ ಆಕೃತಿಗಳಿಂದ ಅಲಂಕೃತವಾದ ಬೆಳ್ಳಿಯ ಪಾತ್ರೆಗಳಾಗಿವೆ.

ಈಜಿಪ್ತ (೯ನೆಯ ಶತಮಾನ)

ಕ್ರಿ.ಶ. ೯ನೆಯ ಶತಮಾನದಲ್ಲಿ ಈಜಿಪ್ತಿನ ಉಮ್ಮಯ್ಯದಗಳ ಆಶ್ರಯದಲ್ಲಿ ಧಾತುಕರ್ಮದಲ್ಲಿ ಅತ್ಯಂತ ವಿಶಿಷ್ಟವಾದ ಹಾಗೂ ಶಕ್ತಿಶಾಲಿಯಾದ ಪ್ರಕಾರವೊಂದು ವಿಕಾಸಗೊಂಡಿತು. ಅಲ್ಲಿ ಶಿಲಾ–ಸ್ಫಟಿಕಗಳ ಕೊರೆಯುವಿಕೆಯಲ್ಲಿ ಪರಿಣತವಾದ ಕುಶಲಕರ್ಮವನ್ನು ಕಾಣಬಹುದು. ಇದು ಸಸ್ಸಾನಿದ ಕಲೆಯ ಮುಂದುವರಿಕೆ. ಇಲ್ಲಿ ಪುಷ್ಪಾಲಂಕಾರದ ಆಶಯಗಳನ್ನು ಬಳಸಲಾಗುತ್ತಿದೆಯಾದರೂ ಅದು ಹೆಚ್ಚು ಹೆಚ್ಚು ಮೂರ್ತವಾಗುತ್ತದೆ. ಸುಲ್ತಾನನ ಅರಮನೆಗಾಗಲಿ ಪ್ರಾಂತಾಧಿಕಾರಿಗಳ ಮನೆ ಬಳಕೆಗಾಗಲಿ ನಿತ್ಯೋಪಯೋಗಿಯಾದ ಮತ್ತು ವೈಭೋಗದ ಧಾತುಗಳ ಪಾತ್ರೆ ಮತ್ತು

ಉಪಕರಣಗಳನ್ನು ಮುಸ್ಲಿಂ ಜಗತ್ತಿನುದ್ದಕ್ಕೂ ನಿರ್ಮಿಸಲಾಯಿತು. ಅವು ಪ್ರಮುಖವಾಗಿ ಮತಾಚರಣೆಗಳ ಬಳಕೆಯ ಸಲುವಾಗಿ ನಿರ್ಮಾಣಗೊಂಡಿರದಿದ್ದರೂ. ಅವುಗಳ ವಿನ್ಯಾಸ ಹಾಗೂ ಮೇಲ್ಪದರದ ಅಲಂಕಾರಗಳ ಮೇಲೆ ಇಸ್ಲಾಂನ ಬಲವಾದ ಪ್ರಭಾವವಿತ್ತು.[೧೩] ಇದನ್ನು ಸ್ಪೇನ, ಪಶ್ಚಿಮದಲ್ಲಿ ಉತ್ತರ ಆಫ್ರಿಕಾ ಮತ್ತು ಪೂರ್ವದಲ್ಲಿ ಮಧ್ಯ ಏಷಿಯಾ ಮತ್ತು ಭಾರತೀಯ ಉಪಖಂಡಗಳಲ್ಲಿ ಕಾಣಬಹುದು.

ಇರಾಣ (ಪರ್ಷಿಯಾ) (೧೦ನೆಯ ಶತಮಾನ)

ಒಂದು ಕಾಲದಲ್ಲಿ ಪರ್ಷಿಯಾ ಎಂದು ಪ್ರಸಿದ್ಧವಾಗಿದ್ದ ಇರಾಣವು ಇತಿಹಾಸದಲ್ಲಿ ಅತ್ಯಂತ ಶ್ರೀಮಂತವಾದ ಕಲಾಪರಂಪರೆಯನ್ನು ಹೊಂದಿದೆ. ಸುಮಾರು ೧೦ನೆಯ ಶತಮಾನದ ಕೊನೆಯ ಭಾಗದಲ್ಲಿ ಪೂರ್ವ ಇರಾಣದ ಧಾತುಕರ್ಮಿಗಳು ಹಿತ್ತಾಳೆ ಮತ್ತು ಕಂಚಿನ ವಸ್ತುಗಳ ಮೇಲೆ ಬಂಗಾರ, ಬೆಳ್ಳಿ ಮತ್ತು ತಾಮ್ರದ ವಿನ್ಯಾಸಗಳನ್ನು ಇನ್‌ಲೇ ಮಾಡಿದ ವಸ್ತುಗಳ ನಿರ್ಮಾಣಕ್ಕೆ ತೊಡಗಿದರು. ಈ ತಂತ್ರ ಕೌಶಲ್ಯವು ಧಾತುಕರ್ಮಿಗಳಿಗೆ ಹೂಜಿಗಳನ್ನು ಬಣ್ಣಗಾರಿಕೆಯಿಂದ ಅಲಂಕರಿಸುವ ಅವಕಾಶವನ್ನು ಕಲ್ಪಿಸಿತು.[೧೪] ಅವುಗಳ ಮೇಲೆ ಬೇಟೆ ಹಾಗು ಔತಣದ ದೃಶ್ಯಗಳು, ಭೂಗೋಳ ಶಾಸ್ತ್ರದ ಸಂಕೇತಗಳು ಮತ್ತು ಆಡಳಿತಗಾರರಿಗೆ ಅಂದವಾದ ಕೈಬರಹಗಳಲ್ಲಿ ಅರ್ಪಣೆಗಳೇ ಮುಂತಾದವುಗಳಿರುತ್ತಿದ್ದವು. ಸುಮಾರು ೬ನೆಯ ಶತಮಾನದಿಂದಲೇ ಇನ್‌ಲೇ ಮಾಡುವ ಕಲೆಯು ಪಶ್ಚಿಮ ಏಷಿಯಾದಲ್ಲಿ ಪರಿಚಿತವಾಗಿದ್ದರೂ ಇಸ್ಲಾಂನ ಆಗಮನದಿಂದ ಕಲಾತ್ಮಕತೆ ಮತ್ತು ತಾಂತ್ರಿಕ ನಯಗಾರಿಕೆಯಲ್ಲಿ ಹೊಸ ಮಜಲನ್ನು ಮುಟ್ಟಿತೆನ್ನಬಹುದು.

೧೧–೧೨ನೆಯ ಶತಮಾನ

ಕ್ರಿ.ಶ. ೧೧–೧೨ನೆಯ ಶತಮಾನಗಳಲ್ಲಿ ಭಾರತೀಯ ಸೇನೆಗಳು ಪತನಗೊಂಡುದು ಒಂದು ಒಗಟಾಗಿದ್ದು, ಅದಕ್ಕೆ ಸಮಂಜಸವಾದ ವಿವರಣೆಯನ್ನು ನೀಡುವುದು ಕಷ್ಟ. ದೇಶವು ತನ್ನ ಪ್ರತಿಸ್ಪರ್ಧಿಗಳಿಗಿಂತ ಮೇಲ್ಮಟ್ಟದ ಸಂಪನ್ಮೂಲವನ್ನು ಹೊಂದಿತ್ತು. ಧೈರ್ಯ ಮತ್ತು ಶೌರ್ಯಗಳಲ್ಲಿಭಾರತೀಯ ಯೋಧರು ತಮ್ಮ ಎದುರಾಳಿಗಳಿಗಿಂತ ಕಡಿಮೆಯವರಾಗಿರಲಿಲ್ಲ. ಆದರೆ ತುರ್ಕರು ಮತ್ತು ಗಜನಿಗಳು ತರಬೇತಿ ಮತ್ತು ಯುದ್ಧ ತಂತ್ರಗಳಲ್ಲಿ ಮಿಗಿಲಾದವರಾಗಿದ್ದರು. ಚೆನ್ನಾಗಿ ತರಬೇತುಗೊಂಡ ಜೀನುಗಳನ್ನು ಹೊದಿಸಿದ ಕುದುರೆಗಳು; ತೀಕ್ಷ್ಣವಾದ ಬಾಗಿದ ಖಡ್ಗಗಳು; ಹರಿತವಾದ ಕಠಾರಿಗಳು; ಅಭೇದ್ಯವಾದ ಬಲಖತ್ತು ಮತ್ತು ಕವಚಗಳು; ಸಿಡಿಮದ್ದುಗಳ ಬಳಕೆ ಮತ್ತು ಬಂದೂಕುಗಳು;[೧೫] ಇವು ಅವರನ್ನು ಬೇರ್ಪಡಿಸುವ ಲಕ್ಷಣಗಳಾಗಿದ್ದು ಭಾರತದಲ್ಲಿ ಮಧ್ಯಯುಗದ ಆರಂಭಕ್ಕೆ ನಾಂದಿಯನ್ನು ಹಾಡಿದವು.

ಸುಲ್ತಾನರ ಕಾಲ (ಕ್ರಿ.ಶ.೧೨೦೬–೧೫೨೬)

ಭಾರತದಲ್ಲಿ ಸುಲ್ತಾನರ ಆಳ್ವಿಕೆಯಲ್ಲಿ ಸುಲ್ತಾನರ ಆಶ್ರಯದಲ್ಲಿರುವ ಕಾರಖಾನೆಗಳಲ್ಲಿ ಲೋಹದ ಕಾಮಗಾರಿಗಳು ನಡೆಯುತ್ತಿದ್ದವೆಂಬುದಕ್ಕೆ ಸಾಹಿತ್ಯಿಕ ಆಧಾರಗಳು ದೊರೆಯುತ್ತವೆಯಾದರೂ ಸುಲ್ತಾನರ ಕಾಲಕ್ಕೆ (ಕ್ರಿ.ಶ.೧೨೦೬–೧೫೨೬) ಸೇರಿದ್ದೆಂದು ನಿಶ್ಚಿತವಾಗಿ ಹೇಳಬಹುದಾದ ಯಾವುದೇ ಲೋಹದ ವಸ್ತುವು ದೊರೆತಿಲ್ಲ.[೧೬] ಸುಲ್ತಾನರಿಗೆ ಸೇರಿದ ಕಾರಖಾನೆಗಳಲ್ಲಿ ಸಿದ್ಧಗೊಂಡು ಸುಲ್ತಾನರು ಮತ್ತು ಅವರ ಸರದಾರರು ಬಳಸುವಂಥ ವಸ್ತುಗಳು ಇದ್ದಿರಬಹುದಾದರೂ ಇತರ ಇಸ್ಲಾಮಿಕ ದೇಶಗಳಿಗೆ ಸೇರಿದವುಗಳಿಂದ ಇವುಗಳನ್ನು ಪ್ರತ್ಯೇಕಿಸುವುದು ಕಷ್ಟವೆಂಬುದು ಇನ್ನಿತರ ಕಾರಣಗಳೊಂದಿಗೆ ಒಂದು ಮುಖ್ಯವಾದ ಕಾರಣವಾಗಿದೆ. ಏಕೆಂದರೆ ಕೆಲವು ಪ್ರಕಾರದ ವಸ್ತುಗಳು ಸಾಮಾನ್ಯವಾಗಿವೆ. ಉದಾಹರಣೆಗೆ ಲೋಹದ ಇನ್‌ಲೇ ಇವುಗಳನ್ನು ಪರ್ಶಿಯಾದಿಂದ ವಲಸೆ ಬಂದ ಅಥವಾ ತಾತ್ಕಾಲಿಕವಾಗಿ ಭಾರತಕ್ಕೆ ಆಗಮಿಸಿದ ಕಲಾಕಾರರು ನಿರ್ಮಿಸುತ್ತಿದ್ದರು. ಈ ತಂತ್ರವು ಪರ್ಶಿಯಾದಲ್ಲಿ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಜನಪ್ರಿಯವಾಗಿತ್ತು. ಅಂತೆಯೇ ಮೊಸುಲ್ ಮತ್ತು ಇತರ ಸ್ಥಳಗಳಲ್ಲಿಯೂ ಜನಪ್ರಿಯವಾಗಿತ್ತು. ಅಲ್ಲದೇ ಇನ್ನೂ ಹಲವು ವಸ್ತುಗಳು ಆಮದಾಗಿರುವ ಸಂಭವವಿದೆ. ಏಕೆಂದರೆ ಅವು ಮುಸ್ಲಿಂ ಆಡಳಿತ ವರ್ಗದ ಅಭಿರುಚಿ ಮತ್ತು ಉಪಯೋಗಗಳಿಗೆ ಹೆಚ್ಚು ರುಚಿಸುತ್ತಿದ್ದವು. ಹಾಗಿದ್ದರೂ ಇಂಥ ವಸ್ತುಗಳು ಭಾರತಕ್ಕೆ ಬಂದು ಸೇರಿದ ಮೇಲೆ ಅಥವಾ ಲೋಹದ ಕುಶಲಕರ್ಮಿಗಳು ಇತರ ಮುಸ್ಲಿಂ ದೇಶಗಳಿಂದ ಇಲ್ಲಿಗೆ ಬಂದ ಮೇಲೆ ಕೆಲವು ಸುಲ್ತಾನರ ರಾಜ್ಯಗಳಲ್ಲಿ ಪ್ರಮುಖವಾದ ಪ್ರಾದೇಶಿಕ ಶೈಲಿಗಳು ಹುಟ್ಟಿಕೊಂಡಿರಬಹುದು. ಏಕೆಂದರೆ ವಿದೇಶಿ ಕುಶಲಕರ್ಮಿಗಳು ದೇಶೀಯವಾದ ರೂಪಗಳನ್ನೇ ಅಲಂಕರಣ ವಿಧಾನವನ್ನು ಕ್ರಮೇಣ ಅಳವಡಿಸಿಕೊಂಡಿರಬಹುದು. ವಾಸ್ತವವಾಗಿ ಇಂಥ ಲೋಹ ಪಾತ್ರೆಗಳು ಇಂಡೋ–ಇಸ್ಲಾಮಿಕ್ ಲಕ್ಷಣಗಳನ್ನು ತೋರುತ್ತಿರಬೇಕು.

೧೪ನೆಯ ಶತಮಾನದ ಕುಶಲಕರ್ಮಿ ಅಬ್ದುಲ್ಲಾ ಬಿನ್ ಖೈಸರ್‌ನು ಒಮ್ಮೆ ಕೋಟೆಯ ಕಟ್ಟಡದ ಕೆಲಸಕ್ಕೆ ಈ ಕಲಾಕೃತಿಯೊಂದಿಗೆ ಹೋದಾಗ ಆತನ ಕೈಯಿಂದ ಕಲಾಕೃತಿ ಜಾರಿ ಕೆಸರಿನಲ್ಲಿ ಬಿದ್ದು ಸತುವಿನ ಬಣ್ಣವು ಕಪ್ಪಾಗುವುದನ್ನು ಹಾಗೂ ಬೆಳ್ಳಿ ಮತ್ತು ಬಂಗಾರ ಬಣ್ಣ ತಮ್ಮಮೂಲರೂಪದಲ್ಲಿರುವುದನ್ನು ಕಂಡು ಆಶ್ಚರ್ಯಪಟ್ಟು ಕಲಾಕೃತಿ ಬಿದ್ದ ಸ್ಥಳವನ್ನು ಮಣ್ಣು ಪರೀಕ್ಷೆ ಮಾಡಿದ. ಮಣ್ಣಿನ ವಾಸನೆ ಹಾಗೂ ರುಚಿ ವಿಚಿತ್ರವಾಗಿರುವುದನ್ನು ಕಂಡುಕೊಂಡನು. ಆ ಮಣ್ಣಿಗೆ ಉಪ್ಪು ಹಾಗೂ ಖಾರದ ವಿಶಿಷ್ಟ ರುಚಿ ಇರುವುದನ್ನು ತಿಳಿದುಕೊಂಡು ಕಲಾಕೃತಿಗಳ ಮೇಲೆ ವಿವಿಧ ರೀತಿಯಲ್ಲಿ ಮಣ್ಣು ಪ್ರಯೋಗಿಸಿದ ಫಲವಾಗಿ ಬಿದ್ರಿ ಕಲೆ ಇಲ್ಲಿಂದಲೇ ಹುಟ್ಟಿತ್ತೆಂಬುದು ಜನಪದರ ವಾದಗಳಿವೆ.[೧೭] ಈ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ದೊರೆತಿರುವ ಲಿಖಿತ ದಾಖಲೆ ಎಂದರೆ ಪರ್ಶಿಯನ್ ಭಾಷೆಯಲ್ಲಿ ಬರೆದಿರುವ (ಕ್ರಿ.ಶ.೧೭೫೯) ಛಾಹಾರ್ ಗುಲ್‌ಶನ್. ಛಾಹಾರ್ ಗುಲ್‌ಶನದ ಎರಡನೆಯ ಸಂಪುಟದಲ್ಲಿ ದಕ್ಷಿಣ ಐದು ಸುಬಾಗಳನ್ನು (ಆಡಳಿತ ವಿಭಾಗಗಳು) ಹೆಸರಿಸಲಾಗಿದೆ. ಅವುಗಳಲ್ಲಿ ಬೀದರ ನಗರವೂ ಒಂದು. ಈ ನಗರವನ್ನು ಅದರ ಪರ್ಶಿಯನ್

ಹಾಗೂ ಮೊಗಲ್ ಹೆಸರುಗಳಿಂದ ಸೂಚಿಸಲಾಗಿದೆ. ಬ್ರಿಟೀಷ್ ಗ್ರಂಥಾಲಯದಲ್ಲಿರುವ ಹಸ್ತಪ್ರತಿಯಲ್ಲಿ ಈ ಕೆಳಗಿನ ಪರಿಚ್ಛೇದವಿದೆ. ಮುಹಮ್ಮದಾಬಾದ್ ಸುಭಾವನ್ನು ಝಫರಾಬಾದ (ಬಿದರ) ಎಂದು ಕರೆಯಲಾಗಿದೆ.[೧೮] ಈ ಸುಬಾದಲ್ಲಿ ಅತ್ಯಂತ ಸುಂದರವಾದ ಹಾಗೂ ಅಪರೂಪದ ಬಿದ್ರಿ ಪಾತ್ರೆಗಳನ್ನು ಮಾಡಲಾಗುತ್ತದೆ. ಇಲ್ಲಿಯ ಕುಶಲಕರ್ಮಿಗಳು ಅದನ್ನು ಅತೀ ಸೂಕ್ಷ್ಮವಾಗಿ ತಯಾರಿಸುತ್ತಾರೆ.

ಮೊಗಲರ ಕಾಲ (ಕ್ರಿ.ಶ.೧೫೨೬–೧೮೫೭)

ಬಾಬರ (ಕ್ರಿ.ಶ.೧೫೨೬–೧೫೩೦)ನ ಉತ್ತರಾಧಿಕಾರಿಯಾಗಿದ್ದ ಹುಮಾಯೂನನು (ಕ್ರಿ.ಶ.೧೫೩೦–೧೫೫೫) ಭಾರತೀಯ ಕಲೆಗಳಿಗೆ ಮಹತ್ವದ ಕಾಣಿಕೆಗಳನ್ನು ನೀಡಿದ್ದಾನೆ. ಹಿತ್ತಾಳೆಯಲ್ಲಿ ನಿರ್ಮಿತವಾದ ಎಸ್ಟ್ರೋಲಜಿ ಮತ್ತು ಸೆಲೆಸ್ಟಿಯಲ್ ಸ್ಪೇರ್ಸ್‌ಗಳು ಅವನ ಕಾರಣದಿಂದ ನಿರ್ಮಿತವಾಗಿವೆ. ಏಕೆಂದರೆ ಅವನಿಗೆ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಉಪಕರಣಗಳ ಬಗೆಗೆ ಹೆಚ್ಚಿನ ಆಸಕ್ತಿಯಿತ್ತು. ಶೇಖ ಇಲಾಹದಾದನು ಎಸ್ಟ್ರೋಲಜಿ ಉಪಕರಣಗಳ ನಿರ್ಮಾತೃವಾಗಿದ್ದಾನೆ. ಶೇಖನ ಪೀಳಿಗೆಯವರು ಔರಂಗಜೇಬನ ಆಳ್ವಿಕೆಯಲ್ಲಿಯೂ ತಮ್ಮ ಉದ್ಯೋಗವನ್ನು ಮುಂದುವರಿಸಿಕೊಂಡು ಬಂದಿದ್ದರೆಂದು ತಿಳಿದು ಬಂದಿದೆ. ಅಕಬರನು (ಕ್ರಿ.ಶ.೧೫೫೬–೧೬೦೫) ತನ್ನ ಸಾಮ್ರಾಜ್ಯದಲ್ಲಿ ಕಾರಖಾನೆಯನ್ನೇ ಸ್ಥಾಪಿಸಿದ ಮೇಲೆ, ಭಾರತದ ವಿವಿಧ ಭಾಗಗಳಿಂದ ಕುಶಲಕರ್ಮಿಗಳು ಅಲ್ಲಿಗೆ ಬಂದು ಸೇರಿಕೊಂಡರು. ಅಕಬರನ ವೈಯಕ್ತಿಕ ಆಗಮನ ಮತ್ತು ತಾಂತ್ರಿಕ ಸುಧಾರಣೆಗಳ ಕಡೆಗೆ ಒತ್ತುಕೊಡುವಿಕೆಗಳ ಕಾರಣದಿಂದ ಎಲ್ಲಾ ಕಲಾ ಪ್ರಕಾರ ಹಾಗೂ ಕುಶಲಕಲೆಗಳಲ್ಲಿ ಹೊಸ ವಿಚಾರಗಳಿಗೆ ಅವಕಾಶದೊಂದಿಗೆ ಹೆಚ್ಚಿನ ವಿಕಾಸವು ಸಾಧ್ಯವಾಯಿತು.

ಹಾಗಿದ್ದರೂ ೧೬ ಹಾಗೂ ೧೭ನೆಯ ಶತಮಾನದ ಮೊದಲ ಭಾಗದ ಮೊಗಲ ಸಾಮ್ರಾಜ್ಯದ ಲೋಹದ ಪಾತ್ರೆಗಳಿಗೆ ತಾಮ್ರದ ಹೂಜಿಯಂಥ ಕೆಲವೇ ಉದಾಹರಣೆಗಳು ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಇವೆ. ಈ ತಾಮ್ರ ಪಾತ್ರೆಯನ್ನು ಬೇಟೆಯ ದೃಶ್ಯದಿಂದ ಅಲಂಕರಿಸಲಾಗಿದೆ. ಅಂದಲಿಪಿಯ ಪ್ಯಾನಲ್‌ಗಳಿವೆ; ಲೋಹದಲ್ಲಿ ಕೊರೆದ ತಗ್ಗುಗಳಲ್ಲಿ ಅರಗಿನಲೇಪನದ ವಿನ್ಯಾಸಗಳು ಉಳಿದುಕೊಂಡಿವೆ. ಅದು ಉತ್ತರ ಭಾರತದಲ್ಲಿ ನಿರ್ಮಿತವಾಗಿದ್ದು, ಅದನ್ನು ಸಮರ್ಪಿಸಿದ ದಿನಾಂಕವನ್ನು ಅ.ಹ.೯೯೧/ ಕ್ರಿ.ಶ. ೧೫೮೩–೮೪ ಎಂದು ನಮೂದಿಸಲಾಗಿದೆ. ಇದು ಮೊಗಲ ಲೋಹಕಲೆಯ ಮಹತ್ವದ ಮಾದರಿಯಾಗಿದೆ. ಇದು ಪಶ್ಚಿಮ ಇರಾಣ ಹಾಗು ಮೊಗಲರ ನಿರ್ಮಾಣಗಳ ಗುಣ ಲಕ್ಷಣಗಳ ಮಿಶ್ರಣವಾಗಿದೆ. ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಮತ್ತೊಂದು ಹಿತ್ತಾಳೆಯ ಕರಂಡಕವಿದ್ದು ಬಹುಶಃ ಗುಜರಾತಿಗೆ ಸೇರಿದ್ದಾಗಿರಬಹುದು. ಇದನ್ನು ನಕಾಶೆಯಿಂದ ಅಲಂಕರಿಸಲಾಗಿದೆಯಲ್ಲದೆ, ಹಕ್ಕಿಗಳು ಹಾಗೂ ಬೇಟೆಯ ದೃಶ್ಯಗಳನ್ನು ಕೊರೆಯಲಾಗಿದೆ. ಇದು ಅರಬರ ಹಾಗೂ ಜಹಾಂಗೀರರ ಕಾಲದ ವರ್ಣ ಚಿತ್ರಗಳನ್ನು ಹೋಲುತ್ತದೆ. ಅದರ ಸಸ್ಯ ವಿನ್ಯಾಸಗಳು ಚೈನಾದ ಪಿಂಗಾಣಿ ವಸ್ತುಗಳಿಂದ

ಸ್ಫೂರ್ತಿಯನ್ನು ಪಡೆದಿರಬೇಕೆಂಬುದನ್ನು ಸೂಚಿಸುತ್ತದೆ. ಇದು ಜಹಾಂಗೀರ್‌ನ (ಸು.ಕ್ರಿ.ಶ. ೧೬೨೦)[೧೯] ಕಾಲಕ್ಕೆ ಸೇರಿದ್ದು, ಕಾಲ ಕ್ರಮೇಣ ಮೊಗಲರ ಅಲಂಕರಣ ಕಲೆಯಲ್ಲಿ ದೇಶೀಯ, ಪರ್ಶಿಯನ್ ಮತ್ತು ಯೋರೋಪಿಯನ್ ತಂತ್ರಗಳ ಹಾಗೂ ವಿನ್ಯಾಸಗಳ ಮಿಶ್ರಣವನ್ನು ಕಾಣಬಹುದು.

ಲೋಹ ಕಲೆಯಲ್ಲಿ ಮೊಗಲರ ಹೊಸಶೋಧನೆಗಳಲ್ಲಿ ಉಲ್ಲೇಖನೀಯವಾದುದೆಂದರೆ ಚಿನ್ನ ಮತ್ತು ಬೆಳ್ಳಿಗೆ ಹೊಂದಿಸುವ ಇನಾಮಲ್ ಲೇಪನ (ಮೀನಾ) ಬಹುಶಃ ಈ ತಂತ್ರವು ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿ ಯುರೋಪದಿಂದ ಇಲ್ಲಿಗೆ ಪರಿಚಯಗೊಂಡಿರಬಹುದು. ಅಲ್ಲಿಯವರೆಗೆ ಇದು ಕೇವಲ ರತ್ನಾಭರಣಗಳಿಗೆ ಮತ್ತು ಕೆಲವೊಮ್ಮೆ ರತ್ನ ಖಚಿತವಾದ ಬೆಲೆಬಾಳುವ ವಸ್ತುಗಳ ಶ್ರೀಮಂತಿಕೆಯನ್ನು ಹೆಚ್ಚಿಸುವದಕ್ಕಾಗಿ ಬಳಕೆಗೊಳ್ಳುತ್ತಿತ್ತು. ಮೀನಾವು ಮೊಗಲರ ಕಾರ್ಖಾನೆಗಳಲ್ಲಿ ಮಾತ್ರವಲ್ಲದೆ, ಹಿಂದೂ ಸಾಮಂತರಲ್ಲಿಯೂ ಜನಪ್ರಿಯವಾಗಿತ್ತು. ಲಾಹೋರ, ಜಯಪುರ ಲಕ್ನೋ, ಬನಾರಸ್, ಗೋಲ್ಕೊಂಡ, ಕಛ್, ಭಾವಲ್ಪುರ, ಮುಲ್ತಾನ, ಕಾಶ್ಮೀರ ಮತ್ತು ಪ್ರತಾಪಗಡಗಳು ಈ ಕುಶಲ ಕಲೆಯ ಪ್ರಮುಖ ಕೇಂದ್ರಗಳಾಗಿದ್ದವು. ಈ ಕೆಲವು ಕೇಂದ್ರಗಳು ಬೆಳ್ಳಿಯ ಮೇಲಿನ ಇನಾಮಲ್ ಕಾರ್ಯಕ್ಕೆ ಪ್ರಸಿದ್ಧವಾಗಿದ್ದವು.

ಹದಿನೇಳನೆಯ ಶತಮಾನಕ್ಕೆ ಸೇರಿದ ಕೆಲವೇ ಅತ್ಯುತ್ತಮ ನಿರ್ಮಾಣಗಳು ಉಳಿದುಕೊಂಡಿವೆ. ಅತ್ಯುತ್ತಮವಾಗಿ ಎನಾಮಲ್ ಲೇಪನಗೊಂಡ ಮತ್ತು ರತ್ನ ಖಚಿತವಾದ ನಾಲ್ಕು ಚಿನ್ನದ ವಸ್ತುಗಳು ಲೆನಿನ ಗ್ರಾಡ್‌ನ 'ದ ಹರ್ಮಿಟೇಜ'ನಲ್ಲಿದೆ. ಅವುಗಳನ್ನು ೧೯೮೨ರಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ನಡೆದ ವಿಕ್ಟೋರಿಯಾ ಎಂಡ ಆಲ್ಬರ್ಟ್ ಮ್ಯೂಸಿಯಂನ ಇಂಡಿಯಾ ಫೆಸ್ಟಿವಲ್‌ನಲ್ಲಿ ಪ್ರದರ್ಶಿಸಲಾಗಿತ್ತು.[೨೦] ಅದಕ್ಕಿಂತ ಮೊದಲು ಅವು ರಶಿಯಾವನ್ನು ಹೊರತುಪಡಿಸಿ ಬೇರೆಲ್ಲಿಯೂ ಕಾಣಸಿಗುತ್ತಿರಲಿಲ್ಲವಾದುದರಿಂದ ಹೆಚ್ಚು ಗಮನ ಸೆಳೆಯಿತು. ೧೭ನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿರಬಹುದಾದ ಅಪಾರದರ್ಶಕ ಗಾಜು ಲೇಪವುಳ್ಳ ತಾಮ್ರದ ವಸ್ತುಗಳು ಇದ್ದುದು ತಿಳಿದುಬರುತ್ತದೆ. ಅಂತವುಗಳಲ್ಲಿ ಮೊಗ್ಗಿನಾಕೃತಿಯ ಶಿಖರಾಲಂಕಾರ'ವು ಹೈದರಾಬಾದಿನ ಸಾಲಾರಜಂಗ ಮ್ಯೂಸಿಯಂನಲ್ಲಿದೆ.

ಮೊಗಲರ ಕಾಲದಲ್ಲಿ ಜಯಪ್ರಿಯವಾಗಿದ್ದ ಇತರ ಲೋಹದ ಕೃತಿಗಳೆಂದರೆ ತಾಮ್ರದ ಅಡುಗೆಯ ಪಾತ್ರೆಗಳು, ಬೋಗುಣಿ ಮತ್ತು ತಟ್ಟೆಗಳು ಅವುಗಳಲ್ಲಿ ಲೋಹದ ಮಯ್ಯಲ್ಲಿ ಇನಾಮಲ್ ತುಂಬಿಸಿದ ಅಲಂಕರಣವನ್ನು ಕಾಣಬಹುದು. ಅದರ ಕೆಳಗೆ ಗೆರೆಗಳನ್ನು ಕೊರೆದಿರುವಲ್ಲಿ ಕಪ್ಪು ಮಿಶ್ರಣವನ್ನು ತುಂಬಲಾಗಿದೆ. ಅವುಗಳ ಅಲಂಕರಣ ಮತ್ತು ಆಕಾರಗಳು ಸಾಮಾನ್ಯವಾಗಿ ಸಫದವಿದ್ ರೀತಿಯಲ್ಲಿರುತ್ತವೆಯಾದರೂ ಕೆಲವು ಉದಾಹರಣೆಗಳಲ್ಲಿ ಭಾರತೀಯ ಗುಣ ಲಕ್ಷಣಗಳನ್ನು ಕಾಣಬಹುದು.[೨೧] ಅವುಗಳ ಸಿಂಗಾರವು ಅರಬ್ಬೀ ರೀತಿಯದ್ದಾಗಿರುತ್ತದೆ ಮತ್ತು ಪದಕದ ಆಕಾರದ್ದಾಗಿದ್ದು. ಪ್ರಾಣಿಗಳು ಹಾಗೂ ಅಂದದ ಬರಹಗಳಿಂದ ಕೂಡಿರುತ್ತವೆ. ಈ ತೆರನಾದ ಲೋಹ

ಶಿಲ್ಪಕ್ಕೆ ಲಾಹೋರ, ಕಾಶ್ಮೀರ, ದಿಲ್ಲಿ, ಅಹಮ್ಮದಾಬಾದ್ ಮತ್ತು ಡೆಕ್ಕನ್‌ಗಳು ಪ್ರಮುಖವಾದ ಕೇಂದ್ರಗಳಾಗಿದ್ದವು.

ಮೊಗಲರಿಂದ ಸ್ಫೂರ್ತಿ ಪಡೆದ ಮತ್ತೊಂದು ಪ್ರಕಾರದ ಲೋಹ ಶಿಲ್ಪವೆಂದರೆ ಗೋಲಾಕಾರದ ಮತ್ತು ಗಂಟೆಯಾಕಾರದ ಹಿತ್ತಾಳೆ ಮತ್ತು ಬೆಳ್ಳಿಯ ಹುಕ್ಕಾಗಳು ಮತ್ತು ಕೈತೊಳೆವ ಪಾತ್ರೆಗಳು, ದೊಡ್ಡ ಬಾಯಿಯ ನೀರಿನ ಹೂಜಿಗಳು ಮತ್ತು ಪೀಕದಾನಗಳು. ಇವುಗಳನ್ನು ಹಿತ್ತಾಳೆಯ ಮಿಶ್ರಣದೊಂದಿಗೆ ನಿರ್ಮಿಸಲಾಗಿತ್ತು. ಅವುಗಳ ಮೇಲೆ ಆಳವಾಗಿ ಕೊರೆದ ವಿನ್ಯಾಸಗಳಿದ್ದು, ಅವುಗಳನ್ನು ಕಪ್ಪು ಅರಗಿನಿಂದ ತುಂಬಿ, ಭಾಗಶಃ ತವರವನ್ನು ಇನ್‌ಲೇ ಮಾಡಲಾಗುತ್ತಿತ್ತು. ಈವರೆಗೆ ಅವು ಕಾಂಗ್ರಾ ಅಥವಾ ನೂರ್ಪುರಕ್ಕೆ ಸೇರಿದವುಗಳೆಂದು ತಿಳಿಯಲಾಗಿತ್ತು. ಆದರೆ ಬಹು ಮಟ್ಟಿಗೆ ಅವು ಪಂಜಾಬಿನಲ್ಲಿ ಸಿದ್ದವಾಗುತ್ತಿದ್ದವೆನ್ನಬಹುದು. ಇದರ ಪ್ರಾಚೀನ ಉದಾಹರಣೆಯು ಹದಿನೆಂಟನೇ ಶತಮಾನದ ಪ್ರಥಮಾರ್ಧಕ್ಕೆ ಸೇರಿದ್ದಾಗಿದೆ.

ಮೊಗಲರ ಪ್ರಭಾವದಿಂದ ಲೋಹದ ವಸ್ತುಗಳನ್ನು ಅಲಂಕರಿಸುವ ಮತ್ತು ಸಿದ್ಧಗೊಳಿಸುವ ಇತರ ತಂತ್ರ ಕೌಶಲಗಳೂ ಜನಪ್ರಿಯವಾದವು. ಅವುಗಳೆಂದರೆ (೧) ಚಿನ್ನ, ಬೆಳ್ಳಿ ಅಥವಾ ತಾಮ್ರದ ಸೂಕ್ಷ್ಮ ತಂತಿಯಿಂದ ಮಾಡಿದ ಬಳ್ಳಿಗೆಲಸದ ಅಲಂಕಾರ. ಇದು ಆಂಧ್ರ ಪ್ರದೇಶದ ಕರೀಂನಗರ, ಕಟಕ ಝಾಂಸಿ ಮತ್ತು ಢಾಕಾಗಳಲ್ಲಿ ಪ್ರಚುರವಾಗಿತ್ತು. (೨) ನಿಯೋಲೋ (ಬೆಳ್ಳಿಯ ಇತರ ವಸ್ತುಗಳ ಮೇಲೆ ಮಾಡುವ ಚಿತ್ರಣದ ಗೆರೆಗಳನ್ನು ತುಂಬಲು ಬಳಸುವ ಗಂಧಕ ಬೆರೆಸಿ ಬೆಳ್ಳಿ, ತಾಮ್ರ, ಸೀಸಗಳ ಮಿಶ್ರ ಲೋಹ) ಕಾಮಗಿರಿಯ ಬೆಳ್ಳಿಯ ಅಲಂಕಾರಕ್ಕಾಗಿ ರಾಜಸ್ಥಾನ ಹಾಗೂ ಡೆಕ್ಕನ್‌ಗಳಲ್ಲಿ ಬಳಕೆಯಲ್ಲಿತ್ತು. (೩) ಡಮಾಸ್ಕೀನ್ (ಕೊಫ್ತಾ ಗರಿ) ಇದು ಸಿಯಾಲಕೋಟ್ ಮತ್ತು ಗುಜರಾತ, ಪಂಜಾಬನ ವಾಯುವ್ಯ ಭಾಗ; ಜೈಪುರ, ಆಳ್ವರ, ಜೋಧಪುರ ಮತ್ತು ಶಿರೋಹಿ. (ಎಲ್ಲ ರಾಜಸ್ಥಾನ)ಗಳಲ್ಲಿ ಮಧ್ಯ ಪ್ರದೇಶದ ದತ್ತಿಯಾದಲ್ಲಿ ಮತ್ತು ಬೀದರಿನ ಬಳಿಯ ಕಲ್ಯಾಣಿಯಲ್ಲಿ ಪ್ರಚುರವಾಗಿತ್ತು. ಈ ಎಲ್ಲ ಲೋಹ ಶಿಲ್ಪಗಳು ದೇಶದಾದ್ಯಂತ ಬಹುಮಾನಿತವಾದ್ದವು. ನಮಗೆ ತಿಳಿದಿರುವ ಹೆಚ್ಚಿನ ಕೃತಿಗಳು ಹದಿನೆಂಟು–ಹತ್ತೊಂಬತ್ತನೇ ಶತಮಾನಗಳಿಗೆ ಸೇರಿದವುಗಳಾಗಿವೆ.

ಮುಸ್ಲಿಂ ಮತ್ತು ಹಿಂದು ಮನೆಗಳಲ್ಲಿ ಸ್ವಾಗತವನ್ನು ಪಡೆದ ಬಹು ಸಂಖ್ಯೆಯ ವಸ್ತುಗಳು ಮುಸ್ಲಿಮರ ಪ್ರವೇಶದ ನಂತರದವು. ಅದಕ್ಕೆ ಈ ಕೆಳಗಿನ ಪ್ರಾತಿನಿಧಿಕ ಉದಾಹರಣೆಗಳನ್ನುಗಮನಿಸಬಹುದು. ಸುರಾಹಿ(ಕೈ ತೊಳೆಯುವ ಪಾತ್ರೆ), ಉಗಲ್‌ದಾನ (ಪೀಕದಾನಿ), ಉದ್ದಾನ (ಧೂಪದ ಕರಮಡಕ), ಶಮಾದಾನ (ಮೇಣ ಬತ್ತಿಯನ್ನಿಡುವಂಥದು), ಗುಲಾಬಪಾಶ (ಪನ್ನೀರನ್ನು ಚಿಮುಕಿಸಿಡುವಂಥದು), ಇತರ್‌ದಾನ (ಅತ್ತರನ್ನಿಡುವ ಪಾತ್ರೆ), ರಿಹಾಲ (ಪುಸ್ತಕವನ್ನಿಡುವಂಥದು), ಆಲನ, ಮಿರ್–ಎ–ಫರ್ಶಾ, ಮತ್ತು ಡಬ್ಬ, ಪಾನದಾನ ಖಾಸದಾನ (ಎಲೆ ಪಟ್ಟಿಗೆ), ಹುನ್ನದಾನ (ಮಡಿಕೆಯ ಥಾಲಿ) ಮುಂತಾದವು.

ಬಹಮನಿ ರಾಜ್ಯದ ಪತನದ ನಂತರ ಹೈದರಾಬಾದ ನಿಜಾಮನ ಆಡಳಿತದಲ್ಲಿ ಈ ಕಲೆಯ ಬೆಳವಣಿಗೆಯಾಗಿ "ಮದರಸಾ ಸನತ್ ಹಿರಫತ್" ಎಂಬ ಹೆಸರಿನ ಶಾಲೆಯೊಂದು ಬೀದರಿನಲ್ಲಿ ಆರಂಭವಾಯಿತು.[೨೨] ಅದರಲ್ಲಿ ಬಿದ್ರಿ ಕಲೆಯೊಂದಿಗೆ ವಿವಿಧ ಬಗೆಯ ಕರಕುಶಲ ಕಲೆಗಳಿಗಾಗಿ ತರಬೇತಿ ನೀಡಲಾಗುತ್ತಿತ್ತು. ಬಿದ್ರಿ ಕಲಾನಿಪುಣರಿಗೆ 'ಮಾಸ್ಟರ್' ಎಂದು ಕರೆಯಲಾಗುತ್ತಿತ್ತು.

ರಾಮಣ್ಣ ಮತ್ತು ಹೇಮಣ್ಣ ಎಂಬ ಪ್ರಸಿದ್ಧ ಚಿನಿವಾರರು ೧೪ನೆಯ ಶತಮಾನದ ಉತ್ತರಾರ್ಧದಲ್ಲಿ ಬೀದರನಲ್ಲಿದ್ದು ಬಂಗಾರ, ಬೆಳ್ಳಿ ಇತ್ಯಾದಿ ಕಲಾಕೃತಿಗಳಲ್ಲಿ ಮುತ್ತು, ರತ್ನ, ಹವಳಗಳ ಜೋಡಣೆಯ ಕಲೆ ಕರಗತ ಮಾಡಿಕೊಂಡಿದ್ದರೆಂಬ ವಿಚಾರ ಲಕ್ಕಣ ದಂಡೇಶನ **ಶಿವತತ್ವ ಚಿಂತಾಮಣಿ** ಗ್ರಂಥದಿಂದ ತಿಳಿದು ಬರುತ್ತದೆ. ಸ್ಥಳೀಯ ಚಿನಿವಾರರ ಕಲಾಕೃತಿಗಳ ಪ್ರೇರಣೆಯಿಂದ ಅಬ್ದುಲ್ ಬಿನ್ ಖೈಸರನು ಬಿದ್ರಿ ಕಲೆಯ ಹುಟ್ಟಿಗೆ ಕಾರಣ ಕರ್ತನಾದನು ಎಂಬುದು ಒಂದು ಅಭಿಪ್ರಾಯವಾಗಿದೆ.[೨೩] ಅಬ್ದುಲ್ ಬಿನ್ ಖೈಸರನು ಪರ್ಷಿಯಾದಿಂದಲೇ ಈ ಕಲೆಯನ್ನು ಕರಗತ ಮಾಡಿಕೊಂಡು ಬಂದಿದ್ದನೆಂಬುದು ಮತ್ತೊಂದು ಅಭಿಪ್ರಾಯವಾಗಿದೆ.

ಬಹಮನಿ ವಂಶದ ರಾಜರ ಕಾಲದಲ್ಲಿ ಊರ್ಜಿತಾವಸ್ಥೆಯನ್ನು ಮುಟ್ಟಿದ್ದ ಈ ಬಿದ್ರಿ ಕಲೆಯನ್ನು ಪರ್ಶಿಯಾದ ಸಾಂಸ್ಕೃತಿಕ ಮತ್ತು ಕಲೆಯ ಮೂಲದಿಂದ ಬಂದಿರುವುದಾಗಿ ಭಾವಿಸಲಾಗಿದೆ. ಅರೇಬಿಯಾ ಮತ್ತು ಪರ್ಶಿಯಾದಲ್ಲಿ ಸ್ಟೀಲ್ ಅಥವಾ ತಾಮ್ರದ ವಸ್ತುಗಳ ಮೇಲೆ ಬಂಗಾರದ ಎಲೆಗಳನ್ನು ಇನ್‌ಲೇ ಮಾಡುವ ಕಲೆಯು ಬಿದ್ರಿ ಕಲೆಯನ್ನು ಹೋಲುತ್ತದೆ. ಅಬ್ದುಲ್ಲಾ ಬಿನ್ ಖೈಸರನು ಮಹಮ್ಮದ ಗವಾನ ಮದರಸಾದಲ್ಲಿ ಈ ಕಲೆಯನ್ನು ಮುಂದುವರೆಸಿ ಹೊಸ ಶಿಷ್ಯಂದಿರನ್ನು ತಯಾರು ಮಾಡಿದನು. ರಾಮಣ್ಣನ ನಂತರ ಬಿದ್ರಿ ಕಲೆಯನ್ನು ಮುಂದುವರೆಸಿಕೊಂಡು ಬಂದ ಕಲಾವಿದ ಸಜ್ಜಾದ್ ಬಾಷಾ ಹಾಗೂ ಅವನ ನೆಚ್ಚಿನ ಶಿಷ್ಯ ಬಸಣ್ಣ (ಬಸಪ್ಪ) ಇವರು ತಮ್ಮ ಚತುರತೆಯಿಂದ ಬಿದ್ರಿ ಕಲೆಯನ್ನು ಬೆಳೆಸಿದರು.

೧೮ನೆಯ ಶತಮಾನ

ಹೈದರಾಬಾದಿನ ಸ್ಟೇಟ್ ಮ್ಯೂಸಿಯಂನಲ್ಲಿರುವ ಡೆಕ್ಕನ್ನಿನ ಚಿತ್ರವೊಂದರಲ್ಲಿ ಬಿದ್ರಿಯ ಸೂಕ್ಷ್ಮ ಚಿತ್ರವನ್ನು ಸುಮಾರು ಕ್ರಿ.ಶ.೧೮೨೫ರಲ್ಲಿ ಬೀದರಿನಲ್ಲಿ ಚಿತ್ರಿಸಲಾಗಿದ್ದು,[೨೪] ಇದರಲ್ಲಿ ಅಬಿಸೀನಿಯನಅಧಿಕಾರಿಯೊಬ್ಬನು ಬೆಳ್ಳಿ ಮತ್ತು ಹಿತ್ತಾಳೆಯ ಇನ್‌ಲೇ ಇರುವ ಬಿದ್ರಿ ಹುಕ್ಕಾವನ್ನು ಸೇದುತ್ತಿರುವುದನ್ನು ಚಿತ್ರಿಸಲಾಗಿದೆ. ಹದಿನೇಳು ಹದಿನೆಂಟನೆಯ ಶತಮಾನಗಳ ಕೆಲವು ಭಾರತೀಯ ಚಿತ್ರಗಳಲ್ಲಿ ಬಿದ್ರಿ ವಸ್ತುಗಳನ್ನು ಗುರುತಿಸಬಹುದು.

ಲಕ್ನೋದ ಬಿದ್ರಿಯನ್ನು ಕುರಿತು ಅತ್ಯಂತ ಪ್ರಾಚೀನವಾದ ಆಧಾರವೆಂದರೆ ಬ್ರಿಟೀಷ್ ಚಿತ್ರಕಾರನಾದ ಟಿಲ್ಲಿ ಕೆಟ್ಲ ಬಿಡಿಸಿದ ನರ್ತಕಿಯೋರ್ವಳ ತೈಲಚಿತ್ರವಾಗಿದೆ. ಇದನ್ನು ಕ್ರಿ.ಶ.೧೭೭೨ರಲ್ಲಿ

ಫೈಜಾಬಾದನಲ್ಲಿ ಚಿತ್ರಸಲಾಗಿದೆ.[೨೫] ನರ್ತಕಿಯ ಕೈಯಲ್ಲಿ ಕಪ್ಪನೆಯ ಹುಕ್ಕಾ ಇದ್ದು, ಅದು ಲಕ್ನೋದ ಬಿದ್ರಿ ಕೃತಿಯಾಗಬೇಕೆಂಬುದನ್ನು ಪ್ರಕಟಪಡಿಸುತ್ತದೆ.

ದಿನಾಂಕವನ್ನು ಅಂಕಿತಗೊಳಿಸಿದ ಬಿದ್ರಿ ಕೃತಿಯನ್ನು ಕ್ರಿ.ಶ.೧೮೦೦ಕ್ಕಿಂತ ಮೊದಲು ಇದ್ದುದು ನಮ್ಮ ಗಮನಕ್ಕೆ ಬಂದಿಲ್ಲ. ಇದಕ್ಕೆ ಅಪವಾದವೆಂದರೆ ಬೆಳ್ಳಿ ಮತ್ತು ಹಿತ್ತಾಳೆಯ ಇನ್‌ಲೇ ಇರುವ ವರ್ತುಲಾಕಾರದ ಹುಕ್ಕಾದ ಬುಡವು ಮಾತ್ರ. ಅದರ ಮೇಲೆ ರಬಿ (೧೦) ೪೪ (ಕ್ರಿ.ಶ. ೧೬೩೪–೩೫) ಎಂದು ಲಿಖಿತವಿದೆ.[೨೬] ನಜಫ್‌ಕುಲಿ ಎಂಬುವನ ಮಗನು ಈ ರಚನೆಯನ್ನು ಪೂರ್ಣಗೊಳಿಸಿದ್ದನು. ಇದು ಹೈದರಾಬಾದಿನ ಜಗದೀಶ ಮತ್ತು ಕಮಲಾ ಮಿತ್ತಲ ಮ್ಯೂಸಿಯಂ ಆಫ್ ಆರ್ಟ್‌ನಲ್ಲಿದೆ.

ಹದಿನೇಳನೆಯ ಶತಮಾನದ ಮೊದಲಾರ್ಧದಲ್ಲಿ ಬಿದ್ರಿ ವಸ್ತುಗಳ ಆಕಾರಗಳನ್ನು ಪರ್ಶಿಯನ್ ಮತ್ತು ಇತರ ಇಸ್ಲಾಮಿಕ್ ಲೋಹಶಿಲ್ಪಗಳಿಂದ ಹಾಗೂ ಚೀನಾ ಮತ್ತು ಪರ್ಶಿಯಾದ ಪಿಂಗಾಣಿ ವಸ್ತುಗಳಿಂದ ಪಡೆಯಲಾಗುತ್ತಿತ್ತು. ಜೊತೆ ಜೊತೆಗೆ ಮೊಗಲರ ಅಲಂಕರಣ ಕಲೆಯ ಪ್ರಭಾವವು ಕಂಡುಬರುತ್ತದೆ. ಹದಿನೆಂಟನೆಯ ಶತಮಾನದ ಮಧ್ಯ ಭಾಗದಲ್ಲಿ ಯುರೋಪಿನ ಪ್ರಾಧಾನ್ಯವು ಡೆಕ್ಕನ್ನಿನಲ್ಲಿ ಹೆಚ್ಚುತ್ತ ಬಂದಂತೆ ಯುರೋಪಿಯನ್ ಆಶಯ ಮತ್ತು ಆಕಾರಗಳು ಬಿದ್ರಿ ವಸ್ತುಗಳಲ್ಲಿ ಕಾಣತೊಡಗಿದವು. ಆದರೆ ಒಟ್ಟಾರೆಯಾಗಿ ಎಲ್ಲ ಬಿದರಿ ವಸ್ತಗಳು ಡೆಕ್ಕನ್ನಿನ ಪ್ರಭಾವ ಮುದ್ರೆಯನ್ನು ಪ್ರದರ್ಶಿಸುತ್ತವೆ.

ಬಿದ್ರಿ ವಸ್ತುಗಳಲ್ಲಿ ಹುಕ್ಕಾದ ಬುಡದ ಭಾಗದ ನಿರ್ಮಾಣವು ಹೆಚ್ಚಿನ ಪ್ರಮಾಣದಲ್ಲಿದೆ. ಅವುಗಳ ವಿನ್ಯಾಸದಲ್ಲಿ ಅರಬ್ಬೀ ಶೈಲಿಯ ಸಸ್ಯಗಳ ಆಶಯಗಳು ಹಾಗೂ ಅನಂತರದಲ್ಲಿ ಹೂವುಗಳು ಹೆಚ್ಚಿನ ಬಲವನ್ನು ಪಡೆದಿವೆ. ಈ ರೀತಿಯ ಸಸ್ಯಗಳ ಆಶಯಗಳು ಮೊಗಲರ ಕಲೆಗಳಲ್ಲಿ ಸುಮಾರು ಕ್ರಿ.ಶ.೧೬೨೦ರಿಂದ ಪ್ರಾರಂಭವಾಯಿತು.[೨೭] ಇದಕ್ಕೆ ಜಹಾಂಗೀರ ಬಾದಶಹ ಸ್ಫೂರ್ತಿಯೆಂದು ಹೇಳಬಹುದು. ಮುಂದೆ ಶಹಾಜಹನನ ಕಾಲದಲ್ಲಿ ಇದು ಶಿಖರಕ್ಕೆ ತಲುಪಿ, ಹದಿನೇಳನೆಯ ಶತಮಾನದ ಬಿದ್ರಿ ಕೃತಿಗಳ ಹೆಗ್ಗುರುತೆನಿಸಿತು. ಕೆಲವು ಪ್ರಾಚೀನ ಹುಕ್ಕಾ ಬುಡದಲ್ಲಿ ಹಾಗೂ ಇನ್ನಿತರ ವಸ್ತುಗಳಲ್ಲಿ ಹೂವುಗಳ ತಿರುವು ಮುರುವುಗಳು ಸುಂಟರಗಾಳಿಗೆ ಸಿಕ್ಕಿದವುಗಳಂತಿವೆ. ಅವು ಹದಿನೇಳನೆಯ ಶತಮಾನದ ಡೆಕ್ಕನ್ನಿನ ಚಿತ್ರಗಳ ಚೈತನ್ಯ ಹಾಗೂ ಅಲಂಕಾರಗಳ ವಿವರಗಳನ್ನು ತೋರ್ಪಡಿಸುತ್ತವೆ.

೧೭ನೆಯ ಶತಮಾನ

೧೮೦೯ರ ಪೂರ್ಣಿಯಾದಲ್ಲಿನ ಉದ್ದಿಮೆಯ ಉಲ್ಲೇಖದ ಹೊರತಾಗಿ ಯಾವುದೇ ಲಿಖಿತ ಉಲ್ಲೇಖವೂ ದೊರೆಯುವುದಿಲ್ಲ. ೧೭ನೇಯ ಶತಮಾನದಲ್ಲಿ ಈ ಉದ್ದಿಮೆಯು ಅಸ್ತಿತ್ವದಲ್ಲಿತ್ತೆಂಬುದನ್ನು ತೋರಿಸುವ ಕೆಲವು ವಸ್ತುಗಳು ದೊರೆತಿವೆ. ಅವುಗಳ ಗುಂಪು ಚಿಕ್ಕದು.

ಅವುಗಳಲ್ಲಿ ಕೆಲವು ವಸ್ತು ರೂಪದಲ್ಲಿದ್ದರೆ ಇನ್ನೂ ಕೆಲವು ಚಿತ್ರ ರೂಪದಲ್ಲಿವೆ. ವಿಕ್ಟೋರಿಯಾ ಮತ್ತು ಆಲ್ಬರ್ಟ ಮ್ಯೂಝಿಯಮ್ಮಿನಲ್ಲಿ[೨೮] (ಕ್ಯಾಟಲಾಗ್ ನಂ. ೨) ಹೂಜಿಯೊಂದರ ಮೇಲೆ ದೊರೆತ ಬರಹದ ಪ್ರಕಾರ ಅದು ತೈಮೂರ (ಕ್ರಿ.ಶ.೧೩೩೬–೧೪೦೫)ರಿಗೆ ಸೇರಿದ್ದು. ಇವನು ಮೊಗಲ್ ಸಾಮ್ರಾಜ್ಯ ಸ್ಥಾಪಕನೆನಿಸಿದ ಬಾಬರನ ಮೂಲ ಪುರುಷರ ವರ್ಗಕ್ಕೆ ಸೇರಿದವನು. ಆದರೆ ಹೂಜಿಯು ಒಟ್ಟಾರೆ ಆಕಾರ ಲಕ್ಷಣಗಳೂ ಅಷ್ಟೊಂದು ಪ್ರಾಚೀನತೆಯನ್ನು ಸೂಚಿಸುವುದಿಲ್ಲ. ಆ ಹೂಜಿಯ ಆಕಾರ ಅಲಂಕರಣಗಳು ಸ್ಪಷ್ಟವಾಗಿ ೧೭ನೆಯ ಶತಮಾನದ ಮಧ್ಯದ ದಶಕಗಳಿಗೆ ಸೇರಿದ್ದಾಗಿವೆಯೆಂಬುದನ್ನು ಸೂಚಿಸುತ್ತವೆ. ಅದೇ ಸಂಗ್ರಾಹಾಲಯದ ಕ್ಯಾಟಲಾಗ್ ೧ರಿಂದ ೧೦ರವರೆಗಿನ ವಸ್ತುಗಳು ೧೭ನೆಯ ಶತಮಾನದ ಉತ್ತರಾರ್ಧ ಅಥವಾ ೧೮ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿದವುಗಳಾಗಿವೆ. ಅವುಗಳ ಒಪ್ಪಂದದ ಸ್ವರೂಪ ಮತ್ತು ರೂಪ–ರೇಷೆಗಳ ಆಧಾರದ ಮೇಲೆ ಈ ತೀರ್ಮಾನಕ್ಕೆ ಬರಲಾಗಿದೆ.

೧೭ನೆಯ ಶತಮಾನಕ್ಕೆ ಸೇರಿದ ಅನೇಕ ವಸ್ತುಗಳು ಖಾಸಗಿ ಹಾಗೂ ಸಾರ್ವಜನಿಕ ಸಂಗ್ರಹಗಳಿದ್ದು ಅವು ಕ್ರಿ.ಶ.೧೬೫೦ಕ್ಕಿಂತ ಈಚಿನವಾಗಿವೆ. ಶತಮಾನದ ಪೂರ್ವಭಾಗದಲ್ಲಿ ಇರಾನ, ಯೂರೋಪ ಹಾಗೂ ದೇಶಿಯ ಅಂಶಗಳ ಮಿಶ್ರಣದಿಂದ ರೂಪಗೊಂಡ ಮೊಘಲ್ ಶೈಲಿಯ ಅಲಂಕರಣಗಳ ವಿನೂತನ ಸಿದ್ದತಂತ್ರವೆನಿಸಿತ್ತು. ಈ ಶೈಲಿಯು ಬಲವಾದ ಇರಾಣಿ ಪ್ರಭಾವವುಳ್ಳ ಡೆಕ್ಕನ್ ಶೈಲಿಗಿಂತ ಭಿನ್ನವಾದುದಾಗಿತ್ತು. ಮೊಘಲ ಸಾಮ್ರಾಜ್ಯವು ದಕ್ಷಿಣದತ್ತ ವಿಸ್ತರಿಸುತ್ತ ನಡೆದಂತೆ. ಈ ವ್ಯತ್ಯಾಸಗಳು ಕಡಿಮೆಯಾಗುತ್ತ ಬಂದವು. ಕ್ರಿ.ಶ. ೧೬೦೦ರಲ್ಲಿ ಅಹಮ್ಮದ ನಗರದ ಕೋಟೆಯ ಸೇರ್ಪಡೆಯೊಂದಿಗೆ ಅಕಬರನು ಡೆಕ್ಕನ್‌ನಲ್ಲಿ ಕಾಲೂರಿದಂತಾಯಿತು. ಕ್ರಿ.ಶ.೧೬೩೬ರಲ್ಲಿ ಬಿಜಾಪುರ ಮತ್ತು ಮೊಘಲರ ನಡುವೆ ವಿಭಾಗವಾಯಿತು. ಉತ್ತರ ಭಾರತದ ಅಧಿಕಾರಿಗಳು ಇಲ್ಲಿ ಖಾಯಂ ವಸತಿಯನ್ನು ಏರ್ಪಡಿಸಿಕೊಳ್ಳತೊಡಗುವುದರೊಂದಿಗೆ ಅವರು ಕಲೆಗಳಿಗೆ ಉತ್ತೇಜನವನ್ನು ನೀಡತೊಡಗಿದರು. ಈ ಬಗೆಗೆ ಮಾರ್ಕ ಝೇಬ್ರೊವಸ್ಕಿಯವರು ಹೇಳುತ್ತಾರೆ–ಮೊಘಲ ಮತ್ತು ರಜಪೂತ ಕಲಾಪೋಷಕರು ಮತ್ತು ಡೆಕ್ಕನ್ನಿನ ಚಿತ್ರ ಕಲಾವಿದರು ಬಿಜಾಪುರದ ಅಭಿರುಚಿಯಲ್ಲಿ ಕ್ರಾಂತಿಯನ್ನುಂಟು ಮಾಡಿದರು. ಅಲ್ಲದೆ ಕ್ರಿ.ಶ.೧೬೫೬ರಲ್ಲಿ ಬೀದರ, ಹಾಗೂ ಕ್ರಿ.ಶ.೧೫೮೬ರಲ್ಲಿ ಗೋಲ್ಕೊಂಡ ರಾಜ್ಯಗಳು ಪತನಗೊಂಡು ಮೊಗಲರ ಪ್ರಭಾವವು ಸರ್ವತ್ರ ಪಸರಿಸಿತು. ಆದ್ದರಿಂದ ಬಿದ್ರಿ ಕಲಾಕೃತಿಗಳನ್ನು ನಿರ್ದಿಷ್ಟ ಸ್ಥಾನಕ್ಕೆ ಸೀಮಿತಗೊಳಿಸುವುದು ಕಷ್ಟಕರವಾಗುತ್ತದೆ. ಅದರ ಆಕಾರವು ೧೭ನೆಯ ಶತಮಾನದ ಮಧ್ಯಭಾಗದ ಕಲಾಕೃತಿಯನ್ನು ಹೊಂದಿದೆಯಾದರೆ, ಅದನ್ನು ಅಲಂಕರಿಸುವಲ್ಲಿ ಇರಾಣಿ ಶೈಲಿಯು ಸ್ಪಷ್ಟವಾಗಿದೆ.

೧೭ನೆಯ ಶತಕದ ವರ್ಣ ಚಿತ್ರಗಳಲ್ಲಿ ಕೂಡ ಬಿದ್ರಿಯನ್ನು ಕಾಣಬಹುದು. ಜಗದೀಶ ಮಿತ್ತಲ್ ಅವರು ಸುಮಾರು ಕ್ರಿ.ಶ.೧೬೨೫ರ ಕಲಾಕೃತಿಯೊಂದರ ಕಡೆಗೆ ಗಮನ ಸೆಳೆದಿದ್ದಾರೆ. ಇದು ಹೈದರಾಬಾದಿನ ಸಂಗ್ರಹಾಲಯದಲ್ಲಿದೆ. ಇದು ಬೆಳ್ಳಿ ಮತ್ತು ಮಿಶ್ರ ಲೋಹವನ್ನು ಹುದುಗಿಸಿದ

ಹುಕ್ಕಾದ ಚಿತ್ರವಾಗಿದೆ. ಡೆಕ್ಕನ್ನಿನ ಚಿತ್ರಕಲೆಯ ಬಗೆಗೆ ಮಾರ್ಕ ಝುಬ್ರೋವಸ್ಕಿಯ ಪುಸ್ತಕದಲ್ಲಿ ಸುಮಾರು ಕ್ರಿ.ಶ.೧೬೫೧ರ ಕಾಲದ ಸುಲ್ತಾನ್ ಮಹಮ್ಮದ ಆದಿಲ್ ಶಾಹನ ಚಿತ್ರವೊಂದಿದೆ. ಅದರಲ್ಲಿ ಅವನು ಕೈಯಲ್ಲಿ ಹಿಡಿದು ಸೇದುತ್ತಿರುವ ಹುಕ್ಕಾವು ಕಪ್ಪು ಬಣ್ಣದ್ದಾಗಿದ್ದು,[೨೯] ಅಲಂಕರಣವಿಲ್ಲದ ಲೋಹ ನಿರ್ಮಿತವಾಗಿದೆ. ಇದು ಬಿದ್ರಿಯೇ ಆಗಿರಬೇಕು. ನವಾಬ ಅಬ್ದುಲ್ ಗಫಾರ ಖಾನನ ಚಿತ್ರದಲ್ಲಿ ಅವನು ಹಿಡಿದಿರುವ ಹುಕ್ಕಾವು ಬಿದ್ರಿಯದೆಂಬುದು ನಿಸ್ಸಂದೇಹವಾಗಿದೆ. ಝುಬ್ರೋವಸ್ಕಿಯವರ ಪ್ರಕಾರ ಇದು ಶತಮಾನದ ಕೊನೆಯ ಪಾದಕ್ಕೆ ಸೇರಿದ್ದು. ಈ ಉದಾಹರಣೆಯು ಅತ್ಯಂತ ಸುಂದರವಾಗಿದೆ. ವರ್ತುಲಾಕೃತಿಯ ಕಪ್ಪು ಬಣ್ಣದ ಪಾತ್ರೆಯಲ್ಲಿ ಹುದುಗಿಸಲ್ಪಟ್ಟ ಬೆಳ್ಳಿ ಮತ್ತು ಮಿಶ್ರ ಲೋಹದ ಹೂವುಗಳ ಕೆತ್ತನೆ ಕುಸುರಿಯಿದೆ. ಸುಮಾರು ಇದೇ ಕಾಲಕ್ಕೆ ಸೇರಿದ ಸ್ವಲ್ಪ ದುರ್ಬಲರೂಪದ ಗೋಲಾಕಾರದ ಹುಕ್ಕಾವೊಂದರ ಚಿತ್ರವನ್ನು ಕಾಣಬಹುದು. ಇದು ನಾರ್ವಿಚ್‌ನ ಸೇನ್ಸಬರಿ ಸೆಂಟರ್‌ನಲ್ಲಿದೆ. ಇದರಲ್ಲಿ ಲತಾಕುಂಜದ ಕೆಳಗೆ ಕುಳಿತು ಹುಕ್ಕಾ ಸೇದುತ್ತಿರುವ ಮನುಷ್ಯನೊಬ್ಬನ ಚಿತ್ರವಿದೆ. ಅವನು ಯಾರೋ ತಿಳಿಯದು. ಅವನ ಹುಕ್ಕಾವನ್ನು ಬೆಳ್ಳಿಯ ಗೆರೆಗಳಿಂದ ಅಲಂಕರಿಸಲಾಗಿದೆ.

೧೮ನೆಯ ಶತಮಾನ

ಕ್ರಿ.ಶ.೧೮೭೭ರಲ್ಲಿ ೨ನೆಯ ಪ್ರದರ್ಶನದ ನಂತರ ಬಿದ್ರಿಕಲೆಯ ಉತ್ತಮ ಕಲಾಕೃತಿಗಳು ಸಿದ್ಧವಾಗತೊಡಗಿದವು. ಪೂರ್ಣಿಯಾದ ಕಲೆಯು ಎರಡು ಭಾಗಗಳಲ್ಲಿ ವಿಭಜನೆಗೊಂಡಿದೆ. ಒಂದು ಪೂರ್ಣಿಯಾದಲ್ಲಿ, ಇನ್ನೊಂದು ಬೇಲ್ಲೂರಿನಲ್ಲಿ. ಬೇಲ್ಲೂರು, ಪೂರ್ಣಿಯಾದಿಂದ ಕೆಲವು ಕಿ.ಮೀ.ದೂರದಲ್ಲಿದೆ. ಇಲ್ಲಿನ ಕಾರ್ಮಿಕರು ಹಿಂದು ಧರ್ಮದವರಾಗಿದ್ದರೂ ಪೂರ್ಣಿಯಾದಲ್ಲಿನ ಕಾರ್ಮಿಕರು ಹಿಂದು ಮತ್ತು ಮುಸ್ಲಿಂ ಧರ್ಮಗಳಿಗೆ ಸೇರಿದವರಾಗಿದ್ದಾರೆ. ಒಂದು ಪ್ರಕಾರದ ಕಲೆಗೆ 'ಫರ್ಕಿ' ಎಂದೂ, ಇನ್ನೊಂದು ಪ್ರಕಾರಕ್ಕೆ 'ಕರ್ನಾ' ಬಿದ್ರಿ ಕಲೆ ಎಂದೂ ಹೆಸರು ಬಂದಿದೆ.

ವಿಶ್ವದಲ್ಲಿ ಬೀದರ್ ಬಿದ್ರಿ ಕಲೆಯ ಕೇಂದ್ರ ಬಿಂದುವಾಗಿದ್ದರೂ, ಹೈದ್ರಾಬಾದ ಗೋಲ್ಕೊಂಡಾ, ಬಿಜಾಪುರ, ಅಹಮದ್‌ನಗರ, ಅಜಮೀರ, ಮುಂಬಯಿ, ಲಕ್ನೋ, ಮುರ್ಶಿದಾಬಾದ್, ಪೂರ್ಣಿಯಾ, ಸೂರತ್, ಝೂವರ್, ಜೈಪುರ, ದೆಹಲಿ, ಫೈಜಾಬಾದ್, ಬನಾರಸ್, ಕಲ್ಕತ್ತಾ, ಗಯಾ, ಈ ಸ್ಥಳಗಳು ಕೂಡ ಕೇಂದ್ರ ಬಿಂದುಗಳಾಗಿವೆಯೆಂದು ಅಧ್ಯಯನದಿಂದ ಗೊತ್ತಾಗುತ್ತದೆ. ಕ್ರಿ.ಶ.೧೮೮೧ರಲ್ಲಿ ಸಿಮ್ಲಾ, ಕ್ರಿ.ಶ.೧೮೮೩–೮೪ರಲ್ಲಿ ಜೈಪುರ, ಕ್ರಿ.ಶ.೧೮೮೬ರಲ್ಲಿ ಇಂಗ್ಲೆಂಡ್‌ಗಳಲ್ಲಿ ಬಿದ್ರಿಕಲೆ ಪ್ರದರ್ಶನಗೊಂಡು ವಿಶ್ವವ್ಯಾಪಕವಾಯಿತು. ಇದರಿಂದ ಬಿದ್ರಿ ಕಲಾಕೃತಿಗಳ ಬೇಡಿಕೆ ಹೆಚ್ಚಾಗಿ ಕುಶಲಕರ್ಮಿಗಳಿಗೂ ಮಾನ್ಯತೆ ಪ್ರಾಪ್ತವಾಗಲಾರಂಭಿಸಿತು.

೧೮ನೇ ಶತಮಾನದಲ್ಲಿ ಚಿತ್ರಣವು ಇನ್ನಷ್ಟು ಸ್ಪಷ್ಟವಾಗುತ್ತದೆ. ಬಿದ್ರಿ ಕರಕುಶಲ ವಸ್ತುಗಳ ನಿರ್ಮಾಣ ಕೇಂದ್ರಗಳ ಅಸ್ತಿತ್ವವನ್ನು ನಿಸ್ಸಂಶಯವಾಗಿ ಸ್ಥಾಪಿಸಬಹುದು. ಛಾಹಾರ್ ಗುಲಶನ್‌ಗುರುತಿಸುವಂತೆ ಬೀದರ ನಗರವು ಬಿದ್ರಿ ಕಲೆಯ ನಿರ್ಮಾಣ ಕೇಂದ್ರವಾಗಿತ್ತು.

ಕ್ರಿ.ಶ.೧೭೭೦ರಲ್ಲಿ[೩೦] ಫೈಜಾಬಾದಿನಲ್ಲಿ ನಿರ್ಮಾಣಗೊಂಡ ಅಟ್ಲಾಸಿನಲ್ಲಿಯೂ ಇದರ ನಿರೂಪಣೆಯನ್ನು ಕಾಣಬಹುದು. ಈ ಅಟ್ಲಾಸನ್ನು ಕ್ರಿ.ಶ.೧೭೬೩–೭೫ರ ಅವಧಿಯಲ್ಲಿ ಔಧದ ನವಾಬನ ಸೈನ್ಯದ ಸಲಹಾಧಿಕಾರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಕರ್ನ್‌ಲ್ ಬೀನ್ ಬ್ಯಾಪ್ಟಿಸ್ಟ ಜೆಂಟಿಲ್ ಎಂಬ ಫ್ರೆಂಚ್ ಅಧಿಕಾರಿಯ ನಿರ್ದೇಶನದಂತೆ ರಚಿಸಲಾಯಿತು. ಈ ಅವಧಿಯಲ್ಲಿ ಅವನು ಭಾರತದ ರಾಜಕೀಯ ಹಾಗೂ ಸಾಮಾಜಿಕ ಇತಿಹಾಸಗಳಿಗೆ ಸಂಬಂಧಿಸಿದ ಅನೇಕ ಸುಚಿತ್ರ ಕೃತಿಗಳನ್ನು ರಚಿಸುವುದಕ್ಕೆ ಸ್ಥಳೀಯ ಕಲಾವಿದರ ನೇಮಿಸಿಕೊಂಡ. ಅವುಗಳಲ್ಲಿ ಮೊದಲನೆಯದಾದ ಅಟ್ಲಾಸಿನಲ್ಲಿ ಬೀದರ ಸುಭಾದ ನಕಾಶೆಯಿದೆ; ಅದು ಈಗ ಇಂಡಿಯಾ ಲೈಬ್ರರಿಯಲ್ಲಿದೆ. ಈ ನಕಾಶೆಯ ಎರಡೂ ಬದಿಗಳಲ್ಲಿ ಚಿತ್ರಗಳಿವೆ. ಇವುಗಳಲ್ಲಿ ಹೆಚ್ಚಿನವು ಸೂಫಿಗಳ ಬೇರೆ ಬೇರೆ ಪಂಥಗಳನ್ನು ಚಿತ್ರಿಸುತ್ತವೆಯಾದರೂ ಬೀದರಿನಲ್ಲಿ ನಿರ್ಮಿತವಾದ ಬಿದ್ರಿ ಪಾತ್ರೆಗಳನ್ನು ಮತ್ತು ಕುಶಲಕರ್ಮಿಗಳ ಚಿತ್ರಗಳನ್ನು ಒಳಗೊಂಡಿವೆ.

ಅಲ್ಲಿಯ ಚಿತ್ರವೊಂದರಲ್ಲಿ ಕನ್ನಡಕಧಾರಿಯಾದ ಕುಶಲಕರ್ಮಿಯು ಗೋಲಾಕಾರದ ಹುಕ್ಕಾದ ಮೇಲೆ ಪುಷ್ಪಾಕೃತಿಯನ್ನು ಕೊರೆಯುತ್ತಿರುವ ದೃಶ್ಯವಿದೆ; ಅದನ್ನು ಅವನ ಹೆಂಡತಿ ಹಾಗೂ ಸಾಕಿದ ಗಿಳಿಗಳು ನೋಡುತ್ತಿರುವಂತಿದೆ. ರೇಖಾಚಿತ್ರಗಳ ಗುಣಮಟ್ಟದ ಈ ಚಿತ್ರಗಳನ್ನು ಶೀರ್ಷಿಕೆಯ ಮೂಲಕ ದೃಢೀಕರಿಸಲಾಗಿದೆ. Fabrique de Beder u on uncrusteen or et argent[೩೧](ಬೆಳ್ಳಿ ಬಂಗಾರಗಳನ್ನು ಹುದುಗಿಸುವ ಬೀದರಿನ ಕಮ್ಮಟ).

೧೮೯೦ರಲ್ಲಿ ಭಾರತದಲ್ಲಿ ಅನೇಕ ಬದಲಾವಣೆಗಳಾದವು. ಔದ್ಯೋಗಿಕರಣದಿಂದಾಗಿ ಅನೇಕ ನಗರಗಳಲ್ಲಿ ಹೊರ ರಾಷ್ಟ್ರದಲ್ಲಿ ಕಂಡು ಹಿಡಿದ ವೈಜ್ಞಾನಿಕ ಉಪಕರಣಗಳ ಉಪಯೋಗ ನಡೆಯುತ್ತಿತ್ತು. ಈ ಮಧ್ಯ ಪೂರ್ಣಿಯಾ ಎಂಬಲ್ಲಿ ಈ ಬಿದ್ರಿ ಕಲೆಯ ಕಾರ್ಮಿಕರ ಒಂದು ಸಣ್ಣ ಹಳ್ಳಿ ನಿರ್ಮಾಣಗೊಂಡಿತ್ತು. ನಂತರ ಇವರಿಗೆ ಆಂಗ್ಲರಿಂದ ಸಹಯೋಗ ದೊರಕಿತು. ಮತ್ತು ನಿರ್ಮಾಣಗೊಂಡ ವಸ್ತುಗಳನ್ನು ಹೊರ ರಾಷ್ಟ್ರಗಳಿಗೆ ಕಳುಹಿಸುವುದು ಪ್ರಾರಂಭವಾಯಿತು. ಈ ಕಾಲದ ವಸ್ತುಗಳಲ್ಲಿನ ನಕ್ಷೆ ಹೆಚ್ಚು ಸ್ಪಷ್ಟವಾಗಿವೆ. ಬೀದರ, ಪೂರ್ಣಿಯಾ, ಲಕ್ನೋ ಮತ್ತು ಮುರ್ಷಿದಾಬಾದ ಇದರ ಮುಖ್ಯ ಕೇಂದ್ರಗಳಾಗಿದ್ದವು.

ಕ್ರಿ.ಶ.೧೮೫೧ರಲ್ಲಿ ಮೊದಲನೆ ಅಂತರಾಷ್ಟ್ರೀಯ ಪ್ರದರ್ಶನ ಬ್ರಿಟನ್‌ನಲ್ಲಿ ನಡೆಯಿತು. ಆನಂತರ ಭಾರತದ ಪ್ರಮುಖ ನಗರಗಳಲ್ಲಿ ನಿಯಮಿತ ರೂಪದಲ್ಲಿ ಇದರ ಪ್ರದರ್ಶನ ನಡೆಯಲಾರಂಭಿಸಿತು. ಕ್ರಿ.ಶ.೧೮೫೧ರಲ್ಲಿ ನಡೆದ ಪ್ರದರ್ಶನಲ್ಲಿ ೧೭ನೆಯ ಶತಮಾನದ ಬೀದರ–ಪೂರ್ಣಿಯಾ, ಮುರ್ಷಿದಾಬಾದ ಮತ್ತು ಲಕ್ನೋದಲ್ಲಿ ನಿರ್ಮಾಣಗೊಂಡ ಉತ್ಕೃಷ್ಟ ಪ್ರಕಾರಗಳನ್ನು ಪ್ರದರ್ಶನ ಮಾಡಲಾಯಿತು. ಈ ಪ್ರದರ್ಶನದಿಂದ ಲೋಕಪ್ರಿಯತೆ ಹೆಚ್ಚಾಯಿತು. ಇದರ ಎರಡನೆಯ ಕ್ಷೇತ್ರ ಪೂರ್ಣಿಯಾವಾಗಿತ್ತು.

ಪೂರ್ಣಿಯಾ (ಬಿಹಾರ)ಕ್ಕೆ ಈ ಕುಶಲಕಲೆಯ ಆರಂಭದ ಕಾಲವನ್ನು ಆಧಾರಿಸಲಾಗದು. ನಾವು ಈಗಾಗಲೇ ಗಮನಿಸಿದಂತೆ ಹಿಮಾಲಯನ್ ರಾಜ್ಯಗಳ ಪ್ರಭಾವಗಳು ದೂರ ಪ್ರಾಚ್ಯದ ಮೂಲಾಶಯಗಳನ್ನು ಬಿಂಬಿಸುತ್ತಿದ್ದ ಕ್ಷೇತ್ರಗಳನ್ನು ತಲುಪಿದವು. ೧೯ನೆಯ ಶತಮಾನದಲ್ಲಿ ಚೆಸಿವಾರ, ಧನಕುಕ (ಕಾರ್ಮಿಕರು), ನುಂಡಿ (ಸೇಂದಿ ಮಾರುವವರು) ಮತ್ತು ಮಹಮ್ಮದೀಯರೇ ಮುಂತಾದ ಇತರ ಜಾತಿ, ಧರ್ಮಗಳ ಜನರು ಪೂರ್ಣಿಯಾದಲ್ಲಿ ಉಳಿದ ಕೆಲಸಗಳನ್ನು ಮಾಡುತ್ತಿದ್ದರು. ಇಂಗ್ಲಿಷಿನಲ್ಲಿ ಬಿದ್ರಿಯ ನಿರ್ಮಾಣದ ಬಗ್ಗೆ ದೊರೆಯುವ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಪ್ರಾನ್ಸಿಸ್ ಬುಕನನ್ ಕ್ರಿ.ಶ.೧೮೦೯–೧೮೧೦ರಲ್ಲಿ ಬಿದ್ರಿಯ ಉತ್ಪಾದನೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಮಾಡಿದ ವರ್ಣನೆ.[೨] ಪೂರ್ಣಿಯಾದಲ್ಲಿ ಇಂದಿಗೂ ಆ ಉದ್ದಿಮೆಯು ಚೆನ್ನಾಗಿ ಬೇರೂರಿದೆ. ಅದು ಹಿಂದಿನ ಶತಮಾನದಿಂದಲೂ ನಡೆದು ಬಂದಿದೆಯೆಂದು ಖಚಿತವಾಗಿ ಹೇಳಬಹುದು. ಬುಕನನ್ ಒಟ್ಟು ೭೧ ಜನ ಕುಶಲಕರ್ಮಿಗಳು ಈ ಉದ್ದೇಶದಲ್ಲಿ ತೊಡಗಿಕೊಂಡಿದ್ದಾರೆಂದು ಅಂದಾಜು ಮಾಡಿದ್ದಾನೆ. ಇಲ್ಲಿ ತಯಾರಾದ ವಸ್ತುಗಳನ್ನು ಮುರ್ಶಿದಾಬಾದ, ಕಲ್ಕತ್ತಾ, ಢಾಕಾ, ದಿನಾಜಪುರ ಮತ್ತು ರಂಗಪುರಕ್ಕೆ ಕಳುಹಿಸಲಾಗುತ್ತಿತ್ತು. ಹಾಗಾಗಿ ಈ ಉದ್ದಿಮೆಗೆ ಸಾಕಷ್ಟು ಪ್ರಸಿದ್ಧಿಯೂ ದೊರಕಿತ್ತು. ಬುಕನನ್‌ನ ಪ್ರಕಾರ ಬಿದ್ರಿಯ ಹೆಚ್ಚಿನ ಅಂಶವು ಸ್ಥಳೀಯರು 'ಜಸ್ತ್' ಎಂದು ಕರೆಯುವ ಲೋಹದ್ದಾಗಿತ್ತು. ಬುಕನನ್‌ನು ಅದನ್ನು "ಸಹನೀಯವಾಗದ ಶುದ್ಧ ಸತು" ಅಥವಾ ಹಳೆಯ ರಸಾಯನ ಶಾಸ್ತ್ರಜ್ಞರು ಹೇಳುವ "ಬಿಳಿಯ ಸತು" ಎಂದು ತಿಳಿಯುತ್ತಾನೆ. ಪೂರ್ಣಿಯಾದಲ್ಲಿ ಬಿದ್ರಿ ನಿರ್ಮಾಣದ ಪ್ರತಿಯೊಂದು ಹಂತದಲ್ಲಿಯೂ ಪರಿಣತ ಕೆಲಸಗಾರರ ಗುಂಪು ತೊಡಗಿಕೊಳ್ಳುತ್ತಿತ್ತು. ಬೇರೆ ಬೇರೆ ಪ್ರಕ್ರಿಯೆಗಳಿಗಾಗಿ ಬೇರೆ ಬೇರೆ ಕೈಗಳನ್ನು ಸೇರುತ್ತಿತ್ತು. ಈ ಉದ್ದಿಮೆಯ ಮೂಲವನ್ನು ಕುರಿತು ಅವನು ಬಹುಶಃ ಮೊಗಲರು ಪಶ್ಚಿಮ ಭಾರತದಿಂದ ಇದನ್ನು ಇಲ್ಲಿಗೆ ಪರಿಚಯಿಸಿರಬೇಕೆದು ಹೇಳುತ್ತಾನಾದರೂ ಕಾಲದ ಕುರಿತು ಏನನ್ನೂ ಹೇಳುವುದಿಲ್ಲ.

ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ಇರುವ ೧೮ನೆಯ ಶತಮಾನದ ಕಲಾಕೃತಿಯೊಂದು ಪೂರ್ಣಿಯಾಕ್ಕೆ ಸೇರಿದ್ದಾಗಿದೆ. (ಕ್ಯಾಟಲಾಗ್ ಸಂ. ೫೯) ಪಾನದಾನ ಮತ್ತು ಅದನ್ನಿಡುವ ಪಾದಪೀಠವೊಂದು ಕ್ರಿ.ಶ.೧೮೭೦ರಲ್ಲಿ ಸಂಗ್ರಹವನ್ನು ಸೇರಿತ್ತು. ಅದು ಪೂರ್ಣಿಯಾದಲ್ಲಿ ನಿರ್ಮಿತವಾದದ್ದು. ಅದರ ಒಡೆಯನ ಮನೆಯಲ್ಲಿ ಸುಮಾರು ೨೦೦ ವರ್ಷಗಳಿಂದ ಇತ್ತೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಸ್ವಾರಸ್ಯಕರವಾದ ಇನ್ನೊಂದು ಸಂಗತಿಯೆಂದ ಅರ್ಥರ್ ಡೇವಿಸನು ರಚಿಸಿದ ಸ್ಯೂಟೋನಿಯಸ್ ಹೀಟ್ಲೆ ಮತ್ತು ಅವನ ಸೋದರಿ ಟೆಂಪರೆನ್ಸರವರ ವರ್ಣ ಚಿತ್ರ ಇದೆ. ಅದು ಈ ಮೆಸ್ಸಾಚುಸೆಟ್ಸನ ಲಲಿತಕಲಾ ಸಂಗ್ರಹಾಲದಲ್ಲಿದೆ. ಹೀಟ್ಲೆಯು ಕ್ರಿ.ಶ.೧೭೮೬ರಲ್ಲಿ ಪೂರ್ಣಿಯಾದಲ್ಲಿ ಮುಖ್ಯಸ್ಥನಾಗಿದ್ದನು.[೩] ಒಂದು ಚಿತ್ರದಲ್ಲಿ ಬಿದ್ರಿಯ ಹುಕ್ಕಾವನ್ನು ಹಿಡಿದುಕೊಂಡ ಸೇವಕನೊಬ್ಬನು ಹೀಟ್ಲೆಯ ಹಿಂದೆ ನಿಂತಿದ್ದಾನೆ. ಈ ವರ್ಣಚಿತ್ರ ೧೭೮೫ರಲ್ಲಿ ರಚಿತವಾದುದು. (ಕಲಾವಿದನ ಹೆಸರು ಹಾಗೂ ಕಲಾಕೃತಿಯ ಫೋಟೋ) ಅದರಲ್ಲಿರುವ ಹುಕ್ಕಾವನ್ನು ಪೂರ್ಣಿಯಾದಿಂದ ಸಂಗ್ರಹಿಸಲಾಗಿದೆಯೆಂದು ಹೇಳಬಹುದು.

ಮುರ್ಶಿದಾಬಾದಿನಲ್ಲಿಯೂ ಸಹ ಬಿದ್ರಿ ಉತ್ಪನ್ನಗಳ ತಯಾರಿಯು ೧೮ನೇಯ ಶತಮಾನದಲ್ಲಿ ಆರಂಭವಾಯಿತೆಂದು ಹೇಳಬಹುದು. ಇದು ಕ್ರಿ.ಶ.೧೮೮೦ರಲ್ಲಿಯೂ ಈ ವೃತ್ತಿಯಲ್ಲಿ ತೊಡಗಿಕೊಂಡವರ ಹೇಳಿಕೆ. ಈ ನಗರಕ್ಕೆ ಕಲೆಯ ಪರಿಚಯ ಮಾಡಿಸಿದವನು ಮೀರ್ ಇಲಾಹಿ ಭಕ್ಷ. ಅವನ ಶಿಷ್ಯನಾದ ಲಕ್ಷ್ಮೀಯ ಮಗನಾದ ಮನುಲಾಲನು ಈ ಉದ್ದಿಮೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಿ ಅದರ ವಿಕಸನಕ್ಕೆ ಕಾರಣನಾದ. ಅವನು ಕ್ರಿ.ಶ.೧೮೪೦ರಲ್ಲಿ ಕಾಲವಾದನು. ಬಹುಶಃ ಮೀರ್ ಇಲಾಹಿ ಭಕ್ಷನು ೧೮ನೆಯ ಶತಮಾನದ ಕೊನೆಯಲ್ಲಿ ಮುರ್ಶಿದಾಬಾದನಲ್ಲಿ ಕೆಲಸದಲ್ಲಿ ತೊಡಿಗಿಕೊಂಡಿರಬಹುದು.

೧೯ನೆಯ ಶತಮಾನದ ಮತ್ತು ಪ್ರಸ್ತುತದಲ್ಲಿಯೂ ಬೀದರ, ಹೈದರಾಬಾದ್, ಪೂರ್ಣಿಯಾ, ಲಕ್ನೋ ಮುರ್ಷಿದಾಬಾದ, ಈ ಸ್ಥಳಗಳಲ್ಲಿ ಈ ಕಲೆ ಜೀವಂತವಾಗಿ ಉಳಿಯಲ್ಪಟ್ಟಿದೆ. ಕ್ರಿ.ಶ.೧೮೫೧ರಲ್ಲಿ ನಡೆದ ಅಂತರ ರಾಷ್ಟ್ರೀಯ ಪ್ರದರ್ಶನದಿಂದ ಇದರ ಪರಿಚಯ ಹೊರ ರಾಷ್ಟ್ರಗಳಲ್ಲಾಯಿತು. ನಂತರ ಭಾರತದಲ್ಲಿ ನಿಯಮಿತ ರೂಪದಿಂದ ಪ್ರಮುಖ ನಗರಗಳಲ್ಲಿ ಪ್ರದರ್ಶನ ನಡೆಯುತ್ತಿತ್ತು.

ಕ್ರಿ.ಶ.೧೮೮೩ ಮತ್ತು ೮೪ರಲ್ಲಿ ಕಲ್ಕತ್ತಾ ಇಂಗ್ಲೆಂಡಿನ ಕಲೋನಿಯಂನಲ್ಲಿ ಈ ಕಲೆಯ ಪ್ರದರ್ಶನ ನಡೆದವು. ಇದರಿಂದಾಗಿ ಜನ ಸಾಮಾನ್ಯರಿಗೆ ಇದರ ಪರಿಚಯವಾಯಿತು. ಮತ್ತು ಈ ವಸ್ತುಗಳ ಮಾರಾಟವೂ ಹೆಚ್ಚಾಯಿತು. ಈ ಕರಕುಶಲ ಕಲೆಯ ಕಾರ್ಮಿಕರ ಸಂಖ್ಯೆಯಲ್ಲಿ ವೃದ್ಧಿಯಾಯಿತು ಮತ್ತು ಇವರಿಗೆ ಸರಕಾರದಿಂದ ಮಾನ್ಯತೆ ದೊರೆಯಿತು.

೧೮ನೆಯ ಶತಮಾನದ ವರ್ಣಚಿತ್ರಗಳಲ್ಲಿ ಬಿದ್ರಿಯ ಕಲಾಕೃತಿಗಳು ಮತ್ತೆ ಮತ್ತೆ ಕಾಣಿಸಿಗುತ್ತವೆ. ಅವುಗಳಲ್ಲಿ ಇತರ ವಸ್ತುಗಳಿಗಿಂತ ಹುಕ್ಕಾದ ಚಿತ್ರಗಳು ಹೆಚ್ಚಿವೆ. ಬ್ರಿಟಿಷ್ ಮ್ಯೂಸಿಯಂನ ಛಾಯಾ ಚಿತ್ರಗಳ ಸಂಗ್ರಹಣೆ ಪುಸ್ತಕದಲ್ಲಿ ಇಂಥ ಎರಡು ಕಲಾಕೃತಿಗಳು ದೊರೆತಿವೆ. ಅವು ಸುಮಾರು ೧೭೮೪ರಲ್ಲಿದ್ದ ಹಿಮ್ಮತ್ ಯಾರ್ ಖಾನ ಬಹುದ್ದೂರನಿಗೆ ಸೇರಿದವುದಗಳಾಗಿವೆ.[೪೪] ಚಿತ್ರ ಮಹಮ್ಮದ ಶಾನು ಹುಕ್ಕಾವನ್ನು ಹಿಡಿದಿದ್ದಾನೆ. ಅಲ್ಲಿ ತಂಬಾಕನ್ನು ತುಂಬುವ ಪಾತ್ರೆ ಮತ್ತು ಮುಚ್ಚಿಗೆಗಳು ಕೂಡ ಬಿದ್ರಿಯವಾಗಿವೆ.

ಲಕ್ನೋದಲ್ಲಿ ಈ ಕಲೆಯ ಪರಿಚಯಾತ್ಮಕ ಲೇಖನಗಳು ದೊರೆಯಲಿಲ್ಲ. ಆದರೆ ೧೮ನೆಯ ಶತಮಾನದಲ್ಲಿ ಔಧದ ಸುಬೇದಾರರು ಮತ್ತು ನವಾಬರಿಗೂ ಹೈದರಾಬಾದಿನ ನಿಜಾಮರು ಮತ್ತು ಅವನ ಕುಟುಂಬದವರಿಗೂ ರಾಜಕೀಯ ಕಾರಣಗಳಿಂದಾಗಿ ಸಂಪರ್ಕ ಬೆಳೆದಿತ್ತು. ಲಕ್ನೋದಲ್ಲಿ ಈ ಕಲೆಯು ಮಹಮ್ಮದೀಯರ ಹಿಡಿತದಲ್ಲಿತ್ತು.

೧೯ನೇಯ ಶತಮಾನದಲ್ಲಿ ಈ ಕಲೆಯು ಕೆಲವು ಕಾಲ ಅವಸಾನದ ಅಂಚಿನಲ್ಲಿತ್ತು. ಆ ಕಾಲದಲ್ಲಿ ಉತ್ತರ ಪ್ರಾಂತ್ಯಗಳ ಕೃಷಿ ಮತ್ತು ವಾಣಿಜ್ಯ ವಿಭಾಗದ ಸಕಾಲಿಕ ಪರಿಶ್ರಮ-ಪ್ರಯತ್ನಗಳ

ಫಲವಾಗಿ ಈ ಕಲೆಯ ಪುನರುಜ್ಜೀವನವಾಗಿ ಯೂರೋಪಿನ ಮಾರುಕಟ್ಟೆಗಳನ್ನು ಪ್ರವೇಶಿಸುವಂತಾಯಿತು. ಹೀಗಾಗಿ ಕಲ್ಕತ್ತಾದ ಪ್ರದರ್ಶನಕ್ಕೆ[೩೫] (ಕ್ರಿ.ಶ.೧೮೮೩–೮೪) ಲಕ್ನೋದಿಂದ ದೊಡ್ಡ ಪ್ರಮಾಣದಲ್ಲಿ ಬಿದ್ರಿ ವಸ್ತುಗಳನ್ನು ಕಳುಹಿಸಲಾಯಿತು.

---

೧೯ ಹಾಗೂ ೨೦ನೆಯ ಶತಮಾನ

ಭಾರತದ ಬಿದ್ರಿ ಉತ್ಪನ್ನಗಳ ಬಗ್ಗೆ ಈ ಶತಮಾನದಲ್ಲಿ ಸ್ಪಷ್ಟವಾದ ಚಿತ್ರಣ ದೊರೆಯುತ್ತದೆ. ಶತಮಾನದ ಕೊನೆಯವರೆಗೆ ಸಾಂಪ್ರದಾಯಿಕ ಕೇಂದ್ರಗಳಾದ ಬೀದರ, ಪೂರ್ಣಿಯಾ, ಲಕ್ನೋ ಮತ್ತು ಮುರ್ಶಿದಾಬಾದಗಳು ತುಂಬ ಕ್ರಿಯಾಶೀಲವಾಗಿದ್ದವು. ೧೮೫೧ರ ಮಹಾ ಪ್ರದರ್ಶನಗಳಂಥ ಅಂತರ್‌ರಾಷ್ಟ್ರೀಯ ಪ್ರದರ್ಶನಗಳಿಂದಾಗಿ ದೊರೆತ ಉತ್ತೇಜನದ ಪರಿಣಾಮವಾಗಿ ಬಿದರಿ ಕೇಂದ್ರಗಳ ಬೆಳವಣಿಗೆಯಾಯಿತಾದರೂ ಅವುಗಳಲ್ಲಿ ಹೆಚ್ಚಿನವು ಬಹಳ ಕಾಲ ಬದುಕುಲಿಲ್ಲ.

ಶತಮಾನದ ಆರಂಭದ ದಶಕಗಳಲ್ಲಿ ಬೀದರವು ಕೂಡ ಅಂಥ ಪ್ರಗತಿಯನ್ನು ಸಾಧಿಸಲಿಲ್ಲ. ೧೮೫೧ರ ಪ್ರದರ್ಶನಕ್ಕೆ ಕಳುಹಿಸಿದ ಕಲಾಕೃತಿಗಳ "ಇನ್‌ಲೇ"ದಲ್ಲಿ ಕಂಡುಬರುವ ಉತ್ತಮ ಗುಣಮಟ್ಟವನ್ನು ಪರಿಶೀಲಿಸಿ ತೀರ್ಮಾನಕ್ಕೆ ಬರುವುದಾದರೆ ಅದು ಅವಸಾನದ ಅಂಚಿನಲ್ಲಿರುವ ಉದ್ದಿಮೆಯೆಂದು ಹೇಳುವಂತಿಲ್ಲ. ಲಂಡನ್ನಿನ ಕ್ರಿಸ್ಟಲ್ ಪ್ಯಾಲೇಸನಲ್ಲಿ ನಡೆದ ಮಹಾಪ್ರದರ್ಶನಕ್ಕೆ ಮೂಲವೆಂದರೆ, ೧೮೪೭ರಲ್ಲಿ ಸೋಸೈಟಿ ಫಾರ್ ದ ಎನ್‌ಕರೆಜಮೆಂಟ್ ಆಫ್ ಆರ್ಟ್ಸ್, ಮ್ಯಾನುಫ್ಯಾಕ್ಚರರ್ಸ್ ಎಂಡ್ ಕಾಮರ್ಸ್‌ನವರು ವಾರ್ಷಿಕವಾಗಿ ಏರ್ಪಡಿಸುತ್ತಿದ್ದ ಬ್ರಿಟಿಷ್ ನಿರ್ಮಾತೃಗಳ ಮತ್ತು ಅಲಂಕರಣ ಕಲೆಯ ಆಯ್ದು ಮಾದರಿಗಳ ಪ್ರದರ್ಶನಗಳು.[೩೭] ಇವು ಗಳಿಸಿದ ಜನಪ್ರಿತೆಯನ್ನು ಗಮನಿಸಿ ಮಹತ್ವಾಕಾಂಕ್ಷೆಯುಳ್ಳ ಯೋಜನೆಯೊಂದನ್ನು ಸಿದ್ಧಪಡಿಸಲಾಯಿತು. ಈ ಪ್ರದರ್ಶನದಲ್ಲಿ ಸಿದ್ಧಗೊಂಡ ಸಾಮಗ್ರಿಗಳು, ಅವುಗಳ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳು, ನಿರ್ಮಾಣದಲ್ಲಿ ಅವಶ್ಯವಾದ ಯಂತ್ರ ಸಾಮಗ್ರಿಗಳು ಅಲ್ಲದೆ ಸುಂದರವಾದ ಮತ್ತು ಅಲಂಕರಣ ಕಲೆಗಳನ್ನು ಸೇರಿಸಿಕೊಳ್ಳಲಾಗಿತ್ತು. ಹಾಗಾಗಿ ಪ್ರಪ್ರಥಮವಾಗಿ ಭಾರತವನ್ನೂ ಸೇರಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಈಸ್ಟ ಇಂಡಿಯಾ ಕಂಪನಿಯು ಅದರಲ್ಲಿ ತೊಡಗಿಕೊಳ್ಳಬೇಕಾದ ಅವಶ್ಯಕತೆಯುಂಟಾಯಿತು.

ಪ್ರಾರಂಭದಿಂದಲೂ ಬೀದರ ಇದರ ಮುಖ್ಯ ಕೇಂದ್ರವಾಗಿತ್ತು. ಇಂದಿಗೂ ಇಲ್ಲಿ ೬೦೦ಕ್ಕೂ ಹೆಚ್ಚಿನ ಕುಶಲ ಕರ್ಮಿಗಳು ಬಿದ್ರಿ ವಸ್ತುಗಳನ್ನು ತಯಾರಿಸುವಲ್ಲಿ ತೊಡಿಗಿಸಿಕೊಂಡಿದ್ದಾರೆ. ಇವರಲ್ಲಿ ಅನೇಕರು ಈ ಕಲೆಯನ್ನು ತಮ್ಮ ಪೂರ್ವಜರಿಂದ ಪಡೆದಿದ್ದಾರೆ. ಈ ಕಲೆಯ ನಿರ್ಮಾಣ ಪಾರಂಪರಿಕ ರೀತಿಯಲ್ಲಿಯೇ ನಡೆಯುತ್ತಿದೆ. ೧೯೫೬ರಲ್ಲಿ ಭಾಷಾವಾರು ರಾಜ್ಯಗಳ ಪುನರ್ ವಿಂಗಡನೆ ಆದ ನಂತರ ಬೀದರ ಕರ್ನಾಟಕ ರಾಜ್ಯಕ್ಕೆ ಸೇರಿತು. ಹೈದರಾಬಾದ ಆಂಧ್ರ ಪ್ರದೇಶದ ರಾಜಧಾನಿಯಾಯಿತು. ಬೀದರ ಚಿಕ್ಕನಗರವಾಗಿರುವುದು ಮತ್ತು ಸ್ಥಳೀಯ ವ್ಯಾಪಾರ

ಕಡಿಮೆಯಾಗಿದ್ದರಿಂದ ಕುಶಲಕರ್ಮಿಗಳು ಹೈದರಾಬಾದಿಗೆ ವಲಸೆ ಹೋದರು. ಇದರ ಪರಿಣಾಮವಾಗಿ ಬೀದರಿನಲ್ಲಿ ಕೆಲವೇ ಕಾರ್ಮಿಕರು ಉಳಿದುಕೊಂಡರು. ೧೯೭೫ರಲ್ಲಿ ಬೀದರ ನಗರದಲ್ಲಿ ೨೫ಸಂಘಟನೆಗಳಿದ್ದವು ಇದರಲ್ಲಿ ೧೧೦ ಜನ ಕುಶಲಕರ್ಮಿಗಳು ಕೆಲಸ ಮಾಡುತ್ತಿದ್ದರು.೧೭೫ ನಮೂನೆಯ ಬಿದ್ರಿ ಕಲೆಯನ್ನು ಇಲ್ಲಿ ಕಾಣಬಹುದಾಗಿತ್ತು. ಕ್ರಿ.ಶ. ೧೯೫೦ರಲ್ಲಿ ಸರ್ಕಾರ ಇಲ್ಲಿ ಒಂದು ತರಬೇತಿ ಕೇಂದ್ರವನ್ನು ಆರಂಭಿಸಿತು. ಇದರಲ್ಲಿ ೨ ವರ್ಷಗಳ ಕಾಲ ಈ ಕಲೆಯಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಇದಕ್ಕೆ ಬೇಕಾಗುವ ಅವಶ್ಯಕ ಕಚ್ಚಾ ವಸ್ತುಗಳ ಸರಬರಾಜು ಕೂಡ ಈ ಕೇಂದ್ರವೇ ಮಾಡುತ್ತದೆ.

ಶತಮಾನಗಳಿಂದ ನಡೆದು ಬಂದ ಈ ಬಿದ್ರಿ ಕಲೆಯ ಖ್ಯಾತಿಯನ್ನು ಉಳಿಸಿಕೊಳ್ಳುವ ಸಲುವಾಗಿ ೧೯೭೦ರಲ್ಲಿ ಮೈಸೂರ ರಾಜ್ಯ ಸರಕಾರ ಬೀದರದಲ್ಲಿಯೂ "ಆರ್ಟಿಸಾನ್ ಟ್ರೈನಿಂಗ್ ಸೆಂಟರ್‌ನ್ನು ಪ್ರಾರಂಭಿಸಿತು. ಇಲ್ಲಿಯೂ ಇತರ ಕರಕುಶಲ ಕಲೆಗಳಿಗಿಂತಲೂ ಬಿದ್ರಿ ಕಲೆಗೆ ಬಹಳ ಪ್ರಾಮುಖ್ಯತೆ ನೀಡಿದರು. ಶ್ರಮಕ್ಕೆ ತಕ್ಕ ಬೆಲೆ ದೊರೆಯದೇ ಇರುವುದರಿಂದ ಕೆಲವು ಕುಶಲಕರ್ಮಿಗಳು ಈ ವೃತ್ತಿಯನ್ನು ಬಿಡಲು ಯೋಚಿಸಿದ ಹಿನ್ನಲೆಯಲ್ಲಿ ಕರ್ನಾಟಕ ಸರಕಾರದ ಕರಕುಶಲ ಕಲೆ ವಿಭಾಗವು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟು ಬಿದ್ರಿ ಕಲೆಗಳನ್ನು ಖರೀದಿಸಿ ಭಾರತದ ಇತರ ರಾಜ್ಯಗಳಿಗೆ ಹಾಗೂ ವಿಶ್ವ ಮಾರುಕಟ್ಟೆಗೆ ರಫ್ತು ಮಾಡಲಾರಂಭಿಸಿತು.

ಶತಮಾನಗಳಿಂದ ನಡೆದು ಬಂದ ಈ ಬಿದ್ರಿ ಕಲೆಯ ಖ್ಯಾತಿ ೧೯೮೦ರ ದಶಕದ ಆರಂಭದಲ್ಲಿ ಕುಗ್ಗುತ್ತಾ ಹೋಯಿತು. ಈ ಕಲೆಯ ಕಾರ್ಮಿಕರು ದಿನನಿತ್ಯದ ಜೀವನ ಸಾಗಿಸುವುದು ಕಷ್ಟದ ಕೆಲಸವಾಯಿತು. ಈ ಬಿದ್ರಿ ಕಲೆಯ ಬೆಲೆ ಹೆಚ್ಚಾಗಿರುವುದರಿಂದ ವ್ಯಾಪಾರ ಮಳಿಗೆಗಳು ಇರಲಿಲ್ಲ. ಬಿದ್ರಿ ಕಲೆಯ ಹೈದರಾಬಾದಿನಂತಹ ದೊಡ್ಡ ಪಟ್ಟಣಗಳಲ್ಲಿ ಒಳ್ಳೆಯ ಬೆಲೆಗೆ ಮಾರುತ್ತಿದ್ದರು. ಕಾರ್ಮಿಕರಿಗಿಂತ ಹೆಚ್ಚಿನ ಲಾಭ ವ್ಯಾಪಾರಿಗಳಿಗೆ ದೊರೆಯುತ್ತಿತ್ತು. ಇದರ ಪರಿಣಾಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಬೇರೆ ಬೇರೆ ಉದ್ಯೋಗವನ್ನು ಪ್ರಾರಂಭಿಸಿದರು. ಅನಮೋಲ ಬಿದ್ರಿ ವೇರ್ ಕೋ ಆಫ್‌ರೇಟಿವ್ ಸೊಸೈಟಿ ಲಿಮಿಟೆಡ್ ಮತ್ತು ಬೀದರಿನ ಪ್ರೈಮರಿ ಕೋ-ಆಪರೇಟರ ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕ್ ಎಂಬ ನಿಗಮಗಳಿಂದ ಕಾರ್ಮಿಕರಿಗೆ ಬ್ಯಾಂಕಿನಿಂದ ಕಚ್ಚಾ ಸಾಮಗ್ರಿ ಕೊಡಲಾಗುತ್ತಿದೆ. ತಯಾರಾದ ವಸ್ತುಗಳನ್ನು ನಿಗಮಕ್ಕೆ ಕೊಡಬೇಕಾಗುತ್ತದೆ. ಪ್ರತಿಯೊಬ್ಬ ಕಾರ್ಮಿಕರಿಗೆ ಇದರಿಂದ ಬಂದ ಹಣದಲ್ಲಿ ನಿಗಮವು ಕಲಾಕಾರನಿಗೆ ಒಂದು ಪಾಲನ್ನು ಕೊಡುತ್ತದೆ. ಅಲ್ಲದೆ, ಪ್ರತಿಯೊಬ್ಬ ಕಾರ್ಮಿಕನಿಗೆ ೧೦೦೦ ದಿಂದ ೨೦೦೦ ರೂಪಾಯಿಗಳವರೆಗೆ ಆದಾಯ ಸಿಗುತ್ತದೆ. ಸ್ಥಳೀಯ ಕಾರ್ಮಿಕರಾದ ಸೈಯದ ಅಹ್ಮದ ಶಹಾ ಖಾದ್ರಿ ಕಲಾಕಾರರು ನಿಗಮದಿಂದ ದೊರೆಯುವ ಮೊತ್ತ ಬಹಳ ಕಡಿಮೆ ಇದರಿಂದ ಅವನ ಉಪಜೀವನ ಸಾಗಿಸುವುದು ಸಾಧ್ಯವಾಗುವುದಿಲ್ಲ ಎಂದು ಉದಾಸೀನತೆಯಿಂದ ನುಡಿಯುತ್ತಾರೆ.

೧೯೮೫ ರಿಂದ ಈಚೆಗೆ ಬಿದ್ರಿ ಕಲೆಯಲ್ಲಿ ಬದಲಾವಣೆಗಳನ್ನು ಕಾಣಬಹುದು ಪ್ರಮುಖವಾಗಿ ಈ ವಸ್ತುಗಳ ಆಕಾರ ಮತ್ತು ನಕ್ಷೆಯಲ್ಲಿ ಪ್ರಸ್ತುತ ಜನರ ಬೇಡಿಕೆಯನ್ನು ಪೂರೈಸಲೆಂಬಂತೆ, ದಿನನಿತ್ಯದ ಬಳಕೆಯ ಸಾಮಾನುಗಳ ರೂಪದಲ್ಲಿ ನೋಡಬಹುದು. ಇದರಲ್ಲಿ ಅನೇಕ ಪ್ರಕಾರದ ಉದಾಹರಣೆ ನೀಡಬಹುದು. ಬಳೆಗಳು, ಕಿವಿ ಓಲೆಗಳು, ಸಿಗರೇಟ್ ಪೆಟ್ಟಿಗೆ, ಬೂದಿತಟ್ಟೆ (ಆಸ್ಟ್ರೀ) ಉಂಗುರುಗಳು ಮುಂತಾದವು ಪ್ರಮುಖವಾಗಿವೆ.

ಬಿದ್ರಿ ಕಲೆಯ ಬೇಡಿಕೆ ಹೊರ ರಾಷ್ಟ್ರಗಳಾದ ಜಪಾನ, ಇಂಗ್ಲೆಂಡ, ಅಮೇರಿಕಾ ಇಟಲಿ ಮತ್ತು ಕೆನಡಾಗಳಲ್ಲಿ ಅಪಾರವಾಗಿದ್ದು, ಪ್ರತಿವರ್ಷ ಕನಿಷ್ಟ ಆರರಿಂದ ಎಂಟು ಲಕ್ಷ ರೂಪಾಯಿ ಬೆಲೆಬಾಳುವ ವಸ್ತುಗಳು ಮಾರಾಟವಾಗುತ್ತವೆ. ಹಳೆಯ ಮಾದರಿಯ ಬಿದ್ರಿ ಕಲೆಯ ವಸ್ತುಗಳ ಬೇಡಿಕೆ ಕಡಿಮೆಯಾಗಿದ್ದು, ಅಂಥಹ ವಸ್ತುಗಳ ತಯಾರಿಕೆಯು ಕಡಿಮೆಯಾಗುತ್ತಲಿದೆ. ಆದರೆ ಆಸಕ್ತಿವುಳ್ಳವರಿಗೆ ಅಂಥ ವಸ್ತುಗಳೇ ಬೇಕು ಎಂದಾಗ ಮಾತ್ರ ಇಂದಿಗೂ ಅಂತಹ ವಸ್ತುಗಳನ್ನು ತಯಾರಿಸಿಕೊಡುತ್ತಾರೆ. ಮುಸ್ಲಿಂ ವಾಸ್ತುಶಿಲ್ಪದ ದಟ್ಟವಾದ ಪ್ರಭಾವ ಈ ಕುಶಲ ಕಲೆಯಲ್ಲಿ ಕಂಡು ಬಂದರೂ ಅಲ್ಲಿಯ 'ಕುಶಲಕರ್ಮಿಗಳು' ಚಾಣಾಕ್ಷರಾಗಿದ್ದರಿಂದ ಪರಿಸರದ ಹೊರಗಿನ ಜನರ ಅಭಿರುಚಿಗೆ ಅನುಗುಣವಾಗಿ ಇತರೇ ಧರ್ಮದವರ ಸಾಂಪ್ರದಾಯಿಕ ವಿನ್ಯಾಸಗಳನ್ನು ಬಿಡಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಅಜಂತಾದ ವರ್ಣಚಿತ್ರಗಳ ವಿನ್ಯಾಸಗಳನ್ನು ಬಳಸುತ್ತಿದ್ದಾರೆ. ಪದ್ಮಪಾಣಿ, ಬುದ್ಧ, ವಾಘರಾಕೃತಿಗಳು ಬಹಳ ಜನಪ್ರಿಯವಾಗಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪದ ಶೈಲಿಯ ಕೆಲ ಮಾದರಿಗಳನ್ನು ಬಿದ್ರಿ ವಸ್ತುಗಳಲ್ಲಿ ನೋಡಬಹುದಾಗಿದೆ. ಶಿಲಾ ಬಾಲಕಿಯರು ಶಿವ-ಶಿವೆಯರ ಪ್ರತಿರೂಪುಗಳು ಕಾಣಿಸಿಗುತ್ತವೆ. ಕುರಾನಿನ ಶ್ಲೋಕಗಳ ಕೆತ್ತನೆಗಳು ಮನೋಹರವಾಗಿವೆ.

ಇಂಡೋ-ಇಸ್ಲಾಮಿಕ್ ಲೋಹವಿದ್ಯೆಯ ಕೆಲವು ಪ್ರಮುಖ ಕೇಂದ್ರಗಳು ಮುಸ್ಲಿಂರ ಪ್ರಾಬಲ್ಯವುಳ್ಳ ಪ್ರದೇಶಗಳಾಗಿದ್ದವು. ಅದರ ಪರಿಣಾಮವಾಗಿ ಪರ್ಶಿಯನ್ ಪ್ರಭಾವವನ್ನು ಆಕಾರ ಮತ್ತು ಅಲಂಕಾರಗಳಲ್ಲಿ ಕಾಣಬಹುದು. ಹಾಗಿದ್ದರೂ ಕೆಲವೊಮ್ಮೆ ಇಸ್ಲಾಮಿಕ್ ಆಕಾರವನ್ನು ಹೊಂದಿದ್ದು ಹಿಂದೂ ಆಶಯ ಮತ್ತು ವಿನ್ಯಾಸಗಳನ್ನು ಮೊಗಲ್ ಮತ್ತು ಮುಸ್ಲಿಂ ಅಲಂಕರಣಗಳ ಆಶಯಗಳ ಜೊತೆ-ಜೊತೆಗೆ ಕಾಣಬಹುದು.

ಡೆಕ್ಕನ್ನಿನ ಸುಲ್ತಾನ ಶಾಹಿಯ ಕಾಣಿಕೆಯ ಕುರಿತು ಕೂಡ ನಾವು ಗಮನ ಹರಿಸಬೇಕಾಗಿದೆ. ಮುಖ್ಯವಾಗಿ ಬಹಮನಿಗಳು (ಕ್ರಿ.ಶ.೧೩೪೭-೧೫೩೮) ಮತ್ತು ಅವರ ಉತ್ತರಾಧಿಕಾರಿಗಳೆನಿಸಿದ ಅಹಮ್ಮದನಗರ, ಬಿಜಾಪುರ, ಗೋಲ್ಕೊಂಡ, ಬೀದರ ಮತ್ತು ಬೇರರಗಳ ಸುಲ್ತಾನ ಶಾಹಿಗಳು. ಅವು ಮೊಗಲರ ಆಳ್ವಿಕೆಯು ಪ್ರಾರಂಭವಾಗುವ ಹೊತ್ತಿಗೆ ಅಸ್ತಿತ್ವಕ್ಕೆ ಬಂದಿದ್ದವು. ಕ್ರಿ.ಶ.೧೬೩೬ ಮತ್ತು ೧೬೮೭ರ ಹೊತ್ತಿಗೆ ಅವು ಮೊಗಲ ಸಾಮ್ರಾಜ್ಯಕ್ಕೆ ಸೇರಿ ಹೋದವು. ಮೊಗಲರ ಆಳ್ವಿಕೆಯ ನಂತರ, ಅಸಫ ಜಹಿ ವಂಶವು (ಕ್ರಿ.ಶ.೧೭೨೪-೧೯೪೮) ಡೆಕ್ಕನ್ನನ್ನು ಆಳಿತು.

ಡೆಕ್ಕನ್ನಿನ ಸುಲ್ತಾನರ ಸಂಪನ್ಮೂಲಗಳು ಮೊಗಲರಿಗಿಂತ ಕಡಿಮೆಯಾಗಿತ್ತಾದರೂ ಅವರು ತುಂಬಾ ಸುಸಂಸ್ಕೃತರಾಗಿದ್ದರು ಮತ್ತು ಕಲಾತ್ಮಕ ಪ್ರಯತ್ನಗಳಿಗೆ ಉದಾರವಾದ ಆಶ್ರಯವನ್ನು ನೀಡಿದರು. ದುರ್ದೈವದಿಂದ ಈ ಕಾಲಕ್ಕೆ ಸೇರಿದ ಕೆಲವೇ ಲೋಹದ ವಸ್ತುಗಳು ತಿಳಿದು ಬಂದಿವೆ. ಅವುಗಳಲ್ಲಿ ಪ್ರಮುಖವಾದುದೆಂದರೆ 'ತಾಮ್ರದ ದೊಡ್ಡ ಹರಿವಾಣ'. ಇದು ಸುಮಾರು ಕ್ರಿ.ಶ. ಕ್ರಿ.ಶ.೧೬೦೦ರದಾಗಿದ್ದು ಇದರಲ್ಲಿ ಯುದ್ಧ ಹಾಗೂ ಬೇಟೆಯ ದೃಶ್ಯಗಳಿವೆ. ಹಕ್ಕಿ ಹಾಗೂ ಪ್ರಾಣಿಗಳು ನಿಜವಾದವುಗಳೂ ಕಲ್ಲು ನಿಜವಾದವುಗಳೂ ಇವೆ. ಅವುಗಳನ್ನು ಅರಬ್ಬಿ ಶೈಲಿಯಲ್ಲಿ ಸಸ್ಯಗಳ ಆಶಯದೊಂದಿಗೆ ಕೊರೆಯಲಾಗಿದೆ. ಈ ಅಲಂಕರಣವು ನಕಾಶೆಯ ರಚನೆ ಹಾಗೂ ನಯಗಾರಿಕೆಗಳನ್ನುಹೊಂದಿದ್ದು ತೈಮೂರ ಹಾಗೂ ಇರಾಣದ ಸಫಾವಿದ ಶೈಲಿಯದಾಗಿದೆ. ಅದರ ಚೈತನ್ಯಮಯತೆ ಹಾಗೂ ಶ್ರೀಮಂತವಾದ ಆಡಂಬರವು ಡೆಕ್ಕನ್ ಮೂಲವನ್ನು ದೃಢಪಡಿಸುತ್ತದೆ. ಅದಕ್ಕಿಂತಲೂ ಹೆಚ್ಚಿನ ಡೆಕ್ಕನ್ನಿನ ಕುರುಹೆಂದರೆ ಹಂಸಪಕ್ಷಿ. ಇದು ದಕ್ಷಿಣ ಭಾರತದ ಹಿಂದೂ ಅಲಂಕರಣಗಳಲ್ಲಿ ಬಹುಮಟ್ಟಿಗೆ ಗೋಚರಿಸುವಂಥದ್ದು. ಸುಕುಮಾರ ಶಿ.ಶಾಸನವು ಸುತ್ತುವರಿದ ರೀತಿಯು ಕೂಡ ಅದನ್ನೇ ದೃಢಪಡಿಸುತ್ತದೆ.

ಈಚೆಗೆ ನಕಾಶೆಯುಳ್ಳ ಹಾಗೂ ನಯಗೊಳಿಸಿದ, ಬಹು ಮಟ್ಟಿಗೆ ಸಫಾವಿದ್ ಮಾದರಿಯ ಮತ್ತು ಅಂದವಾದ ಬರಹದ ತುಲ್ಧ ಲಿಪಿಯ ಶಾಸನವುಳ್ಳ ಕಲಾಯಿಯುಳ್ಳ ತಾಮ್ರದ ವಸ್ತುಗಳ ಗುಂಪು ಕೂಡ ಡೆಕ್ಕನ್ನಿಗೆ ಸೇರಿದ್ದಾಗಿರಬೇಕೆಂದು ತಜ್ಞರು ಒಪ್ಪಿಕೊಂಡಿದ್ದಾರೆ. ಅವು ಅತ್ಯಂತ ಪ್ರಮಾಣ ಬದ್ಧವಾಗಿದ್ದು, ಸೂಕ್ಷ್ಮವಾದ ವಿವರಗಳುಳ್ಳ ಅಲಂಕಾರವನ್ನು ಹೊಂದಿವೆ. ಅವು ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ ನಿರ್ಮಿತವಾಗಿವೆ. ಬಹುಶಃ ಗೋಲ್ಕೊಂಡ ಮತ್ತು ಬಿಜಾಪುರಗಳಲ್ಲಿ ಸಿದ್ಧವಾಗಿರಬೇಕು. ಲೋಹಶಿಲ್ಪಕ್ಕೆ ಡೆಕ್ಕನ್ನಿನವರು ಸಲ್ಲಿಸಿದ ಅತ್ಯಂತ ಮಹತ್ವದ ಕಾಣಿಕೆಯೆಂದರೆ 'ಬಿದ್ರಿ'ಯೆಂದು ಹೇಳಬಹುದು.

೨೧ನೆಯ ಶತಮಾನ

ಬಿದ್ರಿ ಕಲೆಯು ನ್ಯೂಯಾರ್ಕಿನ ಮೆಟ್ರೊಪಾಲಿಟನ್ ಮ್ಯೂಸಿಯಂ (MET) ನಲ್ಲಿ "ಸುಲ್ತಾನ್ಸ ಆಫ್ ಡೆಕ್ಕನ್–ಅಪ್ಯೂಲೆನ್ಸ್ ಆ್ಯಂಡ್ ಫೆಂಟ್ಯಾಸಿ ೧೫೦೦–೧೭೦೦" ಎಂಬ ಶೀರ್ಷಿಕೆಯಲ್ಲಿ ವಿಶೇಷ ರೀತಿಯ ಪ್ರದರ್ಶನಗೊಂಡಿತು.

ಈ ಪ್ರದರ್ಶನ MET ನ ಕ್ಯೂರೇಟರ್ ಆದ ನವಿನ ನಜತ್ ಹೈದರ್ ಮತ್ತು ಮರಿಕಾ ಸರದಾರ್ ಇವರ ಸತತ ೨–೩ ವರ್ಷಗಳ ಶ್ರಮದಿಂದ ಬೇರೆ ಬೇರೆ ಸರಕಾರಿ ಮತ್ತು ಖಾಸಗಿ ಸಂಗ್ರಹಗಾರರಿಂದ ೧೫ ಬಿದ್ರಿ ಕಲಾಕೃತಿಗಳನ್ನು ತರಿಸಿಕೊಂಡು ಪ್ರದರ್ಶಿಸಲಾಯಿತು. ಅದಲ್ಲದೆ ಗುಲಬರ್ಗದ ಬಹಮನಿ, ಬಿಜಾಪುರದ ಆದಿಲ್ ಶಾಹಿ, ಬೇರಾರ್, ಗೋಲ್ಕೊಂಡ, ಅಹಮದ್ ನಗರ್

ಸುಲ್ತಾನರು ಉಪಯೋಗಿಸಿರುವ ವೈಭವದ ಕಲಾವಸ್ತುಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ದಕ್ಕನಿ ಕಲಾಕೃತಿಗಳು, ಬೆಳ್ಳಿ ಹುಕ್ಕಗಳು, ಮಡಿಕೆಗಳು ಪ್ರದರ್ಶನಕ್ಕಿಡಲಾಗಿತ್ತು.

ಈ ಪ್ರದರ್ಶನ ೨೦೧೫ ರ ಏಪ್ರಿಲ್ ೨೦ ರಿಂದ ಜುಲೈ ೨೬ ವರೆಗೆ ಜರುಗಿತು.

ಉಪಸಂಹಾರ

ಬಿದ್ರಿಯು ಡೆಕ್ಕನ್ ಸುಲ್ತಾನರ ಆಸ್ಥಾನದಲ್ಲಿ ಬೆಳೆದು ಬಂದ ಕುಶಲತೆ ಭಾರತದ ಲೋಹಶಿಲ್ಪಗಳಲ್ಲಿ ಮಹತ್ವದ ಪ್ರಕಾರವಾಗಿತ್ತು. ಅದನ್ನು ಬೇರೆ ಬೇರೆ ಮಾಧ್ಯಮಗಳಲ್ಲಿ ದುಡಿಸಿಕೊಳ್ಳಲಾಗುತ್ತಿತ್ತು. ಡೆಕ್ಕನ ಮತ್ತು ಮೊಗಲ ಸುಲ್ತಾನರ ಆಸ್ಥಾನಗಳಲ್ಲಿ ಬೇರೆ ಬೇರೆ ತಂತ್ರಗಳ ಮೂಲಕ ಅಲಂಕರಿಸಲಾಗುತ್ತಿತ್ತು. ರಾಜಸ್ಥಾನದ ಅರಮನೆ ಮತ್ತು ಪಂಜಾಬಿನ ಗುಡ್ಡಗಾಡು ರಾಜ್ಯಗಳಲ್ಲಿ ಬಿದರಿ ಕಲೆಯ ಅಲಂಕರಣಗಳಿದ್ದವು.

ಇದು ಒಂದು ರೀತಿಯ ಪದರುಗಟ್ಟಿವಿಕೆಯ ಲೋಹಶಿಲ್ಪ. ಒಂದು ಲೋಹವನ್ನು ಇನ್ನೊಂದು ಲೋಹದ ಮೇಲೆ ಇನ್‌ಲೇ ಮಾಡುವುದು ಅಥವಾ ಹೊರ ಪದರವಾಗಿಸುವುದು ಇದರ ವೈಶಿಷ್ಟ್ಯ. ಇದು ಬಹು ಮಟ್ಟಿಗೆ ಬಂಗಾರ ಅಥವಾ ಬೆಳ್ಳಿಯೊಂದಿಗೆ ಮಾಡುವ ಡಮಾಸ್ಕೀನ್ (ಕೂಫ್ತಾಗರಿ) ಕಾಮಗಾರಿಯನ್ನು ಹೋಲುತ್ತದೆ. ಇದು ಡೆಕ್ಕನ್ನಿನ ಬೀದರಿನಲ್ಲಿ ಹುಟ್ಟಿ ಬಹುಮಟ್ಟಿಗೆ ಅಲ್ಲಿಯೇ ಬೆಳೆದು ಬಂದ ಕಾರಣ 'ಬಿದ್ರಿ'ಯೆಂದು ಕರೆಸಿಕೊಂಡಿದೆ.

ಬೀದರಿನ ಕರ್ಮಚಾರಿಗಳ ಪ್ರಕಾರ ಈ ಕುಶಲ ಕಲೆಯನ್ನು ಸುಮಾರು ೬೦೦ ವರ್ಷಗಳ ಹಿಂದೆ ಇರಾಕಿನಿಂದ ಇಂಡಿಯಕ್ಕೆ ವಲಸಿಗರ ಮೂಲಕ ತರಲ್ಪಟ್ಟಿತು. ಈ ಕುಶಲ ಕಲೆಯ ಮೂಲ ನೆಲೆಯು ಇರಾಣವಾಗಿರಬೇಕು. ಈ ಕಲೆಯ ಉತ್ಪತ್ತಿಯನ್ನು ಕುರಿತು ಇತರ ವೃತ್ತಾಂತಗಳೂ ಇವೆಯಾದರೂ ಅವೆಲ್ಲ ಕೇವಲ ಐತಿಹ್ಯಗಳಾಗಿವೆ. ಲೋಹವನ್ನು ಇನ್‌ಲೇ ಮಾಡುವ ಈ ತಂತ್ರ ಕೌಶಲವು ಪರ್ಶಿಯಾ ಅಥವಾ ಸಿರಿಯಾದಿಂದ ಬೀದರನ್ನು ತಲುಪಿರಬೇಕು. ಇದು ಆಶ್ಚರ್ಯಕರವಾದುದೇನೂ ಅಲ್ಲ. ಏಕೆಂದರೆ ಆ ಕಾಲದಲ್ಲಿ ಬೀದರವು ಮುಸ್ಲಿಂ ಭಾರತದ ಪ್ರಮುಖ ಪಟ್ಟಣವಾಗಿದ್ದು ಬಹಮನಿ ಸುಲ್ತಾನರು ವಿದ್ಯಾಪಿಚಕ್ಷಣರನ್ನು ಬೀದರಿಗೆ ಆದರದಿಂದಬರಮಾಡಿಕೊಳ್ಳುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು. ಬಹುಶಃ ವಿದೇಶದ ಲೋಹದ ಇನ್‌ಲೇಯಲ್ಲಿ ನೈಪುಣ್ಯವನ್ನು ಪಡೆದ ಕುಶಲ ಕರ್ಮಿಗಳು ಬೀದರಿನತ್ತ ಆಕರ್ಷಿತರಾಗಿದ್ದಿರಬೇಕು. ಅವರ ಮೂಲಕ ಈ ಕಲೆಯು ಬೀದರಿನಲ್ಲಿ ಪ್ರಚುರವಾಗಿರಬೇಕು. ಈ ಸಮಯದಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಬೀದರಿನಿಂದ ಸುಮಾರು ೫೦ ಕಿ.ಮೀ. ದೂರದಲ್ಲಿರುವ ಕಲ್ಯಾಣಿಯು ಇತ್ತಿಚಿನವರೆಗೂ ಡಮಾಸ್ಕಿನ್ ಕಾಮಗಿರಿಯ ಪ್ರಮುಖ ಸ್ಥಳವಾಗಿತ್ತು.

ಬಿದ್ರಿಯಲ್ಲಿ ಗಸಗಸೆ ಗಿಡದ ಆಶಯಗಳನ್ನು ಕಾಣಬಹುದಾದರೂ ಅದು ಕ್ರಿ.ಶ.೧೭೭೫ಕ್ಕಿಂತ ಮೊದಲು ಕಾಣುವುದಿಲ್ಲ. ಹದಿನೆಂಟನೇಯ ಶತಮಾನದ ಮಧ್ಯಭಾಗದ ನಂತರದಲ್ಲಿ ಹೈದರಾಬಾದಿನ

ಅನೇಕ ವರ್ಣಚಿತ್ರಗಳಲ್ಲಿ ಗಸಗಸೆ ಹೂವಿನ ರಾಶಿಯನ್ನು ಸಾಮಾನ್ಯ ಲಕ್ಷಣವಾಗಿ ಗುರುತಿಸಬಹುದು. ಹದಿನೆಂಟನೇ ಶತಮಾನದ ಮೊದಲ ಭಾಗಕ್ಕಿಂತ ಹಿಂದಿನ ಬಿದ್ರಿ ಕೃತಿಗಳಲ್ಲಿ ಬೆಳ್ಳಿ ಮತ್ತು ಹಿತ್ತಾಳೆಯನ್ನು ಮಿಶ್ರ ಮಾಡಿದ ಇನ್‌ಲೇಯನ್ನು ಗುರುತಿಸಬಹುದು.

ಭಾರತದಲ್ಲಿರುವ ಬಿದ್ರಿ ಕಲೆಯ ಶೈಲಿಗಳು

ಬಿದ್ರಿ ಕಲೆ ಕೇವಲ ಬೀದರ ನಗರಕ್ಕೆ ಮಾತ್ರ ಸೀಮಿತವಾಗದೇ ಭಾರತದಲ್ಲಿ ಮುಸ್ಲಿಂ ಆಳ್ವಿಕೆ ಇದ್ದ ಪ್ರಮುಖ ನಗರಗಳಲ್ಲಿ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ. ಆದರೆ ಆಯಾ ನಗರದ ಸಾಂಸ್ಕೃತಿಕ ಬದುಕಿನ ಭಾಗವಾಗಿ ಅಲ್ಲಿನ ಬಿದ್ರಿ ಕಲೆಯಲ್ಲಿ ವೈವಿಧ್ಯಮಯವಾದ ಶೈಲಿಗಳನ್ನು ಕಾಣಬಹುದಾಗಿದೆ. ಅಂತಹ ಶೈಲಿಗಳನ್ನು ಸಂಕ್ಷೇಪವಾಗಿ ಇಲ್ಲಿ ದಾಖಲಿಸಲಾಗಿದೆ.

೧. ಪೂರ್ಣಿಯಾ

ಪೂರ್ಣಿಯಾ ಶೈಲಿಯು ಹೈದರಾಬಾದ್ ಮತ್ತು ಬೀದರನ ಬಿದ್ರಿ ಕಲೆಗಳಿಗಿಂತ ವಿಭಿನ್ನವಾದ ಶೈಲಿ. ಹೂವುಗಳ ಸಹಜ ನಿರೂಪಣೆಯಿಂದ ದೂರವಾಗಿದ್ದು, ದೂರ ಪ್ರಾಚ್ಯದ ಹಲವಾರು ಪ್ರಭಾವಗಳನ್ನು ಒಳಗೊಂಡಿದೆ. ಈ ಶೈಲಿಯಲ್ಲಿ ಎರಡು ಪ್ರಕಾರದ ಬಿದ್ರಿ ಪಾತ್ರೆಗಳನ್ನು ಉತ್ಪಾದಿಸಲಾಗುತ್ತಿದ್ದು, ಆಳವಾಗಿ ಕೊರೆಯಲ್ಪಟ್ಟ ಮತ್ತು ಉತ್ತಮ ಗುಣ ಮಟ್ಟದ ನಕ್ಷೆಯಿರುವ ಪ್ರಕಾರಕ್ಕೆ 'ಫಾರ್ಕಿ'ಯೆಂದು ಕರೆಯಲ್ಪಟ್ಟರೆ, ಇನ್ನೊಂದು ಪ್ರಕಾರವು ಗುಣಮಟ್ಟದಲ್ಲಿ ಸ್ವಲ್ಪ ಕೀಳಾಗಿದ್ದು 'ಕರ್ಣಬಿದ್ರಿ'ಯೆಂದು ಕರೆಸಿಕೊಳ್ಳುತ್ತದೆ.

೨. ಮುರ್ಶಿದಾಬಾದ

ಪಶ್ಚಿಮ ಬಂಗಾಳದಲ್ಲಿರುವ ಮುರ್ಶಿದಾಬಾದಲ್ಲಿ ವೈವಿಧ್ಯಮಯ ವಿನ್ಯಾಸಗಳನ್ನು ರಚಿಸಲಾಗುತ್ತದೆ. ತಂತಿಯ ಜೊತೆ ಬೆಳ್ಳಿ ಮತ್ತು ಬಂಗಾರದ ಲೇಪನಗಳನ್ನು ಧಾರಾಳವಾಗಿ ಬಳಸಲಾಗುತ್ತದೆ.

೩. ಮೊರಾದಾಬಾದ

ಮೊರದಾಬಾದದಲ್ಲಿ ಥಟ್ಟನೆ ನೋಡಿದಾಗ ಬಿದ್ರಿಯಂತೆ ಕಾಣುವ ಒಂದು ವಿಧವಾದ ಕರಕುಶಲ ಕೃತಿಯನ್ನು ಕಾಣಬಹುದು. ಆದರೆ ಉತ್ಪಾದನೆಯಲ್ಲಿ ಬಳಸುವ ತಂತ್ರವು ಪೂರ್ತಿಯಾಗಿವಿಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಹಿತ್ತಾಳೆಯ ಮೇಲ್ಮೈಗೆ ತವರವನ್ನು ಲೇಪಿಸಲಾಗುತ್ತದೆ. ಅದಕ್ಕೆ ಕಪ್ಪುಗಾಜಿನ ಲೇಪನವನ್ನು ಬಳಿಯಲಾಗುತ್ತದೆ. ಕಪ್ಪಾಗಿರುವ ಮೇಲ್ಮೈಯಲ್ಲಿ ಚೂಪಾದ ಉಪಕರಣದಿಂದ ತಳದಲ್ಲಿರುವ ಬಿಳಿಯ ಬಣ್ಣವು ಪ್ರಕಟವಾಗುವಂತೆ ವಿನ್ಯಾಸಗಳನ್ನು ಕೊರೆಯಲಾಗುತ್ತದೆ. ಈ ಕೌಶಲದಿಂದ ಬಿದ್ರಿ ಶೈಲಿಯಲ್ಲಂತೆ ಕಾಣುವ ವಸ್ತುಗಳನ್ನು ಉತ್ಪಾದಿಸಲಾಗುತ್ತದೆ. ಈ ಶೈಲಿಯನ್ನು ಕೃತಕ ಬಿದ್ರಿ ಎಂದು ನಮ್ಮ ಅನುಕೂಲಕ್ಕಾಗಿ

ಕರೆದುಕೊಳ್ಳಬಹುದು. ಮೊರದಾಬಾದಿನ ವಿನ್ಯಾಸಗಾರರು ಈ ಜಟಿಲವಾದ ವಕ್ರವಿಧಾನವನ್ನು ತಮ್ಮ ಹೆಗ್ಗಳಿಕೆಯನ್ನಾಗಿ ಸ್ವೀಕರಿಸಿದ್ದಾರೆ.

ಲಕ್ನೋ

ಲಕ್ನೋ ಶೈಲಿಯಲ್ಲಿ ಎಲೆ ಮತ್ತು ಹೂವುಗಳ ಮಾದರಿಗಳೊಂದಿಗೆ ಯುರೋಪಿಯನ್ ಆಶಯಗಳ ಗಮನಾರ್ಹವಾದ ಸೇರ್ಪಡೆಯನ್ನು ವಿನ್ಯಾಸಗಳಲ್ಲಿ ಕಾಣಬಹುದು. ಅವುಗಳಲ್ಲಿ ವಿಶೇಷವಾಗಿ ಎದ್ದು ಕಾಣುವ ವಿನ್ಯಾಸವೆಂದರೆ ಮಾಹಿ–ಮುರಾತಿಬ್ ಅತವಾ ಮೀನುಗಳ ವಿನ್ಯಾಸಗಳು. ಇವು ಬಿದರಿಯಲ್ಲಿ ಮಾತ್ರವಲ್ಲ ವಾಸ್ತು ಶಿಲ್ಪದಲ್ಲಿ ಒಳಗೊಂಡು ಇತರ ಕಲಾಕ್ಷೇತ್ರಗಳನ್ನು ವ್ಯಾಪಿಸಿವೆ. ಲಕ್ನೋದ ಕಲೆಯಲ್ಲಿ ಈ ಆಶಯದ ಸೇರ್ಪಡೆಯ ಐತಿಹಾಸಿಕ ಹಿನ್ನೆಲೆಯನ್ನು ಅರಿತುಕೊಳ್ಳುವುದಕ್ಕೆ ನಾವು ಲಕ್ನೋದ ನವಾಬರ ಇತಿಹಾಸವನ್ನು ತಿಳಿಯಬೇಕಾಗುತ್ತದೆ. ಲಕ್ನೋದ ಬಿದ್ರಿ ಪಾತ್ರೆಗಳಲ್ಲಿ ಹುದುಗಿಸಿದ ಮೀನಿನ ಆಶಯಗಳನ್ನು "ಜರ್ ನಶೀನ" ಅಥವಾ "ಜರ್ ಬುಲಂದ" ಎಂದು ಕರೆಸಿಕೊಳ್ಳುವ ಅರೆಯುಬ್ಬು ರಚನೆಗಳಲ್ಲಿ ಕಾಣಬಹುದು. ಇವು "ತೆಹ್ ನಶಿನ್" ಎಂದು ಕರೆಯಿಸಿಕೊಳ್ಳುವ ಸಪಾಟದ ಮೇಲ್ಮೈನ ರಚನೆಗಳಿಗಿಂತ ವಿಶಿಷ್ಟವಾಗಿವೆ.

ಶೈಲಿಯ ತಂತ್ರಗಾರಿಕೆ

'ತೆಹನಿಶಾನ್' ಎನ್ನುವುದು ತಗಡನ್ನು ಇನ್‌ಲೇ ಮಾಡುವ ತಂತ್ರದ ಸಾಮಾನ್ಯವಾದ ಹೆಸರು. 'ಜರ್‌ನಿಶಾನ' ಎನ್ನುವುದು ತಗಡನ್ನು ಹುದುಗಿಸುವಾಗ ಸ್ವಲ್ಪ ಮಾತ್ರ ಉಬ್ಬಿರುವಂತೆ ಮಾಡುವ ಕಸಬು. ಜರ್‌ಬುಲಂದದಲ್ಲಿ ಹೆಚ್ಚು ಉಬ್ಬುಚಿತ್ರವಿರುವಂತೆ ಮಾಡಲಾಗುವುದು. ಅಫ್ತಾಬಿ ಎಂಬುದು ಲೋಹದ ತಗಡನ್ನು ವಿನ್ಯಾಸಕ್ಕನುಗುಣವಾಗಿ ಕತ್ತರಿಸಿ ಹುದುಗಿಸುವ ಕೆಲಸ. ಜರ್‌ನಿಶಾನ ಹಾಗೂ ಜರ್‌ಬುಲಂದ ಪದ್ಧತಿಗಳಲ್ಲಿ ಬೆಳ್ಳಿಯ ತಗಡನ್ನು ತಳದ ಮೇಲಿಟ್ಟು ಗುರುತಿನ ಮೇಲೆ ರೂಪರೇಷಗಳು ಮಾಡುವವರೆಗೆ ಉಜ್ಜಲಾಗುತ್ತದೆ.

೧. ಜರಬುಲಂದ

ಲಕ್ನೋ ಬಿದ್ರಿ ಪಾತ್ರೆಗಳ ವಿಶೇಷತೆಯೆಂದರೆ 'ಜರಬುಲಂದ' ತಂತ್ರದ ಬಳಕೆ. ಇಲ್ಲಿ ಬೆಳ್ಳಿಯನ್ನು ಸೀಸದ ಪ್ಯಾಡಿನ ಮೇಲಿಟ್ಟು ಹುದುಗಿಸಲಾಗುತ್ತದೆ. ಇದರಿಂದ ಚಿತ್ರವು ಸ್ಪಷ್ಟವಾಗಿ ಗೋಚರಿಸುತ್ತದೆ. ಇದರ ವಿಶಿಷ್ಟ ಗುಣ–ಲಕ್ಷಣವೆಂದರೆ ಮೀನು. ಔಧದ ನವಾಬರು ಮೀನಿ ವಿನ್ಯಾಸವನ್ನು ಬಹಳಷ್ಟು ಅಲಂಕರಣ ಕಲೆಗಳಲ್ಲಿ ಹಾಗೂ ಕಟ್ಟಡಗಳಲ್ಲಿ ಬಳಸುವುದನ್ನೂ ಉತ್ತೇಜಿಸಿದ್ದಾರೆ. ಇದಕ್ಕೆ ಮೊಗಲ ಸುಲ್ತಾನರು ಔಧದ ನವಾಬರಿಗೆ ರಾಜ ನಿಷ್ಠೆಯ ಶ್ರೇಷ್ಠ ಕುರುಹಾದ "ಮಹ–ಎ–ಮುರತಿಬ್" ಎಂಬ ಬಿರುದನ್ನು ದಯಪಾಲಿಸುವುದರ ಸಂಬಂಧವಿದೆ. **೨. ಜರನಿಶಾನ**

ಬಿದ್ರಿ ಪಾತ್ರೆಗಳಲ್ಲಿ ಕೆತ್ತಿದ ಭಾಗದಲ್ಲಿ ತಗಡನ್ನು ಸುತ್ತಣ ಭಾಗಗಳ ಮಟ್ಟಕ್ಕೆ ತರುವ ಇನ್‌ಲೇ ವಿಧಾನವನ್ನು 'ಜರನಿಶಾನ' ಎನ್ನುತ್ತಾರೆ.

೩. ತರ್‌ಕಶಿ

ಬೆಳ್ಳಿಯ ಬೇರೆ ಬೇರೆ ದಪ್ಪಗಳುಳ್ಳ ತಂತಿಗಳನ್ನು ಆಯ್ದುಕೊಂಡು ಒತ್ತಿ ತಿರುಗಿಸಿ ಬೇರೆ ಬೇರೆ ವಿನ್ಯಾಸಗಳಲ್ಲಿ ಹುದುಗಿಸುವುದಕ್ಕೆ ಈ ಹೆಸರು. ಮೊದಲು ಮುಖ್ಯವಾದ ಅಡ್ಡಪುಟಗಳಲ್ಲಿ ತಂತಿಗಳನ್ನು ತುಂಬಲಾಗುತ್ತದೆ. ಅನಂತರ ಇನ್ನಷ್ಟು ಸೂಕ್ಷ್ಮವಾದ ತಂತಿಗಳನ್ನು ಆರಿಸಿಕೊಂಡು ವಿನ್ಯಾಸಕ್ಕನುಗುಣವಾಗಿ ತುಂಬಲಾಗುತ್ತದೆ. ಹೂವುಗಳ ಆಶಯಗಳು ಪ್ರಮುಖವಾಗಿವೆ. ಅತ್ತರಿನ ಬಾಟಲಿಗಳು, ಬೋಗಾಣಿಗಳು, ಅಲಂಕಾರಿಕ ಪ್ರಾಣಿ ಹಾಗೂ ಪಕ್ಷಿಗಳ ಆಕೃತಿಗಳಂಥ ವಸ್ತುಗಳನ್ನು ಈ ತಂತ್ರವನ್ನೇ ಬಳಸಿ ನಿರ್ಮಿಸಲಾಗಿದೆ.

೪. ತೆಹನಿಶಾನಿ

ಇದನ್ನು 'ಲಾಲಾ' ತಂತ್ರವೆಂದೂ ಕರೆಯುತ್ತಾರೆ. ಬೆಳ್ಳಿ ಅಥವಾ ಬಂಗಾರದ ತಗಡನ್ನು ಮಿಶ್ರಣದ ಹೊರಮೈಯಲ್ಲಿ ಹುದಗಿಸುವ ತಂತ್ರದ ಸಾಮಾನ್ಯವಾದ ಹೆಸರು.

೫. ಅಫ್ತಾಬಿ

ಇನ್ ಲೇಯು ತಂತಿಯದಾಗಿರಲಿ, ತಗಡಿನದಾಗಿರಲಿ. ಕೆಲವು ವಿನ್ಯಾಸಗಳು ತಗಡಿನವುಗಳಾಗಿದ್ದು ಕತ್ತರಿಸಲ್ಪಟ್ಟ ತಗಡಿನವುಗಳಾಗಿರುತ್ತವೆ. ವಸ್ತು ಶರೀರದ ಮೇಲೆ ನೆರಳು ಚಿತ್ರವಾಗಿ ಕಾಣುವಂತೆ ಕೌಶಲ್ಯಪೂರ್ಣವಾಗಿರುವುದು 'ಅಫ್ತಾಬಿ'ಯನಿಸುತ್ತದೆ.

ಬಿದ್ರಿ ಕಲೆ ವಿನ್ಯಾಸಗಳು (ಪ್ರಕಾರಗಳು)

೧. ಕೊಫ್ತಗರಿ

ಡಮಾಸ್ಕೀನಿಂಗ್ ಎಂಬ ಕಲೆಯು ಮುಖ್ಯವಾಗಿ ಬಂಗಾರ, ಹೆಚ್ಚಾಗಿ ಬೆಳ್ಳಿ ಮತ್ತು ಅಪರೂಪಕ್ಕೆ ತಾಮ್ರದ ತಂತಿ ಅಥವಾ ಎಲೆಗಳನ್ನು ಉಕ್ಕು ಅಥವಾ ಕಬ್ಬಿಣದಿಂದ ನಿರ್ಮಿತವಾದ ಪಾತ್ರೆಯ ಮೇಲ್ಮೈಯನ್ನು ಇನ್‌ಲೇ ಮಾಡುವ ಕಲೆಯಾಗಿದೆ. ಇದು ಬಹುಶಃ ಪ್ರಾಚೀನ ಕಾಲದ ಯೋಧರು ತಮ್ಮ ಶಸ್ತ್ರೋಪಕರಣಗಳನ್ನು ಬೆಲೆ ಬಾಳುವ ಧಾತುಗಳಿಂದ ಅಲಂಕರಿಸಿಕೊಳ್ಳುವ ಆಸೆಯ ಕಾರಣದಿಂದ ಹುಟ್ಟಿರಬಹುದು. ಈ ಕಲೆಗೆ ಪರ್ಶಿಯನ್ ಭಾಷೆಯಲ್ಲಿ ಕೊಫ್ಟಗರಿಯೆಂದು ಕರೆಯುತ್ತಾರೆ.

೨. ಗಂಗಾ–ಯಮುನಾ

ಇದು ಮತ್ತೊಂದು ವಿಧವಾದ ತಂತ್ರ ಕೌಶಲವನ್ನು ಸೂಚಿಸುತ್ತದೆ. ಇಲ್ಲಿ ಬೆಳ್ಳಿ ಮತ್ತು ಬಂಗಾರದ ತಂತಿಗಳನ್ನು ಒಂದರ ನಂತರ ಮತ್ತೊಂದರಂತೆ ಬಳಸಿ ಗಂಗಾ ಮತ್ತು ಯಮುನಾ ನದಿಗಳ ಪ್ರವಾಹದ ರೀತಿಯನ್ನು ನೆನಪಿಸುವ ಪ್ರಯತ್ನವನ್ನು ಮಾಡಲಾಗುತ್ತದೆ.

೩. ದಿವಾಲಿ ಕಾಮಗಾರಿ

ಡಮಾಸ್ಕೀನಿನಲ್ಲಿ ಅತ್ಯಂತ ಅಗ್ಗದರದ ಕೆಲಸವೆಂದರೆ ದಿವಾಲಿ ಕಾಮಗಾರಿಯಾಗಿದೆ. ಇದರಲ್ಲಿ ಮೊದಲು ಮೇಲ್ಮೈಯನ್ನು ಕೆತ್ತಿ ನುಣುಪುಗೊಳಿಸಲಾಗುತ್ತದೆ. ಇದಕ್ಕೆ ಜ್ವಾಲಾಮುಖಿ ಜನ್ಯವಾದ ಕಾಚ ವಸ್ತುವೊಂದನ್ನು ಬಳಸಲಾಗುತ್ತದೆ. ಇದಕ್ಕೆ 'ಪಮಿಸ್' ಎಂದು ಹೆಸರು. ಪಮಿಸ್ಸಿನಿಂದ ಉಜ್ಜಿ, ನಯಗೊಳಿಸಿದ ಮೇಲ್ಮೈನ ಮೇಲೆ ಕಬ್ಬಿಣದ ಮೊನಚಾದ ಕಡ್ಡಿಯೊಂದರ ಮೂಲಕ ವಿನ್ಯಾಸವನ್ನು ಸಿದ್ದಗೊಳಿಸುತ್ತಾರೆ. ಲಿಂಬೆಯ ರಸವನ್ನು ಹಚ್ಚಿ ಸ್ವಚ್ಛಪಡಿಸಿದ ಮೇಲ್ಮೈಯನ್ನು ಕಾಯಿಸಿದ ಮೇಲೆ ಬಂಗಾರದ ತೆಳುವಾದ ಎಲೆಗಳನ್ನು ಚಿಮುಟದಿಂದ ಎತ್ತಿ ಹಿಡಿದು ಕೊರೆದ ಗೆರೆಗಳ ಮೇಲೆ ಇಟ್ಟು ಸುತ್ತಿಗೆಯಿಂದ ಚೆನ್ನಾಗಿ ಬಡಿಯಲಾಗುತ್ತದೆ ಅನಂತರ ಮೋರಿಕಲ್ಲಿನಿಂದ ಉಜ್ಜಿ ಅದು ಮೇಲ್ಮೈಗೆ ಅಂಟಿಕೊಳ್ಳುವಂತೆ ಮಾಡಲಾಗುತ್ತದೆ. ಈ ತಂತ್ರ ಕೌಶಲ್ಯವು ಕೊಫ್ಟಗರಿಯ ಅನುಕರಣೆ ಎಂದು ಪ್ರಸಿದ್ಧವಾಗಿದೆ.

೪. ಅಪ್ತಫ್‌ಕಿ ಬೂತಿ/ತೀನಪತ್ತಿಕಿ ಬೂತಿ

ಅಪ್ತಪಿಫ್‌ಕಿ ಬೂತಿ ಅಥವಾ ತೀನಪತ್ತಿಕಿ ಬೂತಿ ಎಂದು ಕರೆಯುವ ಪ್ರಕಾರಗಳು ತುಂಬ ಸಾಂಪ್ರದಾಯಿಕವಾದ ರಚನಾ ವಿಧಾನಗಳಾಗಿವೆ. ಇಲ್ಲಿ ಹೆಚ್ಚು ಬಳಕೆಗೊಳ್ಳುವಂಥದು ಹೂವಿನಿಂದ ಕೂಡಿದ ಪೂಪಿ ಸಸ್ಯ; ಒಂದೆ ಹೂವುಳ್ಳದ್ದು; ಬೇರೆ ಬೇರೆ ಆಕಾರವನ್ನು ತಳೆದ ಪೂರ್ಣ ಸಸ್ಯ; ಇದು ಬಹು ಮಟ್ಟಿಗೆ ದೊಡ್ಡ ಪದಕ ಅಥವಾ ಮಾವಿನ ಕಾಯಿಯ ಆಕಾರದಲ್ಲಿರುತ್ತದೆ. ಇವು ಪರ್ಶಿಯನ್ ಪ್ರಭಾವದಿಂದ ಉಂಟಾದವುಗಳೆಂದು ಗುರುತಿಸಬಹುದು. ಸಾಮಾನ್ಯವಾಗಿ ಹಳೆಯ ವಸ್ತುಗಳಲ್ಲಿ ಅವು ಕಂಡು ಬರುತ್ತವೆ. ಸಮಾಂತರ ರೇಖೆಗಳ ತುದಿಯು ಒಂದನ್ನೊಂದು ಛೇದಿಸುವಂಥವುಗಳು ತುಂಬ ಜನಪ್ರಿಯವಾಗಿದ್ದಂತೆ ಕಾಣುತ್ತವೆ. ರೇಲ್ವೆಹಳಿಗಳಲ್ಲಿ ಸ್ಲೀಪರ್‌ಗಳು ಅಡ್ಡವಾಗಿರುವಂತೆ ಕಾಣುತ್ತವೆ.

೫. ಮಹಿಪುಷ್ತ್

ಬಿದ್ರಿ ಕಲೆಯಲ್ಲಿ ಮತ್ತೊಂದು ಸ್ವಾರಸ್ಯಕರವಾದ ವಿನ್ಯಾಸವೆಂದರೆ ಮಹಿಪುಷ್ತ್ ಎಂಬ ವಿನ್ಯಾಸವಾಗಿದೆ. ಮೀನಿನ ಆಕೃತಿಯ ಪೆಟ್ಟಿಗೆಗಳು ಬಹು ಮಟ್ಟಿಗೆ ಸಾಮಾನ್ಯವಾಗಿವೆ. ಮೀನಿನಾಕೃತಿಯ ಮಸಾಲೆ ಪೆಟ್ಟಿಗೆಗಳು ಲಕ್ನೋ ಮತ್ತು ಬೀದರಿನಲ್ಲಿ ಸಾಮಾನ್ಯವಾಗಿವೆ. ಆದರೆ ಮೀನಿನಾಕೃತಿ ವಿನ್ಯಾಸದಿಂದ ಅಲಂಕೃತವಾದ ವಸ್ತುಗಳು ಲಕ್ನೋಕ್ಕೆ ವಿಶೇಷವಾಗಿವೆ.

ಅವುಗಳ ಮೇಲೆ "ಔಧದ ದಿವಂಗತರಾದ ರಾಜರು ದಿಲ್ಲಿ ಸಾಮ್ರಾಜ್ಯದ ಮಾಂಡಲಿಕರಲ್ಲಿ ಶ್ರೇಷ್ಠರು' ಎಂಬರ್ಥದ ಲಾಂಛನವನ್ನು ಹೊಂದಿರುತ್ತದೆ. ಈ ಮೀನಿನ ಸಂಕೇತ ಅಥವಾ ಲಾಂಛನವನ್ನು ರಾಜ್ಯಪರವಾದ ಎಲ್ಲ ಮೆರವಣಿಗೆಗಳಲ್ಲಿ ಬಳಸಲಾಗುತ್ತಿತ್ತು. ಅದು ಮೇಲ್‌ಸ್ತರದ ಸರದಾರರುಗಳ ಶ್ರೇಷ್ಠತೆಯ ಕುರುಹಾಗಿತ್ತು.

೬. ಘೂಲ್‌ಝುಡಿ

ಘೂಲ್‌ಝುಡಿ ವಿನ್ಯಾಸವು ಸಹ ಪ್ರಾಚೀನ ಕಾಲದಲ್ಲಿ ಅತ್ಯಂತ ಪ್ರಚಲಿತವಿದ್ದ ಶೈಲಿ. ಈ ಶೈಲಿಯು ಇಂದಿಗೂ ಪ್ರಸ್ತುತವಾಗಿದ್ದು ಆಧುನಿಕ ಸಂದರ್ಭದ ಬಹುತೇಕ ಬಿದ್ರಿಕಲೆಗಳು ಘೂಲ್‌ಝುಡಿ ವಿನ್ಯಾಸಗಳಿಂದಲೇ ಅಲಂಕಾರಗೊಳ್ಳುತ್ತವೆ. '+' ಈ ಚಿನ್ಹೆಯನ್ನೇ ಬಹುತೇಕವಾಗಿ ಹೋಲುವ ಈ ವಿನ್ಯಾಸಗಳನ್ನು ಮೂಲೆಯಿಂದ ಮೂಲೆಗೆ ಓರಣವಾಗಿ ಬೆಳ್ಳಿಯಿಂದ ಹುದುಗಿಸಿ ಸಂಯೋಜಿಸುವುದರಿಂದ ಬಿದ್ರಿ ವಸ್ತುವಿಗೆ ಅಲಂಕಾರಿಕ ಮೆರಗು ಇಮ್ಮಡಿಸುತ್ತದೆ.

ಉಪಸಂಹಾರ

ಮೇಲೆ ಉಲ್ಲೇಖಿಸಿದಂತೆ ಬೀದರನ ಬಿದ್ರಿ ಕಲೆಯೊಂದಿಗೆ ಕೆಲವು ಶೈಲಿಗಳು ಭಾರತದಲ್ಲಿದ್ದರೂ ಕೂಡ ಬೀದರನ ಬಿದ್ರಿ ಕಲೆಗೆ ದೊರಕಿರುವ ವ್ಯಾಪಕ ಪ್ರಚಾರವಾಗಲಿ, ಚಾರಿತ್ರಿಕ ಪ್ರಸಿದ್ಧಿಯಾಗಲಿ ಇತರೆ ಶೈಲಿಗಳಿಗೆ ಅಷ್ಟಾಗಿ ದೊರಕಿಲ್ಲವೆಂದು ಹೇಳಬಹುದು. ಈ ಬಿದ್ರಿಕಲೆ ಇತ್ತೀಚೆಗೆ ಆಧುನಿಕ ಸ್ವರೂಪವನ್ನು ಪಡೆದುಕೊಳ್ಳುತ್ತಿದ್ದು ಅದು ಬಟ್ಟೆಗಳಲ್ಲಿ, ಉಡುಪುಗಳಲ್ಲಿ ಅತ್ಯಂತ ಪ್ರಭಾವಯುಕ್ತವಾಗಿ ಒಡಮೂಡುತ್ತಲಿದೆ. ಹಾಗೆಯೇ ಕೆಲವು ಆಧುನಿಕ ಕಟ್ಟಡಗಳ ಒಳಾಂಗಣ ವಿನ್ಯಾಸಗಳಲ್ಲಿಯೂ ಸಹ ಪ್ರಕಟವಾಗುತ್ತಿರುವದನ್ನು ಗಮನಿಸಿದರೆ ಬಿದ್ರಿ ಕಲೆ ವಿನ್ಯಾಸಗಳಿಗೆ ಆಧುನಿಕ ಸಂದರ್ಭದಲ್ಲಿ ಹೆಚ್ಚಿನ ಮಾನ್ಯತೆ ದೊರೆಯುತ್ತಿರುವುದು ಸಂತಸದ ವಿಷಯ.

*****

---

೦೧. ರಾಜೇಂದ್ರ ಯರನಾಳೆ : ವಿಶ್ವವಿಖ್ಯಾತ ಬಿದ್ರಿಕಲೆ, ೧೯೯೬ : ಪು.೫

೦೨. ಡಾ.ಕೆ.ಎಂ.ಮೈತ್ರಿ : ಕರಕುಶಲ ಕಲೆಗಳು : ಕನ್ನಡ ವಿ.ವಿ. ವಿಶ್ವಕೋಶ ೨, ಪುಟ ೧೨೮

೦೩. ಡಾ.ಕೆ.ಎಂ.ಮೈತ್ರಿ : ಕರಕುಶಲ ಕಲೆಗಳು : ಕನ್ನಡ ವಿ.ವಿ. ವಿಶ್ವಕೋಶ ೨, ಪುಟ ೧೨೮

೦೪. ಶ್ರೀಧರ ಚೌವ್ಹಾಣ : ಬಿದರಿ ಕಲೆ : ಲಘು ಸಂಶೋಧನ ಪ್ರಬಂಧ, ೨೦೦೨

೦೫. Susan Stronge "Bidriware" Inlaid Metal Work from India, Victoria and Albert Museum, London ,1985.P15

೦೬ Sen, Sujit Narayan, Catalogue on Damascence and Bidri Art in the Indian Museum, Calcutta. 1983.PP 3-4

೦೭ L.K.Gurjar and K.T.M.Hegade : World Archaelogy, vol 15, No 2, 1983, PP 211-217

೦೮. ರಾಜೇಂದ್ರ ಯರನಾಳ : ವಿಶ್ವವಿಖ್ಯಾತ ಬಿದ್ರಿಕಲೆ, ಗು.ವಿ.ಗು. ೧೯೯೬ ಪು.೧೧

೦೯. Google.com, History of Bidri Ware

೧೦. ಡಾ.ಕೆ.ಎಂ.ಮೈತ್ರಿ : ಕರಕುಶಲ ಕಲೆಗಳು : ಕನ್ನಡ ವಿ.ವಿ. ವಿಶ್ವಕೋಶ ೨, ಪುಟ ೧೨೮

೧೧. Gulnar K. Bosch, The new book of Knoweledge "I" Islamic art and Architecture, Islam, PP 354 – 359

೧೨. John R.Randall , The New Book of Knowledge "I" Iraq, The Arts, Page. 313.

೧೩. Google.com, sansanid metal art Egypt

೧೪. James A Bill,The New Book of Knowledge "I" Iran,The Arts, Page, 307.

೧೫. G.N. Pant, Indo – Islamic Arms and Armour in An Age of Splendour – Islamic Art in India, Marg Publication Bombay ,1983, PP. 52 – 58.

೧೬. Jagdish Mittal ,: Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67.

೧೭. ಡಾ.ಕೆ.ಎಂ.ಮೈತ್ರಿ : ಕರಕುಶಲ ಕಲೆಗಳು : ಕನ್ನಡ ವಿ.ವಿ. ವಿಶ್ವಕೋಶ ೨, ಪುಟ ೧೨೮

೧೮. Chahar Gulshan (persian text,1759)..Susan Stronge “Bidriware” Inlaid Metal Work from India, Victoria and Albert Museum, London ,1985. P 15

೧೯. Jagdish Mittal ,: Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67.

೨೦. -Do- PP – 60 – 67.

೨೧. Jagdish Mittal ,: Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67.

೨೨. ಡಾ.ಕೆ.ಎಂ.ಮೈತ್ರಿ : ಕರಕುಶಲ ಕಲೆಗಳು : ಕನ್ನಡ ವಿ.ವಿ. ವಿಶ್ವಕೋಶ ೨, ಪುಟ ೧೨

೨೩. ರಾಜೇಂದ್ರ ಯರನಾಳ : ವಿಶ್ವವಿಖ್ಯಾತ ಬಿದ್ರಿಕಲೆ, ಗು.ವಿ.ಗು. ೧೯೯೬ ಪು.೧೬

೨೪. Jagdish Mittal ,: Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67.

೨೫. Jagdish Mittal ,: Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67.

೨೬. -Do- PP – 60 – 67.

೨೭. -Do- PP – 60 – 67.

೨೮. Victoria and Albert Museum: Catalogue No 2

೨೯. Zebrowski Mark : Deccani Paintings, 1983, Plate 95

೩೦. Chahar Gulshan (persian text,1770,map)

೩೧. Chahar Gulshan (persian text,1770map)..Susan Stronge “Bidriware” Inlaid Metal Work from India, Victoria and Albert Museum, London ,1985. P 20

೩೨. Francis Buchanan : An Account of District of Purnea in 1809-10, Patna, 1928,PP 533-535

೩೩. Archer,Mildred, India and British Portraiture 1770 – 1825 london, 1979. PP 245

೩೪. Susan Stronge “Bidriware” Inlaid Metal Work from India, Victoria and Albert Museum, London ,1985.P 23

೩೫. H.R.Nevill Lucknow ; A Gazetteer, vol. XXXXVII of the District Gazetteers of the United Provinces of Agra and Oudh, Lucknow, 1992, P44

೩೬ Ray Desmond, The Indian Museum, 1801-1879, London, 1982, P 70

ಬಿದ್ರಿ ಕಲೆಯ: ರಚನಾ ಪರಿಕರಗಳು ಮತ್ತು ರಚನಾ ವಿಧಿ ವಿಧಾನಗಳು

ಬೀದರಿನ ಬಿದ್ರಿ ಕಲೆ ಕೇವಲ ಕಲೆಯಾಗಿ ಪ್ರಕಟವಾಗಿಲ್ಲ. ಅದೊಂದು ಅಭೂತಪೂರ್ವ ಲೋಹ ವಿಜ್ಞಾನವಾಗಿದೆ. ಹೀಗಾಗಿ ಬಿದ್ರಿ ಕಲೆಗೆ ವಿಶ್ವದೆಲ್ಲೆಡೆ ನಡೆಯುವ ವಿಜ್ಞಾನ ಮೇಳಗಳಲ್ಲಿ ಇದಕ್ಕೊಂದು ರಾಜ ಮರ್ಯಾದೆ ಇದ್ದೇ ಇದೆ. ಬಿದ್ರಿ ಕುಶಲಕರ್ಮಿಗಳು ಸಹ ವಿಜ್ಞಾನಿಗಳೇ. ಅವರು ಅನಕ್ಷರಸ್ಥರಿರಬಹುದು. ಆದರೆ ಪರಂಪರೆಯಿಂದ ಬಂದ ವೈಜ್ಞಾನಿಕ ಬೆಳವಣಿಗೆಗಳು ಅವರಿಗೆ ಕರಗತವಾಗಿವೆ. ಬಿದ್ರಿ ಕಲೆಯಲ್ಲಿ ವೈಜ್ಞಾನಿಕ ಪ್ರಜ್ಞೆ ಮತ್ತು ದೃಶ್ಯ ಪ್ರಜ್ಞೆಗಳೆರಡೂ ಸಮ್ಮಿಳಿತವಾಗಿ ಒಂದು ಸುಂದರವಾದ ಬಿದ್ರಿ ಕಲೆ ರೂಪುಗೊಳ್ಳುವ ಹಿನ್ನೆಲೆಯಲ್ಲಿ ಬಿದ್ರಿ ಕಲೆಯ ರಚನಾ ಪರಿಕರಗಳು ಮತ್ತು ಅದರ ವಿಧಿವಿಧಾನಗಳನ್ನು ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಲೋಹ ವಿಜ್ಞಾನ

ಆಧುನಿಕ ಔದ್ಯೋಗೀಕರಣ ಪೂರ್ವದ ಲೋಹ ವಿದ್ಯಾಕೌಶಲದ ಸ್ವರೂಪವನ್ನು ಎರಡು ಉದ್ಧರಣಗಳ ಮೂಲಕ ತಿಳಿಯಬಹುದು. ಸರ್ ಥಾಮಸ್ ಹಾಲಂಡ (ಅಧ್ಯಕ್ಷರು, ಇಂಡಿಯನ್ ಇಂಡಸ್ಟ್ರೀಯಲ್ ಕಮೀಶನ್ (೧೯೧೬-೧೮) ಅವರು ೧೯೦೮ರಲ್ಲಿ ಸಲ್ಲಿಸಿದ ವರದಿಯಲ್ಲಿ ಹೀಗೆ ಹೇಳುತ್ತಾರೆ–"ದೇಶೀಯವಾಗಿ ಸಿದ್ಧಗೊಂಡ ಉಕ್ಕಿನ ಉನ್ನತವಾದ ಗುಣಮಟ್ಟ, ಮೇಲ್ದರ್ಜೆಯ ಕಬ್ಬಣವನ್ನು ಉತ್ಪಾದಿಸಲು ಯೂರೋಪಿನಲ್ಲಿ ಇಂದು ಅನುಸರಿಸುತ್ತಿರುವ ಪ್ರಕ್ರಿಯೆಗಳ ಪೂರ್ವ ನಿರೀಕ್ಷೆ ಮತ್ತು ತಾಮ್ರ ಮತ್ತು ಕಂಚುಗಳಿಂದ ನಿರ್ಮಾಣಗೊಂಡ ಕಲಾತ್ಮಕ ವಸ್ತುಗಳು ಲೋಹವಿಜ್ಞಾನದ ಜಗತ್ತಿನಲ್ಲಿ ಮಹತ್ವದ ಸ್ಥಾನವನ್ನು ನೀಡುತ್ತವೆ."[೧]

ಡಿ.ಎಚ್.ಬುಕನನ್ ತನ್ನ ಡವೆಲಪ್‌ಮೆಂಟ್ ಆಫ್ ಕ್ಯಾಪಿಟಲ್ ಎಂಟರ್‌ಪ್ರೈಸಿಸ್ ಇನ್ ಇಂಡಿಯಾ, ೧೯೩೪ ಎಂಬ ಗ್ರಂಥದಲ್ಲಿ–"ಭಾರತದಲ್ಲಿ ಕಬ್ಬಿಣವನ್ನು ಆಯುಧಗಳಿಗಾಗಿ ಅಲಂಕರಣದ ಉದ್ದೇಶಗಳಿಗಾಗಿ, ಉಪಕರಣಗಳಿಗಾಗಿ ಬಳಸಲಾಗುತ್ತಿತ್ತು. ಅತ್ಯಂತ ಮೇಲ್ಮಟ್ಟದ ವಸ್ತುಗಳ ಉತ್ಪಾದನೆ ಹಾಗೂ ಹಳೆಯ ಆಯುಧಗಳು ಅದ್ವಿತೀಯವಾಗಿದ್ದು ಪ್ರಸಿದ್ಧ ಡೆಮಾಸ್ಕಿನ ಖಡ್ಗಗಳನ್ನು ಹೈದರಾಬಾದಿನಿಂದ ಆಮದಾದ ಕಬ್ಬಿಣದಿಂದ ಉತ್ಪಾದಿಸಲಾಗುತ್ತಿತ್ತು."[೨]

ಮೇಲಿನ ಹೇಳಿಕೆಗೆ ಪುರಕವಾಗಿ ಒಂದು ಉದಾಹರಣೆ ಎಂದರೆ– ಕುತುಬ್ ಮಿನಾರ್ ಎಂದು ಕರೆಸಿಕೊಳ್ಳುವ ದಿಲ್ಲಿಯಲ್ಲಿರುವ ಸ್ತಂಭವು ಕಬ್ಬಣದಿಂದ ಕ್ರಿ.ಶ.೧೪೧೫ರಲ್ಲಿ ನಿರ್ಮಿತವಾಗಿದ್ದು ಆರು ಟನ್‌ಗಳಷ್ಟು ಭಾರವಾಗಿದೆಯಲ್ಲದೇ ಈಗಲೂ ಭದ್ರವಾಗಿ ಉಳಿದುಕೊಂಡಿರುವದಕ್ಕೆ ಪುರಾತನ ಲೋಹವಿದ್ಯೆಗೆ ಒಂದು ಸಾಕ್ಷಿ.

ಬಿದ್ರಿ ಕರಕುಶಲ ಕಲೆಯು ದಕ್ಷಿಣದ ಬೀದರಿನಲ್ಲಿ ಹುಟ್ಟಿ ಉತ್ತರದ ಕೇಂದ್ರಗಳಾದ ಲಕ್ನೋ ಮತ್ತಿತರ ನಗರಗಳಲ್ಲಿ ಹರಡಿಕೊಂಡಿದ್ದು ಮಹತ್ವದ ಲೋಹದ ವಿಜ್ಞಾನ ಕೌಶಲ್ಯವನ್ನು ಹೊಂದಿದೆ. ಅತ್ಯಂತ ಸೂಕ್ಷ್ಮವಾದ ಇನ್‌ಲೇ ಕೆಲಸಕ್ಕೆ ಶಿಸ್ತು ಮತ್ತು ತಜ್ಞತೆಗಳು ಬೇಕು. ಅಲ್ಲದೇ ಸತುವನ್ನು ಸಂಗ್ರಹಿಸಲು ತುಂಬ ಕುಶಲತೆಯು ಸಹ ಅವಶ್ಯ. ತಾಮ್ರ ಮತ್ತು ಕಬ್ಬಿಣಗಳಂತೆ ಸತುವನ್ನು ಅದಿರಿನಿಂದ ಸಂಗ್ರಹಿಸಲಾಗುವುದಿಲ್ಲ. ಪರಿಣಾಮವಾಗಿ ಯೂರೋಪಿನಲ್ಲಿ ೧೭೩೮ರಲ್ಲಿ ಆಂಗ್ಲನೊಬ್ಬ ಸತುವಿನ ಭಟ್ಟಿಯಿಳಿಸುವ ಪ್ರಕ್ರಿಯಿಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವರೆಗೆ ಸತುವನ್ನು ವಾಣಿಜ್ಯೋದ್ಯಮದ ಪ್ರಮಾಣದಲ್ಲಿ ಬಳಸಲು ಸಾಧ್ಯವಾಗಿರಲಿಲ್ಲ.

ಆದರೆ ಭಾರತದಲ್ಲಿ ಕ್ರಿ.ಪೂ.೧ನೆಯ ಶತಮಾನದಲ್ಲಿ ಸತುವನ್ನು ಉತ್ಪಾದಿಸಲಾಯಿತು. (ರಸರತ್ನಾಕರದಲ್ಲಿ ಸತುವನ್ನು ಉತ್ಪಾದಿಸುವ ಕೇಂದ್ರವನ್ನಾಗಿ ರಾಜಸ್ಥಾನದ ಝುವಾರ್ ಎಂಬ ಸ್ಥಳವನ್ನು ಹೇಳಿದ್ದು ಎಂ.ಎಸ್.ಯುನಿವರ್ಸಿಟಿಯ ಸಂಶೋಧನೆಗಳು ಅದನ್ನು ರುಜುವಾತುಪಡಿಸಿವೆ.)[೩] ರಾಜಸ್ಥಾನದಲ್ಲಿ ಹಿತ್ತಾಳೆಯನ್ನು ಉತ್ಪಾದಿಸಲು ಅದನ್ನು ಬಳಸುತ್ತಿರಬಹುದು. ೧೭ನೆಯ ಶತಮಾನದ ಹೊತ್ತಿಗೆ ಬಿದ್ರಿ ಪಾತ್ರೆಗಳ ಉತ್ಪಾದನೆಗೆ ಸತುವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸುತ್ತಿದ್ದರು.

ಜೈಪುರ ಹತ್ತಿರದ ಜೈಗರ ಎಂಬಲ್ಲಿ ಏಷ್ಯಾದ ಅತಿದೊಡ್ಡ ಕ್ಯಾನನ್ (ತೊಪು) ಕಾರಖಾನೆಯಿತ್ತು. ಜೈಗರದಲ್ಲಿ ಉತ್ಪಾದಿತವಾದ ಕ್ಯಾನನ್‌ಗಳು ಮೊಗಲರ ಸಾಮ್ರಾಜ್ಯವನ್ನು ವಿಸ್ತರಿಸಲು ಹಾಗೂ ದೃಢಗೊಳಿಸಲು ಮಹತ್ವದ ಪಾತ್ರವಹಿಸಿವೆ. ಹೀಗೆ ಅತ್ಯಂತ ಪ್ರಾಚೀನ ಹಿನ್ನೆಲೆಯನ್ನು ಹೊಂದಿರುವ ಬಿದ್ರಿ ಕಲೆಗಳ ರಚನಾ ಪರಿಕರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಬಿದ್ರಿ ಕಲೆಯ ರಚನಾ ಪರಿಕರಗಳು

ಬಿದ್ರಿ ಕಲೆ ತಯಾರಿಸಲು ಹಲವಾರು ಪರಿಕರಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

೧. ಜಿಂಕ್ + ಕಾಪರ್ (ಜಸ್+ತಾಮ್ರ) : ಇವು ಬಿದ್ರಿ ಕಲೆಗೆ ಬೇಕಾಗುವ ಮೂಲ ಲೋಹ. ಒಂದು ಕಿಲೋಗ್ರಾಂ. ಜಿಂಕ್ ತೆಗೆದಿಕೊಂಡರೆ ೬೦ಗ್ರಾ. ಕಾಪರ್ ತೆಗೆದುಕೊಂಡು ಮೂಸದಲ್ಲಿ ಕಾಯಿಸುತ್ತಾರೆ. ಇದು ದ್ರವರೂಪ ತಾಳಿದಾಗ ಯಾವೂದಕ್ಕೂ ಅಂಟಿಕೊಳ್ಳಲಾರದಂಥ ವಿಶೇಷತೆ ಉಳ್ಳದ್ದಾಗಿರುತ್ತದೆ.

೨. ಮೂಸ : ಇದು ಒಂದು ರೀತಿಯ ಮಣ್ಣಿನಿಂದ ಮಾಡಿದ ಮಡಕೆ. ಆದರೆ ಗಡಿಗೆ ಮಡಕೆಗಳಿಗೆ ಸಾಕಷ್ಟು ವ್ಯತ್ಯಾಸವಾಗಿರುತ್ತದೆ. ಜೊತೆಗೆ ಇದರ ತಯಾರಿಕೆ ಹಾಗೂ ಗುಣ ಸಹ

ವಿಶಿಷ್ಟವಾಗಿದೆ. ಇದು ಮದ್ರಾಸ ಮುಂತಾದ ಕಡೆಗಳಲ್ಲಿ ತಯಾರಿಸುತ್ತಾರೆ. ಇವು ಆಕಾರದಲ್ಲಿಯೂ ಐದಾರು ರೀತಿಯಲ್ಲಿರುತ್ತವೆ. ಇದರ ವಿಶೇಷತೆಯೆಂದರೆ ಜಿಂಕ್+ಕಾಪರ್ ಎಷ್ಟೇ ಸಮಯವಾದರೂ ಕಾಯಿಸಿದರೂ ಅಂಟಿಕೊಳ್ಳಲಾರದು. ಆದರೆ ಕಾಯಿಸುವಾಗ ಉಳಿದ ಮಡಕೆಗಳಂತೆ ಇದನ್ನು ಒಲೆಗೆ ತಗುಲದಂತೆ ಬೆಂಕಿಯ ಮೇಲಿಡಬೇಕಾಗುತ್ತದೆ.

೩. ಅಂಬುರ (ಚುಂಚಿ) : ಇವು ಸಹ ೫–೬ ರೀತಿಯಲ್ಲಿರುತ್ತವೆ. ಮೌಲ್ಡಿಂಗ್ ಮುಂತಾದ ಕೆಲಸ ಮಾಡುವಾಗ ಕಾದ ವಸ್ತುಗಳು ಹಿಡಿಯಲು, ಹಾಗೂ ಚಿತ್ರಕೆತ್ತುವ, ಬೆಳ್ಳಿ, ಮುಂತಾದ ಕೆಲಸದಲ್ಲಿ ಉಪಯೋಗಿಸಿಕೊಳ್ಳುತ್ತಾರೆ.

೪. ಭಾತಿ (ಭತ್ತಾ) : ಇದು ಲೋಹ ಕರಗಿಸಲು, ಮೌಲ್ಡಿಂಗ್ ಮಾಡಲು, ವೆಲ್ಡಿಂಗ್ ಮಾಡುವಾಗ ಬೆಂಕಿಗಾಗಿ ಒಲೆಗೆ ಗಾಳಿ ಹ್ಯಾಂಡಲ್ ತಿರುಗಿಸುವುದರ ಮೂಲಕ ಊದುವ ಸಲುವಾಗಿ ಬಳಸುವ ಯಂತ್ರ.

೫. ಪಟ್ಟು : ಇದು ಕಬ್ಬಿಣದಾಗಿದ್ದು ಸತು+ತಾಮ್ರ ಕುದಿಸುವಾಗ, ಕಲಾಕೃತಿಗಳ ರಂಗೇರಿಸುವಾಗ ವಸ್ತುಗಳನ್ನು ದ್ರಾವಣಗಳನ್ನು ಅಲುಗಾಡಿಸಲು ಉಪಯೋಗವಾಗುವುದು.

೬. ಸೌಟು (ಪ್ಯಾಲಾ) : ಇದು ಕೂಡ ಕಬ್ಬಿಣದಾಗಿರುತ್ತದೆ. ಜೊತೆಗೆ ಪಟ್ಟಿಯಂತೆ ಅಲುಗಾಡಿಸಲು ಹಾಗೂ ದ್ರವರೂಪದ ಲೋಹ ಪೇಟೆಯಲ್ಲಿ ಹಾಕಿಕೊಳ್ಳಲು ಬೇಕಾಗುತ್ತದೆ.

೭. ಸಂಗಜೀರಾ : ಇದು ಅಂಗಡಿಯಲ್ಲಿ ಸಿಗುವಂಥದ್ದು. ಇದನ್ನು ಹಿಟ್ಟಿನಂತೆ ಸಣ್ಣಗೆ ಪುಡಿ ಮಾಡಿ ಜಿಂಕ್+ಕಾಪರಿನ ದ್ರವ ಪೇಟೆಯಲ್ಲಿ ಹಾಕುವ ಮೊದಲು, ಪೇಟೆಯಲ್ಲಿಯ ಮಣ್ಣಿನ ಮೇಲೆ ಉದುರಿಸುತ್ತಾರೆ. ಕಾರಣ ಆಕೃತಿ ತಯಾರಾಗಿ ಅದು ಮಣ್ಣಿಗೆ ಅಂಟಿಕೊಳ್ಳದಿರಲೆಂದು ಬಳಸುತ್ತಾರೆ.

೮. ಪೇಟೆ : ಇದು ಮೌಲ್ಡಿಂಗ್ ಮಾಡುವ ಸಲುವಾಗಿ ಉಪಯೋಗಿಸುವರು.ಇದರಲ್ಲಿಯೂ ಹಲವಾರು ಆಕಾರ ಉಳ್ಳವುಗಳಾಗಿರುತ್ತವೆ. ಬಿಳಿಗಾರಿನಂಥ ಐದು ಕಿಲೋಗ್ರಾಂ ಸೋಸಿದ ನುಣುಪಾದರಂಗೋಲಿನಲ್ಲಿ ನೂರುಗ್ರಾಂ ರಾಂಜಾ+ಎರಂಡಿ ತೇಲ (ಜಾಡಲೆಣ್ಣೆ) ಮಿಶ್ರಣ ಮಾಡಿದಾಗ ಅದು ಜಿಗಿಟಾದಂತೆ ಆಗುತ್ತದೆ. ಇದನ್ನು ಪೇಟೆಯಲ್ಲಿ ಹಾಕಿ ಸರಿಯಾಗಿ ಕೂಡುವಂತೆ ಒತ್ತುತ್ತಾರೆ. ನಂತರ ತಾವು ತಯಾರಿಸಬೇಕಾದ ಕಲಾಕೃತಿಯ ಛಾಪ ಒತ್ತುತ್ತಾರೆ. ಹಾಗೂ ಮುಚ್ಚಳಿಕೆಯ ಇನ್ನೊಂದು ಪೇಟೆಯಿಂದ ಮುಚ್ಚಿ ರಂಧ್ರ ಇರುವ ಕಡೆಯಿಂದ ಕಾದು ದ್ರವ ಆಗಿದ ತೀಹೆ ಹಾಕುತ್ತಾರೆ. ಒಳ ಹಾಕಿದ ದ್ರವ ಕ್ಷಣದಲ್ಲಿ ಛಾಪ ಒತ್ತಿದ ಕಲೆ ಆಕಾರ ತಾಳುತ್ತದೆಯಲ್ಲದೇ ಕಲಾಕೃತಿಗಳನ್ನು ತಯಾರಿಸಿಕೊಳ್ಳಲು ಪೇಟೆಯ ಉಪಯೋಗವಾಗುತ್ತದೆ.

೯. ಅರಾ : ಇದು ಬಿದ್ರಿ ಕಲಾಕೃತಿಗಳನ್ನು ಮೌಲ್ಡಿಂಗ್ ಮಾಡಿದದ ಮೇಲೆ ಆಕೃತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿರುವುದನ್ನು ಕತ್ತರಿಸುವದಕ್ಕಾಗಿ ಬಳಸುತ್ತಾರೆ.

೧೦. **ಸೋಲ್ (ಫೈಲ್)** : ಬಿದ್ರಿ ಕಲಾಕೃತಿ ಮೌಲ್ಡಿಂಗ್ ಇತ್ಯಾದಿಗಳನ್ನು ಮಾಡಿದಾಗ ಆಕೃತಿ ಒರಟಾದದ್ದನ್ನು ನುಣುಪಾಗಿಸಲು ಉಜ್ಜುವ ಸಾಧನ. ಇದರಲ್ಲಿ ವಿವಿಧ ಬಗೆಯ ಮೈವಳಿಕೆಗಳು ಇರುವ ಸೋಲ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತವೆ.

೧೧. **ಮೋಮ್ (ಮೇಣ)** : ೨೫೦ಗ್ರಾ ಮೇಣ, ೨೫೦ಗ್ರಾಂ ರಾಳ, ೧೦೦ಗ್ರಾಂ ಕಟ್ಟಿಗೆಯ ಬೂದಿ (ರಾಕ್), ೧೦೦ಗ್ರಾಂ ಒಳ್ಳೆಣ್ಣೆ ಮಿಶ್ರಣ ಮಾಡಿ ಕುದಿಸಿದಾಗ ಉತ್ಪತ್ತಿಯಾಗುವುದೇ ಮೋಮ್. ಹೀಗೆ ತಯಾರಿಸಿದ ಮೋಮ್ ಬಿದ್ರಿ ಕಲಾಕೃತಿಯಲ್ಲಿ ಚಿತ್ತಾರ ಕೆತ್ತುವಾಗ, ಬೆಳ್ಳಿ ಕೂಡಿಸುವಾಗ ಕಲಾಕೃತಿ ಒಡೆಯದಿರಲೆಂದು ರಕ್ಷಣೆ ನೀಡುತ್ತದೆ. ಮೇಲೆ ತಿಳಿಸಿದಂತೆ ಇಂತಿಷ್ಟು ಬೂದಿಯಲ್ಲಿ ಇಂತಿಷ್ಟು ರಾಳ ಮುಂತಾಗಿ ಬೆರೆಸುವುದು ಪ್ರಮಾಣವಾಗಿರುತ್ತದೆ. ಕುಶಲಕರ್ಮಿಗಳು ತಮ್ಮ ಅನುಭವದಿಂದ ಅಂದಾಜಿನಿಂದಲೇ ತೆಗೆದುಕೊಳ್ಳದೇ ತೂಕ ಮಾಡಿಯೇ ಮೇಲಿನ ವಸ್ತುಗಳನ್ನು ಮಿಶ್ರ ಮಾಡುತ್ತಾರೆ.

೧೨. **ಚೌಕಿ (ಕುಂದಾ)** : ಬಿದ್ರಿ ಕಲೆಗಳು ಫೈಲಿಂಗ್ ಮಾಡುವುದು, ಚಿತ್ರ ಕೆತ್ತುವುದು, ಬೆಳ್ಳಿ ಕೂಡಿಸುವುದು ಮುಂತಾದ ಕೆಲಸಗಳು ಇದರ ಮೇಲಿಟ್ಟು ಮಾಡುತ್ತಾರೆ. ಕಾಷ್ಠದಿಂದ ಚೌಕಾಕಾರದಲ್ಲಿ ರಚಿಸಿರುವ ಇದು ಬೇರೆ ಬೇರೆ ಅಳತೆಗಳಲ್ಲಿ ಇರುತ್ತದೆ.

೧೩. **ವತಾಡಿ** : ಇದು ಕೂಡಾ ಚೌಕಿಯಂತೆ ರಂದಾ (ಫೈಲಿಂಗ) ಮಾಡಲು ಬಳಸುತ್ತಾರೆ.

೧೪. **ಪರಕಾರ** : ಇದು ಕೈವಾರದಂತೆ ಕಲಾಕೃತಿಗಳ ಮೇಲೆ ಚಿತ್ರ ಬಿಡಿಸಲು ಉಪಯೋಗಿಸುತ್ತಾರೆ.

೧೫. **ಮಂಗನ** : ಇದು ಕಬ್ಬಿಣದ ಯಂತ್ರವಾಗಿದ್ದು ಹೆಚ್ಚು ಕಡಿಮೆ ಮಾಡಲು ಬರುತ್ತದೆ. ಇದರಲ್ಲಿ ವಸ್ತು (ಕಲಾಕೃತಿ) ಕೂಡಿಸಿ ಚಿತ್ರ ಕೆತ್ತುವುದು, ಬೆಳ್ಳಿ ಕೂಡಿಸುವುದು ಮುಂತಾಗಿ ಮಾಡುತ್ತಾರೆ.

೧೬. **ಹತೋಡಿ** : ವಸ್ತುಗಳಲ್ಲಿ ಚಿತ್ತಾರ ಕೆತ್ತುವಾಗ, ಬೆಳ್ಳಿ ಕೂಡಿಸುವಾಗ ಕಲಮುಗಳಿಗೆ ಕೈಯಿಂದ ಹೊಡೆಯುವ ಸಾಧನ. ಇವುಗಳಲ್ಲಿಯೂ ವಿಭಿನ್ನ ಮಾದರಿಯಲ್ಲಿರುತ್ತವೆ.

೧೭. **ಕಲಮ್** : ಬಿದ್ರಿ ಕಲೆಯಲ್ಲಿ ಬಹಳ ಮುಖ್ಯವಾದುದು. ಕಬ್ಬಿಣದಲ್ಲಿ ತಯಾರಿಸಲಾದ ಇದು ವಿವಿಧ ಆಕಾರ, ದಪ್ಪ, ಚೂಪ ಮುಂತಾಗಿ ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಇದಕ್ಕೆ ಕರ್ಮಿಗಳು ಖುದ್ದಾಗಿ ಅದಕ್ಕೆ ಸಾನ ಮೇಲೆ ಉಜ್ಜಿ ಸಿಂಹದ ಮುಖ ಆಕಾರ ಕೊಡುತ್ತಾರೆ. ಇದರ ವಿಶೇಷತೆ ವಸ್ತುವಿನಲ್ಲಿ ಚಿತ್ತಾರ ಕೆತ್ತುವಾಗ ಅದರ ಒಳ ಭಾಗದಲ್ಲಿ ಸ್ವಲ್ಪ ಜಾಸ್ತಿ ಕೆತ್ತುತ್ತದೆ. ಆದ ಕಾರಣ ಕೂಡಿಸಿದ ಬೆಳ್ಳಿ ಕಿತ್ತುವುದಿಲ್ಲ. ಇದೇ ಕಲಮ್‌ನಿಂದ ರೇಖೆಯನ್ನು ಹಾಕುತ್ತಾರೆ.

೧೮. **ತಾರಪಟ್ಟ** : ಇದು ವಿವಿಧ ಅಳತೆಯ ರಂಧ್ರಗಳುಳ್ಳ ಕಬ್ಬಿಣ ಪಟ್ಟಿ. ಕಲಾಕೃತಿಯ ತಾರಿನ ರೂಪದ ಬೆಳ್ಳಿ ಕೂಡಿಸುವಾಗ ಕೆತ್ತಿದ ಚಿತ್ರದ ಅಳತೆಗೆ ತಕ್ಕಂತೆ ಚಿಕ್ಕ ರಂಧ್ರದಲ್ಲಿ ಹಾಕಿ ಎಳೆಯುತ್ತ ತೆಳುವಾಗಿ ಮಾಡಿಕೊಳ್ಳಲು ಬರುವಂತಹದಾಗಿದೆ.

೧೯. **ರಂದಾ** : ಕಲಾಕೃತಿಯಲ್ಲಿ ಬೆಳ್ಳಿ ಕೂಡಿಸಿದ ಮೇಲೆ ತಿಕ್ಕಿ ನುಣುಪಾಗಿಸಲು ಬಳಸುತ್ತಾರೆ. ಇನ್ನೊಂದು ತರಹದ ರಂದಾ ಕಲಾಕೃತಿಯ ಪೊಳ್ಳು ಭಾಗದಲ್ಲಿ ತಿಕ್ಕುವುದಕ್ಕೆ ಉಪಯೋಗಿಸುತ್ತಾರೆ. ಇವುಗಳು ಬೇರೆ ಬೇರೆ ಆಕಾರದಲ್ಲಿರುವ ಇವುಗಳಿಗೆ ಈ ಹಿಂದೆ ಹೇಳಿದಂತೆ ರಂದಾ, ಫೈಲಿಂಗ್, ಬಫಿಂಗ್ ಎಂದು ಕರೆಯುತ್ತಾರೆ.

೨೦. **ಬರ್ಮಾ** : ಕಲಾಕೃತಿಗಳಿಗೆ ಅವಶ್ಯಕತೆ ಇರುವಲ್ಲಿ ರಂಧ್ರಗಳನ್ನು ಹಾಕಲು ಬಳಸುತ್ತಾರೆ.

೨೧. **ಸಾನ** : ಇದು ಒಂದು ತರಹದ ಮರಳಿನಿಂದ ತಯಾರಿಸಲ್ಪಟ್ಟ ಸಿದ್ಧ ವಸ್ತು. ಇದು ಕಲಾಕೃತಿಗಳಿಗೆ ಅಂತಿಮ ಸ್ಪರ್ಶ ನೀಡಲು ಮತ್ತು ಲೋಹ ಪರಿಕರಗಳನ್ನು ಮಸಗಿಕೊಳ್ಳಲು ಉಪಯೋಗಿಸುತ್ತಾರೆ.

೨೨. **ಬೆಳ್ಳಿ ಪಾಲಿಷ** : ಇದು ಒಂದು ಕೆಮಿಕಲ್. ಬಿದ್ರಿ ಕಲಾಕೃತಿ ಪೂರ್ಣವಾಗಿ ರಚನೆಯಾದ ಮೇಲೆ ಹೊಳಪು ನೀಡಲು ಬಳಸುತ್ತಾರೆ.

೨೩. **ಮಣ್ಣು** : ಬಿದ್ರಿ ಕಲೆಗೆ ಬೀದರ ಕೋಟೆಯಲ್ಲಿ ಲಭ್ಯವಿರುವ ಮಣ್ಣನ್ನು ಬಳಸುತ್ತಾರೆ. ಈ ಮಣ್ಣಿಗೆ ವಿಶೇಷ ಗುಣವಿದ್ದು ಬಿದ್ರಿ ವಸ್ತುವನ್ನು ರಂಗೇರಿಸಲು ಬಳಸುತ್ತಾರೆ. ಕೋಟೆಯಲ್ಲಿ ಹಳೇ ಮನೆಗಳು ಇದ್ದು ಅಲ್ಲಿ ಬಿಸಿಲು, ಮಳೆಯ ಸ್ಪರ್ಶವಿರದ ಮಣ್ಣನ್ನು ಕರ್ಮಿಗಳು ತಮ್ಮ ನಾಲಿಗೆಗೆ ಸ್ಪರ್ಶಿಸಿ, ಪರೀಕ್ಷಿಸಿ ಮಣ್ಣನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಮಣ್ಣನ್ನು ಹೊರತುಪಡಿಸಿ ಬೇರೆ ಮಣ್ಣನ್ನು ಉಪಯೋಗಿಸಿದರೆ ಬಿದ್ರಿ ಕೃತಿಗಳನ್ನು ರಚಿಸಲು ಅಸಾಧ್ಯ.

ಹೀಗೆ ಬಿದ್ರಿ ಕಲೆಗಳಿಗೆ ಬಳಸಿಕೊಳ್ಳುವ ರಚನಾ ಪರಿಕರಗಳನ್ನು ಇಲ್ಲಿ ವಿವರಿಸಲಾಗಿದೆ. ಈ ಪರಿಕರಗಳನ್ನು ದುಡಿಸಿಕೊಂಡು ಬಿದ್ರಿ ಕಲಾಕೃತಿಗಳನ್ನು ಉತ್ಪಾದಿಸುವ ಬಗೆಯನ್ನು ಈ ಕೆಳಗೆ ಕೊಡಲಾಗಿದೆ.

ಬಿದ್ರಿ ಕಲೆಯ ರಚನಾ ವಿಧಿ–ವಿಧಾನ

ಬಿದ್ರಿ ಕಲೆಯ ತಾಂತ್ರಿಕತೆಯ ಮೂಲದ ಕುರಿತು ನಿಶ್ಚಿತವಾಗಿ ತಿಳಿದಿಲ್ಲ. ಇತರ ಪರ್ಶಿಯನ್ ಲೋಹದ ವಸ್ತುಗಳಂತೆ ಈ ಮಾದರಿಯೂ ಕೂಡ ವೈದೃಶ್ಯದಿಂದ ಹೊಳಪನ್ನು ದೃಢಪಡಿಸುವಮಿಶ್ರಣಗಳನ್ನು ಪ್ರಯೋಗಿಸುತ್ತಿರುವಾಗ ವಿಕಸನ ಹೊಂದಿದೆಯೆಂದು ಊಹಿಸಬಹುದು. ಫಲಸ್ವರೂಪದ ಧಾತುವು ಸತು ಮತ್ತು ತಾಮ್ರ ಮತ್ತಿತರ ಲೋಹಗಳ ಮಿಶ್ರಣದಿಂದ ಸಿದ್ಧವಾಗುತ್ತದೆ. ಈ ರೀತಿಯಲ್ಲಿ ಸಿದ್ಧವಾದ ಮಿಶ್ರಣವು ಗಟ್ಟಿಯಾಗಿರುವುದಲ್ಲದೇ ತುಕ್ಕು ಹಿಡಿಯುವುದಾಗಲಿ ಕಿಲುಬು ಹಿಡಿಯುವುದಾಗಲಿ ಆಗುವುದಿಲ್ಲ. ಜೊತೆಗೆ ಬೇಕಾದಷ್ಟು ನಯವಾಗಿಸಲು ಅನುಕೂಲಿಸುತ್ತದೆ. ಬಿದ್ರಿ

ಕೆಲಸವನ್ನು ಸುಮಾರು ೧೦ಹಂತಗಳಲ್ಲಿ ಮಾಡುತ್ತಾರೆ. ೧ ರಿಂದ ೧೭ ಕೆಲಸಗಾರರು ಅಥವಾ ಕಾರಿಗಾರರ ಅವಶ್ಯಕತೆಯಿದೆ. ಇವುಗಳಲ್ಲಿ ಮಹತ್ವದ ಹಂತಗಳೆಂದರೆ ಎರಕ ಹೊಯ್ಯುವುದು, ನಯಗೊಳಿಸುವುದು ವಿನ್ಯಾಸಗೊಳಿಸುವುದು, ನಕ್ಷೆಕೊರೆಯುವುದು, ಹುದಗಿಸುವುದು ಮತ್ತು ಶಾಶ್ವತ ರಂಗೇರಿಸುವುದು. ಇಲ್ಲಿ ಶ್ರಮದ ವಿಭಜನೆಯುಂಟು. ಒಬ್ಬನೇ ಕುಶಲಕರ್ಮಿಯು ಸಂಪೂರ್ಣ ವಸ್ತುವನ್ನು ಸಿದ್ಧಪಡಿಸುವುದಿಲ್ಲ. ಮೊದಲಿಗೆ ತುಣುಕುಗಳ ವ್ಯವಸ್ಥೆಯ ಬದಲಿಗೆ ಉತ್ಪಾದಿಸುವಾಗ ಅವುಗಳನ್ನು ಜೋಡಿಸುವ ವಿಧಾನವನ್ನು ಅನುಸರಿಸಲಾಗುತ್ತದೆ. ಪ್ರತಿಯೊಂದು ಬಿದ್ರಿ ವಸ್ತುವೂ ಹಲವು ಹಂತಗಳ ಸಂಕೀರ್ಣ ಪ್ರಕ್ರಿಯೆಗಳಿಗೊಳಗಾಗಿ ರೂಪಗೊಂಡಿರಬೇಕಾಗುತ್ತದೆ. ಎರಕ ಹೊಯ್ಯುವುದು, ನುಣುಪುಗೊಳಿಸುವುದು, ವಿನ್ಯಾಸಗಳನ್ನು ಕೊರೆಯುವುದು, ಬೆಳ್ಳಿ–ಬಂಗಾರಗಳನ್ನು ಇನ್‌ಲೇ ಮಾಡುವುದು, ಮಿಶ್ರಣವನ್ನು ಕಪ್ಪಾಗಿಸುವುದು ಮುಂತಾದ ಹಂತಗಳನ್ನು ದಾಟಿ ಮಾರುಕಟ್ಟೆಗೆ ಬರಬೇಕಾಗುತ್ತದೆ. ಸಂಪೂರ್ಣ ಪ್ರಕ್ರಿಯೆಯೂ ಶ್ರಮದಾಯಕವಾಗಿರುವುದಲ್ಲದೇ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ.

ಇದು ಕಲೆ ಮತ್ತು ಕುಶಲತೆಗಳನ್ನು ಮೇಳೈಸಿದ ಭಾರತೀಯ ಸಂಪ್ರದಾಯಕ್ಕೆ ದ್ಯೋತಕ. ಇಲ್ಲಿ ಕುಶಲಕರ್ಮಿಯು ವಸ್ತುಗಳ ನಿರ್ಮಾಣಕ್ಕೆ ಬಳಸುವ ಉಪಕರಣಗಳು ಸಾಮಾನ್ಯವಾದವುಗಳು. ತಯಾರಿಕೆಯ ಕೇಂದ್ರವೆಂದರೆ ಮನೆ. ಪ್ರತಿಯೊಂದು ಹಂತದಲ್ಲಿ ಕಾಣುವುದು ಕೈಕಸಬು. ಬಿದ್ರಿ ಕಲೆಯಲ್ಲಿ ನಿರತನಾದ ಕಸಬುಗಾರನ ಜೀವನ ಕಷ್ಟಕರವಾದುದು. ಸೂಕ್ಷ್ಮವಾದ ಕುಸುರಿ ಕೆಲಸದಲ್ಲಿ ಲೆಕ್ಕವಿಲ್ಲದಷ್ಟು ಸಮಯವನ್ನು ಕಳೆಯುವ ಕಾರಣದಿಂದ ಅನೇಕರು ತಮ್ಮ ಕಣ್ಣುಗಳ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನೋಡುಗರ ಕಣ್ಣು ತಣಿಸುವ ಕುಶಲಕರ್ಮಿಗಳ ಕಣ್ಣಿಗೆ ಸುಣ್ಣ ಬಿದ್ದಿರುವುದು ದಿಟ.

ಬಿದ್ರಿ ಕಲೆಯ ಸಿದ್ಧತಾ ಹಂತಗಳು

೧. ಆಕೃತಿಯ ರೂಪ (ಮೌಲ್ಡಿಂಗ್)

ಬಿದ್ರಿಯ ತಯಾರಿಕೆಯ ವಿಧಾನವು ಸಾಕಷ್ಟು ವಿಸ್ತಾರವಾಗಿದೆ. ಅದು ಶ್ರಮ ವಿಭಜನೆಯನ್ನು ಅಪೇಕ್ಷಿಸುತ್ತದೆ. ಮೊದಲನೆಯ ಹಂತದಲ್ಲಿ ಮಣ್ಣು ಮತ್ತು ಸೆಗಣಿಯ ಹದವಾದ ಮಿಶ್ರಣವನ್ನು ತಯಾರಿಸಲಾಗುತ್ತದೆ. ಈ ಮಿಶ್ರಣವನ್ನು ಲೇತ್‌ನಲ್ಲಿಟ್ಟು ಬೇಕಾದ ಆಕಾರವನ್ನು ಕೊಡಲಾಗುತ್ತದೆ. ಅದು ಪೂರ್ಣವಾಗಿ ಒಣಗಿದ ಮೇಲೆ ಅದರ ಮೇಲೆ ಮೇಣವನ್ನು ಲೇಪಿಸಿ ಮತ್ತು ಲೇತ್‌ನಲ್ಲಿಟ್ಟು ತಿರುಗಿಸಲಾಗುತ್ತದೆ. ಈ ಪ್ರಕ್ರಿಯೆಯಿಂದ ವಸ್ತುವಿನ ಮೇಲ್ಮೈ ನುಣುಪಾಗುತ್ತದೆ. ಆಗ ಮತ್ತೊಮ್ಮೆ ಮಣ್ಣನ್ನು ಲೇಪಿಸಿ ಒಣಗಿಸಲಾಗುತ್ತದೆ. ನಂತರ ಆ ಆಕೃತಿಗೆ ಎರಡು ತೂತುಗಳನ್ನು ಕೊರೆದುಸಣ್ಣ ಬೆಂಕಿಯಲ್ಲಿರಿಸಲಾಗುತ್ತದೆ. ಹೀಗೆ ಬೆಂಕಿಯ ಮೇಲಿಟ್ಟಾಗ ಒಳಗಿನ ಮೇಣವು ನಿಧಾನವಾಗಿ ಕರಗಿ ರಂಧ್ರಗಳ ಮೂಲಕ ಹೊರಬರುತ್ತದೆ. ಇದರಿಂದ ಆಕೃತಿಯ ಒಳಭಾಗವು ಟೊಳ್ಳಾಗಿ ಲೋಹದ

ಮಿಶ್ರಣವನ್ನು ಹೊಯ್ಯುವುದಕ್ಕೆ ಸ್ಥಳಾವಕಾಶವುಂಟಾಗುತ್ತದೆ. ಮಿಶ್ರಣವನ್ನು ತಾಮ್ರ ಮತ್ತು ಸತುವಿನಿಂದ ಸಿದ್ಧಪಡಿಸಲಾಗಿರುತ್ತದೆ. ಸಾಮಾನ್ಯವಾಗಿ ತಾಮ್ರದ ನಾಲ್ಕುಪಟ್ಟು ಸತುವಿರುತ್ತದೆ.

ಡಾ. ಹೇಯ್ನ ಅವರ ಪ್ರಕಾರ ೧೬ಔನ್ಸ ತಾಮ್ರ, ೪ ಔನ್ಸ ಸೀಸ ಮತ್ತು ೨ ಔನ್ಸ ತವರಗಳನ್ನು ಒಟ್ಟಿಗೆ ಕರಗಿಸಲಾಗುತ್ತದೆ. ಅನಂತರ ಪ್ರತಿಸಲ ೩ ಔನ್ಸ ಮಿಶ್ರಣಕ್ಕೆ ೧೬ ಔನ್ಸ ಸತುವನ್ನು ಸೇರಿಸಿ ಒಟ್ಟಿಗೆ ಕರಗಿಸಲಾಗುತ್ತದೆ. ನಂತರ ಸೀಸದ ಬಳಕೆಯನ್ನು ತರುವುದಕ್ಕಾಗಿ ಕಬ್ಬಣದ ಪುಡಿಯನ್ನು ಸೇರಿಸುತ್ತಾರೆ. ನಂತರ ಸೀಸದ ಬಳಕೆಯನ್ನು ಬಿಡಲಾಯಿತು. ಲಕ್ನೋದಲ್ಲಿ ಬಿದ್ರಿ ವಸ್ತುವಿನ ಬಾಳಿಕೆಗಾಗಿ ಕಬ್ಬಿಣದ ಪುಡಿಯನ್ನು ಸೇರಿಸುತ್ತಾರೆ. ಅತ್ಯಂತ ಅವಶ್ಯಕಗಳಾದ ಸತು ಮತ್ತು ತಾಮ್ರಗಳನ್ನು ಮಿಶ್ರಣ ಮಾಡಲು ಎರಡು ಮಣ್ಣಿನ ಮೂಸೆಗಳನ್ನು ಬಳಸಲಾಗುತ್ತದೆ. ಒಂದು ದೊಡ್ಡದು, ಇನ್ನೊಂದು ಸಣ್ಣದು. ದೊಡ್ಡ ಮೂಸೆಯಲ್ಲಿ ಸತುವನ್ನು ಹಾಕಲಾಗುತ್ತದೆ. ಮೂಸೆಗಳು ಬೆಂಕಿಗೆ ಬಿರಿಯದಿರುವುದಕ್ಕಾಗಿ ಒಳಗೆ ಮತ್ತು ಹೊರಗೆ ಸಗಣಿಯ ಲೇಪನವನ್ನು ಮಾಡಲಾಗುತ್ತದೆ. ಎರಡೂ ಲೋಹಗಳು ಚೆನ್ನಾಗಿ ಕರಗಿದ ಮೇಲೆ ಕರಗಿಸಿದ ತಾಮ್ರವನ್ನು ಸತುವಿನ ಮೂಸೆಯಲ್ಲಿ ಸುರಿಯಲಾಗುತ್ತದೆ. ಅನಂತರ ಮತ್ತೆ ಅವುಗಳನ್ನು ಸ್ವಲ್ಪ ದೊಡ್ಡ ಬೆಂಕಿಯ ಮೇಲಿಟ್ಟು ಕರಗಿಸಲಾಗುತ್ತದೆ. ಸಣ್ಣ ಹೊಂದದಲ್ಲಿ ಬೆರಣಿಯನ್ನಿಟ್ಟು ಬೆಂಕಿಯನ್ನಿಟ್ಟ ಮೂಸೆಗಳನ್ನು ಹೊಂಡದಲ್ಲಿಡಲಾಗುತ್ತದೆ. ಉರಿಯನ್ನು ಹೆಚ್ಚಿಸಲು ಜೋಡಿ ತಿದಿಗಳನ್ನು ಅಥವಾ ಬಿದಿರು ಕೊಳವೆಗಳನ್ನು ಬಳಸುತ್ತಾರೆ. ಕೆಲವೊಮ್ಮೆ ಪುಡಿಯಾಗುವುದನ್ನು ನಿವಾರಿಸಲು ಜೇನುಮೇಣ ಅಥವಾ ರಾಳವನ್ನು ಮೂಸೆಗೆ ಎಸೆಯಲಾಗುತ್ತದೆ. ಅನಂತರ ಈ ಮಿಶ್ರಣವನ್ನು ಮೌಲ್ಡಿಂಗ್ ರಂಧ್ರದ ಮೂಲಕ ತುಂಬಿ ಒಣಗಿಸಲಾಗುತ್ತದೆ. ಅನಂತರ ಮೌಲ್ಡಿಂಗ್‌ನ್ನು ಒಡೆದಾಗ ಕಲಾಕೃತಿಯ ಕಚ್ಚಾರೂಪವು ಸಿಗುತ್ತದೆ. ನೀರಸ ಮತ್ತು ಜಡವಾಗಿ ಕಾಣುವ ಆ ವಸ್ತುವನ್ನು ಮತ್ತೆ ಲೇತ್‌ಗೆ ಕೊಟ್ಟು ತಿರುಗಿಸಿ ಅದರ ಮೇಲ್ಮೈಯನ್ನು ನುಣುಪಾಗಿಸುತ್ತಾರೆ.[೪]

೨. ಎರಕ ಹೊಯ್ಯುವುದು

ಕೆಂಪು ಮಣ್ಣಿನಿಂದ ತಯಾರಿಸಿದ ಮೌಲ್ಡಿಂಗನಲ್ಲಿ ತಾಮ್ರ ಮತ್ತು ಸತು (೧:೧೬)ಗಳನ್ನು ಕರಗಿಸಿದ ದ್ರಾವಣವನ್ನು ಮೊದಲು ಎರಕ ಹೊಯ್ಯಲಾಗುತ್ತದೆ. ಅನಂತರ ಈ ರೀತಿಯ ಎರಕದಿಂದ ಸಿದ್ಧವಾದ ವಸ್ತುವನ್ನು ಫೈಲಿಂಗ್ ಮಾಡಿ ಮರಳು ಕಾಗದದಿಂದ ಉಜ್ಜಿ ನಯಗೊಳಿಸಲಾಗುತ್ತದೆ. ಅನಂತರ ಅದು ಕಪ್ಪಾಗಿ ಕಾಣುವುದಕ್ಕಾಗಿ ತಾಮ್ರದ ಸತುವಿನ ದ್ರಾವಣವನ್ನು ಲೇಪಿಸಲಾಗುತ್ತದೆ.

೩. ಚಿತ್ತಾರ ಕೆತ್ತುವುದು

ಮೊದಲು ಆಯ್ದ ವಿನ್ಯಾಸಗಳನ್ನು ಪಾತ್ರೆಯ ಮೇಲೆ ಗುರುತಿಸಲಾಗುತ್ತದೆ. ಅನಂತರ ಕಲಂನಿಂದ ಕೊರೆಯಲಾಗುತ್ತದೆ. ಅದರ ಆಳದಲ್ಲಿ ವ್ಯತ್ಯಾಸವಿರುತ್ತದೆ. ವಿನ್ಯಾಸಗಳನ್ನು ಸ್ವೇಚ್ಛೆಯಿಂದರಚಿಸುವ ಕಾರ್ಯವನ್ನು ಮಾಸ್ಟರ್ ಅಥವಾ ಪ್ರಮುಖ ಕುಶಲಕರ್ಮಿಯು ನಿರ್ವಹಿಸುತ್ತಾನೆ. ಕಲಂಗಳ ಗಾತ್ರ ಮತ್ತು ದಪ್ಪದಲ್ಲಿ ವ್ಯತ್ಯಾಸವಿರುತ್ತದೆ. ಉದ್ದೇಶಕ್ಕೆ ತಕ್ಕಂತೆ ಅವು

ವ್ಯತ್ಯಾಸ ಹೊಂದುತ್ತದೆ. ಮಾದರಿಯು ಸರಳವಾದ್ದೋ, ಸಂಕೀರ್ಣವಾದದ್ದೋ ಇರಬಹುದು. ಇದನ್ನು ಕೆತ್ತುವ ಕುಶಲಕರ್ಮಿಗಳು ತುಂಬ ನುರಿತವರಾಗಿರಬೇಕು. ಅವರು ಬರಿಗೈಯಲ್ಲಿ ರಚಿಸಿದ ವಿನ್ಯಾಸಗಳು ಅಚ್ಚೊತ್ತಿದಂತಿರುತ್ತವೆ. ಅವರು ಸೂಕ್ಷ್ಮವಾದ ಬೇರೆ ಬೇರೆ ತೆರನಾದ ಉಳಿಗಳು ಹಾಗೂ ಸುತ್ತಿಗೆ (ಹತೋಡಾ)ಯ ಸಹಾಯದಿಂದ ಕೆತ್ತಿ ತೆಗೆಯುತ್ತಾರೆ. ಈ ವಿನ್ಯಾಸಗಳು ಪೂರ್ತಿಗೊಂಡ ಮೇಲ್ಮೈ ಒರಟಾಗಿ ಹಾಗೂ ಕಚ್ಚುಗಳಿಂದ ಕೂಡಿರುವಂತೆ ಕಾಣುತ್ತದೆ. ಅದನ್ನು ಇನ್ನೊಂದು ಹರಿತವಾದ ಉಳಿಯ ಸಹಾಯದಿಂದ ನಯಗೊಳಿಸಲಾಗುತ್ತದೆ.

೪. ಹುದುಗಿಸುವಿಕೆ

ಚಿತ್ತಾರದ ಕೆತ್ತನೆಯ ಕೆಲಸವು ಮುಗಿದ ಮೇಲೆ ಕೆತ್ತಿದ ಸ್ಥಳದಲ್ಲೆಲ್ಲ ಬೆಳ್ಳಿ ಅಥವಾ ಬಂಗಾರದ ತಂತಿ (ವಯರ್)ಗಳನ್ನು ಅಥವಾ ತಗಡು (ಶೀಟ್)ಗಳನ್ನು ಹುದುಗಿಸಲಾಗುತ್ತದೆ. ಬಂಗಾರದ ಬೆಲೆಯು ಹೆಚ್ಚಿರುವುದರಿಂದ ಅದನ್ನು ಹುದುಗಿಸುವುದು ಕಡಿಮೆ. ಅವರು ಅದನ್ನು ಕಲಮ್ ಮತ್ತು ಹತೋಡಿಗಳ ಸಹಾಯದಿಂದ ಹುದುಗಿಸುತ್ತಾರೆ. ಬೆಳ್ಳಿಯನ್ನು ಬಳಸುವಾಗ ಅದು ೯೯.೯%ರಷ್ಟು ಶುದ್ಧವಾಗಿರಬೇಕು. ಏಕೆಂದರೆ ವಿನ್ಯಾಸಕ್ಕೆ ತಕ್ಕಂತೆ ಬಗ್ಗಿಸಲು ಅದು ಮೆದುವಾಗಿರಬೇಕು ಶುದ್ಧವಾದ ಬೆಳ್ಳಿಯಲ್ಲವಾದರೆ ಅದು ಗಟ್ಟಿಯಾಗಿರುವುದರಿಂದ ಬೇಕಾದ ಆಕಾರಕ್ಕೆ ತಿರುಗಿಸಿಕೊಳ್ಳುವುದು ಮತ್ತು ಹುದುಗಿಸುವಿಕೆಯು ಕಷ್ಟಕರವಾಗುತ್ತದೆ. ವಿನ್ಯಾಸಕ್ಕೆ ತಕ್ಕಂತೆ ಬೆಳ್ಳಿಯ ತಂತಿಗಳ ದಪ್ಪದಲ್ಲಿ ವ್ಯತ್ಯಾಸವಿರುತ್ತದೆ. ಪಾತ್ರೆಯ ಮೇಲೆಲ್ಲ ಹರಡಿಕೊಂಡ ನಂತರದಲ್ಲಿ ಬೆಳ್ಳಿ ಅಥವಾ ಬಂಗಾರದ ತಂತಿಯನ್ನು ಹತೋಡಾದಿಂದ ಅದು ಚಪ್ಪಟೆಯಾಗುವವರೆಗೆ ಹೊಡೆದು ಕೂಡಿಸಬೇಕಾಗುತ್ತದೆ. ಎಲೆ ಅಥವಾ ಚೌಕವನ್ನು ಹುದುಗಿಸುವುದಿದ್ದರೆ ವಿನ್ಯಾಸದ ಪ್ರತಿಕೃತಿಯನ್ನು ಕಾಗದದ ಮೇಲೆ ಮೂಡಿಸಿಕೊಂಡು ಬೆಳ್ಳಿಯನ್ನು ಅದೇ ರೀತಿಯಲ್ಲಿ ಕತ್ತರಿಸಿಕೊಳ್ಳುತ್ತಾರೆ. ಅನಂತರ ಆ ಬೆಳ್ಳಿಯ ಎಲೆಯನ್ನು ಮೆಲ್ಲಗೆ ಎತ್ತಿ ಖಾಲಿಯಿರುವ ಜಾಗದಲ್ಲಿ ತುಂಬುತ್ತಾರೆ. ಇದನ್ನು ತಗಡಿನ ಕೆಲಸವೆಂದು ಕರೆಯುತ್ತಾರೆ. ಈ ಕೆಲಸವನ್ನು ಸಾಮಾನ್ಯವಾಗಿ ತರಬೇತಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಅಥವಾ ಕೆಲಸಗಾರರು ಮಾಡುತ್ತಾರೆ.

ಹೊಸದಾಗಿ ಎರಕಹೊಯ್ದ ವಸ್ತುವು ಒರಟಾಗಿರುತ್ತದೆ. ಅದನ್ನು ಮರಳುಕಾಗದ ಮತ್ತು ಫೈಲುಗಳಿಂದ ನುಣುಪುಗೊಳಿಸಬೇಕಾಗುತ್ತದೆ. ಮೊದಲಿಗೆ ಇದನ್ನು ಕೈಗಳಿಂದಲೇ ಮಾಡುತ್ತಿದ್ದರಿಂದ ಅದಕ್ಕೆ ಸಾಕಷ್ಟು ಸಮಯವು ಬೇಕಾಗುತ್ತಿತ್ತು. ತುಂಬ ಕಠಿಣವಾದ ಕಾರ್ಯವೂ ಆಗಿತ್ತು. ಈಗ ನುಣುಪುಗೊಳಿಸಲು ಯಂತ್ರಗಳನ್ನು ಬಳಸುತ್ತಾರೆ. ನುಣುಪುಗೊಳಿಸುವ ಕೆಲಸವು ಅತ್ಯಂತ ಎಚ್ಚರದಿಂದ ಮಾಡಬೇಕಾದುದು. ಸಣ್ಣ–ದಪ್ಪವಾದರೂ ವಸ್ತುವಿಗೆ ಹಾನಿಯೊದಗಿ ಬೆಳ್ಳಿಯು ವ್ಯರ್ಥವಾಗಿ ಬಿಡುತ್ತದೆ. ಸಾಮಾನ್ಯವಾಗಿ ಪ್ರಮುಖ ಕುಶಲಕರ್ಮಿ ಅಥವಾ ಉಸ್ತಾದನೇ ಈ ಕೆಲಸವನ್ನು ಮಾಡುತ್ತಾನೆ.

೫. ರಂಗೇರಿಸುವಿಕೆ

ಕೊನೆಯದಾಗಿ ವಸ್ತುವಿಗೆ ಬಣ್ಣಕೊಡುವ ಪ್ರಕ್ರಿಯೆ ನಡೆಯುತ್ತದೆ. ವಸ್ತುಗಳನ್ನು ಸ್ವಲ್ಪಕಾಯಿಸಿ, ಅಮೋನಿಯಂ ಕ್ಲೋರೈಡ್ (ನವಸಾಗರ), ಕಾಪರ್ ಸಲ್ಫೇಟ್ (ಮೈಲುತುತ್ತ), ಪೋಟ್ಯಾಶಿಯಂನೈಟ್ರೇಟ್ ಮತ್ತು ಬಿದರ ಕೋಟೆಯ ಬಳಿಯಲ್ಲಿ ಸಿಗುವ ವಿಶಿಷ್ಟವಾದ ಮಣ್ಣನ್ನು ತೆಗೆದುಕೊಳ್ಳುತ್ತಾರೆ. ಈ ಮಣ್ಣು ಸುಮಾರು ೩೦೦ವರ್ಷಗಳಿಂದ ಕೋಟೆಯ ಕಟ್ಟಡಗಳಲ್ಲಿದ್ದು ಬಿಸಿಲು, ಮಳೆಗಳ ಸ್ಪರ್ಶದಿಂದ ರಕ್ಷಿತಗೊಂಡಿದೆ. ಇದು ಅತ್ಯಂತ ವಿಶಿಷ್ಟವಾದ ಕೆಂಪು ಮಣ್ಣಾಗಿದ್ದು ಬಿದ್ರಿ ವಸ್ತುಗಳಿಗೆ ಶಾಶ್ವತವಾದ ಕಪ್ಪುಬಣ್ಣವನ್ನು ತಂದುಕೊಡುತ್ತದೆ. ಈ ಮಣ್ಣೇ ಈ ಕಲೆಯು ಇಲ್ಲಿ ನೆಲೆಯೂರಲು ಕಾರಣವಾಗಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಆ ಮಣ್ಣು ಪಾತ್ರೆಯ ಮೇಲ್ಮೈಗೆ ಕಪ್ಪು ಬಣ್ಣವನ್ನು ತಂದುಕೊಟ್ಟು ಹೊಳೆಯುವ ಬೆಳ್ಳಿಯೊಂದಿಗೆ ವೈದೃಶ್ಯವನ್ನು ಕಲ್ಪಿಸಿ ಅದನ್ನು ಅತ್ಯಂತ ವಿಶಿಷ್ಟವಾದ ಲೋಹದ ಕೃತಿಯನ್ನಾಗಿಸುತ್ತದೆ. ಈ ವೈದೃಶ್ಯವು ಬಿದ್ರಿ ಕಲೆಗೆ ವಿಶಿಷ್ಟವಾಗಿದ್ದು ಇನ್ನಾವ ಲೋಹಕಲೆಯಲ್ಲೂ ಕಂಡುಬರುವುದಿಲ್ಲ. ಅದಕ್ಕೆ ಎಣ್ಣೆಯನ್ನು ಲೇಪಿಸಿ ಉಜ್ಜಿದಾಗ ವಸ್ತುವು ಕಪ್ಪು ಬಣ್ಣಕ್ಕೆ ಹೊಳಹು ಬರುತ್ತದೆ.

೬. ಕಪ್ಪುಗೊಳಿಸುವುದು

ಮುಂದಿನ ಪ್ರಕ್ರಿಯೆ ಕಪ್ಪು ಬಣ್ಣವನ್ನು ಶಾಶ್ವತಗೊಳಿಸುವುದು. ಅದರಿಂದ ಇನ್‌ಲೇ ಕೆಲಸಕ್ಕೆ ಧಕ್ಕೆಯೊದಗುವುದಿಲ್ಲ. ಆದರೆ ಕಪ್ಪುಬಣ್ಣದ ಹಿನ್ನೆಲೆಯಲ್ಲಿ ಅವು ಮತ್ತಿಷ್ಟು ಎದ್ದು ಕಾಣುವಂತೆ ಮಾಡುತ್ತವೆ. ಮೇಲ್ಮೈಗೆ ಕಪ್ಪ ಬಣ್ಣವನ್ನು ನೀಡಲು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಲಾಗುತ್ತದೆ. ಬೀದರಿನಲ್ಲಿ ನವಸಾಗರ ಮತ್ತು ಸಾಲ್ಟಪೇಟರ್ (ಪೋಟ್ಯಾಶಿಯಂ ನೈಟ್ರಟ್)ಗಳನ್ನು ಬಳಸುತ್ತಾರೆ. ಕಪ್ಪಾದ ಲೇಪನವನ್ನು ಕುದಿಸಿ ವಸ್ತುವಿಗೆ ಲೇಪಿಸುತ್ತಾರೆ. ಆ ಮಿಶ್ರಣವನ್ನು ಪಾತ್ರೆಗೆ ದಪ್ಪಗೆ ಬಳಿದು ಒಣಗಲು ಬಿಡುತ್ತಾರೆ. ಅನಂತರ ನೀರು ಮತ್ತು ಕಡಲೆಕಾಯಿ ಅಥವಾ ಕೊಬ್ಬರಿ ಎಣ್ಣೆಯಿಂದ ಸ್ವಚ್ಛಗೊಳಿಸುತ್ತಾರೆ.

ಹೀಗೆ ಮೇಲೆ ತಿಳಿಸಿದ ವಿಧಾನಗಳು ವೈಜ್ಞಾನಿಕ ವಿಧಿ ವಿಧಾನಗಳನ್ನು ಅವಲೋಕಿಸಿದ್ದು, ಪ್ರಸ್ತುತ ಬಿದ್ರಿಕಲೆಯ ಉತ್ಪಾದನಾ ವಿಧಾನಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಬಿದ್ರಿ ಕಲೆ ತಯಾರಿಸುವಿಕೆ

ಬಿದ್ರಿಕಲೆ ತಯಾರಿಸಲು ಹಲವಾರು ಪರಿಕರಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ.

೧. ಲೋಹ ಮಿಶ್ರಣಕ್ಕಾಗಿ ಕುದಿಸುವಿಕೆ (ಕಾಸ್ಟಿಂಗ್)

ಜಿಂಕ್+ಕಾಪರ್ ಇವು ಬಿದ್ರಿ ಕಲೆಗೆ ಬೇಕಾಗುವ ಮೂಲ ಲೋಹಗಳು. ೧ ಕಿ.ಗ್ರಾಂ. ಜಿಂಕ್ (ಸತುವಿಗೆ) ೬೦ ಗ್ರಾಂ ಕಾಪರ್ (ತಾಮ್ರ) ಈ ಪ್ರಮಾಣದಲ್ಲಿ ಎರಡೂ ಲೋಹಗಳನ್ನು ಕರಗಿಸಲು ಮೋಸ ಎಂಬ ವಿಶೇಷ ಮಣ್ಣಿನ ಮಡಕೆಯಲ್ಲಿ ಹಾಕಿ ಕುದಿಸಿದಾಗ ಲೋಹಗಳು ಕರಗಿ ಮಿಶ್ರಣ ಹೊಂದುತ್ತವೆ. ಇದಕ್ಕೆ ಕುದಿಸುವಿಕೆ ಎಂದು ಕರೆಯುವುದು.

೨. ಎರಕ ಹೊಯ್ದು ಆಕೃತಿ ತಯಾರಿಸಿ ನಯಗೊಳಿಸುವಿಕೆ (ಮೌಲ್ಡಿಂಗ್)

ಲೋಹಗಳು ಕರಗಿ ಮಿಶ್ರಣಗೊಂಡ ದ್ರಾವಣವನ್ನು ರಂಗೋಲಿ ರಾಳ (ಜಿಗುಟು ವಸ್ತು) ಹಾಗೂ ಸಂಗ್ ಜೀರಾದಿಂದ ತಯಾರಿಸಿದ ಎರಕದ (ಡ್ರೈ ರೀತಿಯ) ಪಟ್ಟಿಗೆಯಲ್ಲಿ ಹಾಕಲಾಗುತ್ತದೆ. ತಕ್ಷಣ ದ್ರಾವಣ ಗಟ್ಟಿಗೊಂಡು ಎರಕದ ಪೆಟ್ಟಿಗೆ ಆಕೃತಿಯ ರೂಪ ತಾಳುತ್ತದೆ. ಇದಕ್ಕೆ ಮೌಲ್ಡಿಂಗ್ ಮಾಡುವುದು ಎನ್ನುತ್ತಾರೆ.

೩. ಆಕೃತಿ ರೂಪ ತಾಳಿದ ಮೇಲೆ ಫೈಲಿಂಗ್

ಮೌಲ್ಡಿಂಗ್ ಪೆಟ್ಟಿಗೆಯಲ್ಲಿ ಅಚ್ಚಾದ ಆಕೃತಿಗಳು ಅಲ್ಲಲ್ಲಿ ಸ್ವಲ್ಪ ಸ್ವಲ್ಪ ವರಟಾಗಿರುವುದನ್ನು ಸುಣ್ಣಗೆ ಮಾಡುವ ಸಲುವಾಗಿ ಆಕೃತಿಗೆ ತಕ್ಕ ಫೈಲ್‌ಗಳಿಂದ ತಿಕ್ಕಿ ನಯಗೊಳಿಸುತ್ತಾರೆ. ಇದಕ್ಕೆ ಆಕೃತಿ ನಯಗೊಳಿಸುವುದು ಅಥವಾ ಫೈಲಿಂಗ್ ಮಾಡುವುದು ಎನ್ನುತ್ತಾರೆ.

೪. ನಯಗೊಳಿಸುವುದು

ನಯಗೊಂಡ ಆಕೃತಿಯ ಬಿಡಿಭಾಗಗಳನ್ನು ಒಂದುಗೂಡಿಸಬೇಕಾದಲ್ಲಿ ಅಮೋನಿಯಂ ಕ್ಲೋರೈಡ್ (ನವಸಾಗರ) ಹಚ್ಚಿ ಬಿಡಿ ಭಾಗಗಳನ್ನು ಬೆಂಕಿಯ ಮೇಲಿಟ್ಟು ಕಾಯಿಸಿ ಜೋಡುಗಳಲ್ಲಿ ಬೆಸುಗೆ ಹಾಕಬೇಕಾಗುತ್ತದೆ. ಈ ಕಾರ್ಯಕ್ಕೆ ಬೆಸುಗೆ ಹಾಕುವುದು ಇಲ್ಲವೆ ವೆಲ್ಡಿಂಗ್ ಮಾಡುವುದು ಎಂದು ಕರೆಯುತ್ತಾರೆ. ಕೆಲವು ಆಕೃತಿಗಳು ಅಖಂಡವಾಗಿರುತ್ತವೆ. ಅಂಥವುಗಳಿಗೆ ಬೆಸುಗೆ ಅಗತ್ಯವಿಲ್ಲ. ಬೆಸುಗೆಯಾದ ಭಾಗಗಳಲ್ಲಿ ತಕ್ಕ ಫೈಲ್‌ಗಳಿಂದ ತಿಕ್ಕಿ ಆಕೃತಿ ನಯಗೊಳಿಸಲಾಗುತ್ತದೆ.

೫. ಬಫಿಂಗ್

ಫೈಲಿಂಗ್ ಆದ ಮೇಲೆ ಬೇರೆ ಹಂತಕ್ಕೆ ಹೋಗುವ ಮೊದಲು ಈಗಿನ ಕಾಲದಲ್ಲಿ ನುಣುಪಾದ ಮೇಲ್ಮೈಯನ್ನು ತರಲು ಆಕೃತಿಗೆ ಬಫಿಂಗ್ ಮಶೀನ್‌ನಲ್ಲಿ ನುಣುಪು ಮಾಡುತ್ತಾರೆ. ಇದಕ್ಕೆ ಬಫಿಂಗ್ ಎನ್ನುತ್ತಾರೆ.

೬. ತಾತ್ಕಾಲಿಕ ರಂಗೇರಿಸುವಿಕೆ

ಬಫಿಂಗ್ ಆದ ಮೇಲೆ ನಯಗೊಂಡ ಬಿದ್ರಿ ಕಲಾಕೃತಿಯ ಮೇಲೆ ಚಿತ್ತಾರಗಳನ್ನು ಕೆತ್ತಲು ಅನುಕೂಲವಾಗಲೆಂದು ಬೆಳ್ಳಿಯ ಕಲಾಕೃತಿಯ ಮೇಲೆ ನೀಲಾತೋತ (ಕಾಪರ್ ಸಲ್ಫೇಟ್)ವನ್ನು

ಲೇಪಿಸಲಾಗುತ್ತದೆ. ಇದರಿಂದ ಸತು ಮತ್ತು ತಾಮ್ರದ ಲೋಹದಿಂದಾದ ಬೆಳ್ಳಿಯ ಕಲಾಕೃತಿಯು ಕಂದು ಬಣ್ಣಕ್ಕೆ ತಿರುಗುತ್ತದೆ. ಇದು ತಾತ್ಕಾಲಿಕವಾಗಿದ್ದು ಕಲಾಕೃತಿಯ ಅಂತಿಮ ಹಂತದ ತಯಾರಿಕೆಯ ಮೊದಲೇ ತನ್ನ ಬಣ್ಣ ಕಳೆದುಕೊಳ್ಳುತ್ತದೆ.

೭. ಚಿತ್ತಾರ ಕೆತ್ತುವಿಕೆ (ಡಿಸೈನಿಂಗ್)

ಬಣ್ಣಕ್ಕೆ ತಿರುಗಿದ ಮೆಲೆ ವಸ್ತುವಿನ ಪೂರ್ಣಭಾಗದಲ್ಲೆಲ್ಲ ಮೋಮ್ (ಮೇಣ) ತುಂಬುತ್ತಾರೆ. ಕಾರಣ ಕಲೆಯ ಮೇಲೆ ಚಿತ್ತಾರ ಕೆತ್ತುವಾಗ ಒಡೆಯದಿರಲೆಂದು ಜೊತೆಗೆ ಒಂದು ಚಪಾಟೆ ಕಲ್ಲಿನಮೇಲೆ ಮೋಮ ಹಾಕಿ ವಸ್ತುಗಳನ್ನು ಜರುಗಿದಂತೆ ಚಿತ್ರ ಕೆತ್ತುವುದಕ್ಕಾಗಿ ಬಿಗಿಯಾಗಿ ಕೂಡಿಸುತ್ತಾರೆ. ಹೀಗೆ ಕೂಡಿಸಿದ ಕಲಾಕೃತಿಯ ಮೇಲೆ ಕಲಂ (ಕಬ್ಬಣದ ಮೊಳೆ)ದಿಂದ ಅನುಭವೀ ಕಲಾವಿದ ವಿನ್ಯಾಸವನ್ನು ಬರೆಯುತ್ತಾರೆ. ಇದಾದ ಮೇಲೆ ಇನ್ನೊಂದು ಚೂಪಾದ ಕಲಂದಿಂದ ಚಿತ್ತಾರ ಕೆತ್ತಲಾಗುತ್ತದೆ.

೮. ಬೆಳ್ಳಿ-ಬಂಗಾರ ಹುದುಗಿಸುವುದು

ಆಕೃತಿ ಮೇಲೆ ಚಿತ್ತಾರದ ಕೆತ್ತನೆ ಕೆಲಸ ಮುಗಿದ ಮೇಲೆ ಆ ಕೆತ್ತಿದ ಸ್ಥಳದಲ್ಲಿ ೯೯.೯% ಶುಧ್ಧವಾದ ಬೆಳ್ಳಿ ಅಥವಾ ಬಂಗಾರ ಇಲ್ಲವೇ ಅವೆರಡೂ ಕಲಂ ಹಾಗೂ ಹತೋಡಿಗಳ ಸಹಾಯದಿಂದ ಕಲಾವಿದರು ಕೂಡಿಸುವ ದೃಶ್ಯ ಮನಮೋಹಕವಾಗಿರುತ್ತದೆ. ಬಂಗಾರದ ಬೆಲೆ ಹೆಚ್ಚಿರುವುದರಿಂದ ಇಂದು ಬಿದ್ರಿ ಕಲಾಕೃತಿಗಳಲ್ಲಿ ಬಂಗಾರದ ಬಳಕೆ ಕಂಡುಬರುತ್ತಿಲ್ಲ. ಬೆಳ್ಳಿ ಅಥವಾ ಬಂಗಾರವನ್ನು ಹುದುಗಿಸುವಲ್ಲಿ ಎರಡು ವಿಧಗಳಿವೆ.

೧. ವಿನ್ಯಾಸವು ರೇಖೆಯ ರೂಪದಲ್ಲಿ ಕೆತ್ತಿದರೆ ಅದರಲ್ಲಿ ತಾರಿನಂತೆ (ವಯರ್) ಮಾಡಿಟ್ಟುಕೊಂಡು ಬೆಳಿ ಅದಕ್ಕೆ ಬೇಕಾಗುವ ಗಾತ್ರದ ಕಲಂದಿಂದ ಕೂಡಿಸುತ್ತಾರೆ.

೨. ಅಗಲವಾದ ವಿನ್ಯಾಸದ ಚಿತ್ತಾರಗಳನ್ನು ಕೆತ್ತಿದರೆ ಅದರಲ್ಲಿ ತಗಡನ್ನು ರೂಪದ ಬೆಳ್ಳಿ (ಸಿಲ್ವರ್ ಶೀಟ್) ಕೂಡಿಸುತ್ತಾರೆ. ಈ ಎರಡೂ ವಿಧಗಳಲ್ಲಿ ತಾರಿನ ರೂಪದ ಬೆಳ್ಳಿ ಕೂಡಿಸುವುದಕ್ಕಿಂತ ತಗಡಿನ ಬೆಳ್ಳಿ ಕೂಡಿಸುವುದು ಸ್ವಲ್ಪ ಕಷ್ಟ. ಯಾವುದೇ ರೂಪದಲ್ಲಿ ಕೂಡಿಸಿದರೂ ಬೆಳ್ಳಿ ಮಾತ್ರ ಸಂಪೂರ್ಣ ಶುದ್ಧವಾಗಿರುತ್ತದೆ.

ಮೇಲೆ ಹೇಳಿದಂತೆ ಚಿತ್ರ ಕೆತ್ತುವದು, ಬೆಳ್ಳಿ ಕೂಡಿಸುವದು ಮುಗಿದ ನಂತರ ಕಲಾಕೃತಿಯ ಪೂರ್ಣಭಾಗದಲ್ಲಿ ತುಂಬಿದ ಮೇಣ ತೆಗೆಯಲು ಕೃತಿಗೆ ಸ್ವಲ್ಪ ಶಾಖದ ಸ್ಪರ್ಶ ನೀಡುತ್ತಾರೆ. ಆಗ ಮೇಣ ಸರಳವಾಗಿ ಹೊರಬರುತ್ತದೆ.

೯. ಪುನಃ ಫೈಲಿಂಗ್ (ರೀ ಬಫಿಂಗ್)

ಕೆತ್ತಿದ ಚಿತ್ತಾರದಲ್ಲಿ ಬೆಳ್ಳಿ ಅಥವಾ ಬಂಗಾರ ಹುದಗಿಸುವುದರಿಂದ ಕಲಾಕೃತಿಯ ಅಲ್ಲಲ್ಲಿ ಒರಟಾಗಿರುವುದು ಅದನ್ನು ನುಣ್ಣಗೆ ಮಾಡುವ ಸಲುವಾಗಿ ಫೈಲಿಂಗ ಮಾಡುತ್ತಾರೆ. ಆದರೆ ಈ ಫೈಲಿಂಗ್ ಮೊದಲಿನ ಫೈಲಿಂಗ್‌ಗಳಂತಿರದೇ ಸಣ್ಣದಾಗಿರುತ್ತದೆ. ಇದಕ್ಕೆ ರಂದಾ ಎಂದು ಕರೆಯುತ್ತಾರೆ. ಇದನ್ನು ಬಫಿಂಗ್ ಎಂಬ ಯಂತ್ರದ ಸಹಾಯದಿಂದಲೂ ನಯಗೊಳಿಸುತ್ತಾರೆ. ಇದನ್ನು ಫೈಲಿಂಗ್ ರಂದಾ, ಬಫಿಂಗ್ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಫೈಲಿಂಗ್ ಮಾಡುವಾಗ ವಿನ್ಯಾಸದ ಚಿತ್ತಾರದಲ್ಲಿ ಹುದುಗಿಸಲಾದ ಬೆಳ್ಳಿ ಹಾಗೂ ಕಲಾಕೃತಿಗೆ ಯಾವ ಧಕ್ಕೆಯೂ ಆಗುವುದಿಲ್ಲ. ಆದರೆ ನೀಲಾ ತೋತ, ತಾಮ್ರದಿಂದಾದ ತಾತ್ಕಾಲಿಕ ಕಂದು ಬಣ್ಣ ಅಳಿದು ಮೊದಲಿನಂತೆ ಪೂರ್ಣ ಬೆಳ್ಳಿಯದೆಂಬಂತೆ ಆಕೃತಿ ಕಾಣುತ್ತಿರುತ್ತದೆ. ಇದರಲ್ಲಿ ವಿನ್ಯಾಸದ ಚಿತ್ತಾರಗಳನ್ನು ಕೆತ್ತಿ ಬೆಳ್ಳಿಯನ್ನು ಕೂಡಿಸುವುದು ಕೂಡ ಗೊತ್ತಾಗುವುದಿಲ್ಲ. ಆಮೇಲೆ ಆಕೃತಿಗಳನ್ನು ಸೀಮೆ ಎಣ್ಣೆ (ಕೇರೋಸಿನ್)ಯಿಂದತೊಳೆದು ಕಟ್ಟಿಗೆಯ ಬಿಳಿ ಬೂದಿ ಹಚ್ಚಿ, ಉಸುಕಿನ ಕಾಗದ ಮತ್ತು ಬಟ್ಟೆಯಿಂದ ತಯಾರಿಸಿದ ಬ್ರಶ್‌ದಿಂದ ನುಣುಪುಗೊಳಿಸುತ್ತಾರೆ.

೧೦. ಶಾಶ್ವತ ರಂಗೇರಿಸುವಿಕೆ

ಬಿದ್ರಿಕಲೆಯ ತಯಾರಿಕೆಯ ಕೊನೆಯ ಹಂತವೇ ಕಲಾಕೃತಿಗೆ ರಂಗೇರಿಸುವುದಾಗಿದೆ. ಒಂದು ಕಿಲೋಗ್ರಾಂ ಬೀದರ್ ಕೋಟೆಯಲ್ಲಿ ದೊರೆಯುವ ವಿಶಿಷ್ಟ ಬಗೆಯ ಮಣ್ಣನ್ನು ಇಪ್ಪತ್ತು ಗ್ರಾಂ ನವಸಾಗರ (ಅಮೋನಿಯಂ ಕ್ಲೋರೈಡ್) ಅದಕ್ಕೆ ಬೇಕಾಗುವಷ್ಟು ನೀರಿನಲ್ಲಿ ಮಿಶ್ರಣ ಮಾಡಿದ ನಂತರ ಒಂದುಗಲ ಬಾಯಿಯುಳ್ಳ ಕಬ್ಬಿಣದ ಬುಟ್ಟಿಯಲ್ಲಿ ಕುದಿಸುತ್ತಾರೆ. ಹೀಗೆ ಕುದಿಯುತ್ತಿರುವ ಮಣ್ಣಿನಲ್ಲಿ ಕಲೆಗಳು ಹಾಕಿ ಕುದಿಸಿದರೆ ಒಂದೆರಡು ಕ್ಷಣದಲ್ಲಿ ಕಲಾಕೃತಿ ಕಪ್ಪು ಬಣ್ಣ ಪಡೆದುಕೊಳ್ಳುತ್ತವೆ. ಆಗ ಬೆಳ್ಳಿ ಕೂಡಿಸಿದ ಭಾಗ ಮಾತ್ರ ಸ್ಪಷ್ಟವಾಗಿ ಉಳಿದ ಭಾಗವೆಲ್ಲ ಕಪ್ಪಾಗಿ ಕಾಣುತ್ತದೆ. ಇದಕ್ಕೆ ಬಣ್ಣ ಏರಿಸುವುದು ಅಥವಾ ರಂಗೇರಿಸುವುದು ಎನ್ನುತ್ತಾರೆ.

ಈ ರೀತಿಯಲ್ಲಿ ತಯಾರಾದ ಬಿದ್ರಿಕಲೆಗಳು ಹತ್ತು ಹದಿನೈದು ನಿಮಿಷಗಳ ಕಾಲ ಒಣಗಿಸಿ ನೀರಿನಲ್ಲಿ ತೊಳೆದು ಬಟ್ಟೆಯಿಂದ ಸೂಟಿ, ಶೇಂಗಾ ಎಣ್ಣೆ ಇಲ್ಲವೇ ಕೊಬ್ಬರಿ ಎಣ್ಣೆ ಲೇಪಿಸಿ ಬಟ್ಟೆಯಿಂದ ಉಜ್ಜುತ್ತಾರೆ. ಕಾರಣ ಕುದಿಯುವ ಮೇಣದಲ್ಲಿ ಹಾಕಿ ಬೆಳ್ಳಿ ಕೂಡಿಸಿರುವದರಿಂದ ಬೆಳ್ಳಿಯ ಹೊಳಪು ಮಂಕಾಗಿರುವುದನ್ನು ಹೋಗಲಾಡಿಸಿ ಹೊಳುಪಿನಿಂದ ಕಂಗೊಳಿಸುವಂತೆ ಮಾಡುತ್ತಾರೆ.

ಬಿದ್ರಿ ಕಲೆ ಕಪ್ಪುಗೊಳ್ಳುವ ಬಗೆಯನ್ನು ಅತ್ಯಂತ ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಲಾ ನೀಸ್ ಹಾಗೂ ಮಾರ್ಟಿನ್ ಅವರ (ಆಂಗ್ಲ ಭಾಷೆಯ)ವರದಿಯನ್ನು ಪ್ರಸ್ತುತ ಅಧ್ಯಾಯದ ಸ್ಪಷ್ಟ ಅಧ್ಯಯನಕ್ಕೆ ಪೂರಕವಾಗಿ ಕನ್ನಡಕ್ಕೆ ತುರ್ಜಮೆಗೊಳಿಸಿ ದಾಖಲಿಸಲಾಗಿದೆ.

ಪ್ರತಿರೂಪ ಪ್ರಯೋಗಗಳು ಹಾಗೂ ರಾಸಾಯನಿಕ ಆಧಾರ ಕಲ್ಪನೆಗಳು

ಲಾನೀಸ್ ಹಾಗೂ ಮಾರ್ಟಿನ್‌ರು ಕೆಲವು ಪ್ರತಿರೂಪ ಪ್ರಯೋಗಗಳನ್ನು ಮಾಡಿದರು. ಅವರ ಉದ್ದೇಶವು ಕಿಲುಬಿನ ಬಣ್ಣವು ಕಪ್ಪಾಗುವುದಕ್ಕೆ ತಾಮ್ರವು ಕಾರಣವೆಂಬುದನ್ನು ನಿರೂಪಿಸುವುದಾಗಿತ್ತು. ಬಿದ್ರಿ ಧಾತುವನ್ನು ಕಪ್ಪಾಗಿ ಮಾಡುವ ವಿಧಾನದಲ್ಲಿಃ ಮುಖ್ಯವಾದ ಅಂಶಗಳೆಂದರೆ ಪೋಟ್ಯಾಷಿಯಂ ನೈಟ್ರೇಟಿನ ಉಷ್ಣ ದ್ರಾವಣ (ಒಂದು ಭಾಗ) ಕೆಲವೊಮ್ಮೆ ಇದರ ಬದಲಿಗೆ ಮಾತ್ರ-ಮಿಶ್ರಿತ ಮಣ್ಣನ್ನು ಬಳಸುವುದುಂಟು ಮತ್ತು ಅಮೋನಿಯಂ ಕ್ಲೋರೈಡ್ (ನಾಲ್ಕು ಭಾಗ)

ಪ್ರತಿರೂಪ ಪ್ರಯೋಗದಲ್ಲಿ ಸ್ವಚ್ಛ ಹಾಗೂ ಶುದ್ಧವಾದ ಸತುವಿನ ಹಾಳೆಯನ್ನು ಮೇಲಿನ ದ್ರಾವಣದಲ್ಲಿ ಅದ್ದಲಾಯಿತು. ಆಗ ಕಂದು ಬಿಳಿ ಬಣ್ಣದ ಸತುವಿನ ಮಿಶ್ರಣ ಹಾಗೂ ಕ್ಲೋರೈಡ್ ಗಳ ಕಿಲುಬು ಉಂಟಾಯಿತು. ಮೈಲ ತುತ್ತವನ್ನು ಸೇರಿಸಿ ಪ್ರಯೋಗವನ್ನು ಮುಂದುವರೆಸಿದಾಗ ಸಾಕಷ್ಟು ಉತ್ತಮವಾದ ಆದರೆ ತೆಳುವಾದ ಕಪ್ಪು ಕಿಲುಬು ತಕ್ಷಣವೇ ರೂಪುಗೊಂಡಿತ್ತು. ಮತ್ತೆಕೇವಲ ಸತುವಿನ ಮಿಶ್ರಣ ಹಾಗೂ ಕ್ಲೋರೈಡಗಳು ಮಾತ್ರ ಮುಖ್ಯವಾದ ಸ್ಫಟಿಕವನ್ನು ಹೋಲುವಂಥ ಉತ್ಪನ್ನಗಳಾದವು. XRD ವಿಶ್ಲೇಷಣೆಯ ಪ್ರಕಾರ ಸ್ಫಟಿಕೀಯ ಒಳರಚನೆಗಳು ಹೀಗಿವೆ. $Zn_5(OH)_8Cl_{12}H_2O,ZnO$ and Cu_2O ಆದರೆ ಇವು ಯಾವವೂ ಕಿಲುಬಿನ ಕಪ್ಪು ಬಣ್ಣವನ್ನು ಸರಿಯಾಗಿ ವಿರಿಸುವುದಿಲ್ಲ. ಅವು ಅರೂಪವಾಗಿವೆ ಮತ್ತು ತಾಮ್ರವನ್ನು ಒಳಗೊಂಡಿವೆ.

ಇದೇ ರೀತಿಯ ಪ್ರಯೋಗಕ್ಕಾಗಿ ವಿಶೇಷವಾದ ಸತುವಿನ ಮಿಶ್ರಣವನ್ನು ತಯಾರಿಸಲಾಯಿತು. ಅದರಲ್ಲಿ ೨% ತಾಮ್ರವಿತ್ತು. ಈ ಮಿಶ್ರಣವನ್ನು ಪೋಟ್ಯಾಷಿಯಂ ನೈಟ್ರೇಟ್ ಹಾಗೂ ಅಮೋನಿಯಂ ಕ್ಲೋರೈಡಿನ ಉಷ್ಣದ್ರಾವಣದಲ್ಲಿ ಮುಳುಗಿಸಲಾಯಿತು. ಆಗ ಅದು ಒಮ್ಮೆಗೆ ಗಾಢವಾದ ಕಪ್ಪುಬಣ್ಣಕ್ಕೆ ತಿರುಗಿತು; ಕಿಲುಬು ಸಮಪ್ರಮಾಣದಲ್ಲಿದ್ದು ಲೋಹದ ಮೇಲ್ಮೈಗೆ ಅಂಟಿಕೊಳ್ಳುವಂತಿತ್ತು. ಅದು ಸ್ಫಟಿಕೀಯ ಒಳರಚನೆಯನ್ನು ಹೊಂದಿರಲಿಲ್ಲ. ಅದನ್ನು ಸೂಕ್ಷ್ಮ ದರ್ಶಕದಲ್ಲಿ ಚೆನ್ನಾಗಿ ಪರಿಶೀಲಿಸಿದಾಗ ಸುಮಾರು ೧೦ ಯು.ಎಂ. ಕಿಲುಬಿನಲ್ಲಿ ೩% ತಾಮ್ರದ ಬದಲು ೩೦% ತಾಮ್ರವು ಕಂಡು ಬಂದಿತು. ಸತು ಮತ್ತು ಕ್ಲೋರಿನ್‌ಗಳು ಕೂಡ ಇದ್ದುದನ್ನು ಪತ್ತೆ ಮಾಡಲಾಯಿತು.[೫]

ಲಾನೀಸ್ ಹಾಗೂ ಮಾರ್ಟಿನ್ನರು ಬಿದರಿಯಲ್ಲಿನ ಸತುವನ್ನು ಅಮೋನಿಯಂ ಕ್ಲೋರೈಡ್ ಕರಗಿಸುತ್ತದೆ. ಮತ್ತು ಅದರ ಫಲಿತಾಂಶವಾದ ತಾಮ್ರವು ಮೇಲ್ಮೈಯನ್ನು ಶ್ರೀಮಂತಗೊಳಿಸುತ್ತದೆ. ಅಥವಾ ಶ್ರೀಮಂತ ತಾಮ್ರದ ಘನ ರೂಪವು ಪೋಟ್ಯಾಶಿಯಂ ನೈಟ್ರೇಟ್‌ನಿಂದ ಕಿಲುಬುಗಟ್ಟಿಸಿಕೊಂಡು ಕಪ್ಪು ಬಣ್ಣಕ್ಕೆ ತಿರುಗುತ್ತದೆಯಮದು ಪ್ರತಿಪಾದಿಸಿದರು. ಮಣ್ಣಿನ ಬಳಕೆಯು ಅಷ್ಟೊಂದು ಮಹತ್ವದಾಗಿ ಕಾಣುವುದಿಲ್ಲ. ಅದು ಅಲ್ಕಲಿ ನೈಟ್ರೇಟಿನ ಮೂಲವಾಗಿ ಮಾತ್ರ ಕಾರ್ಯವನ್ನು ನಿರ್ವಹಿಸುತ್ತದೆ ಮತ್ತು ಈ ಪ್ರಕ್ರಿಯೆಯಲ್ಲಿ ಉಂಟಾದ ಅನಪೇಕ್ಷಿತ ಝಿಂಕ್ ಕ್ಲೋರೈಡನ್ನು ಹೀರಿಕೊಳ್ಳುವ ಪೋಲ್ಟೀಸಿನ ಕೆಲಸ ಮಾಡುತ್ತದೆ. ದಟ್ಟವಾದ ಕಪ್ಪು ಕಿಲುಬುಗಳನ್ನು

ಝಿಂಕ್‌ನ ಮೇಲೆ ಪದರುಗಟ್ಟಿದ ಬೆಳ್ಳಿಯ ರಾಸಾಯನಿಕ ವಿಘಟನೆಗಳನ್ನು ನಿವಾರಿಸುವ ಗುಣಮಟ್ಟದ ಮಾರ್ಜಕ ತಂತ್ರಗಳ ಬಳಕೆಯಿಂದ ಕುಡಿಸಲು ಸಾಧ್ಯ.

ಇವರ ಸಂಶೋಧನೆಯಿಂದ ತಿಳಿದು ಬರುವುದೇನೆಂದರೆ ಬಿದ್ರಿ ಕಲೆಯ ರಚನೆಯಲ್ಲಿ ಕೋಟೆಯೊಳಗಿನ ಮಣ್ಣಿನ ಪಾತ್ರ ಗೌಣವೆಂಬುದಾಗಿ ಪ್ರತಿಪಾದಿಸುತ್ತಾರೆ. ಆದರೆ ಪ್ರಾಚೀನ ಕಾಲದಿಂದಲೂ ಬಿದ್ರಿಕಲೆಯ ಅಂತಿಮ ಹೊಳಪು ನೀಡಲು ಕೋಟೆಯೊಳಗಿನ ಮಣ್ಣೇ ಕಾರಣ ಎಂದು ನಂಬಿರುವ ಅನಕ್ಷರಸ್ಥ ಕುಶಲಕರ್ಮಿಗಳು ಮೇಲಿನ ವೈಜ್ಞಾನಿಕ ವರದಿಯನ್ನು ಸ್ವೀಕರಿಸಿದರೆ, ಅಪಾರ ಪ್ರಮಾಣದ ಮಣ್ಣಿನ ಅಗೆತದಿಂದ ಕೋಟೆಯ ಗೋಡೆಯ ಕುಸಿತವನ್ನಾದರೂ ತಡೆಗಟ್ಟಬಹುದು. ಕರಕುಶಲ ನಿಗಮಗಳು ಮೇಲ್ಕಾಣಿಸಿದ ವರದಿಯನ್ನು ಪ್ರಭಾವಯುತವಾಗಿ ಕುಶಲಕರ್ಮಿಗಳಿಗೆ ತಿಳಿಸಿ ಮಣ್ಣಿನ ಬಳಕೆಯನ್ನು ಕೈಬಿಟ್ಟು ವೈಜ್ಞಾನಿಕ ಪದ್ಧತಿಯನ್ನು ದುಡಿಸಿಕೊಳ್ಳುವಂತೆ ತಿಳಿಸಿ ಹೇಳುವ ಅಗತ್ಯವಿದೆ.

ಈ ಮೇಲಿನ ರಚನಾ ಹಂತಗಳಿಂದ ಬಿದ್ರಿ ವಸ್ತುವೊಂದನ್ನು ಉತ್ಪಾದಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಿದ್ರಿ ಕಲಾವಿದರು ತಮ್ಮ ಬದುಕಿನ ಅವಿಭಾಜ್ಯ ಕಲೆಯನ್ನಾಗಿ ಸ್ವೀಕರಿಸಿರುವುದು ದಿಟ.

ಅಧ್ಯಾಯ : ನಾಲ್ಕು

ಬಿದ್ರಿ ಕಲೆಯ: ದೃಶ್ಯಾತ್ಮಕ ಅಧ್ಯಯನ

ಕರ್ನಾಟಕದ ಬಿದ್ರಿಕಲೆಗಳ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯ ಇದಾಗಿದೆ. ಕರ್ನಾಟಕದ ಬೀದರನ ಬಿದ್ರಿ ಕಲೆಗಳು ಕೇವಲ ಭಾರತದಲ್ಲಷ್ಟೇ ಅಲ್ಲ ವಿದೇಶದ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಸಾರ್ವಜನಿಕರಿಗಾಗಿ ಪ್ರದರ್ಶನಗೊಂಡಿವೆ. ಹಾಗೆ ಭಾರತ ಮತ್ತು ವಿದೇಶದ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿರುವ ಬಿದ್ರಿಕಲೆಗಳನ್ನು ಸಹ ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸುವ ಹಿನ್ನೆಲೆಯಲ್ಲಿ ಅಂತರಜಾಲದ ತಾಣಗಳನ್ನು ಸಂದರ್ಶಿಸಿ ಆಕರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಅಂತರಜಾಲದ ತಾಣದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಭಾರತದ ವಸ್ತು ಸಂಗ್ರಹಾಲಯಗಳಿಗಿಂತ ವಿದೇಶದ ವಸ್ತು ಸಂಗ್ರಹಾಲಗಳಲ್ಲಿ ಸಾಕಷ್ಟು ಸಂಖ್ಯೆಯ ಬಿದ್ರಿ ಕಲಾವಸ್ತುಗಳು ಲಭ್ಯವಾಗಿವೆ. ಆ ಕಲಾವಸ್ತುಗಳನ್ನು ಅಂತರ್ಜಾಲ ತಾಣಗಳಿಂದ ಇಳಿಸಿಕೊಂಡು ಅಧ್ಯಯನಕ್ಕೆ ದುಡಿಸಿಕೊಂಡಿರುವುದು ಈ ಅಧ್ಯಾಯದ ವಿಶೇಷವಾಗಿದೆ. ಹೀಗಾಗಿ ಪ್ರಥಮ ಹಂತದ ಅಧ್ಯಯನದಲ್ಲಿ ಅಂತರಜಾಲದ ತಾಣಗಳೇ ಅಧ್ಯಯನಕ್ಕೆ ಮುಖ್ಯ ಆಕರಗಳಾಗಿವೆ.

ಆ ನಂತರದಲ್ಲಿ ಬೀದರನಲ್ಲಿ ಪ್ರಸ್ತುತ ಬಿದ್ರಿ ಕಲಾವಿದರ ಬಳಿ ಇರುವ ಪಾರಂಪರಿಕ ಬಿದ್ರಿ ಕಲೆಗಳನ್ನು ಸಹ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತ್ತೀಚೆಗೆ ಆಧುನಿಕ ಬದುಕು ಮತ್ತು ಮನಸುಗಳಿಗೆ ತಕ್ಕಂತೆ ಬಿದ್ರಿ ವಸ್ತುಗಳು ರೂಪಾಂತರಗೊಳ್ಳತ್ತಿದ್ದು ಅವುಗಳನ್ನು ಇಲ್ಲಿ ಛಾಯಾಚಿತ್ರಗಳ ಮೂಲಕ ಸಂಗ್ರಹಿಸಿ ಅಧ್ಯಯನ ಮಾಡುವುದಕ್ಕಿಂತ ಮುನ್ನ ಸೂಕ್ತವಾದ ವರ್ಗೀಕರಣವನ್ನು ಮಾಡಿಕೊಳ್ಳಲಾಗಿದ್ದು ಇದು ಅಧ್ಯಯನಕ್ಕೆ ಸ್ಪಷ್ಟತೆ ಒದಗಿಸುವುದೇ ಆಗಿದೆ.

ಪ್ರಥಮ ಹಂತದಲ್ಲಿ ದೇಶ ಮತ್ತು ವಿದೇಶದ ವಸ್ತು ಸಂಗ್ರಹಾಲಯಗಳಿಂದ ಸಂಗ್ರಹಿಸಿದ ಪ್ರಾಚೀನ ಬಿದ್ರಿಕಲೆಗಳ ಅಧ್ಯಯನವಿದ್ದರೆ, ಎರಡನೆಯ ಹಂತದಲ್ಲಿ ಪ್ರಚಲಿತದಲ್ಲಿ ಉತ್ಪಾದಿಸಲ್ಪಡುವ (ಆಧುನಿಕ ಸಂದರ್ಭದ) ಬಿದ್ರಿಕಲೆಗಳ ಅಧ್ಯಯನವಿರುವ ಹಿನ್ನೆಲೆಯಲ್ಲಿ ಬಿದ್ರಿಕಲೆ ಹೇಗೆ ತನ್ನ ಪಾರಂಪರಿಕ ಸೊಗಡನ್ನು ಕಳೆದುಕೊಳ್ಳುತ್ತಿದೆ ಎಂಬುದನ್ನು ಸೋದಾಹರಣವಾಗಿ ವಿವರಿಸಲಾಗುವುದು.

ಬಿದ್ರಿ ಕಲೆ ವರ್ಗೀಕರಣ

೪.೧. ಪ್ರಾಚೀನ ಬಿದ್ರಿ ಕಲೆಗಳು

೦೧. ಅಲಂಕಾರಿಕ ತಟ್ಟೆಗಳು

೦೨. ಆಯುಧಗಳು

೦೩. ಉಗುಳುವ ಪಾತ್ರೆಗಳು (ಪೀಕದಾನಿ)

೦೪. ಊರುಗೋಲು
೦೫. ಕೈತೊಳೆಯುವ ಪಾತ್ರೆಗಳು
೦೬. ನೆಲಹಾಸು ಭಾರದ ವಸ್ತುಗಳು
೦೭. ಪಾನದಾನಗಳು
೦೮. ಬಟ್ಟಲುಗಳು
೦೯. ಭರಣಿಗಳು
೧೦. ಸುರಾಹಿಗಳು
೧೧. ಹುಕ್ಕಾಗಳು
೧೨. ಹೂಜಿಗಳು
೧೩. ಹೂದಾನಿಗಳು

೫.೨. ಆಧುನಿಕ ಬಿದ್ರಿ ಕಲೆಗಳು

೧. ಅಲಂಕಾರಿಕ ವಸ್ತುಗಳ ಸಮೂಹ
ಅ. ಹೂದಾನಿಗಳು
ಬ. ಪ್ರಾಣಿ, ಪಕ್ಷಿ ವಸ್ತುಗಳು

೨. ಕಛೇರಿ ವಸ್ತುಗಳು
ಅ. ಕಾಗದ ಕತ್ತರಿಸುವ ಚಾಕು
ಬ. ಕಾಗದ ಹಿಡಿ (ಕ್ಲಿಪ್)
ಕ. ಕಾಗದದ ಮೇಲಿಡುವ ಭಾರದ ವಸ್ತು (ಪೇಪರ್ ವೇಟ್)
ಡ. ಲೇಖನಿ ಪೆಟ್ಟಿಗೆ (ಪೆನ್ ಬಾಕ್ಸ್)

೩. ಗೃಹೋಪಯೋಗಿ ವಸ್ತುಗಳು
ಅ. ಆಭರಣ ಪೆಟ್ಟಿಗೆ
ಬ. ಕುಂಕುಮ ಭರಣಿಗಳು
ಕ. ಉಮರ್ ಖಯಾಮ್
ಡ. ಬಟ್ಟಲುಗಳು
ಇ. ಮೇಣಬತ್ತಿ ನಿಲುವು
ಈ. ಪೂಜಾ ಸಾಮಗ್ರಿ

೪. ಪುರುಷರು ಬಳಸುವ ವಸ್ತುಗಳು
ಅ. ಅಂಗಿಯ ಗುಂಡಿಗಳು
ಬ. ಸೊಂಟ ಪಟ್ಟಿಗಳು (ಬೆಲ್ಟ್‌ಗಳು)
ಕ. ಕೀ ನಿಲುವು / ಕೀ ಹಿಡಿಗಳು
ಡ. ಸಿಗರೇಟ್ ಬೂದಿಯ ಪೆಟ್ಟಿಗೆ

೫. ಕ್ರೀಡಾ ಸಾಮಗ್ರಿಗಳು

ಅ. ಚದುರಂಗ ಸಾಮಗ್ರಿ

ಬೀದರಿನ ಬಿದ್ರಿ ಕಲೆಗಳು ಸುಮಾರು ೧೫ನೆಯ ಶತಮಾನದಲ್ಲಿ ಪ್ರಚಲಿತದಲ್ಲಿದ್ದವು ಎಂಬುದಕ್ಕೆ ದೇಶ–ವಿದೇಶಗಳ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿರುವ ಬಿದ್ರಿ ವಸ್ತುಗಳೇ ಸಾಕ್ಷಿ. ಕಳೆದ ೫–೬ಶತಮಾನಗಳ ಅವಧಿಯಲ್ಲಿ ಬಿದ್ರಿ ಕಲೆ ರಾಜಾಶ್ರಯದಿಂದ ಈಗ ಸಾಮಾನ್ಯ ಪ್ರಜೆಗಳ ಆಶ್ರಯದಲ್ಲಿ ಬದುಕುತ್ತಿದೆ. ರಾಜಾಶ್ರಯದ ಅವಧಿಯಲ್ಲಿನ ಬಿದ್ರಿ ಕಲೆಗಳು ಬಹುತೇಕವಾಗಿ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ. ಹೀಗಾಗಿ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾಗಿ ವಸ್ತು ಸಂಗ್ರಹಾಲಯಗಳ ಬಿದ್ರಿ ವಸ್ತುಗಳನ್ನೇ ಮುಖ್ಯ ಆಕರಗಳನ್ನಾಗಿ ಅಧ್ಯಯನಕ್ಕೆ ಬಳಸಿಕೊಂಡಿದ್ದು ಅವುಗಳನ್ನು ಪ್ರಾಚೀನ ನೆಲೆಯಲ್ಲಿ ಇಲ್ಲಿ ಗಮನಿಸಲಾಗಿದೆ.

೫.೧. ಪ್ರಾಚೀನ ಬಿದ್ರಿ ಕಲೆಗಳು

೫.೧.೧. ಅಲಂಕಾರಿಕ ತಟ್ಟೆಗಳು

೧. ತಟ್ಟೆ (೧೭ನೆಯ ಶತಮಾನ) ಅಫ್ತಾಬಿ ತಂತ್ರ

ಹೈದರಾಬಾದಿನ ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ ಈ ತಟ್ಟೆಯಲ್ಲಿ ಪ್ರಾಕೃತಿಕ ವಿನ್ಯಾಸಗಳು ಅಷ್ಟದಳಗಳ ಹೂವಿನ ರೂಪದಲ್ಲಿ ಮೈದಳೆದಿವೆ. ತಟ್ಟೆಯ ಮಧ್ಯಭಾಗದಿಂದ ಅಂಚಿನತ್ತ ವಿಸ್ತೃತಗೊಳ್ಳುವ ಇಲ್ಲಿನ ವಿನ್ಯಾಸಗಳು ಬೆಳ್ಳಿ ಮತ್ತು ಹಿತ್ತಾಳೆಯ ಹಾಳೆಗಳಿಂದ ರಚಿತಗೊಂಡಿವೆ. ಮಧ್ಯದ ವೃತ್ತದಲ್ಲಿ ಮೂರು ಹೂವುಗಳ ವಿನ್ಯಾಸಗಳು ಒಮ್ಮುಖ ದಿಕ್ಕಿನಲ್ಲಿ ರಚನೆಗೊಂಡಿದ್ದು ಹೂವಿನ ಕೇಸರವನ್ನು ಈ ವಿನ್ಯಾಸ ಪ್ರತಿನಿಧಿಸುತ್ತದೆ. ಈ ವೃತ್ತದ ಹೊರಭಾಗದ ವೃತ್ತಾಕಾರದ ಪಟ್ಟಿಕೆಯಲ್ಲಿ ಐದು ದಳಗಳ ಹೂವುಗಳು ಬೆಳ್ಳಿಯ ಹಾಳೆಗಳಲ್ಲಿ ರಚನೆಗೊಂಡಿದ್ದು, ಅವುಗಳಿಗೆ ಪೂರಕವಾಗಿ ತರುಲತೆಗಳು ಸುಂದರವಾಗಿ ಮೂಡಿವೆ. ಈ ವೃತ್ತದ ಸುತ್ತ ತಟ್ಟೆಯ ಪ್ರಮುಖ ಆಶಯವಾದ ಅಷ್ಟದಳದಹೂವಿನಾಕೃತಿ ರಚನೆಗೊಂಡಿದ್ದು, ಹೊರ ಅಂಚಿನಲ್ಲಿ ಮುಸ್ಲಿಂ ವಾಸ್ತು ಶಿಲ್ಪದ ವಿನ್ಯಾಸವನ್ನು ನೆನಪಿಸುವಂತಿದೆ. ಅಷ್ಟ ದಳಗಳ ಒಳವರಣದಲ್ಲಿ ಹೂವಿನ ಗಿಡದ ವಿನ್ಯಾಸ ಏಕರೂಪದಲ್ಲಿ ಎಲ್ಲ ದಳಗಳಲ್ಲಿ ಪುನರಾವರ್ತನೆಗೊಂಡಿವೆ. ಹೊರಭಾಗದಲ್ಲಿ ಅಷ್ಟದಳಗಳೆರಡು ಸಂಧಿಸುವಲ್ಲಿ ಹೂ ಎಲೆಗಳ ವಿನ್ಯಾಸಗಳನ್ನು ಪರಸ್ಪರವಾಗಿ ಏಕರೂಪದಲ್ಲಿ ರಚಿಸಲಾಗಿದೆ. ತಟ್ಟೆಯ ಅಂಚಿನಲ್ಲಿ ಹೂಬಳ್ಳಿಯನ್ನು ಇದರ ಪಕ್ಕದ ಸಾಲಿನಲ್ಲಿ ಇಂಗ್ಲೀಷನ 'V' ಆಕಾರದ ಎಲೆಗಳನ್ನು ಒಂದರ ಕೆಳಗೆ ಒಂದರಂತೆ ಹಿತ್ತಾಳೆ ಹಾಗೂ ಬೆಳ್ಳಿಯ ಹಾಳೆಗಳಿಂದ ರಚಿಸಲಾಗಿದೆ. ಹೂವುಗಳನ್ನು ಬೆಳ್ಳಿಯ ಹಾಳೆಗಳಿಂದ, ಎಲೆಗಳನ್ನು ಹಿತ್ತಾಳೆ ಹಾಳೆಗಳಿಂದ ರಚನೆಗೊಂಡಿರುವುದರಿಂದ ಈ ತಟ್ಟೆಯು ಅಲಂಕಾರದಲ್ಲಿ ವೈಭವೀಕೃತವಾಗಿ ಗೋಚರವಾಗುತ್ತದೆ.

೨. ತಟ್ಟೆ (೧೭ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ

ಹೈದರಾಬಾದಿನ ಸಾಲಾರ್ ಜಂಗ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ತಟ್ಟೆ ಪ್ರಾಕೃತಿಕ ಮತ್ತು ಜ್ಯಾಮಿತಿಕ ಆಶಯಗಳನ್ನು ಹೊಂದಿದೆ. ಹಿಂದಿನ ತಟ್ಟೆಯಲ್ಲಿ ಪ್ರಾಕೃತಿಕ ವಿನ್ಯಾಸಗಳೇ ಪ್ರಮುಖ ಆಶಯವಾಗಿದ್ದರೆ ಈ ತಟ್ಟೆಯ ಮಧ್ಯಭಾಗದಲ್ಲಿ ಒಂದಕ್ಕೊಂದು ಹೆಣೆದುಕೊಂಡ ಹೂವುಗಳ ವಿನ್ಯಾಸ ತಟ್ಟೆಯ ಪುಷ್ಪ ವಿನ್ಯಾಸಕ್ಕೆ ಕೇಸರದ ವಿನ್ಯಾಸವನ್ನು ಪ್ರತಿನಿಧಿಸುತ್ತದೆ. ತ್ರಿಭುಜಾಕೃತಿಯ ಪಟ್ಟಿಕೆಗಳು ಪಕ್ಕಕೋನ ಹಾಗು ಸರ್ಪ ಶೈಲಿಯಲ್ಲಿ ವೃತ್ತಾಕಾರವಾಗಿ ಮೈದೆಳಿವೆ. ಕೋನಗಳೆರಡು ಸಂಧಿಸುವಲ್ಲಿ ಹಿತ್ತಾಳೆ ಹಾಳೆಯ 'V' ಆಕಾರದ ಪರ್ಣಗಳು ರಚನೆಗೊಂಡಿವೆ. ಒಟ್ಟು ನೋಟದಲ್ಲಿ ಈ ತಟ್ಟೆಯ ವಿನ್ಯಾಸವೂ ಚಲನಾತ್ಮಕವಾದ ಅರಳುವಿಕೆಯ ಭ್ರಾಂತಿಯನ್ನುಂಟು ಮಾಡುತ್ತದೆ. ಮಧ್ಯಭಾಗದಲ್ಲಿ ಸೂಕ್ಷ್ಮ ಕುಸುರಿ ಕೆಲಸವಿದ್ದು, ಇನ್ನುಳಿದಂತೆ ದಟ್ಟವಾದ ಕುಸುರಿ ರಚನೆಗೊಂಡಿರುವುದರಿಂದ ಹಿಂದಿನ ಕೃತಿಗಿಂತ ಆಕೃತಿಯಲ್ಲಿ, ತಂತ್ರದಲ್ಲಿ ಈ ತಟ್ಟೆ ತೀರ ಭಿನ್ನ.

೩. ತಟ್ಟೆ (೧೬ನೆಯ ಶತಮಾನ) ಜರ್‌ನಿಶಾನ್ ತಂತ್ರ

ಹೈದರಾಬಾದಿನ ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ, ವರ್ಣನೆಗೆ ನಿಲುಕದ ಅತ್ಯಂತ ಸೂಕ್ಷ್ಮ ಕುಸುರಿ ಕುಶಲತೆಯ ತಟ್ಟೆ ಇದು. ಪ್ರಾಣಿ–ಪಕ್ಷಿ–ತರುಲತೆಗಳ ತಳಕು–ಬಳಕುಗಳ ವಿನ್ಯಾಸವಿದು. ತಟ್ಟೆಯ ಕೇಂದ್ರ ಭಾಗದಿಂದ ಐದು ಹಂತಗಳಲ್ಲಿ, ವೃತ್ತಾಕಾರವಾದ ಪಟ್ಟಿಕೆಗಳಲ್ಲಿ ಮೈದೆಳೆದ ಇಲ್ಲಿನ ವಿನ್ಯಾಸಗಳಲ್ಲಿ ಕಂಡುಬರುವದು ಪ್ರಕೀರ್ಣಕ ಆಕೃತಿಗಳು. ಮಧ್ಯಭಾಗದಲ್ಲಿ ಎಂದಿನಂತೆ ಹೂಬಳ್ಳಿಗಳು, ಇದರ ಸುತ್ತಣದ ವೃತ್ತದಲ್ಲಿ ಮುಸ್ಲಿಂ ವಾಕ್ಯಗಳು ಸಹ ಅಲಂಕಾರಿಕವಾಗಿ ವಿನ್ಯಾಸದಲ್ಲಿ ಒಂದಾಗಿವೆ. ಇದರ ಸುತ್ತಲಿನ ವೃತ್ತದಲ್ಲಿ ಅರ್ಧ ವೃತ್ತಾಕಾರದಲ್ಲಿ ರಚನೆಗೊಂಡ ಬಳ್ಳಿಗಳ ವಿನ್ಯಾಸವು ಹೂವುಗಳ ಸಹಿತವಾಗಿ ಏಕಪ್ರಕಾರವಾಗಿ ರಚನೆಗೊಂಡಿದೆ. ಈ ವೃತ್ತದ ಸುತ್ತಲೂ ಇರುವ ವೃತ್ತದಲ್ಲಿ ತಟ್ಟೆಯ ಅಲಂಕಾರವನ್ನು ವೈಭವೀಕರಿಸುವ ನಿಟ್ಟಿನಲ್ಲಿ ಪರಿಚಿತ ಲೋಕದ ಪ್ರಾಣಿಗಳು, ಪಕ್ಷಿಗಳು, ಸರೀಸೃಪಗಳು ಪ್ರಾಕೃತಿಕ ವಿನ್ಯಾಸದ ಭಾಗವಾಗಿ ಅಲಂಕಾರಿಕ ವಿನ್ಯಾಸಗಳಾಗಿ ಮೈದೆಳೆದಿವೆ. ಜಿಂಕೆಯನ್ನು ಬೆನ್ನಟ್ಟಿರುವ ಹುಲಿ, ಹದ್ದು, ಗಿಳಿ, ನವಿಲು, ಕರುವಿಗೆ ಹಾಲನ್ನು ಕುಡಿಸುತ್ತಿರುವ ಹಸು, ಮೊಲ ಇನ್ನೂ ಮುಂತಾದ ಜೀವಿಗಳುಅಲಂಕಾರಿಕ ಶೈಲಿಯಲ್ಲಿ ಇಲ್ಲಿ ಮೂಡಿವೆ. ಈ ಜೀವಾಕೃತಿಗಳ ಹಿನ್ನೆಲೆಯಲ್ಲಿ ಮಧ್ಯದ ಭಾಗದಿಂದ ಮೂರನೆಯ ವೃತ್ತದಲ್ಲಿರುವ ಲತಾಂತಗಳಂತೆಯೇ ಈ ವೃತ್ತದಲ್ಲಿಯೂ ಸಹ ಮೈದೆಳೆದಿವೆ. ತಟ್ಟೆ ಹೊರ ಅಂಚಿನಲ್ಲಿ ಮೂರನೇ ವೃತ್ತದಲ್ಲಿರುವಂತೆಯೇ ಅರ್ಧ ವರ್ತುಲಾಕಾರದ ಲತಾಂತಗಳು ಮೂಡಿದ್ದು ತಟ್ಟೆಯ ಯಾವೊಂದು ಭಾಗದಲ್ಲಿಯೂ ಕುಸುರಿ ರಹಿತ ಅಂಶ ಒಂದಿನಿತೂ ಕಂಡುಬರುವುದಿಲ್ಲ. ಇಂತಹ ವೈಭವಯುಕ್ತ ವಿನ್ಯಾಸವು ಅಂದಿನ ರಾಜ ಮಹಾರಾಜರುಗಳು ಕಲಾಪ್ರಜ್ಞೆಗೆ ಒಂದು ಉದಾಹರಣೆಯಾದರೆ, ಕುಶಲಕರ್ಮಿಗೆ ರಾಜಾಶ್ರಯ

ಯಾವ ರೀತಿ ಇತ್ತೆಂಬುದನ್ನೂ ಸಹ ಈ ತಟ್ಟೆ ಪ್ರಕಟಿಸುತ್ತದೆ. ಅಪೂರ್ವ ಕುಸುರಿಯನ್ನು ಹೊಂದಿರುವ ಈ ತಟ್ಟೆ ಕುಶಲಕರ್ಮಿಯ ಪ್ರಗಲ್ಭತೆಗೆ ಸಾಕ್ಷಿಯಾಗಿದೆ.

೪. ತಟ್ಟೆ (೧೮ನೆಯ ಶತಮಾನ) ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ತಟ್ಟೆ ಪ್ರಕೀರ್ಣಕ ವಿನ್ಯಾಸವನ್ನು ಹೊಂದಿಲ್ಲ. ತಟ್ಟೆಯ ಮಧ್ಯಭಾಗದಲ್ಲಿ ಮತ್ತು ಅಂಚಿನಲ್ಲಿ ಮಾತ್ರವೇ ಹೂ–ಬಳ್ಳಿಗಳ ವಿನ್ಯಾಸವನ್ನು ಅಲಂಕರಿಸಿಕೊಂಡಿದೆ. ಮಧ್ಯಭಾಗದ ವೃತ್ತದಿಂದ ಆರಂಭವಾಗುವ ಇದರ ವಿನ್ಯಾಸಗಳು ತಟ್ಟೆಯ ಅಂಚಿನಲ್ಲಿ ವಿಸ್ತೃತಗೊಳ್ಳುತ್ತವೆ. ಮಧ್ಯಭಾಗದಲ್ಲಿ ಮಲ್ಲಿಗೆ ಮತ್ತು ಬಟ್ಟಲು ಹೂವಿನಾಕೃತಿಗಳನ್ನು ಬೆಳ್ಳಿಯ ಕಾಗದದಲ್ಲಿ ಮೂಡಿದ್ದು, ಪರ್ಣಗಳು ಹಿತ್ತಾಳೆ ಕಾಗದದಲ್ಲಿ ರಚನೆಗೊಂಡಿವೆ. ಇವುಗಳ ಸುತ್ತಲೂ ಸುಗಂಧೀ ಹೂವನ್ನು ಹೋಲುವ ವಿನ್ಯಾಸಗಳು ಅಂಚಿನ ರೂಪದಲ್ಲಿ ಪ್ರಕಟವಾಗಿವೆ. ಇದರಿಂದ ತಟ್ಟೆಯ ಅಂಚಿನತ್ತ ಹೊರಟ ಬೆಳ್ಳಿ ಮತ್ತು ಹಿತ್ತಾಳೆ ರೇಖೆಗಳು ವಿಸ್ತೃತವಾಗಿ ಸುಗಂಧೀ ಹೂವಿನಂತಹ ವಿನ್ಯಾಸಗಳಗಳು ಪಕ್ಕಕೋನದಲ್ಲಿ ರಚನೆಗೊಂಡು ತಟ್ಟೆಗೆ ವೈಭವೀಕೃತ ಭಾವವನ್ನು ತಂದಿವೆ. ಇವುಗಳ ಸುತ್ತ ಬಿಂದುಗಳಂತಹ ರಚನೆಗಳು, ನಂತರದ ವೃತ್ತದಲ್ಲಿ ಹೂಬಳ್ಳಿಗಳು ತಟ್ಟೆಯ ಅಂಚಿನಲ್ಲಿ ಏಕರೂಪದಲ್ಲಿ ಸುತ್ತುವರಿದಿವೆ.

೫. ತಟ್ಟೆ (೧೮ನೆಯ ಶತಮಾನ) ಜರ್‌ನಿಶಾನ್ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ತಟ್ಟೆ ಪ್ರಕೀರ್ಣಕ ಮತ್ತು ದಟ್ಟ ರಚನೆಗಳ ಸಮ್ಮಿಶ್ರಣದ ವಿನ್ಯಾಸಗಳಿಂದ ಕೂಡಿದುದಾಗಿದೆ. ಮಧ್ಯದಲ್ಲಿ ಸೇವಂತಿಗೆ ಹೂವಿನಂತಹ ವಿನ್ಯಾಸವನ್ನು ಹೊಂದಿದೆ. ಅದರ ಸುತ್ತಲೂ ಇರುವ ವೃತ್ತದಾಚೆ ಪ್ರಕೀರ್ಣಕವೆನ್ನಬಹುದಾದ ಹೂ ಬಳ್ಳಿಗಳ ವಿನ್ಯಾಸಗಳು ರಚನೆಗೊಂಡಿವೆ. ಅವು ಎಡದಿಂದ ಬಲದಿಕ್ಕಿನಲ್ಲಿ ಚಲನಾತ್ಮಕ ರೀತಿಯಲ್ಲಿ ಹಾಗೂ ಏಕರೂಪದಲ್ಲಿ ರಚನೆಗೊಂಡಿವೆ. ಇದರ ಸುತ್ತಲೂ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಅತ್ಯಂತ ಪ್ರಚಲಿತದಲ್ಲಿರುವಂತಹ ಪಟ್ಟಿಕೆಗಳನ್ನೇ ಇಲ್ಲಿ ತಟ್ಟೆಯ ಅಂಚಿನತ್ತ ಮುಖಮಾಡಿ ರಚಿಸಲಾಗಿದೆ. ಅವುಗಳ ಸುತ್ತ ಚಿಕ್ಕ ಹೂವಿನ ಎಸಳುಗಳನ್ನು ನೆನಪಿಸುವ ಬಿಂದುಗಳು ರಚನೆಗೊಂಡಿವೆ.

೬. ತಟ್ಟೆ (೧೯ನೆಯ ಶತಮಾನ) ಅಫ್ತಾಬಿ ತಂತ್ರ

ಬೀದರಿನ ಬಿದ್ರಿ ಕುಶಲಕರ್ಮಿ ಅಬ್ದುಲ್ ಖದೀರ್ ಅವರ ಸಂಗ್ರಹದಲ್ಲಿರುವ ಈ ತಟ್ಟೆ ಹಿಂದಿನ ತಟ್ಟೆಗಳಂತಹ ಪ್ರಕೀರ್ಣಕ ವಿನ್ಯಾಸಗಳನ್ನು ಹೊಂದಿಲ್ಲವೆಂಬುದು ಒಂದಾದರೆ ಇನ್ನೊಂದುಹೊಸ ಬಗೆಯ ರಚನಾ ವಿನ್ಯಾಸ ಕ್ರಮ ಇಲ್ಲಿದೆ. ಮಧ್ಯದಲ್ಲಿ ಬಟ್ಟಲು ಹೂವಿನಂತಹ ವಿನ್ಯಾಸ, ಅದನ್ನು ಬಳಸಿಕೊಂಡು ರಚಿತಗೊಂಡ ಎಲೆಗಳ ವಿನ್ಯಾಸಗಳಿವೆ. ತಟ್ಟೆಯ ಅಂಚಿಗೆ ಹೊಂದಿಕೊಂಡಂತೆ ಅರ್ಧ ವರ್ತುಲಾಕಾರದಲ್ಲಿ ಮಧ್ಯದ ಆಕೃತಿಯನ್ನೇ ಹೋಲುವ ವಿನ್ಯಾಸಗಳಿವೆ.

ಹೊರ ಪಟ್ಟಿಕೆಯಲ್ಲಿ ಅದೇ ಬಟ್ಟಲು ಹೂವಿನಂತಹ ವಿನ್ಯಾಸ, ಅವುಗಳನ್ನು ಬಳಸಿಕೊಂಡಿರುವ ಎಲೆ ಬಳ್ಳಿ ಎಡದಿಂದ ಬಲದಿಕ್ಕಿನಲ್ಲಿ ಏಕರೂಪದಲ್ಲಿ ಮೂಡಿವೆ.

೭. ತಟ್ಟೆ (ಮಾಹಿತಿ ಇಲ್ಲ) ಅಫ್ತಾಬಿ ತಂತ್ರ

ಈ ತಟ್ಟೆಯ ವಿನ್ಯಾಸವನ್ನು ಈ ಹಿಂದಿನ ತಟ್ಟೆಗಳ ವಿನ್ಯಾಸಗಳಿಗೆ ಹೋಲಿಸಿದಲ್ಲಿ ಇದು ಇತ್ತೀಚಿನ ಬಿದ್ರಿ ತಟ್ಟೆ ಎನಿಸುತ್ತದೆ. ಅಂಡಾಕಾರದಲ್ಲಿ ರಚನೆಗೊಂಡ ಈ ತಟ್ಟೆಯ ಮಧ್ಯಭಾಗದಲ್ಲಿ ಅಲಂಕಾರಿಕ ಶೈಲಿಯ ಎಲೆಯಾಕಾರದಲ್ಲಿ ಹೂವಿನ ಮತ್ತು ಎಲೆಗಳ ವಿನ್ಯಾಸಗಳು ಪುನರಾವರ್ತನೆಗೊಂಡಿವೆ. ಆಕೃತಿಯ ಕೆಳಭಾಗದಲ್ಲಿ ನೀರಿನ ಅಲೆಗಳನ್ನು ಪ್ರತಿನಿಧಿಸುವಂತಹ ರೇಖೆಗಳು ಸರ್ಪಶೈಲಿಯಲ್ಲಿ ಮೂಡಿವೆ. ಇದೇ ಬಗೆಯ ರೇಖೆಗಳು ತಟ್ಟೆಯ ಒಳ ಅಂಚಿನಲ್ಲಿ ಮೂಡಿವೆ.ಇಂತಹ ವಿನ್ಯಾಸ ತಟ್ಟೆ ಹೊರ ಅಂಚಿನಲ್ಲೂ ಸಹ ಪುನರಾವರ್ತನೆಯಾಗಿದ್ದು, ಈ ತಟ್ಟೆ ಅಂತಹ ಪ್ರಕೀರ್ಣಕವಾದ ರಚನೆ ಎನಿಸುವುದಿಲ್ಲ.

ಉಪಸಂಹಾರ

ಒಟ್ಟು ಏಳು ಅಲಂಕಾರಿಕ ತಟ್ಟೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೃತಿ ೧,೩ ಮತ್ತು ೫ ಇವು ಸೂಕ್ಷ್ಮ ಕುಸುರಿಯ ದೃಷ್ಟಿಯಿಂದ ಗಮನಾರ್ಹವಾದುದಾಗಿವೆ. ಕೃತಿ ೩ರಲ್ಲಿ ಪ್ರಾಣಿ, ಪಕ್ಷಿ, ಸರೀಸೃಪಗಳು ಹಾಗೂ ಪ್ರಾಕೃತಿಕ ವಿನ್ಯಾಸಗಳು ಮೇಳೈಸಿದ್ದು ವಿಶೇಷವಾಗಿದೆ. ಇನ್ನುಳಿದ ಕೃತಿಗಳು ಪ್ರಾಕೃತಿಕ ವಿನ್ಯಾಸಗಳೊಂದಿಗೆ ಇಸ್ಲಾಂಮಿಕ್ ವಾಸ್ತು ಶಿಲ್ಪದ ಕೆಲವು ವಿನ್ಯಾಸಗಳನ್ನು ಹೊಂದಿವೆ. ಬೆಳ್ಳಿ ಮತ್ತು ಹಿತ್ತಾಳೆಯ ಕಾಗದಗಳನ್ನು ಸಂದರ್ಭೋಚಿತವಾಗಿ ದುಡಿಸಿಕೊಂಡ ಕರ್ಮಿಗಳು ತಮ್ಮ ಪ್ರಗಲ್ಭ ಬುದ್ಧಿಮತ್ತೆಯನ್ನು ಒರಗೆ ಹಚ್ಚಿದ್ದಾರೆ. ಕೃತಿ ೨ ವಿಶೇಷವಾಗಿ ಜ್ಯಾಮಿತಿಕ ರೇಖೆಯೊಂದಿಗೆ ರಚನೆಗೊಂಡರೆ ಕೃತಿ ೬ ಮತ್ತು ೭ ಇತ್ತೀಚಿನ ಕೃತಿಗಳಾಗಿರುವುದರಿಂದ ಕೃತಿ ೩ರಲ್ಲಿ ಸೂಕ್ಷ್ಮತೆ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಆಧುನಿಕ ಸಂದರ್ಭದ ಈ ಕಲೆಯ ಕುಶಲಕರ್ಮಿಗಳಲ್ಲಿ ಸೂಕ್ಷ್ಮ ಕುಸುರಿಯ ತನ್ಮಯತೆ ಗೌಣವಾಗಿರುವುದನ್ನು ಸಹ ಇಲ್ಲಿನ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ.

*****

೫.೧.೨. ಆಯುಧಗಳು

೧./೨. ಚೂರಿಗಳು (೧೮ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಮುಸ್ಲಿಂ ಅರಸರು ತಮ್ಮ ಬದುಕಿಗೆ ಬಳಸಿಕೊಳ್ಳಬಹುದಾದ ಎಲ್ಲ ಬಗೆಯ ವಸ್ತುಗಳಲ್ಲೂ ಸೌಂದರ್ಯವೇ ಪ್ರಧಾನ ಆಶಯವಾಗಿರುವಂತೆ ವಸ್ತುಗಳನ್ನು ಕುಶಲಕರ್ಮಿಗಳಿಂದ

ಸಿದ್ಧಪಡಿಸಿಕೊಂಡಿರುವುದಕ್ಕೆ ಇಲ್ಲಿನ ಆಯುಧಗಳೇ ಸಾಕ್ಷಿ. ಅವರು ಕೇವಲ ತಟ್ಟೆ, ಹೂದಾನಿ, ಹೂಜಿ ಇಂತಹ ವಸ್ತುಗಳಿಗೆ ಮಾತ್ರ ತಮ್ಮ ಸೌಂದರ್ಯ ಪ್ರಜ್ಞೆಯನ್ನು ಸೀಮಿತಗೊಳಿಸಿಕೊಳ್ಳದೇ ಇತರ ಬಗೆಯ ವಸ್ತುಗಳಲ್ಲಿಯೂ ಆ ಪ್ರಜ್ಞೆಯನ್ನು ವಿಸ್ತರಿಸಿದ್ದಾರೆ. ಇಲ್ಲಿ ಬಹು ಬಗೆಯ ಆಯುಧಗಳು ಅಧ್ಯಯನಕ್ಕೆ ಲಭ್ಯವಾಗಿದ್ದು ಪ್ರತಿಯೊಂದು ವಿಭಿನ್ನ ಬಗೆಯ ವಿನ್ಯಾಸವನ್ನೇ ಹೊಂದಿರುವುದನ್ನು ಕಾಣಬಹುದಾಗಿದೆ.

೧ರಲ್ಲಿ ಹಿಡಿಯಲ್ಲಿ ಅಶ್ವದ ಮುಖವನ್ನು ವಿವರಿಸಿರುವ ಕರ್ಮಿಗಳು ಕುತ್ತಿಗೆಯ ಪಟ್ಟಿಕೆಯಲ್ಲಿ ಎಂದಿನಂತೆ ಎಲೆ ಬಳ್ಳಿಯ ವಿನ್ಯಾಸವನ್ನು ರಚಿಸಿದ್ದಾರೆ. ಅದರ ಮುಂಭಾಗದಲ್ಲಿ ಕೇವಲ ಒಂದು ಪುಷ್ಪದ ವಿನ್ಯಾಸವನ್ನು ರಚಿಸಿದರೆ, ಅದಕ್ಕೆ ಹಾಕುವ ಹೊದಿಕೆಯಲ್ಲಿ ಹಿಡಿಯಲ್ಲಿನ ವಿನ್ಯಾಸಗಳನ್ನೇ ಪುನರಾವರ್ತಿಸಿದ್ದಾರೆ. ಕೃತಿ ೨ಕ್ಕಿಂತ ದಟ್ಟ ವಿನ್ಯಾಸಗಳಿಂದ ಕೂಡಿದ ಕೃತಿ ಇದಾದರೆ, ೨ರಲ್ಲಿ ಅತೀ ಸೂಕ್ಷ್ಮ ಕುಸುರಿ ಸುಂದರವಾದ ವಿನ್ಯಾಸಗಳನ್ನು ಸೃಷ್ಟಿಸಲಾಗಿದೆ. ವರ್ತುಲಾಕಾರದ ಬಳ್ಳಿಯ ವಿನ್ಯಾಸಗಳು ಚೂರಿಯ ಹಿಡಿಯ ಉದ್ದಕ್ಕೂ ಪಸರಿಸಿವೆ. ಅದೇ ಬಗೆಯ ವಿನ್ಯಾಸಗಳು ಕವಚದಲ್ಲೂ ಪುನರಾವರ್ತಿತಗೊಂಡಿವೆ. ಇಲ್ಲಿನ ವಿನ್ಯಾಸದಲ್ಲಿ ಹೂವುಗಳ ವಿನ್ಯಾಸಗಳು ಗೌಣವಾಗಿದ್ದು, ಹೂವಿನ ಮೊಗ್ಗಿನಂತಹ ವಿನ್ಯಾಸಗಳು ಮತ್ತು ಎಲೆಯಂತಹ ವಿನ್ಯಾಸಗಳೇ ಅಧಿಕವಾಗಿರುವುದಲ್ಲದೇ ಪ್ರತಿಯೊಮದು ವಿನ್ಯಾಸಗಳನ್ನು ಅತ್ಯಂತ ಸೂಕ್ಷ್ಮವಾಗಿ ಬೆಳ್ಳಿಯ ರೇಖೆಗಳಿಂದ ರೂಪಿಸಲಾಗಿದೆ. ಹೀಗಾಗಿ ಇವು ಅಲಂಕಾರಿಕ ದೃಷ್ಟಿಯಿಂದ ವೈಭವಯುತವಾಗಿ ಕಾಣುತ್ತಿವೆ. **೨. ಚೂರಿಗಳು** (೧ರಿಂದ

೧೦) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಇಲ್ಲಿ ಹತ್ತು ಬಗೆಯ ಚೂರಿಗಳು ಇವೆ. ನಕ್ಷೆಗಳ ವಿನ್ಯಾಸದ ದೃಷ್ಟಿಯಿಂದ ಪ್ರತಿಯೊಂದು ಭಿನ್ನವಾಗಿದ್ದರೂ ಚೂರಿಯ ಆಕಾರದಲ್ಲಿ ಕೆಲವೊಂದು ಒಂದನ್ನೊಂದು ಹೋಲುತ್ತಿವೆ. ೧ ಮತ್ತು ೨ ರಣಹದ್ದುವಿನ ಕೊಕ್ಕೆಯ ಆಕಾರವನ್ನು ಹೊಂದಿವೆ. ೧ರಲ್ಲಿ ಸೂಕ್ಷ್ಮಮಾತಿಸೂಕ್ಷ್ಮ ವಿನ್ಯಾಸಗಳಿದ್ದು ಅವುಗಳಲ್ಲಿ ಹೂವು ಮತ್ತು ಎಲೆಗಳನ್ನು ಅಲಂಕಾರಿಕ ಶೈಲಿಯಲ್ಲಿ ದುಡಿಸಿಕೊಳ್ಳಲಾಗಿದೆ. ೨ನೆಯದರಲ್ಲೂ ಅದೇ ಬಗೆಯ ವಿನ್ಯಾಸಗಳಿದ್ದರೂ ಜ್ಯಾಮಿತಿಕ ಆಕೃತಿಯ ಒಳಭಾಗದಲ್ಲಿ ಅವುಗಳನ್ನು ಜೋಡಿಸಲಾಗಿದೆ.

೩,೪ ಮತ್ತು ೬ರ ಚೂರಿಗಳು ಹಿಡಿಯಲ್ಲಿ ಹುಲಿಯ ಮುಖದ ಆಕೃತಿಯನ್ನು ಹೊಂದಿವೆ. ಮೂರರಲ್ಲಿಯೂ ವಿಭಿನ್ನವಾದ ವಿನ್ಯಾಸಗಳಿದ್ದು ಅವು ಪ್ರಾಕೃತಿಕ ವಿನ್ಯಾಸಗಳೇ ಆಗಿವೆ. ೩ರಲ್ಲಿ ಪ್ರಧಾನವಾಗಿ ನಾಲ್ಕು ದಳಗಳ ಹೂವಿನ ವಿನ್ಯಾಸವನ್ನು ಪ್ರಧಾನವಾಗಿಸಿಕೊಂಡು ಅವುಗಳ ಸುತ್ತಣ ಅವಕಾಶದಲ್ಲಿ ಎಲೆಗಳ ವಿನ್ಯಾಸವನ್ನು ಅಲಂಕಾರಿಕ ನೆಲೆಯಲ್ಲಿ ರಚಿಸಲಾಗಿದೆ. ೪ರಲ್ಲಿ ಹಿಡಿಯಲ್ಲಿ ಎರಡು ಮತ್ತು ಕವಚದಲ್ಲಿ ವರ್ತುಲಾಕಾರದ ನಾಲ್ಕು ವಿನ್ಯಾಸಗಳಲ್ಲಿ ಹೂವಿನಂತಹ ರಚನೆಗಳು ಇವೆ. ಇವುಗಳನ್ನು ಬಳಸಿಕೊಂಡು ಎಲೆಗಳ ವಿನ್ಯಾಸಗಳನ್ನು ಲಾಲಿತ್ಯಪೂರ್ಣವಾಗಿ ರಚಿಸಲಾಗಿದೆ. ೬ರಲ್ಲಿ

ಬಳ್ಳಿಗಳ ವಿನ್ಯಾಸಗಳನ್ನೇ ಲಲಿತ ಬಗೆಯಲ್ಲಿ ಹಿಡಿ ಮತ್ತು ಕವಚದಲ್ಲಿ ಪುನರಾವರ್ತಿತಗೊಳ್ಳುವಂತೆ ಚಿತ್ರಿಸಲಾಗಿದೆ.

೪,೭ ಮತ್ತು ೮ರ ಚೂರಿಗಳು ಅಶ್ವದ ಮುಖವನ್ನು ಹೊಂದಿವೆ. ಎಲೆ ಬಳ್ಳಿಗಳ ವಿನ್ಯಾಸಗಳು ಹಿಡಿಯಲ್ಲಿ ಮತ್ತು ಕವಚದಲ್ಲಿ ಪುನರಾವರ್ತಿತಗೊಂಡಿವೆ. ಚೂರಿ ೭ ವಿಶೇಷವಾಗಿದೆ. ಸಂಪೂರ್ಣವಾಗಿ ಹಿತ್ತಾಳೆ ಕಾಗದ ಮತ್ತು ತಂತಿಗಳಿಂದ ಪ್ರಕೀರ್ಣಕವಾದ ವಿನ್ಯಾಸಗಳನ್ನು ಇಲ್ಲಿ ದುಡಿಸಿಕೊಳ್ಳಲಾಗಿದೆ. ಅಶ್ವದ ಮುಖವನ್ನು ಹಿಡಿಯಲ್ಲಿ ರಚಿಸಿದ ಕರ್ಮಿಯು ಚೂರಿಯ ಕವಚದಲ್ಲಿ ಹೂವು ಮತ್ತು ಎಲೆಗಳ ನಕ್ಷೆಗಳನ್ನು ವರ್ತುಲಾಕಾರದ ಆಕೃತಿಯೊಂದರಲ್ಲಿ ರಚಿಸಿದ್ದಾನೆ. ೮ರಲ್ಲಿ ನಾಲ್ಕು ದಳಗಳ ಮಲ್ಲಿಗೆ ಹೂವಿನಂತಹ ವಿನ್ಯಾಸವನ್ನು ಪ್ರಧಾನವಾಗಿಸಿಕೊಂಡು ಸುತ್ತಣ ಅವಕಾಶದಲ್ಲಿ ಎಲೆಗಳ ವಿನ್ಯಾಸಗಳನ್ನು ಚಿಕಣಿ ಶೈಲಿಯಲ್ಲಿ ರಚಿಸಿದ್ದಾನೆ.

ಇತರ ಚೂರಿಗಳಿಗಿಂತ ೯ ಮತ್ತು ೧೦ ಚೂರಿಗಳು ವಿಭಿನ್ನ ಬಗೆಯ ಆಕಾರಗಳನ್ನು ಹೊಂದಿವೆ. ಅಂಗೈ ಒಳಗೆ ತೂರಿ ಬೆರಳುಗಳನ್ನು ಸುತ್ತುವರಿಯುವ ಪಟ್ಟಿಕೆಯ ಹಿಡಿಯನ್ನು ಹೊಂದಿರುವ ಈ ಚೂರಿಯಲ್ಲಿ ಹೂವುಗಳನ್ನು ಪ್ರಧಾನವಾಗಿಸಿಕೊಂಡು ಎಲೆಗಳನ್ನು ಸುತ್ತಣ ಅವಕಾಶದಲ್ಲಿ ರಚಿಸಲಾಗಿದೆ. ೧೦ರಲ್ಲಿ ವಿನ್ಯಾಸಗಳಲ್ಲಿ ದಟ್ಟತೆ ಇದ್ದು ಹೂವೊಂದನ್ನು ಪ್ರಧಾನವಾಗಿಸಿಕೊಂಡು ಬಳ್ಳಿಯ ರೂಪದಲ್ಲಿ ವರ್ತುಲಾಕಾರದಲ್ಲಿ ಚಿತ್ರಿಸಲಾಗಿದೆ. ಚೂರಿಯ ಹಿಂಭಾಗ, ಮಧ್ಯಭಾಗ ಮತ್ತು ಮುಂಭಾಗದಲ್ಲಿ ಅತೀಸೂಕ್ಷ್ಮ ವಿನ್ಯಾಸಗಳು ರಚನೆಗೊಂಡಿದ್ದರಿಂದ ತುಂಬ ಅಲಂಕೃತವಾಗಿ ಈ ಚೂರಿ ಗೋಚರಿಸುತ್ತದೆ.

೩. ಕೊಡಲಿ ಅಫ್ತಾಬಿ ತಂತ್ರ

ಪರಶುರಾಮನ ಕೊಡಲಿಯನ್ನು ನೆನಪಿಸುವ ಈ ಕೊಡಲಿಯಲ್ಲಿ ಹಲವು ಹಂತಗಳಲ್ಲಿ ವಿನ್ಯಾಸಗಳು ರಚನೆಗೊಂಡಿವೆ. ಹಿಡಿಯಲ್ಲಿ ಎಲೆ ಬಳ್ಳಿಗಳ ವಿನ್ಯಾಸ ತುಂಬ ಸೂಕ್ಷ್ಮ ರಚನೆಯಾದಂತೆಕಾವು ಹಿಂದುಗಡೆ ಅಂಥದೇ ಪಟ್ಟಿಕೆಯಲ್ಲಿ ಅದೇ ಬಗೆಯ ವಿನ್ಯಾಸಗಳನ್ನೇ ಪುನರಾವರ್ತಿಸಲಾಗಿದೆ. ಕೊಡಲಿಯ ಕಾವು ಅರ್ಧ ವರ್ತುಲಾಕಾರದಲ್ಲಿ ರಚನೆಗೊಂಡಿದ್ದು ಅದರ ಅವಕಾಶದಲ್ಲಿ ಎಲೆ ಬಳ್ಳಿಗಳ ವಿನ್ಯಾಸಗಳು ಪ್ರಕೀರ್ಣಕವಾಗಿ ರಚನೆಗೊಂಡಿವೆ. ಬಹುಶಃ ಇದರ ಮಧ್ಯೆ ಮೂರು ಉಬ್ಬು ಮಾದರಿಯಲ್ಲಿ ಮಾನವಾಕೃತಿಗಳು ರಚನೆಗೊಂಡಂತೆ ಕಾಣುತ್ತಿವೆ. (ಚಿತ್ರದ ವಿವರಗಳು ದಕ್ಕುತ್ತಿಲ್ಲ)

ಉಪಸಂಹಾರ

ಇಲ್ಲಿ ಹನ್ನೆರಡು ಬಗೆಯ ಚೂರಿಗಳು ಮತ್ತು ಒಂದು ಬಗೆಯ ಕೊಡಲಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಿಡಿಗಳಲ್ಲಿ ಕೆಲವು ಒಂದನ್ನೊಂದು ಹೋಲುತ್ತಿದ್ದು, (ಕುದುರೆ, ಹುಲಿ) ಚೂರಿ ೨ರಲ್ಲಿ ೯ ಮತ್ತು ೧೦ ಇವೆರಡೂ ವಿಭಿನ್ನ ಆಕಾರಗಳನ್ನು ಹೊಂದಿವೆ. ಮಾಧ್ಯಮದ ದೃಷ್ಟಿಯಿಂದ

ಹೇಳುವುದಾದರೆ, ಬಹುತೇಕ ಎಲ್ಲ ಚೂರಿಗಳು ಬೆಳ್ಳಿಯ ರೇಖೆಗಳಿಂದ ರಚನೆಗೊಂಡರೆ, ಚೂರಿ ೨ರಲ್ಲಿ ೭ನೆಯದು ಮಾತ್ರ ಹಿತ್ತಾಳೆ ಕಾಗದ ಮತ್ತು ತಂತಿಗಳನ್ನು ಹುದುಗಿಸಿ ತುಂಬ ಸೂಕ್ಷ್ಮ ಕುಸುರಿಯನ್ನು ಹೊಂದಿದೆ. ಇಲ್ಲಿನ ಎಲ್ಲ ಚೂರಿಗಳಲ್ಲಿ ಪ್ರಾಕೃತಿಕ ವಿನ್ಯಾಸಗಳೇ ಮೇಲುಗೈ ಸಾಧಿಸಿದ್ದು, ಹಿಡಿಗಳಲ್ಲಿ ಮಾತ್ರ ಪ್ರಾಣಿ-ಪಕ್ಷಿಗಳ ಆಕೃತಿಗಳು ಮೈದಳೆದಿವೆ. ಬಹುತೇಕ ಎಲ್ಲ ಚೂರಿಗಳೂ ಅತ್ಯಂತ ಸೂಕ್ಷ್ಮವಾದ ಕುಸುರಿಯನ್ನು ಹೊಂದಿರುವುದರಿಂದ ಚೂರಿಗಳು ಭಯದ ಭಾವವನ್ನು ತೊಲಗಿಸಿ ಸೌಂದರ್ಯ ಪ್ರಜ್ಞೆಯನ್ನು ಕೆರಳಿಸುತ್ತವೆ.

*****

೩.೧.೩. ಉಗುಳುವ ಪಾತ್ರೆಗಳು (ಪೀಕದಾನಿ)

ಉಗುಳುವ ಪಾತ್ರೆಗಳು ರಾಜ ವೈಭೋಗದ ಸಂಕೇತ. ಮುಸ್ಲಿಂ ಅರಸರುಗಳ ಕಾಲದಲ್ಲಿ ತಾಂಬೂಲವನ್ನು ನಿರಂತರವಾಗಿ ಜಗಿಯುವುದು ಒಂದು ಹವ್ಯಾಸವಾಗಿತ್ತು. ಅರಸರು, ಮಾಂಡಲೀಕರು, ರಾಜ ಪ್ರಮುಖರು ತಾಂಬೂಲವನ್ನು ಜಗಿದು ಅದರ ರಸವನ್ನು ಉಗುಳಲು ಪದೇ ಪದೇ ಹೊರ ನಡೆಯದೇ ಕುಳಿತಲ್ಲೇ ಉಗಿಯಲು ಕಂಡುಕೊಂಡ ಉಪಾಯಕ್ಕೆ ಸೃಷ್ಟಿಯಾಗಿದ್ದೇ 'ಪೀಕದಾನಿ'(ಉಗುಳುವ ಪಾತ್ರೆ). ರಾಜ ಪರಿಸರದಲ್ಲಿ ಈ ವಸ್ತುವಿಗೆ ಸ್ಥಾನ ದೊರೆತಾಗ ಅದು ಸಹಜವಾಗಿಯೇ ಅತ್ಯಂತ ಅಲಂಕಾರಿಕವಾಗಿ ಬಿದ್ರಿ ಕುಶಲಕರ್ಮಿಗಳಿಂದ ರಚಿಸಲ್ಪಟ್ಟಿತು. ಈ ಪೀಕದಾನಿಗಳಲ್ಲಿ ಕೆಲವು ಬಹು ಪ್ರಾಚೀನವಾಗಿದ್ದು ಅವು ಬಹುತೇಕವಾಗಿ ದೇಶ-ವಿದೇಶಗಳ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಕಲಾಸಕ್ತರ ಮನಸಿಗೆ ತಂಪೆರೆಯುತ್ತಿವೆ. ಇಂತಹ ಲಭ್ಯವಿರುವ ಪೀಕದಾನಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಉಗುಳುವ ಪಾತ್ರೆ (ಕ್ರಿ.ಶ.೧೮೫೦) ಅಫ್ತಾಬಿ ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಬಹು ಅಪರೂಪದ್ದು. ಅತ್ಯಂತ ಪ್ರಕೀರ್ಣಕವಾದ ವಿನ್ಯಾಸಗಳನ್ನು ಹೊಂದಿದ ಈ ಪೀಕದಾನಿಯ ರಚನೆಯು ಸಹ ವಿಶೇಷವಾಗಿದೆ. ಮೇಲ್ಭಾಗದ ಚಿತ್ರದಲ್ಲಿ ಕಂಡು ಬರುವ ವಿನ್ಯಾಸವು ಪೀಕದಾನಿಯ ಒಳವಿನ್ಯಾಸ. ವರ್ತುಲಾಕಾರದಲ್ಲಿ ರಚಿಸಲ್ಪಟ್ಟ ಈ ಪೀಕದಾನಿಯ ಮಧ್ಯಭಾಗದಲ್ಲಿ ಚಿಕ್ಕದಾದ ಹೂವಿನ ವಿನ್ಯಾಸವಿದೆ. ಅದರ ಸುತ್ತಲಿನ ಅವಕಾಶದಲ್ಲಿ ಅಷ್ಟ ವರ್ತುಲಗಳಲ್ಲಿ ಅಷ್ಟದಳಗಳ ಹೂವಿನ ವಿನ್ಯಾಸಗಳು ರಚಿಸಲ್ಪಟ್ಟಿವೆ. ಪ್ರತಿಯೊಂದು ವರ್ತುಲಕ್ಕೂ ವಿನ್ಯಾಸ ಸಂಪರ್ಕವಾಗುವಂತೆ ಎರಡು ದಳಗಳ ವಿನ್ಯಾಸಗಳು ಇವೆ. ಇವುಗಳ ಸುತ್ತಣ ದಳಗಳಿಂದ ಕೂಡಿದ ವರ್ತುಲಾಕಾರದ ಪಟ್ಟಿಕೆ ಇದೆ. ಇಂತಹುದೇ ಪಟ್ಟಿಕೆಗಳು ಸ್ವಲ್ಪ ಬದಲಾವಣೆಗಳೊಂದಿಗೆ ನಾಲ್ಕುಹಂತಗಳಲ್ಲಿ ವಿನ್ಯಾಸಗೊಳಿಸಲ್ಪಟ್ಟಿವೆ. ಇವುಗಳ ಸುತ್ತ ನಾಲ್ಕು ಮತ್ತು ಅಷ್ಟ ದಳಗಳ ಹೂವಿನ ವಿನ್ಯಾಸಗಳಿಂದ

ಕೂಡಿದ ಮತ್ತೊಂದು ವರ್ತುಲಾಕಾರದ ಪಟ್ಟಿಕೆ ಇದೆ. ಇದರ ನಂತರ ಪ್ರಧಾನ ವಿನ್ಯಾಸ ಪಟ್ಟಿಕೆ ಅತ್ಯಂತ ಸೂಕ್ಷ್ಮ ವಿನ್ಯಾಸಗಳಿಂದ ಕೂಡಿದ ಮತ್ತು ರಾಜ ವೈಭೋಗವನ್ನು ಪ್ರತಿನಿಧಿಸುವ ರೂಪದಲ್ಲಿ ರಚಿಸಲ್ಪಟ್ಟಿದೆ. ಈ ಪ್ರಧಾನ ವರ್ತುಲದಲ್ಲಿ ಹನ್ನೆರಡು ಅಂಡಾಕಾರದ ರೇಖಾ ಪಟ್ಟಿಕೆಯಲ್ಲಿ ಮೂರು ಹೂವುಗಳ ವಿನ್ಯಾಸಕ್ಕೆ ಬೆಂಬಲವಾಗಿ ಮೂರು ಎಲೆಗಳ ವಿನ್ಯಾಸಗಳು ಬೆಳ್ಳಿಯ ರೇಖೆಗಳಿಂದ ಕಂಗೊಳಿಸುತ್ತಿವೆ. ಈ ಪೀಕದಾನಿಯಲ್ಲಿ ಈ ವಿನ್ಯಾಸಗಳು ಅತ್ಯಂತ ಮಹತ್ವಪೂರ್ಣವಾದುದಲ್ಲದೇ ದಾನಿಯ ಮಾಟಕ್ಕೆ ಇಂಬು ಕೊಡುವಂತಹ ಭಾವವನ್ನು ಪ್ರಕಟಿಸುತ್ತಿವೆ. ಪ್ರತಿ ಅಂಡಾಕಾರಗಳೆರಡರ ಮಧ್ಯೆ ಮೇಲೆ ಮತ್ತು ಕೆಳಭಾಗದಲ್ಲಿ ಸಂಪರ್ಕ ವಿನ್ಯಾಸವಾಗಿ ಎಲೆಗಳ ವಿನ್ಯಾಸಗಳು ಮೂಡಿವೆ. ಪೀಕದಾನಿಯ ಅಂಚಿನಲ್ಲಿ ದಟ್ಟ ಪಟ್ಟಿಕೆ, ಅದರ ಸುತ್ತಣ ಹೂವಿನ ದಳಗಳಂತಹ ವಿನ್ಯಾಸಗಳು ಚಿಕಣಿ ರೂಪದಲ್ಲಿ ಮೂಡಿವೆ.

ಕೆಳಭಾಗದಲ್ಲಿ ಚಿತ್ರದಲ್ಲಿ ಇದೇ ಪೀಕದಾನಿಯ ಪಾತ್ರೆಯ ಕಂಠದ ಕೆಳಗಿನ ಉದರ ಭಾಗದಲ್ಲಿ, ಮೇಲ್ಭಾಗದ ಚಿತ್ರದಲ್ಲಿ ಕಂಡುಬರುವ ನಾಲ್ಕನೆಯ ಹಂತದ ವಿನ್ಯಾಸವೇ ಇಲ್ಲಿಯೂ ಪುನರಾವರ್ತನೆಯಾಗಿದೆ. ಅದರಂತೆ ಅದರ ಕೆಳಗಿನ ಭಾಗವೂ ಸಹ ಮೇಲೆ ಕಂಡುಬರುವ ಅಂಡಾಕಾರದಲ್ಲಿನ ವಿನ್ಯಾಸಗಳು ಇಲ್ಲಿಯೂ ಪುನರಪಿ ರಚಿಸಲ್ಪಟಿವೆ. ತಳಭಾಗದಲ್ಲಿ ಅಂಚಿನಲ್ಲಿ ಎಂದಿನಂತೆ ಚಿಕ್ಕ ದಳಗಳ ವಿನ್ಯಾಸಗಳು ಪುನರಾವರ್ತಿನೆಗೊಂಡಿದ್ದು, ಪೀಕದಾನಿಯ ವಿನ್ಯಾಸದಲ್ಲಿ ಕುಶಲಕರ್ಮಿಯು ಸಮವಿನ್ಯಾಸಗಳನ್ನು ಕಾಯ್ದುಕೊಂಡು ಬಂದಿರುವುದಲ್ಲದೇ ತನ್ನ ಪ್ರಗಲ್ಭ ಬುದ್ಧಿಮತ್ತೆಯನ್ನು ಒರೆಗೆ ಹಚ್ಚುವ ರೀತಿಯಲ್ಲಿ ಇಂತಹ ಸೂಕ್ಷ್ಮಾತಿಸೂಕ್ಷ್ಮ ಬಿದ್ರಿ ಕಲೆಯನ್ನು ಲೋಕಾರ್ಪಣಗೊಳಿಸಿ ಅಭಿನಂದಾರ್ಹವಾಗಿದ್ದಾನೆ.

೨. ಉಗುಳುವ ಪಾತ್ರೆ (೧೯ನೆಯ ಶತಮಾನದ ಪೂರ್ವಾರ್ಧ) ತರ್ಕಶಿ ತಂತ್ರ

ಪೂರ್ವೋ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಅಡಿ ಪೀಠವು ಕರೆಗಂಟೆಯ ಆಕಾರವುಳ್ಳದ್ದು; ಪ್ರಮಾಣಬದ್ಧವಾಗಿ ಒಳಭಾಗಗಳನ್ನು ಹೊಂದಿದ ಉಗುಳುವ ಪಾತ್ರೆ, ಕೇಂದ್ರ ಭಾಗದಲ್ಲಿ ಸಂಕುಚಿತವಾಗಿರುವ ವಿನ್ಯಾಸ-ಎರಡು ಗಂಟೆಯ ಆಕೃತಿಗಳು ಸೇರುವ ಸ್ಥಳ ಇದು. ಇಲ್ಲಿ ಕಾಣುವ ಉಂಗುರಾಕೃತಿಯ ವಿನ್ಯಾಸವು ಹೇರಿಂಗ್‌ಬೋನ್ (ವೆಂಕಿ ವಿನ್ಯಾಸ) ಮಾದರಿಯನ್ನು ಹೊಂದಿದೆ. (**ಚಿತ್ರ೨,೩,೪,೫,೭ ಮತ್ತು ೮ ಇವು ಸಹ ಹೇರಿಂಗ್ ಬೋನ್ ವಿನ್ಯಾಸವನ್ನೇ ಹೊಂದಿವೆ.**) ಅಡಿಪೀಠ ಮತ್ತು ಪಾತ್ರೆಗಳಿಗೆ ಸುಂದರವಾದ ಪುಷ್ಪಾಲಂಕಾರವಿದೆ. ಅಲ್ಲಿ ಹೂವು ಮತ್ತು ದಳಗಳ ಮಿಶ್ರಣವಿದೆ. ಒಳಭಾಗದಲ್ಲಿ ಶೈಲೀಕೃತ ದಳಗಳ ಅಲಂಕಾರವಿದೆ.

೩. ಉಗುಳುವ ಪಾತ್ರೆ (೧೯ನೆಯ ಶತಮಾನದ ಪೂರ್ವಾರ್ಧ) ತರ್ಕಶಿ ತಂತ್ರ

ಪೂರ್ವೋ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯ ಅಡಿಪೀಠ ಮತ್ತು ಪಾತ್ರೆಯ ಸುತ್ತಣ ಏಕಪ್ರಕಾರವಾದ ಸುರುಳಿಯಾಕೃತಿಯ ಹೂ-ಬಳ್ಳಿಗಳ ವಿನ್ಯಾಸಗಳು ಇವೆ.

ಹನ್ನೆರಡು ದಳಗಳನ್ನು ಒಳಗೊಂಡ ಸೇವಂತಿಗೆ ಹೂವನ್ನು ಹೋಲುವ ವಿನ್ಯಾಸ, ಅದಕ್ಕೆಬಳಸಿಕೊಂಡಿರುವ ಬಳ್ಳಿಗಳು ವರ್ತುಲಾಕಾರದಲ್ಲಿ ಒಂದರ ಕೆಳಗೆ ಒಂದರಂತೆ ಸಮಾನಾಂತರವಾಗಿ ಮೂಡಿವೆ. ಗಂಟೆಯಾಕೃತಿಯ ಕೆಳ ಮತ್ತು ಮೇಲ್ಭಾಗದ ಅಂಚಿನಲ್ಲಿ ಮೂರು ದಳಗಳ ಹೂವಿನ ವಿನ್ಯಾಸಗಳು ತದ್ವಿರುದ್ಧವಾಗಿ ಪಟ್ಟಿಕೆಯಲ್ಲಿ ಪಾತ್ರೆಯನ್ನು ಸುತ್ತುವರೆದಿವೆ. ಪೂರ್ಣವಾಗಿ ಬೆಳ್ಳಿಯ ಹುದುಗಿಸುವಿಕೆ ತಂತ್ರವನ್ನು ಹೊಂದಿದ ಈ ಪೀಕದಾನಿಯು ೧೯ನೆಯ ಶತಮಾನದ ಕುಶಲಕರ್ಮಿಗಳ ಪ್ರಗಲ್ಭತೆ ಹಾಗೂ ಪ್ರಕೀರ್ಣಕ ವಿನ್ಯಾಸಗಳ ಪ್ರತೀಕವಾಗಿದೆ.

೪. ಉಗುಳುವ ಪಾತ್ರೆ (೧೯ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ರನೆ ಗ್ಯಾಲರಿಯಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯಲ್ಲಿ ಪಂಚದಳಗಳ ಹೂವಿನ ವಿನ್ಯಾಸಗಳು ಪ್ರಮುಖವಾಗಿವೆ. ಅವುಗಳನ್ನು ಬಳಸಿಕೊಂಡು ಪರ್ಣಗಳ ವಿನ್ಯಾಸಗಳು ಮೂಡಿವೆ. ಚಿತ್ರ ಅಸ್ಪಷ್ಟವಾಗಿದ್ದು, ಬಹುಶಃ ಹಿತ್ತಾಳೆಯ ಕಾಗದಗಳನ್ನು ದುಡಿಸಿಕೊಂಡು ರಚಿಸಿದ ಈ ಪೀಕದಾನಿಯ ಕೆಳ ಮತ್ತು ಕಂಠಗಳಲ್ಲಿ ಪಟ್ಟಿಕೆಯಲ್ಲಿ ಎಂದಿನಂತೆ ಹೂವಿನ ವಿನ್ಯಾಸಗಳು ಕಂಗೊಳಿಸುತ್ತಿವೆ.

೫. ಉಗುಳುವ ಪಾತ್ರೆ (ಕ್ರಿ.ಶ.೧೮೯೮) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಇಲ್ಲಿ ಅಧ್ಯಯನಕ್ಕೆ ಸಂಗ್ರಹಗೊಂಡಿರುವ ಪೀಕದಾನಿಗಳಲ್ಲಿಯೇ ವಿಶಿಷ್ಟವಾದ ವಿನ್ಯಾಸವನ್ನು ಹೊಂದಿದೆ. ಗಂಟೆಯಾಕಾರದಲ್ಲಿ ರಚನೆ ಹೊಂದಿರುವ ಈ ಪೀಕದಾನಿಯ ಒಳಾವರಣದಲ್ಲಿ ಪರ್ಣಗಳ ವಿನ್ಯಾಸಗಳನ್ನು ಕೆಳಮುಖವಾಗಿ ಪಟ್ಟಿಕೆಯ ರೂಪದಲ್ಲಿ ವಿನ್ಯಾಸಗೊಳಿಸಿದ್ದಾರೆ. ಹೊರಾವರಣದ ಅಂಚು ಮತ್ತು ಕಂಠಗಳಲ್ಲಿ ವಿವರಗಳಿಲ್ಲದ ಮರದ ಆಕೃತಿಯನ್ನು ಹೋಲುವಂತಹ ವಿನ್ಯಾಸಗಳು ಪಟ್ಟಿಕೆಯಲ್ಲಿ ಸಮಾನಾಂತರವಾಗಿ ವಿನ್ಯಾಸಗೊಳಿಸಲ್ಪಟ್ಟಿವೆ. ಪಾತ್ರೆ ಮತ್ತು ಅಡಿಪೀಠದ ಜೋಡಣೆಯ ಸ್ಥಳದಲ್ಲಿ ಮುಸ್ಲಿಂ ವಾಸ್ತುಶಿಲ್ಪದಲ್ಲಿ ಸಾಮಾನ್ಯವಾಗಿ ಕಂಡುಬರುವ ಪರ್ಣಗಳಂತಹ ವಿನ್ಯಾಸಗಳು ಇಲ್ಲಿ ಕಂಡುಬರುತ್ತವೆ. ಇವೆರಡೂ ಪಟ್ಟಿಕೆಗಳ ಮಧ್ಯೆ ಒಳಾವರಣದಲ್ಲಿ ಓರಲಾಗಿ ಪಟ್ಟಿಕೆಗಳು ಪಾತ್ರೆಯನ್ನು ಅಲಂಕರಿಸಿವೆ. ೧೮ನೆಯ ಶತಮಾನದ ಅಂತ್ಯವಾಧಿಯಲ್ಲಿ ವಿಭಿನ್ನ ವಿನ್ಯಾಸದಲ್ಲಿ ಬೆಳ್ಳಿಯ ಹುದುಗಿಸುವಿಕೆಯ ಕುಶಲ ತಂತ್ರಕ್ಕೆ ಈ ಪೀಕದಾನಿಯ ಒಂದು ಉತ್ತಮ ಉದಾಹರಣೆಯಾಗಿದೆ.

೬. ಉಗುಳುವ ಪಾತ್ರೆ (ಕ್ರಿ.ಶ.೧೮೫೦) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಇಲ್ಲಿ ಅಧ್ಯಯನಕ್ಕೆ ಸಂಗ್ರಹಗೊಂಡಿರುವ ಪೀಕದಾನಿಗಳ ಆಕೃತಿಗಳಲ್ಲಿಯೇ ವಿಭಿನ್ನವಾಗಿದೆ. ಮೇಲ್ಭಾಗದಲ್ಲಿ ತಟ್ಟೆ, ಅಡಿಪೀಠದಲ್ಲಿ ಪಾತ್ರೆಯನ್ನು ಹೊಂದಿರುವ ಈ ಪೀಕದಾನಿಯು

ಚಿತ್ರ ೩ರಲ್ಲಿನ ಸೂಕ್ಷ್ಮ ಕುಶಲತೆಯನ್ನು ಹೊಂದದೇ ಇದ್ದರೂ ವಿಶಿಷ್ಟವಾದ ಹೂವಿನ ಮತ್ತು ಪರ್ಣಗಳ ವಿನ್ಯಾಸಗಳನ್ನು ದಟ್ಟ ತಂತ್ರದಲ್ಲಿ ರಚನೆಯಾಗಿದೆ. ಕಂಠದಲ್ಲಿ ಮತ್ತು ಪಾತ್ರೆಯ ಕೆಳ ಅಂಚಿನಲ್ಲಿ ಸಮಾನಾಂತರವಾಗಿ ಸಂಯುಕ್ತ ತ್ರಿದಳ ವಿನ್ಯಾಸಗಳನ್ನು ಹೊಂದಿದೆ. ಅವುಗಳ ಕೆಳಭಾಗದಲ್ಲಿ ಅಪರಿಚಿತವೆನ್ನಬಹುದಾದ ಪರ್ಣಗಳ ವಿನ್ಯಾಸವನ್ನು ಸಮೂಹ ರೂಪದಲ್ಲಿ ಸಂಯೋಜಿಸಿ ಒಂದುಹೂವಿನಂತಹ ವಿನ್ಯಾಸವನ್ನು ರಚಿಸಲಾಗಿದ್ದು, ಇದು ಪಾತ್ರೆಯ ಮೇಲಿನ ಪ್ರಧಾನ ವಿನ್ಯಾಸವಾಗಿ ಗೋಚರವಾಗುತ್ತದೆ. ಇದರ ಪಾರ್ಶ್ವಗಳೆರಡರಲ್ಲಿ ಪರಿಚಿತವೆನ್ನಬಹುದಾದ ಪಂಚದಳಗಳ ಹೂವಿನ ವಿನ್ಯಾಸವನ್ನು ರಚಿಸಲಾಗಿದೆ. ಅಡಿಪೀಠದಲ್ಲಿ ಪರ್ಣಗಳಂತಹ ವಿನ್ಯಾಸಗಳನ್ನು ರಚಿಸಲಾಗಿದೆ.

೭. ಉಗುಳುವ ಪಾತ್ರೆ (೧೯ನೆಯ ಶತಮಾನದ ಮಧ್ಯಭಾಗ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ರೆನೆ ಗ್ಯಾಲರಿಯಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಮೇಲ್ನೋಟಕ್ಕೆ ಅತ್ಯಂತ ಸೂಕ್ಷ್ಮ ವಿನ್ಯಾಸಗಳಿಂದ ಕೂಡಿದ್ದು, ಪಾತ್ರೆ ಹಾಗೂ ಅಡಿ ಪೀಠದ ಸುತ್ತಣ ಅಂಡಾಕಾರದ ಒಳಾವರಣದಲ್ಲಿ ಹೂವಿನ ಗಿಡದಂತಹಯ ವಿನ್ಯಾಸಗಳನ್ನು ರಚಿಸಲಾಗಿದೆ. ಕಂಠ ಮತ್ತು ಅಡಿ ಅಂಚಿನಲ್ಲಿ ಪಟ್ಟಿಕೆಯಲ್ಲಿ ಎಂದಿನಂತೆ ಹೂವು ಮತ್ತು ಪರ್ಣಗಳ ವಿನ್ಯಾಸಗಳು ಅಲಂಕಾರಿಕ ನೆಲೆಯಲ್ಲಿ ಪ್ರಕಟವಾಗಿವೆ. ಈ ಒಳ ವಿನ್ಯಾಸದ ಸುತ್ತಣ ಪಟ್ಟಿಕೆಯ ರೂಪದಲ್ಲಿ ಚಿಕಣಿ ಶೈಲಿಯ ವಿನ್ಯಾಸಗಳು ಪ್ರಕೀರ್ಣಕ ರೂಪದಲ್ಲಿ ರಚಿಸಲ್ಪಟ್ಟಿರುವುದರಿಂದ ಒಂದು ವಿನ್ಯಾಸಗಳಲ್ಲಿ ದಟ್ಟವಾದ ಅಲಂಕಾರ ಕಂಡುಬರುವುದರೊಂದಿಗೆ ವೈಭವದ ನೆಲೆಯಲ್ಲಿ ಈ ಪಾತ್ರೆ ಮಹತ್ವದ್ದಾಗಿದೆ. ಪಾತ್ರೆಯ ಒಳಾವರಣದ ಅಂಚಿನಲ್ಲಿ ಹನ್ನೆರಡು ದಳಗಳ ಹೂವಿನ ವಿನ್ಯಾಸಗಳು ಬಳ್ಳಿಯ ರೂಪದಲ್ಲಿ ಒಡಮೂಡಿವೆ. ಒಳಭಾಗದಲ್ಲಿ ಮುಸ್ಲಿಂ ವಾಸ್ತು ಶೈಲಿಯಲ್ಲಿ ಕಂಡುಬರುವ ಪರ್ಣಗಳಂತಹ ಪಟ್ಟಿಕೆಗಳು ಸಮನಾಂತರವಾಗಿ ರಚಿಸಲ್ಪಟ್ಟಿವೆ.

೮. ಉಗುಳುವ ಪಾತ್ರೆ (೧೯ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ರೆನೆ ಗ್ಯಾಲರಿಯಲ್ಲಿ ಸಂಗ್ರಹಗೊಂಡಿರುವ ಈ ಪೀಕದಾನಿಯು ಚಿತ್ರ ೭ರಲ್ಲಿ ಕಂಡುಬರುವಂತಹ ವಿನ್ಯಾಸವನ್ನೇ ಹೊಂದಿದೆ. ಪಾತ್ರೆ ಮತ್ತು ಅಡಿಪೀಠಗಳ ಕಂಠದಲ್ಲಿ ಸಂಕ್ಷೇಪಯುಕ್ತ ಪಟ್ಟಿಕೆಗಳು ಒಡಮೂಡಿದ್ದು, ಅಂಡಾಕಾರದಲ್ಲಿ ಹೂವಿನ ಗಿಡದ ವಿನ್ಯಾಸವನ್ನು ಕಾಣಬಹುದಾಗಿದೆ. ಈ ವಿನ್ಯಾಸದ ಸುತ್ತಣ ನಾಲ್ಕು ಪಟ್ಟಿಕೆಗಳು ಚಿಕಣಿ ಶೈಲಿಯ ಬಿಂದುಗಳಲ್ಲಿ ರಚಿಸಲ್ಪಟ್ಟಿದ್ದು, ಇದೇ ಬಗೆಯ ಪಟ್ಟಿಕೆಗಳು ಪಾತ್ರೆ ಮತ್ತು ಅಡಿಪೀಠಗಳೆರಡರಲ್ಲಿ ಪುನರಾವರ್ತನೆಗೊಂಡಿವೆ.

ಉಪಸಂಹಾರ

ಪ್ರಸ್ತುತ ಈ ಉಪ ಅಧ್ಯಾಯದಲ್ಲಿ ಒಟ್ಟು ಎಂಟು ಉಗುಳುವ ಪಾತ್ರೆ (ಪೀಕದಾನಿ)ಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ೨,೩,೪,೫,೭ ಮತ್ತು ೮ರ ಪೀಕದಾನಿಗಳು ಗಂಟೆಯಾಕಾರದಲ್ಲಿ ಆಕೃತಿಯನ್ನು ಹೊಂದಿವೆ. ಚಿತ್ರ೫ನ್ನು ಹೊರತುಪಡಿಸಿದರೆ ಇನ್ನುಳಿದ ಪೀಕದಾನಿಗಳು ಅತ್ಯಂತ ಸೂಕ್ಷ್ಮ ವಿನ್ಯಾಸಗಳಿಂದ ಕೂಡಿವೆ. ಇವುಗಳಲ್ಲಿ ಬಹುತೇಕವಾಗಿ ಪ್ರಾಕೃತಿಕ ವಿನ್ಯಾಸಗಳನ್ನೇ ಅಲಂಕಾರಿಕ ನೆಲೆಯಲ್ಲಿ ಕುಶಲಕರ್ಮಿಗಳು ದುಡಿಸಿಕೊಂಡಿರುವುದು ಕಂಡುಬರುತ್ತದೆ. ಪಟ್ಟಿಕೆಗಳಲ್ಲಿ ಎಂದಿನಂತೆ ಬಿಂದುಗಳನ್ನು ವಿನ್ಯಾಸಯುಕ್ತವಾಗಿ ಬಳಸಿಕೊಳ್ಳಲಾಗಿದೆ. ಚಿತ್ರ ೫ರಲ್ಲಿ ಅತ್ಯಂತ ಸಂಕ್ಷೇಪಯುಕ್ತ ವಿನ್ಯಾಸವಾಗಿದ್ದು ಬಿಂದುಗಳನ್ನೇ ಉಳಿಸಿಕೊಂಡು ಬೆಳ್ಳಿಯ ರೇಖೆಗಳಿಂದ ಪಟ್ಟಿಕೆಗಳನ್ನು ರಚಿಸಲಾಗಿದೆ. ಅವು ಓರಲಾಗಿ ರಚಿಸಲ್ಪಟ್ಟಿರುವುದರಿಂದ ಪಾತ್ರೆಗೆ ಸುರುಳಿಯಂತಹ ಭಾವವನ್ನು ತಂದುಕೊಡುತ್ತದೆ. ಚಿತ್ರ ೬ಲ್ಲಿರುವ ಪೀಕದಾನಿಯು ಇತರ ಪೀಕದಾನಿಗಳಿಗಿಂತ ವಿಭಿನ್ನವಾಗಿದ್ದು ಮೇಲ್ಭಾಗದಲ್ಲಿ ತಟ್ಟೆಯನ್ನು ಹೊಂದಿದೆ. ಕೆಳಭಾಗದಲ್ಲಿ ದುಂಡಾದ ಪಾತ್ರೆಯನ್ನು ಹೊಂದಿದೆ. ಇದರಲ್ಲಿ ಪರ್ಣಗಳನ್ನು ಸೃಜನಾತ್ಮಕವಾಗಿ ದುಡಿಸಿಕೊಂಡು ಹೂವಿನಂತಹ ವಿನ್ಯಾಸವನ್ನು ರಚಿಸಿರುವುದು ವಿಶೇಷ. ಚಿತ್ರ ಅತ್ಯಂತ ಸೂಕ್ಷ್ಮ ಕುಸುರಿಯನ್ನು ಹೊಂದಿರುವ ಪೀಕದಾನಿಯಾಗಿದ್ದು ಚಿತ್ರ೬ರ ಪೀಕದಾನಿಯನ್ನೇ ಹೋಲುತ್ತಿದೆ. ಇಲ್ಲಿರುವ ಪೀಕದಾನಿಗಳಲ್ಲೇ ಅತ್ಯಂತ ಆಕರ್ಷಕ ವಿನ್ಯಾಸಗಳಿಂದ ಕೂಡಿದ ಇದರಲ್ಲಿ ಬೆಳ್ಳಿ ತಂತಿಗಳನ್ನು ಅತ್ಯಂತ ನಾಜೂಕುತನದಿಂದ ದುಡಿಸಿಕೊಂಡಿರುವುದು ಕರ್ಮಿಯ ಪ್ರಗಲ್ಭತೆಗೆ ಒಂದು ಉದಾಹರಣೆಯಾಗಬಲ್ಲುದು.

*****

೦೪. ಊರುಗೋಲು

೧. ಊರುಗೋಲು (೧೮ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಬೀದರಿನ ರಾಜ ಬಿದ್ರಿ ವರ್ಕ್ಸ್‌ನ ರಾಜಕುಮಾರ ಅವರ ಸಂಗ್ರಹದಲ್ಲಿರುವ ಒಂದು ಅಪರೂಪದ ಊರುಗೋಲು ಇದಾಗಿದೆ. ಹಿರಿಯ ತಲೆಮಾರಿನವರು ರಚಿಸಿದ ಈ ಊರುಗೋಲಿನಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಒಂದು ಊರುಗೋಲಿನ ಹಿಡಿ, ಇನ್ನೊಂದು ನಿಲುವು. ಹಿಡಿಯಲ್ಲಿನ ವಿನ್ಯಾಸಗಳು ಪ್ರಾಕೃತಿಕ ಪ್ರೇರಣೆಯಿಂದ ಪ್ರಕಟಗೊಂಡಿವೆ.

ಹಿಡಿಯ ಕಂಠದಿಂದ ಹಬ್ಬಿದ ಬಳ್ಳಿಯಂತೆ ಒಡಮೂಡಿದ ಅಲಂಕಾರಿಕ ನೆಲೆಯ ವಿನ್ಯಾಸಗಳು ಹಿಡಿಯ ತುದಿಯನ್ನು ತಲಪುವ ಮುಂಚೆಯೇ ಸಮಾಪ್ತಿಗೊಳ್ಳುತ್ತವೆ. ಪಂಚದಳಗಳ ಹೂವಿನ ವಿನ್ಯಾಸವು ಅವುಗಳನ್ನು ಬಳಸಿಕೊಂಡು ಪರ್ಣಗಳಂತಹ ವಿನ್ಯಾಸಗಳು ಅಲಂಕಾರಿಕ ಭವ್ಯತೆಯನ್ನು

ತಂದುಕೊಡುತ್ತಿವೆ. ಮುಂಭಾಗದಲ್ಲಿ ಓರಲಾಗಿರುವ ಆಯತಾಕಾರದ ವಿನ್ಯಾಸಗಳಲ್ಲಿ ಓರಲಾಗಿರುವ ರೇಖೆಗಳು ಒಡಮೂಡಿವೆ. ಹಿಡಿಯ ತುದಿಯಲ್ಲಿ ಅಷ್ಟದಳಗಳ ಹೂವಿನ ವಿನ್ಯಾಸವು ರೇಖಾತ್ಮಕವಾಗಿ ಪ್ರಕಟವಾಗಿದೆ.

ಎರಡನೆಯದು ಕಂಠದ ಕೆಳಭಾಗದಲ್ಲಿರುವ ನಿಲುವು ಷಟ್‌ಕೋನದಲ್ಲಿ ರಚಿಸಲ್ಪಟ್ಟಿದೆ. ಪ್ರತೀ ಕೋನದ ಪಟ್ಟಿಕೆಯಲ್ಲಿ ಸರ್ಪಶೈಲಿಯಲ್ಲಿ ಪರ್ಣಗಳ ವಿನ್ಯಾಸಗಳು ಏಕಮುಖವಾಗಿ ರಚಿಸಲ್ಪಟ್ಟಿರುವುದರಿಂದ ಮೇಲ್ನೋಟಕ್ಕೆ ಒಂದು ಬಗೆಯ ಸಂಚಾರಿ ಭಾವ ಪ್ರಕಟವಾಗುತ್ತದೆ. ಸೂಕ್ಷ್ಮವಾದ ಕುಶಲತೆಯ ಕಾರಣವಾಗಿ ಒಟ್ಟು ಊರುಗೋಲು ಶ್ರೀಮಂತಿಕೆಯ ವೈಭವವನ್ನು ಪ್ರಕಟಪಡಿಸುತ್ತದೆ.

*****

೦೫. ಕೈತೊಳೆಯುವ ಪಾತ್ರೆಗಳು

ರಾಜ ಪರಂಪರೆಯಲ್ಲಿ ಪೀಕದಾನಿಯಂತೆ ಕೈತೊಳೆಯುವ ಪಾತ್ರೆಗಳಿಗೂ ಮಾನ್ಯತೆ ಇದೆ. ರಾಜ ವಂಶಸ್ಥರು ಸುಗ್ರಾಸ ಭೋಜನ ಸವಿದ ಮೇಲೆ ತಮ್ಮ ಕೈಯನ್ನು ತೊಳೆಯುವ ಪಾತ್ರೆಯಲ್ಲೂ ಸಹ ಅಲಂಕಾರದ ಮುಖೇನವಾಗಿ ರಾಜವೈಭವವನ್ನು ತೋರ್ಪಡಿಸುವ ಹಿನ್ನೆಲೆಯಲ್ಲಿ ಈ ಕೈತೊಳೆಯುವ ಪಾತ್ರೆಗಳು ನಿರ್ಮಾಣಗೊಂಡಿವೆ. ಪ್ರಸ್ತುತ ಸಂದರ್ಭದಲ್ಲಿ ಅವು ಅಪರೂಪವಾಗಿದ್ದು ಇಲ್ಲಿ ಅಧ್ಯಯನಕ್ಕೆ ಎರಡು ಪಾತ್ರೆಗಳು ಲಭ್ಯವಾಗಿವೆ.

೧. ಕೈತೊಳೆಯುವ ಪಾತ್ರೆ ಮತ್ತು ಹೂಜಿ (೧೮ನೆಯ ಶತಮಾನ) ಅಫ್ತಾಬಿ ತಂತ್ರ

ವೋರ್ಸೆಸ್ಟರ್ ಆರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಕೈತೊಳೆಯುವ ಪಾತ್ರೆ ಮತ್ತು ಹೂಜಿಯು ಮೇಲ್ನೋಟಕ್ಕೆ ರಾಜವೈಭೋಗದ ಪ್ರತೀಕವಾಗಿದೆ. ಬಹುಶಃ ಹೂವಿನ ಗಿಡದ ವಿನ್ಯಾಸಗಳನ್ನೇ ಹೂಜಿ ಮತ್ತು ಕೈತೊಳೆಯುವ ಪಾತ್ರೆಗಳಲ್ಲಿ ಕಾಣಬಹುದಾಗಿದೆ. ಹೂಜಿಯ ನಳಿಕೆಯಲ್ಲಿ ಮತ್ತು ಹೂಜಿಯ ಕಂಠ, ಮುಚ್ಚಳಿಕೆಯಲ್ಲಿ ಏಕಪ್ರಕಾರವಾದ ಪ್ರಾಕೃತಿಕ ವಿನ್ಯಾಸಗಳು ಇವೆ. ಹೂಜಿಯ ಉದರ ಭಾಗದಲ್ಲಿರುವ ಹೂವಿನ ವಿನ್ಯಾಸಗಳು ಕಂಠದ ಮೇಲ್ಭಾಗದಲ್ಲಿಯೂ ಸಹ ಪುನರಾವರ್ತನೆಗೊಂಡಿವೆ. ಇದೇ ಬಗೆಯ ವಿನ್ಯಾಸಗಳು ಪಾತ್ರೆಯ ಮೇಲೆ ರಚಿತಗೊಂಡಿರುವ ತಟ್ಟೆಯಲ್ಲೂ ಪುನರಾವರ್ತನೆಗೊಂಡಿವೆ. ಹಾಗೆಯೇ ಪಾತ್ರೆಯ ಉದರ ಭಾಗದಲ್ಲೂ ಅದೇ ಪ್ರಕಾರದ ಹೂವಿನ ವಿನ್ಯಾಸಗಳು ಪ್ರಕಟಗೊಂಡಿವೆ. ನೀರಿನ ಹೂಜಿಯಲ್ಲಿ ಈ ಹೂಜಿ ಮತ್ತು ಬೋಗುಣಿಗಳಲ್ಲಿ ಕಂಡುಬರುವ ಶ್ರೇಷ್ಠವಾದ ಕರಕುಶಲತೆ ಮತ್ತು ಪುಷ್ಪಾಲಂಕಾರಗಳ ವಿನ್ಯಾಸಗಳು ಬಳಸುವ ವ್ಯಕ್ತಿಗಳ ಸ್ಥಾನ–ಮಾನಗಳ ಔನ್ನತ್ಯವನ್ನು ಹೇಳುತ್ತವೆ. ಅವುಗಳ ಆಕಾರ, ದ್ರವ್ಯ ಮತ್ತು ಅಲಂಕಾರಗಳು

ನಿತ್ಯೋಪಯೋಗಿಯಾದ ಸಾಮಾನ್ಯ ವಸ್ತುಗಳನ್ನು ಆಸ್ಥಾನದ ರಸಿಕತೆಯ ಶ್ರೇಷ್ಠ ಮಾದರಿಗಳನ್ನಾಗಿ ಬದಲಾಯಿಸುತ್ತವೆ.

೨. ಕೈತೊಳೆಯುವ ಪಾತ್ರೆ (೧೮ನೆಯ ಶತಮಾನ) ಜರ್‌ನಿಶಾನ್ ಮತ್ತು ತರ್ಕಶಿ ತಂತ್ರ

ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ ಈ ಕೈತೊಳೆಯುವ ಪಾತ್ರೆ ಬಹು ಸೂಕ್ಷ್ಮ ಕುಸುರಿ ಕಾರ್ಯಕ್ಷಮತೆಯಿಂದ ಗಮನಸೆಳೆಯುತ್ತದೆ. ಅತ್ಯಂತ ಪ್ರಕೀರ್ಣಕ ಸಂಯೋಜನೆಯಿಂದ ಕೂಡಿದ ಈ ಪಾತ್ರೆಯಲ್ಲಿ ಮೇಲ್ಭಾಗದ ತಟ್ಟೆಯೊಂದೇ ಅಧ್ಯಯನಕ್ಕೆ ಪ್ರಾಪ್ತವಾಗಿದೆ. ತಟ್ಟೆಯ ಮಧ್ಯದಲ್ಲಿ ಪಾತ್ರೆಯ ಆವರಣ, ಈ ಆವರಣದ ಸುತ್ತಣ ಮೂರು ಸಾಲುಗಳಲ್ಲಿ ಚಿತ್ರಣಗೊಂಡಿರುವ ಪ್ರಾಕೃತಿಕ ವಿನ್ಯಾಸಗಳು ಮೈದೆಳೆದಿವೆ. ಒಳಸುತ್ತಿನ ಸಾಲಿನಲ್ಲಿ ಬಿಂದುಗಳಿಂದ ಕೂಡಿದ ಪಟ್ಟಿಕೆ ರಚಿಸಲ್ಪಟ್ಟಿದೆ. ಎರಡನೆಯ ಸಾಲಿನಲ್ಲಿ ತಟ್ಟೆಯ ಪ್ರಮುಖ ವಿನ್ಯಾಸಕ್ಕೆ ಮೀಸಲಾಗಿದ್ದು, ಈ ಪಟ್ಟಿಕೆಯನ್ನು ಸಮಾನಾಂತರವಾಗಿ ಹನ್ನೆರಡು ಭಾಗಗಳನ್ನಾಗಿಸಿಕೊಳ್ಳುವ ಸಂದರ್ಭದಲ್ಲೂ ಕರ್ಮಿಯು ತನ್ನ ಪ್ರಗಲ್ಭ ಬುದ್ಧಿ ಮತ್ತೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದಾಗಿದೆ. ಅಶೋಕ ಮರದ ವಿನ್ಯಾಸವನ್ನೇ ಈ ಹನ್ನೆರಡು ಭಾಗಗಳನ್ನಾಗಿಸುವದಕ್ಕೆ ಪ್ರಮುಖವಾಗಿಸಿಕೊಳ್ಳಲಾಗಿದೆ. ಅಶೋಕ ಮರದ ವಿನ್ಯಾಸದ ಮೇಲೊಂದು ಅರಳಿದ ಪುಷ್ಪ ವಿನ್ಯಾಸ ಹನ್ನೆರಡು ಭಾಗಗಳಲ್ಲೂ ಪುನರಾವರ್ತಿತಗೊಳ್ಳುವುದರ ಜೊತೆಗೆ, ಆ ಕೋಣೆಯ ಆಕೃತಿಗೆ ವರ್ತುಲಾಕಾರದ ರೂಪ ಕೊಟ್ಟಿದೆ. ಹೀಗೆ ರೂಪಗೊಂಡ ಪ್ರತಿಯೊಂದು ಕೋಣೆಯಲ್ಲಿ ವಿಭಿನ್ನವಾದ ವಿನ್ಯಾಸಗಳೇ ತುಂಬಿವೆ. ಒಂದಂದರಲ್ಲೂ ನಾಲ್ಕು, ಮೂರು, ಒಂಭತ್ತು ಹೀಗೆ ವಿಭಿನ್ನ ಸಂಖ್ಯೆಯ ಹೂವುಗಳನ್ನೇ ಕೆಲವಡೆ ಪ್ರಧಾನ ವಿನ್ಯಾಸಗಳನ್ನಾಗಿ ದುಡಿಸಿಕೊಂಡರೆ, ಇನ್ನು ಕೆಲವಡೆ ಪರ್ಣ ಪ್ರಧಾನ ಹೂವಿನ ಗಿಡಗಳನ್ನೇ ಪ್ರಧಾನವಾಗಿಸಿಕೊಳ್ಳಲಾಗಿದೆ. ಅಂಚಿನಲ್ಲಿ ಹೂವಿನಂತಹ ವಿನ್ಯಾಸಗಳು ಪಟ್ಟಿಕೆಯ ರೂಪದಲ್ಲಿ ಸಾಲುಸಾಲಾಗಿ ಒಡಮೂಡಿವೆ. ಒಟ್ಟಿನಲ್ಲಿ ಕೈತೊಳೆಯುವ ಪಾತ್ರೆಗಳಲ್ಲಿ ಅತ್ಯಂತ ವೈಭವೀಕರಣದ ಪ್ರತೀಕವಾಗಿರುವ ಈ ಪಾತ್ರೆ ವಿನ್ಯಾಸ, ಸಂಯೋಜನೆ ಮತ್ತು ಮಾಧ್ಯಮವನ್ನು ದುಡಿಸಿಕೊಳ್ಳುವ ಸಾಧ್ಯತೆಗಳಿಮದ ಅನನ್ಯವಾಗಿದೆ ಎಂದರೆ ಅತಿಶಯೋಕ್ತಿಯೇನಲ್ಲ.

೩. ಕೈತೊಳೆಯುವ ಪಾತ್ರೆ (ಇಂಡಿಯನ್ ಮ್ಯೂಸಿಯಂ, ಕೋಲ್ಕತ್ತಾ) ಅಫ್ತಾಬಿ ತಂತ್ರ

ಚಿತ್ರ೨ರಲ್ಲಿನ ಪಾತ್ರೆಯಂತೆ ಆಕಾರವನ್ನು ಹೊಂದಿರುವ ಈ ಪತ್ರೆಯಲ್ಲೂ ಅತ್ಯಂತ ವೈಭವೀಕರಣವೆನ್ನಬಹುದಾದ ವಿನ್ಯಾಸಗಳು ಒಡಮೂಡಿವೆ. ಪಾತ್ರೆಯ ಮೇಲ್ಭಾಗದಲ್ಲಿ ಹನ್ನೆರಡು ಅಂಡಾಕಾರದ ತೆಳುವಾದ ಪಟ್ಟಿಕೆಯ ಒಳಾವರಣದಲ್ಲಿ ರಚನೆಗೊಂಡಿರುವ ವಿನ್ಯಾಸಗಳು ಬಹುತೇಕವಾಗಿ ಪ್ರಾಕೃತಿಕ ವಿನ್ಯಾಸಗಳೇ ಆಗಿವೆ. ಚಿತ್ರ ೧. ಉಗುಳುವ ಪಾತ್ರೆಯಂತಹ ವಿನ್ಯಾಸವನ್ನೇ

ಇದೂ ಕೂಡ ಹೊಂದಿರುವ ಸಾಧ್ಯತೆಗಳು ಇವೆ. ಚಿತ್ರ ಅಸ್ಪಷ್ಟ ನೆಲೆಯಲ್ಲಿ ಲಭ್ಯವಾಗಿರುವುದರಿಂದ ವಿನ್ಯಾಸಗಳು ವಿವರವಾಗಿ ದಕ್ಕುತ್ತಿಲ್ಲ.

ಉಪಸಂಹಾರ

ಪ್ರಸ್ತುತ ಈ ಉಪ ಅಧ್ಯಾಯದಲ್ಲಿ ಮೂರು ಕೈತೊಳೆಯುವ ಪಾತ್ರೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೂರು ಒಂದೇ ಆಕಾರವನ್ನು ಹೊಂದಿದ್ದು ವಿಭಿನ್ನವಾದ ಮತ್ತು ಅನನ್ಯವಾದ ವಿನ್ಯಾಸಗಳನ್ನು ಹೊಂದಿವೆ. ಚಿತ್ರ ೧ರಲ್ಲಿ ದಟ್ಟವಾದ ವಿನ್ಯಾಸಗಳು ಒಡಮೂಡಿದ್ದರೆ, ಚಿತ್ರ ೨ಮತ್ತು ೩ರಲ್ಲಿ ಅತ್ಯಂತ ಸೂಕ್ಷ್ಮವಾದ ವಿನ್ಯಾಸಗಳು ಪ್ರಕೀರ್ಣಕ ಬಗೆಯಲ್ಲಿ ಸಂಯೋಜಿಸಲ್ಪಟ್ಟಿವೆ. ಚಿತ್ರ೨ರಲ್ಲಿ ಇತರ ಎರಡು ಪಾತ್ರೆಗಳಿಗಿಂತ ವಿಭಿನ್ನವಾದ ವಿನ್ಯಾಸಗಳು ಪ್ರಕಟವಾಗಿವೆ. ಒಂದು ಇನ್ನೊಂದರಂತೆ ಮೂಡದೇ ವಿಭಿನ್ನ ನೆಲೆಯಲ್ಲಿ ಮೂಡಿವೆ. ಒಟ್ಟಾರೆ ಮೂರು ಪಾತ್ರೆಗಳಲ್ಲಿ ಎಂದಿನಂತೆ ಪ್ರಾಕೃತಿಕ ವಿನ್ಯಾಸಗಳು ಮೇಳೈಸಿವೆ.

*****

೦೬. ನೆಲಹಾಸು ಭಾರದ ವಸ್ತುಗಳು

೧. ನೆಲಹಾಸು ಭಾರದ ವಸ್ತುಗಳು (೧೭ನೆಯ ಶತಮಾನ) ಜರ್‌ನಿಶಾನ್ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಭಾರದ ವಸ್ತುಗಳು ಸಹ ವೈಭವೀಕರಣದ ನೆಲೆಯಲ್ಲಿ ರೂಪುಗೊಂಡಿವೆ. ಅರಮನೆಗಳಲ್ಲಿ ನೆಲಕ್ಕೆ ಹಾಸುವ ಜಮಖಾನೆಗಳು ಗಾಳಿಗೆ ಹಾರಾಡದಂತೆ ನಾಲ್ಕೂ ಮೂಲೆಗಳಲ್ಲಿ ಒಂದೊಂದು ಈ ಭಾರದ ವಸ್ತುವನ್ನು ಇಡುತ್ತಿರುವ ಸಂಗತಿ ಇಲ್ಲಿನ ಬಿದ್ರಿ ವಸ್ತುಗಳಿಂದ ಗೊತ್ತಾಗುತ್ತದೆ. ಅಂದಿನ ಆಳರಸರ ಸೌಂದರ್ಯ ಪ್ರಜ್ಞೆಯ ಪ್ರತೀಕದಂತಿರುವ ಇಲ್ಲಿನ ನಾಲ್ಕೂ ಭಾರದ ವಸ್ತುಗಳು ಒಂದೇ ಬಗೆಯ ವಿನ್ಯಾಸಗಳನ್ನು ಹೊಂದಿವೆ.

ತ್ರಿದಳ ವಿನ್ಯಾಸಗಳ ಮಧ್ಯೆ ಅರ್ಧ ವರ್ತುಲಾಕಾರದ (ಒಂದು ಬಗೆಯಲ್ಲಿ ಬೀಸಣಿಗೆಯ ಆಕಾರ) ಆಕರ್ಷಕ ವಿನ್ಯಾಸ ಸಮಾನಾಂತರವಾಗಿ ಪುನರಾವರ್ತಿತಗೊಂಡಿದೆ. ಕಂಠದಲ್ಲಿ ಹಗ್ಗದಂತೆ ವಿನ್ಯಾಸವನ್ನು ರೂಪಿಸಲಾಗಿದೆ. ಅದರ ಕೆಳಭಾಗದಲ್ಲಿ ಸುತ್ತಲೂ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಎಂದಿನಂತೆ ಕಂಡುಬರುವ ದಳಗಳ ವಿನ್ಯಾಸಗಳು ಒಂದೇ ಕ್ರಮದಲ್ಲಿ ರೂಪಣಗೊಂಡಿವೆ. ಅಡಿಪೀಠವು ಅಷ್ಟಕೋನದಲ್ಲಿ ರೂಪುಗೊಂಡಿದ್ದು ಮೇಲ್ಭಾಗದಲ್ಲಿ ಹೂವಿನಂತಹ ವಿನ್ಯಾಸಗಳು ಬಳ್ಳಿಯ ರೂಪದಲ್ಲಿ ವಸ್ತುವನ್ನು ಸುತ್ತುವರೆದಿವೆ. ಪಾರ್ಶ್ವದಲ್ಲಿ ತ್ರಿದಳ ವಿನ್ಯಾಸಗಳು

ಅಲಂಕೃತಗೊಂಡಿವೆ. ಕೆಳಭಾಗದ ಪಟ್ಟಿಕೆಯಲ್ಲಿ ಬಿಂದುಗಳಂತಹ ರಚನೆಗಳು ಸಾಲುಸಾಲಾಗಿ ರಚಿಸಲ್ಪಟ್ಟಿವೆ.

*****

೦೭. ಪಾನದಾನಗಳು

ಈ ಹಿಂದಿನ ಅಧ್ಯಾಯದಲ್ಲಿ ಪೀಕದಾನಿಯ ವಿನ್ಯಾಸಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು ಅವುಗಳಿಗೆ ಸಂಬಂಧಪಟ್ಟ ಈ ಪಾನದಾನಗಳು ಸಹ ಆಳರಸರ ಸಂದರ್ಭದಲ್ಲಿ ಪ್ರಮುಖವಾದ ನಿತ್ಯ ಬಳಕೆಯ ವಸ್ತುಗಳಲ್ಲಿ ಒಂದಾಗಿವೆ. ತಾಂಬೂಲ ಸೇವನೆಯು ದೇಶೀಯ ಹವ್ಯಾಸ. ವೀಳ್ಯದೆಲೆಗಳನ್ನು ಮೆಲ್ಲುವುದರಿಂದ ಜೀರ್ಣಕ್ರಿಯೆಗೆ ಅನುಕೂಲ, ಉಸಿರಿಗೆ ಸುವಾಸನೆ, ಬಹುಶಃ ಮೊಗಲರ ಹಿಂದೂ ರಾಣಿಯರಿಂದ ೧೭ನೆಯ ಶತಮಾನದ ಹೊತ್ತಿಗೆ ಮೊಗಲರ ಅರಮನೆ ಮತ್ತು ಆಸ್ಥಾನಗಳನ್ನು ಈ ಹವ್ಯಾಸವು ಪ್ರವೇಶಿಸಿರಬೇಕು. ಆದ್ದರಿಂದ ತಾಂಬೂಲಕ್ಕೆಂದೇ ಬಿದ್ರಿ ಪಾನದಾನಗಳನ್ನು ನಿರ್ಮಿಸುವ ಪರಿಪಾಠ ಬೆಳೆದು ಬಂದಿರಬಹುದು. ಈ ಪಾನದಾನಗಳಲ್ಲಿ ಎಲೆ, ಅಡಿಕೆ, ಸುಣ್ಣ, ಪಾನ ಮಸಾಲೆಗಳನ್ನು ಇಡಲು ವಿಭಿನ್ನ ಬಗೆಯ ಖಾನೆಗಳನ್ನು ಆಯಾ ಪಾನದಾನದ ವಿನ್ಯಾಸಕ್ಕೆ ಅನುಗುಣವಾಗಿ ರಚಿಸಿರುತ್ತಾರೆ. ಮೇಲ್ನೋಟಕ್ಕೆ ಒಂದು ಪೆಟ್ಟಿಗೆಯಂತೆ ತೋರ್ಪಡುವ ಈ ಪಾನದಾನಗಳ ಒಳಾವರಣವೂ ಸಹ ಅಷ್ಟೇ ಸೋಜಿಗವೆನಿಸುವಂತಹ ಸೃಜನಾತ್ಮಕ ವಿನ್ಯಾಸಗಳನ್ನು ಹೊಂದಿರುತ್ತದೆ. ಇಂತಹ ಅನನ್ಯವಾದ ಹಲವು ಮಾದರಿಯ ಪಾನದಾನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. **ಪಾನದಾನ ಪೆಟ್ಟಿಗೆ** (೧೯ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಏಶಿಯನ್ ಆರ್ಟ್‌ನ ಸಂಗ್ರಹದಲ್ಲಿರುವ ಪ್ರಮುಖ ಬಿದ್ರಿ ವಸ್ತು ಪಾನದಾನವು. ಇದೊಂದು ಪಾನದಾನ ಅಥವಾ ತಾಂಬೂಲ ಕರಂಡಕದ ಚಿತ್ರ, ಅಡಿಕೆ, ಸುಣ್ಣ ಮತ್ತು ಇತರ ಮಸಾಲೆಗಳನ್ನು ಸೇರಿಸಿ ಎಲೆಯಲ್ಲಿ ಸುತ್ತಿ ಪೆಟ್ಟಿಗೆಯಲ್ಲಿ ಇಡುವುದು ರೂಢಿ. ಡೆಕ್ಕನ್ ೧೯ನೆಯ ಶತಮಾನದ ಪೂರ್ವಭಾಗದ ಬಿದ್ರಿ ಪಾನದಾನವು ಹಾಕ್ಸ್ ಸಂಗ್ರಹದಲ್ಲಿದ್ದು ಸಾರ್ವಜನಿಕರಿಗಾಗಿ ಪ್ರದರ್ಶಿಸಲ್ಪಟ್ಟಿದೆ. ಎಂದಿನಂತೆ ಹೂವಿನ ಗಿಡದ ದಟ್ಟ ವಿನ್ಯಾಸಗಳಿಂದ ಕೂಡಿದ ಈ ಪೆಟ್ಟಿಗೆಗೆ ಮುಚ್ಚಳ ಮತ್ತು ಪೆಟ್ಟಿಗೆಇದ್ದು ಪೆಟ್ಟಿಗೆಗೆ ನಾಲ್ಕು ಕಾಲುಗಳು ಸಹ ಇವೆ. ಎರಡರಲ್ಲೂ ಒಂದೇ ಬಗೆಯ ವಿನ್ಯಾಸಗಳು ಹೊಂದಿದ್ದು ಸಂಯೋಜನೆಗೆ ಪೂರಕವಾಗಿ ಅಲ್ಪಸ್ವಲ್ಪ ಬದಲಾವಣೆಯನ್ನೂ ಹೊಂದಿವೆ. ಈ ಪೆಟ್ಟಿಗೆಯಲ್ಲಿ ತಾಂಬೂಲದ ಬೇರೆ ಬೇರೆ ವಸ್ತುಗಳನ್ನು ಇಡಲು ಬಿಲ್ಲಿನಂತೆ ಬಾಗಿದ ಬೇರೆ ಬೇರೆ ಖಾನೆಗಳಿವೆ. ಇಂತಹ ಪುಟ್ಟ ಬಿದ್ರಿ ವಸ್ತುಗಳು ಹುಕ್ಕಾ ಮತ್ತು ಪೀಕದಾನಿಗಳಂತೆ ಸಾಕಷ್ಟು

ಸಂಖ್ಯೆಯಲ್ಲಿ ದೊರೆಯುವುದು ವಿರಳ. ಇದು ಬಹು ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿದೆಯಾದರೂ ವಾಡಿಕೆಯಂತೆ ಬೆಳ್ಳಿಗೆ ಧಕ್ಕೆಯಾಗಿದೆ.

೨. ಪಾನದಾನ ಪೆಟ್ಟಿಗೆ (೧೮ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ನವದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ ಈ ಪಾನದಾನವು ಮೇಲ್ನೋಟಕ್ಕೆ ಮಂಚದಾಕೃತಿಯನ್ನು ಹೊಂದಿದ್ದು ಮೇಲ್ಭಾಗದಲ್ಲಿ ಪೆಟ್ಟಿಗೆ ರಚನೆಗೊಂಡಿದೆ. ಚಿತ್ರ ೧ರಂತೆ ಇದೂ ಸಹ ದಟ್ಟ ವಿನ್ಯಾಸಗಳನ್ನೇ ಹೊಂದಿದೆ. ಹೂವಿನಗಿಡದ ವಿನ್ಯಾಸ ಪೆಟ್ಟಿಗೆಯ ಮುಚ್ಚಳದಲ್ಲಿ, ಪೆಟ್ಟಿಗೆಯಲ್ಲಿ ಹಾಗೂ ಅದರ ಅಡಿ ಪೀಠದಲ್ಲಿ ಪುನರಾವರ್ತಿತಗೊಂಡಿವೆ. ಪ್ರಧಾನ ವಿನ್ಯಾಸಗಳ ಪಾರ್ಶ್ವಗಳೆರಡರಲ್ಲೂ ಪಟ್ಟಿಕೆಯ ರೂಪದಲ್ಲಿ ಎಂದಿನ ಹೂವಿನ ವಿನ್ಯಾಸಗಳು ಒಡಮೂಡಿವೆ.

೩. ಪಾನದಾನ (೧೭–೧೮ನೆಯ ಶತಮಾನ) ತರ್ಕಶಿ ತಂತ್ರ

ಅಮಿಕೋ ಪಬ್ಲಿಕ್‌ನಲ್ಲಿ ಸಂಗ್ರಹಗೊಂಡಿರುವ ಈ ಪಾನದಾನವು ಅತ್ಯಂತ ವಿಶಿಷ್ಟವಾದುದು. ಇದನ್ನು ದಷ್ಟಪುಷ್ಟವಾದ ಸುಂದರವಾದ ಬಾತುಕೋಳಿಯಂತೆ ನಿರ್ಮಿಸಲಾಗಿದೆ. ತನ್ನ ಕೊಕ್ಕನ್ನು ಬೆನ್ನ ಮೇಲೆ ಚಾಚಿದೆ. ಬಾತುಕೋಳಿಯ ತುಪ್ಪಟಗಳೆನ್ನೆಲ್ಲ ರೇಖಾತ್ಮಕವಾಗಿ ಚಿತ್ರಿಸಲಾಗಿದೆ. ಆದರೆ ಅವುಗಳನ್ನು ಎಂದಿನಂತೆ ಸಹಜವಾಗಿ ಚಿತ್ರಿಸದೇ ಅವುಗಳನ್ನು ಅಲಂಕಾರಿಕ ನೆಲೆಯಲ್ಲಿ ರೂಪುಗೊಳಿಸಲಾಗಿದೆ.

ಈ ಪಾನದಾನವನ್ನು ನಿರ್ಮಿಸಲು ನಾಲ್ವರು ಕರ್ಮಿಗಳು ಶ್ರಮಿಸಿದ್ದಾರೆ; ಮೋಮ್ ಅಥವಾ ಮೇಣವನ್ನು ಬಳಸಿ ಈ ಆಕಾರವನ್ನು ತಯಾರಿಸಿದ ಎರಕ ಹೊಯ್ಯುವವ; ಅದರ ಮೇಲ್ಮೈಯಲ್ಲಿ ನಕ್ಷೆಗಳನ್ನು ರಚಿಸಿದವ; ಆ ವಿನ್ಯಾಸಗಳ ಸುತ್ತಲಿನ ಭಾಗವನ್ನೆಲ್ಲ ಕೆತ್ತಿ ಹಾಕಿದ ಕೆತ್ತನೆಗಾರ ಮತ್ತು ಅದರೊಳಗೆ ಬೆಳ್ಳಿ ಮತ್ತು ಹಿತ್ತಾಳೆಯನ್ನು ಹುದುಗಿಸಿದ ಇನ್‌ಲೇಯರ. ಅನಂತರದಲ್ಲಿ ಮೇಲ್ಮೈಯಲ್ಲಿ ಕಪ್ಪಾಗಿಸಿದ್ದು ಇನ್‌ಲೇಯ ಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಅದು ಇಲ್ಲಿ ಬಾತುಕೋಳಿಯ ರೆಕ್ಕೆಗಳಲ್ಲಿ ಗೋಚರಿಸುತ್ತದೆ. ಈ ವಿಸ್ತಾರದ ಪ್ರಕ್ರಿಯೆಯ ಉತ್ಪತ್ತಿಯ ಬಗೆಗೆ ಅಸ್ಪಷ್ಟತೆಯಿದೆ. ಆದರೂ ದೀರ್ಘ ಕಾಲದ ಮೌಖಿಕ ಪರಂಪರೆಯ ಪ್ರಕಾರವಾಗಿದ್ದ ಇದು ಇರಾನ್‌ದಿಂದ ಬಂದಿರುವುದಾಗಿದೆ ಎಂದು ಸಂಸ್ಥೆಯ ಸಂಶೋಧನೆಗಳು ತಿಳಿಯಪಡಿಸಿವೆ.

೪. ಪಾನದಾನ (೧೮ನೆಯ ಶತಮಾನ) ಜರ್‌ನಿಶಾನ, ತರ್ಕಶಿ, ಅಫ್ತಾಬಿ ತಂತ್ರ

ಹೈದರಾಬಾದ್‌ನ ಸಾಲಾರ್‌ಜಂಗ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಪಾನದಾನವು ಕುಂಬಳಕಾಯಿಯ ಮಾದರಿಯಲ್ಲಿ ರಚನೆಗೊಂಡಿದೆ. ಬೆಳ್ಳಿ ಮತ್ತು ಹಿತ್ತಾಳೆಯ ಹುದುಗಿಸುವಿಕೆಯಿಂದನಿರ್ಮಾಣಗೊಂಡ ಈ ಪಾನದನವು ದಶ ಖಾನೆಗಳನ್ನು ಮುಚ್ಚಳ ಮತ್ತು

ಪಾತ್ರೆಯಲ್ಲಿ ಹೊಂದಿವೆ. ಪ್ರತೀ ಖಾನೆಯಲ್ಲೂ ವಿಭಿನ್ನವಾದ ಪ್ರಾಕೃತಿಕ ವಿನ್ಯಾಸಗಳು ಅಲಂಕರಣಗೊಂಡಿವೆ. ಹನ್ನೆರೆಡು ಮತ್ತು ಪಂಚದಳಗಳ ಹೂವುಗಳ ವಿನ್ಯಾಸವೇ ಇಲ್ಲಿ ಪ್ರಮುಖವಾದ ವಿನ್ಯಾಸವಾಗಿವೆ. ಅವುಗಳನ್ನು ಬಳಸಿಕೊಂಡ ತ್ರಿದಳ ಪರ್ಣಗಳು ಕೆಳಮುಖವಾಗಿ, ಮೇಲ್ಮುಖವಾಗಿ ಮತ್ತು ಪಾರ್ಶ್ವಗಳೆರಡರಲ್ಲಿ ಅಲಂಕರಿಸಿಸಲ್ಪಟ್ಟಿವೆ. ಅಲ್ಲಲ್ಲಿ ಚತುಷ್ಪ ದಳಗಳ ಹೂವಿನ ವಿನ್ಯಾಸಗಳು ಗೋಚರಿಸಲುತ್ತವೆ. ಮುಚ್ಚಳದ ಕೆಳ ಅಂಚಿನಲ್ಲಿ ಎಡ ಪಾರ್ಶ್ವಕ್ಕೆ ಚಲಿಸುವ ಹೂಬಳ್ಳಿಯ ವಿನ್ಯಾಸವು ಪಟ್ಟಿಕೆಯೊಂದರಲ್ಲಿ ಒಡಮೂಡಿದೆ. ಈ ಪಟ್ಟಿಕೆ ಪಾತ್ರೆ ಮತ್ತು ಮುಚ್ಚಳದ ಮಧ್ಯೆ ರಚಿಸಲ್ಪಟ್ಟಿರುವುದರಿಂದ ಎರಡನ್ನೂ ಪ್ರತ್ಯೇಕಿಸುವ ಸಂಕೇತವಾಗಿ ಗೋಚರವಾದರೂ ಪಾತ್ರೆ ಮತ್ತು ಮುಚ್ಚಳದ ವಿನ್ಯಾಸಗಳಲ್ಲಿ ಕರ್ಮಿಯು ಸಾಮ್ಯತೆಯನ್ನು ಕಾಯ್ದುಕೊಂಡು ಬಂದಿದ್ದಾನೆ.

೫. ಪಾನದಾನ (೧೮ನೆಯ ಶತಮಾನ) ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಪಾನದಾನವು ಅಷ್ಟಕೋನಾಕೃತಿಯಲ್ಲಿ ನಿರ್ಮಾಣಗೊಂಡಿದೆ. ಸೂಕ್ಷ್ಮವಲ್ಲದ ಕುಸುರಿಯಿಂದ ರಚನೆಗೊಂಡಿರುವ ಈ ಪಾನದಾನದ ಪ್ರತಿ ಖಾನೆಯಲ್ಲೂ ಇಪ್ಪತ್ತೈದು ದಳಗಳ ಹೂವಿನ ವಿನ್ಯಾಸವು ಸೂರ್ಯನಂತೆ ರಚನೆಗೊಂಡಿದೆ. ಪ್ರತೀ ಹೂವಿನ ವಿನ್ಯಾಸಗಳ ಮಧ್ಯೆ ಪಂಚದಳಗಳ ವಿನ್ಯಾಸವು ಮೇಲೆ ಮತ್ತು ಕೆಳ ಪಟ್ಟಿಕೆಯ ಒಳಾವರಣದಲ್ಲಿ ಒಂದು ಬಗೆಯಲ್ಲಿ ವಿಭಜಕದಂತೆ ಕಾರ್ಯನಿರ್ವಹಿಸುತ್ತಿವೆ. ಮುಚ್ಚಳದಲ್ಲಿ ಇವೇ ಬಗೆಯ ಹೂವಿನ ವಿನ್ಯಾಸಗಳು ರಚನೆಗೊಂಡಿದ್ದು ಕೆಳ ಅಂಚಿನ ಹೂವುಗಳೆರಡರ ಮಧ್ಯೆ ಮೆಲೆ ಅದೇ ಬಗೆಯ ಹೂವಿನ ವಿನ್ಯಾಸವನ್ನು ಸ್ವಲ್ಪ ಚಿಕ್ಕದಾಗಿ ಸಂಯೋಜಿಸಲಾಗಿದೆ. ವಾಡಿಕೆಯಂತೆ ಈ ಪಾನದಾನದ ಬೆಳ್ಳಿಯ ತಗಡುಗಳು ಕಿತ್ತುಹೋಗಿವೆ.

೬. ಪಾನದಾನ (೧೮–೧೯ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಪಾನದಾನವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದ್ದು ಆಕೃತಿಯಲ್ಲಿ ವಿಭಿನ್ನವಾದ ರಚನೆ ಹೊಂದಿದೆ. ಪಾನದಾನದ ಪಾರ್ಶ್ವಗಳೆರಡರಲ್ಲಿ ಓರಲಾಗಿ ರಚನೆಗೊಂಡ ಇದರಲ್ಲಿ ಬೀಸಣಿಕೆಯನ್ನು ಹೋಲುವ ಅರ್ಧವರ್ತುಲಾಕಾರದ ವಿನ್ಯಾಸಗಳು ಮುಚ್ಚಳ ಮತ್ತು ಪಾತ್ರೆಗಳೆರಡರಲ್ಲಿ ರಚನೆಗೊಂಡಿವೆ. ಮುಚ್ಚಳದಲ್ಲಿ ಸುಮಾರು ಮೂರ್‍ನಾಲ್ಕು ಹಂತದ ವರ್ತುಲಗಳಲ್ಲಿ ವಿನ್ಯಾಸಗಳನ್ನು ಹೊಂದಿದ ಈ ಪಾನದಾನದ ಪಾತ್ರೆಯಲ್ಲೂ ಐದು ಹಂತದ ವರ್ತುಲಗಳ ವಿನ್ಯಾಸವನ್ನು ಮೈಗೂಡಿಸಿಕೊಂಡಿದೆ. ಮುಚ್ಚಳದ ಕೆಳ ಅಂಚಿನಲ್ಲಿ ಹಾಗೂ ಪಾತ್ರೆಯ ಕೆಳ ಮತ್ತು ಮೇಲಿನ ಅಂಚಿನಲ್ಲಿ ಪಟ್ಟಿಕೆಗಳಲ್ಲಿ ಏಕರೂಪದ ಹೂವಿನಂತಹ ವಿನ್ಯಾಸಗಳನ್ನು ಕೆಳ ಮತ್ತು ಮೇಲ್ಮುಖವಾಗಿ ರಚನೆಗೊಂಡಿವೆ. ಪಾತ್ರೆಯ ಮೇಲಂಚಿನಲ್ಲಿ ಅಪರಿಚಿತವೆನ್ನಬಹುದಾದ ಪಟ್ಟಿಕೆಯಂತಹ ವಿನ್ಯಾಸಗಳು ರಚನೆಗೊಂಡಿವೆ. ಅದರ ಕೆಳಗಣ ಪಡ್ಡಿಕೆಯಲ್ಲಿ ಬಿಂದುಗಳನ್ನು ಹೊಂದಿದ ಪಟ್ಟಿಕೆ, ತದನಂತರದಲ್ಲಿ ಹೂವಿನ ವಿನ್ಯಾಸಗಳನ್ನು ಹೊಂದಿದ ಪಟ್ಟಿಕೆಯ ರಚನೆಗಳು ಪಾನದಾನದ ಸೌಂದರ್ಯವನ್ನು

ಇಮ್ಮಡಿಗೊಳಿಸಿವೆ. ಪಾನದಾನದ ಉದರ ಭಾಗದಲ್ಲಿ ಅರ್ಧವರ್ತುಲಾಕಾರದ ಬೀಸಣಿಕೆಯನ್ನು ಹೋಲುವಂತಹ ವಿನ್ಯಾಸಗಳು ಒಪ್ಪ ಓರಣವಾಗಿ ಸಂಯೋಜಿಸಲ್ಪಟ್ಟಿವೆ. '೭. **ಪಾನದಾನ (ಕ್ರಿ.ಶ.೧೮೪೯–೫೦) ತರ್ಕಶಿ ಮತ್ತು ಅಫ್ತಾಬಿ ತಂತ್ರ**

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಪಾನದಾನವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದ್ದು ಆಕೃತಿಯಲ್ಲಿ ವಿಭಿನ್ನವಾದ ರಚನೆ ಹೊಂದಿದೆ. ಮುಚ್ಚಳದಲ್ಲಿ ಪ್ರಧಾನವಾಗಿ ಹೂವಿನ ವಿನ್ಯಾಸವೊಂದಿದ್ದು ಅದು ಸಪ್ತದಳಗಳನ್ನು ಹೊಂದಿದೆ. ಪ್ರತಿ ದಳಗಳ ಒಳಾವರಣದಲ್ಲಿ ವಿಭಿನ್ನವಾದ ವಿನ್ಯಾಸಗಳನ್ನು ರಚಿಸಿರಬಹುದಾಗಿದೆ. ಅವು ಪೆಟ್ಟಿಗೆಯ ಮೇಲಿನ ವಿನ್ಯಾಸಗಳಂತೆ, ಆದರೆ ಸಂಯೋಜನೆಯಲ್ಲಿ ಭಿನ್ನವಾದ ಪದ್ಧತಿಯನ್ನು ಅನುಸರಿಸಿರಬಹುದಾಗಿದೆ. ಮುಚ್ಚಳದ ಅಂಚಿನ ಪಟ್ಟಿಕೆಯಲ್ಲಿ ಹೂವಿನ ಹೂವಿನ ವಿನ್ಯಾಸಗಳು ಬಳ್ಳಿಗಳ ಸಮೇತವಾಗಿ ಚಿತ್ರಿತಗೊಂಡಿವೆ. ಪೆಟ್ಟಿಗೆಯಲ್ಲಿ ಅಂಡಾಕಾರದ ಚತುಷ್ಪ ಖಾನೆಗಳು (ಮುಂಭಾಗದಲ್ಲಿ ಮೂರು ಮಾತ್ರ ಕಾಣುತ್ತವೆ) ರಚನೆಗೊಂಡಿವೆ. ಅವುಗಳನ್ನು ಪ್ರತ್ಯೇಕಿಸುವ ಮೂಲೆಯಲ್ಲಿ ತ್ರಿಕೋನಾಕಾರದ ಪರ್ಣಗಳ ವಿನ್ಯಾಸಗಳು ಪ್ರತಿ ಖಾನೆಯಲ್ಲೂ ಪುನರಾವರ್ತನಗೊಂಡಿವೆ. ಅದರಲ್ಲಿ ನಾಲ್ಕು ಪ್ರಧಾನ ಹೂವುಗಳ ವಿನ್ಯಾಸ ಜೊತೆಗೆ ಚಿಕ್ಕ ಚಿಕ್ಕ ಹೂವುಗಳ ವಿನ್ಯಾಸಗಳು ರಚನೆಗೊಂಡಿವೆ. ಇವುಗಳನ್ನು ಬಳಸಿಕೊಂಡ ತ್ರಿಕೋನಾಕಾರದ ಪರ್ಣಗಳ ವಿನ್ಯಾಸಗಳು ಆವರಣದಲ್ಲಿ ಅಲಂಕೃತಗೊಂಡಿವೆ. ಹೀಗೆ ರಚನೆಗೊಂಡ ವಿನ್ಯಾಸಗಳು ಬಹುತೇಕವಾಗಿ ಪ್ರತಿ ಖಾನೆಯಲ್ಲೂ ಪುನರಾವರ್ತನೆಗೊಂಡಿರುವುದನ್ನು ಗಮನಿಸಬಹುದಾಗಿದೆ. ಪೆಟ್ಟಿಗೆ ತಳದ ಪಟ್ಟಿಕೆಯಲ್ಲಿ ಮುಚ್ಚಳದ ಪಟ್ಟಿಕೆಯಲ್ಲಿನಂತಹ ವಿನ್ಯಾಸಗಳೇ ಒಡಮೂಡಿವೆ. ಬೆಳ್ಳಿಯ ತಂತಿಗಳ ಹುದುಗಿಸುವಿಕೆಯಿಂದ ಅತ್ಯಂತ ಸೂಕ್ಷ್ಮ ಕುಸುರಿಯನ್ನು ಹೊಂದಿದ ಅಪರೂಪದ ಪಾನದಾನವು ಇದಾಗಿದೆ.

೮. ಪಾನದಾನ (೧೯ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಪಾನದಾನವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದ್ದು ಆಕೃತಿಯಲ್ಲಿ ವಿಭಿನ್ನವಾದ ರಚನೆ ಹೊಂದಿದೆ. ಅಂಡಾಕಾರದಲ್ಲಿರುವ ಈ ಪಾನದಾನವು ಮಧ್ಯದಲ್ಲಿ ಮಡಿಕೆಯನ್ನು ಹೊಂದಿದೆ. ಮುಚ್ಚಳದಲ್ಲಿ ಪ್ರಧಾನವಾಗಿ ಎರಡು ಹೂವಿನ ವಿನ್ಯಾಸಗಳು ಮಧ್ಯದಲ್ಲಿರುವ ಹಿಡಿಕೆಯ ಸುತ್ತಣ ಪರ್ಣಗಳ ವಿನ್ಯಾಸವಿದೆ. ಇವುಗಳ ಸುತ್ತಲೂ ಚಿಕ್ಕ ಪಟ್ಟಿಕೆ ಇದ್ದು ಆಯತಾಕಾರದ ಚಿಕಣಿ ವಿನ್ಯಾಸಗಳಿಂದ ರಚಿಸಲ್ಪಟ್ಟಿದೆ. ಇದರ ಸುತ್ತಣ ಇರುವ ಪಟ್ಟಿಕೆಯಲ್ಲಿ ಎಲೆಯಾಕಾರದ ವಿನ್ಯಾಸಗಳು ಇದ್ದು ಬೆಳ್ಳಿಯ ತಗಡುಗಳಿಂದ ರಚಿಸಲ್ಪಟ್ಟಿದೆ. ಅದರ ಸುತ್ತಣ ಪಟ್ಟಿಕೆ, ನಂತರದ ಅವಕಾಶದಲ್ಲಿ ಘೂಲಝುಡಿ ಶೈಲಿಯ ನಕ್ಷತ್ರಾಕಾರದ ವಿನ್ಯಾಸಗಳು ಓರಣವಾಗಿ ಒಡಮೂಡಿವೆ. ಪಟ್ಟಿಕೆಯೊಂದರ

ನಂತರದ ಪಟ್ಟಿಕೆಯಲ್ಲಿ ಬೀಸಣಿಕೆಯ ವಿನ್ಯಾಸವನ್ನು ಹೋಲುವಂತಹ ಹೂವಿನ ಗಿಡದ ವಿನ್ಯಾಸಗಳೆರಡರ ಮಧ್ಯೆ ಪರ್ಣವೊಂದರ ವಿನ್ಯಾಸಗಳು ಕ್ರಮವಾಗಿ ಪುನರಾವರ್ತನೆಗೊಂಡಿದ್ದು ಅವುಗಳ ದೇಟುವಿನಲ್ಲಿ ಬಳ್ಳಿಯನ್ನು ಸಾಂಕೇತಿಕವಾಗಿ ಸೂಚಿಸುವಂತೆ ರೇಖೆಯೊಂದರ ಚಿತ್ರಣ ಇಲ್ಲಿದೆ. ಪೆಟ್ಟಿಗೆಯಲ್ಲೂ ಸಹ ಮುಚ್ಚಳದ ಮೇಲಿನ ವಿನ್ಯಾಸಗಳೇ ಕ್ರಮಶ್ರೇಣಿಯಲ್ಲಿ ಪುನರಾವರ್ತನೆಗೊಂಡಿದ್ದು, ಇಲ್ಲಿರುವ ಇತರ ಪಾನದಾನಗಳಲ್ಲಿಯೇ ಇತ್ತೀಚಿನ ಫೂಲಝಡಿ ವಿನ್ಯಾಸವನ್ನು ಹೊಂದಿದ ಬಿದ್ರಿ ಕೃತಿ ಇದಾಗಿದೆ.

ಉಪಸಂಹಾರ

ಪ್ರಸ್ತುತ ಉಪ ಅಧ್ಯಾಯದಲ್ಲಿ ಒಟ್ಟು ಎಂಟು ಪಾನದಾನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತಿಯೊಂದು ಪಾನದಾನವು ರಚನೆಯ ದೃಷ್ಟಿಯಿಂದ ವಿಭಿನ್ನವಾದ ವಿನ್ಯಾಸಗಳನ್ನು ಹೊಂದಿ ಬಿದ್ರಿ ಕಲೆಯ ಔನ್ನತ್ಯವನ್ನು ವಿಶ್ವಕ್ಕೆ ಸಾರಿರುವುದರಲ್ಲಿ ಎರಡು ಮಾತಿಲ್ಲ.ಆಯತಾಕಾರದ ಪೆಟ್ಟಿಗೆಯ ರೂಪದಲ್ಲಿ (ಚಿತ್ರ ೧ ಮತ್ತು ೨) ರಚನೆಗೊಂಡ ಪಾನದಾನಗಳಲ್ಲಿ ದಟ್ಟವಾದ ವಿನ್ಯಾಸ ಯೋಜನೆ ಕಂಡು ಬರುತ್ತದೆ. ಚಿತ್ರ ೩ರಲ್ಲಿ ಕಂಡುಬರುವ ಪಾನದಾನವು ಬಾತುಕೋಳಿಯ ವಿನ್ಯಾಸವನ್ನು ಹೊಂದಿದ್ದು, ಇತರ ಪಾನದಾನಗಳಿಗಿಂತ ವಿಭಿನ್ನ ಮತ್ತು ಅನನ್ಯ. ಇನ್ನುಳಿದ ಐದೂ ಪಾನದಾನಗಳ ರಚನೆಯಲ್ಲಿ ಭಿನ್ನತೆಯನ್ನು ಅಧ್ಯಯನ ಸಂದರ್ಭದಲ್ಲಿ ಈಗಾಗಲೇ ಸ್ಪಷ್ಟವಾಗಿ ಗುರುತಿಸಲಾಗಿದೆ. ಚಿತ್ರ ೭ರಲ್ಲಿ ಕಂಡು ಬರುವ ಪಾನದಾನವು ಅತ್ಯಂತ ಸೂಕ್ಷ್ಮ ವಿನ್ಯಾಸದಿಂದ ಕೂಡಿದ ಕೃತಿಯಾಗಿದೆ. ಇತರ ಪಾನದಾನಗಳಲ್ಲಿ ದಟ್ಟವಾದ ವಿನ್ಯಾಸಗಳು ಒಡಮೂಡಿವೆ. ಚಿತ್ರ ೮ರಲ್ಲಿ ಕಂಡುಬರುವ ಪಾನದಾನವು ೧೯ನೆಯ ಶತಮಾನದಲ್ಲಿ ಅತ್ಯಂತ ಪ್ರಚಲಿತವಿರುವ ಫೂಲಝಡಿ ಶೈಲಿಯಲ್ಲಿ ರಚನೆಗೊಂಡಿದ್ದು, ಪಟ್ಟಿಕೆಯಲ್ಲಿ ಚಿತ್ರ ೭ರ ಪಾನದಾನದ ಪಟ್ಟಿಕೆಯನ್ನೇ ಬಹುತೇಕವಾಗಿ ಹೋಲುತ್ತವೆ. ಚಿತ್ರ ೩ರ ಪಾನದಾನವನ್ನು ಹೊರತುಪಡಿಸಿ ಇಲ್ಲಿನ ಎಲ್ಲ ಪಾನದಾನಗಳಲ್ಲಿ ಪ್ರಾಕೃತಿಕ ವಿನ್ಯಾಸಗಳೇ ಮೇಲುಗೈ ಸಾಧಿಸಿವೆ. ಕೆಲವೊಂದು ಪಾನದಾನಗಳಲ್ಲಿ ಪ್ರಾಕೃತಿಕ ವಿನ್ಯಾಸಗಳನ್ನು ಯಥಾವತ್ತಾಗಿ ದುಡಿಸಿಕೊಂಡರೆ ಇನ್ನು ಕೆಲವು ಪಾನದಾನಗಳಲ್ಲಿ ಅವುಗಳನ್ನು ಸೃಜನಾತ್ಮಕವಾಗಿ ವಿಭಿನ್ನ ನೆಲೆಯಲ್ಲಿ ರೂಪಣಗೊಳಿಸಲಾಗಿದ್ದು ಅಧ್ಯಯನ ಸಂದರ್ಭದಲ್ಲಿ ಕಂಡು ಬಂದಿದೆ.

*****

೦೮. ಬಟ್ಟಲುಗಳು

ರಾಜಪರಿವಾರದಲ್ಲಿ ರಾಜ–ರಾಣಿಯರಿಗೆ ಎಷ್ಟು ಮಾನ್ಯತೆ, ಗೌರವಗಳು ಪ್ರಾಪ್ತವಾಗುತ್ತಿದ್ದವೋ ಅವರ ಚಿರಂಜೀವಿಗಳಿಗೂ ಅಷ್ಟೇ ಮಾನ್ಯತೆ, ಗೌರವಗಳು ಪ್ರಾಪ್ತವಾಗುತ್ತಿದ್ದವು. ಹೀಗಾಗಿ ಅವರ

ಚಿರಂಜೀವಿಗಳಿಗೆ ಊಟ ಮಾಡಿಸಲು ಇಲ್ಲವೇ ಯಾವುದೇ ಆಹಾರ ಪದಾರ್ಥಗಳನ್ನು ಇಡಲು ಅಥವಾ ಪೂಜಾ ಕೈಂಕರ್ಯಗಳಿಗೆ ಬಳಸು ಸೃಷ್ಟಿಯಾಗಿದ್ದು ಬಿದ್ರಿ ಬಟ್ಟಲುಗಳು. ಈ ಬಿದ್ರಿ ಬಟ್ಟಲುಗಳು ಮಾನವನ ಆರೋಗ್ಯದ ದೃಷ್ಟಿಯಿಂದಲೂ ಹಿತಕಾರಿ. ಇಂತಹ ಬಿದ್ರಿ ಬಟ್ಟಲುಗಳಲ್ಲೂ ರಾಜವೈಭವದ ಸಂಕೇತವಾಗಿ ಅಲಂಕಾರಿಕ ವಿನ್ಯಾಸಗಳು ಮೈದಾಳಿವೆ. ಈ ಹೊತ್ತಿನ ಬಿದ್ರಿ ಕಲೆಗಳಲ್ಲಿ ಇಂತಹ ಬಟ್ಟಲುಗಳು ಅಪರೂಪವಾಗಿವೆ. ಇಲ್ಲಿ ಒಟು ಮೂರು ಬಿದ್ರಿ ಬಟ್ಟಲುಗಳು ಅಧ್ಯಯನಕ್ಕೆ ಪ್ರಾಪ್ತವಾಗಿವೆ.

೧. ಬಟ್ಟಲು (ಕ್ರಿ.ಶ.೧೮೫೫) ತರ್ಕಶಿ ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಬಟ್ಟಲು ಉಗುಳುವ ಪಾತ್ರೆ(ಚಿತ್ರ ೧)ಯ ವಿನ್ಯಾಸವನ್ನೇ ಹೋಲುತ್ತದೆ. ಮುಚ್ಚಳ ಸಹಿತವಾಗಿ ರಚನೆಗೊಂಡಿರುವ ಈ ಬಟ್ಟಲಿನಲ್ಲಿ ಒಂದು ಬಗೆಯ ವಿನ್ಯಾಸಗಳಿದ್ದರೆ ಮುಚ್ಚಳದಲ್ಲಿ ಬೇರೊಂದು ಬಗೆಯ ವಿನ್ಯಾಸಗಳು ಒಡಮೂಡಿವೆ. ಮುಚ್ಚಳದಲ್ಲಿ ಬಹುಶಃ ಅಂಡಾಕಾರದ ನವ ಸಂಖ್ಯೆಯ ಖಾನೆಗಳಲ್ಲಿ ಪ್ರಾಕೃತಿಕ ವಿನ್ಯಾಸಗಳು ರಚನೆಗೊಂಡಿವೆ. ಹಿಡಿಯ ಸುತ್ತಣದ ಪಟ್ಟಿಕೆಯಲ್ಲಿ ಸಹ ಪ್ರಾಕೃತಿಕ ವಿನ್ಯಾಸಗಳು ರಚನೆಗೊಂಡಿವೆ. ಮುಚ್ಚಳದ ಕೆಳ ಅಂಚಿನಲ್ಲಿ ಚಿಕಣಿ ಶೈಲಿಯ ವಿನ್ಯಾಸಗಳು ಪಟ್ಟಿಕೆಯಲ್ಲಿ ರೂಪಣಗೊಂಡಿವೆ. ಬಟ್ಟಲು ಭಾಗದಲ್ಲಿ ಮುಚ್ಚಳದಲ್ಲಿ ಕಂಡುಬರುವಂತಹ ಹೂವಿನ ವಿನ್ಯಾಸವೊಂದು ಪ್ರಧಾನವಾಗಿದ್ದು ಅದಕ್ಕೆ ಪೂರಕವಾಗಿ ಚಿಕ್ಕ ಚಿಕ್ಕ ಹೂವುಗಳ ಮತ್ತು ಪರ್ಣಗಳವಿನ್ಯಾಸಗಳು ಅಲಂಕಾರಿಕ ನೆಲೆಯಲ್ಲಿ ರಚನೆಗೊಂಡಿವೆ. ಅತ್ಯಂತ ಸೂಕ್ಷ್ಮ ಕುಸುರಿಯಿಂದ ಗಮನಾರ್ಹವಾಗಿರುವ ಈ ಬಟ್ಟಲು ಬಿದ್ರಿ ಕಲೆಯ ಮೂಲ ಸೆಲೆಯ ಪ್ರತೀಕವಾಗಿದೆ.

೨. ಬಟ್ಟಲು (೧೭ನೆಯ ಶತಮಾನ) ತರ್ಕಶಿ, ತಹನಿಶಾನ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಬಟ್ಟಲು ಚಿತ್ರ ೧ರಲ್ಲಿ ಕಂಡು ಬಟ್ಟಲಿನ ಸೂಕ್ಷ್ಮ ಕುಸುರಿಯನ್ನು ಹೊಂದದೇ ಇದ್ದರೂ ಹಿತ್ತಾಳೆಯ ಕಾಗದಗಳ ಹುದುಗಿಸುವಿಕೆಯಿಂದ ಆಕರ್ಷಕವಾಗಿ ಕಾಣುತ್ತದೆ. ಪುಷ್ಪಾವರಣದ ಆಕೃತಿಯಲ್ಲಿ ಮೈದಾಳಿರುವ ವಿನ್ಯಾಸಗಳಲ್ಲಿ ಸಂಕ್ಷೇಪಯುಕ್ತ ಕುಸುರಿ ಕಾರ್ಯ ಕಂಡುಬರುತ್ತದೆ. ಬಟ್ಟಲಿನ ಮೇಲ್ಭಾಗದ ಅಂಚಿನ ಪಟ್ಟಿಕೆಯಲ್ಲಿ ಚತುರ್‌ದಳಗಳ ಹೂವಿನ ವಿನ್ಯಾಸ ಪರ್ಣಗಳಿಂದೊಡಗೂಡಿ ಬಳ್ಳಿಯಂತೆ ರಚನೆಗೊಂಡಿದೆ. ಅದರ ಕೆಳಗಣ ಉದರ ಭಾಗದಲ್ಲಿ ಎರಡು ಬಗೆಯ ವಿನ್ಯಾಸಗಳು ರಚನೆಗೊಂಡಿವೆ. ಮುಮ್ಮುಖದಲ್ಲಿ ಕಾಣುವ ಆರು ದಳಗಳ ಹೂವಿನ ವಿನ್ಯಾಸ, ಅದರ ಸುತ್ತಣ ಎಲೆಯಂತಹ ಅರ್ಧ ವರ್ತುಲಾಕಾರದ ವಿನ್ಯಾಸಗಳ ರಚನೆ ಇದೆ. ಮೇಲ್ಭಾಗದಲ್ಲಿ ಎಲೆಗಳಂತಹ ರಚನೆಗಳು ಮೂಡಿರುವುದಲ್ಲದೇ, ಪ್ರಧಾನ ಹೂವಿನ ಸುತ್ತಣ ತ್ರಿದಳ ಹೂವಿನಂತಹ ವಿನ್ಯಾಸಗಳನ್ನು ಸಹ ರಚಿಸಲ್ಪಟ್ಟಿವೆ. ಈ ಪ್ರಧಾನ ವಿನ್ಯಾಸದ ಎರಡೂ ಪಾರ್ಶ್ವಗಳಲ್ಲಿ ಅದೇ ಆರು ದಳಗಳ ಹೂವಿನ

ವಿನ್ಯಾಸಗಳು ಮೇಲ್ಭಾಗದಲ್ಲಿ ಪಂಚದಳಗಳ ಹೂವುಗಳೆರಡರ ಬೆಂಬಲದಿಂದ ರಚನೆಗೊಂಡಿವೆ. ಅಡಿಪೀಠದಲ್ಲಿ ಸಂಕ್ಷೇಪಯುಕ್ತವಾದ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಕಂಡುಬರುವ ಎಲೆಯಾಕಾರದ ವಿನ್ಯಾಸಗಳು ಕೆಳಮುಖವಾಗಿ ರಚನೆಗೊಂಡಿವೆ. (ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಮೇಲ್ಮುಖವಾಗಿರುತ್ತವೆ) ಚಿತ್ರ ೧ರಲ್ಲಿ ಕಂಡು ಬರುವ ವಿನ್ಯಾಸಗಳ ಪ್ರಕೀರ್ಣಕ ಸಂಯೋಜನೆ ಈ ಬಟ್ಟಲಿನಲ್ಲಿ ಕಂಡು ಬರದೇ ಇದ್ದರೂ ಅವಕಾಶವನ್ನು ಹಾಗೆಯೇ ಉಳಿಸಿಕೊಂಡಿರುವುದರಿಂದ ಈ ಬಟ್ಟಲು ಸಹ ವೈಭವೀಕರಣದ ನೆಲೆಯಲ್ಲಿ ಗಮನಾರ್ಹವೆನಿಸುತ್ತದೆ.

೩. ಬಟ್ಟಲು (ಕ್ರಿ.ಶ.೧೮೮೩) ಅಫ್ತಾಬಿ ತಂತ್ರ

ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಬಟ್ಟಲು ಅತ್ಯಂತ ಸೂಕ್ಷ್ಮ ಕುಸುರಿಯಿಂದಷ್ಟೇ ಅಲ್ಲ, ಅರೇಬಿಕ್ ಬರವಣಿಗೆ ಅಲಂಕಾರಿಕ ವಿನ್ಯಾಸ ರೂಪದಲ್ಲಿ ಮೈದಾಳಿರುವದರಿಂದ ಇನ್ನೆರಡು ಬಟ್ಟಲುಗಳಿಗಿಂತ ವಿಭಿನ್ನ ಮತ್ತು ಅನನ್ಯವಾಗಿದೆ. ಈ ಬಟ್ಟಲಿನಲ್ಲಿ ಪ್ರಧಾನವಾಗಿ ಮೂರು ಪಟ್ಟಿಕೆಗಳು ಇದ್ದು, ಮೇಲ್ಭಾಗದ ಅಂಚಿನಲ್ಲಿರುವ ಪಟ್ಟಿಕೆಯಲ್ಲಿ ಅರೇಬಿಕ್ ಅಕ್ಷರ ವಿನ್ಯಾಸಗಳು ರಚನೆಗೊಂಡಿವೆ. ಅದರಂತೆ ಕೆಳಗಿನ ಪಟ್ಟಿಕೆಯಲ್ಲೂ ಸಹ ಅರೇಬಿಕ್ ಬರವಣಿಗೆ ವಿನ್ಯಾಸರೂಪದಲ್ಲಿ ಒಡಮೂಡಿವೆ. ಕೆಳಗಿನ ಉದರ ಭಾಗದಲ್ಲಿ ಸಸ್ಯ ವಿನ್ಯಾಸಗಳೊಂದಿಗೆ ಬೇಟೆಯಾಡುತ್ತಿರುವ ರಾಜನೊಬ್ಬ ಅಶ್ವವನ್ನು ಏರಿ ಜಿಂಕೆಯನ್ನು ಬೆನ್ನಟ್ಟಿರುವ ಚಿತ್ರ ಸಹ ಇದೆ. ಈ ಎಲ್ಲ ವಿನ್ಯಾಸಗಳನ್ನು ನೋಡಿದರೆ ರಾಜರುಗಳು ಬಳಸಿರುವಂತಹ ಬಟ್ಟಲು ಇದಾಗಿದೆ. ಶೌರ್ಯ ಪ್ರಧಾನ ವಿನ್ಯಾಸವೇ ಈ ಬಟ್ಟಲಿನ ವಿಶೇಷ ಒಂದಾದರೆ ಇನ್ನೊಂದು ಅಲಂಕಾರಿಕ ವಿಶೇಷತೆ ಈ ಬಟ್ಟಲಿನಲ್ಲಿ ಗೋಚರವಾಗುವ ಸತ್ಯ. ಇನ್ನೊಂದು ನೆಲೆಯಲ್ಲಿ ಈ ಬಟ್ಟಲನ್ನು ಗಮನಿಸುವುದಾದರೆಅರೇಬಿಕ್ ಅಕ್ಷರ ವಿನ್ಯಾಸಗಳು ಹೇಳುವ ವಿಷಯಗಳ ಆಧಾರದ ಮೇಲೆ ಈ ಬಟ್ಟಲಿನ ಉದ್ದೇಶ ಸ್ಪಷ್ಟವಾಗುತ್ತದೆ. ಆದರೆ ಅಧ್ಯಯನಕ್ಕೆ ಬಟ್ಟಲಿನ ಚಿತ್ರ ಮಾತ್ರ ಲಭ್ಯವಾಗಿರುವುದರಿಂದ ಬಟ್ಟಲಿನ ಉದ್ದೇಶವನ್ನು ಮೇಲಿನಂತೆ ಊಹಿಸಲಾಗಿದೆ.

ಉಪಸಂಹಾರ

ಪ್ರಸ್ತುತ ಉಪ ಅಧ್ಯಾಯದಲ್ಲಿ ಮೂರು ಬಿದ್ರಿ ಬಟ್ಟಲುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರ ೧ ಮತ್ತು ೩ರಲ್ಲಿ ಕಂಡುಬರುವ ಬಟ್ಟಲುಗಳು ಆಕಾರದಲ್ಲಿ ಒಂದೇ ಬಗೆಯನ್ನು ಹೊಂದಿದ್ದರೆ, ಚಿತ್ರ ೨ರಲ್ಲಿ ಕಂಡುಬರುವ ಬಟ್ಟಲು ಪುಷ್ಪಾವರಣದ ಬಗೆಯಲ್ಲಿ ನಿರ್ಮಾಣಗೊಂಡಿದೆ. ಚಿತ್ರ ೧ರಲ್ಲಿನ ಬಟ್ಟಲು ಪ್ರಾಕೃತಿಕ ವಿನ್ಯಾಸಗಳನ್ನು ಒಳಗೊಂಡಿದ್ದು ಅತ್ಯಂತ ಪ್ರಕೀರ್ಣಕ ಸಂಯೋಜನೆಯಿಂದ ಕೂಡಿದೆ. ಚಿತ್ರ ೨ರಲ್ಲಿ ಕಂಡುಬರುವ ಬಟ್ಟಲು ಹಿತ್ತಾಳೆಯ ತಗಡುಗಳಿಂದ ರಚನೆಗೊಂಡಿದ್ದು ಸಂಕ್ಷೇಪಯುಕ್ತ ಪ್ರಾಕೃತಿಕ ವಿನ್ಯಾಸಗಳನ್ನು ಹೊಂದಿದೆ. ಅವಕಾಶವನ್ನು ಹಾಗೆಯೇ ಉಳಿಸಿಕೊಂಡಿರುವುದರಿಂದ ಸ್ಪಷ್ಟತೆಯಿದೆ, ಅಲಂಕಾರಿಕವಾಗಿ ವೈಭವೀಕರಣದ ಪ್ರತೀಕವಾಗಿದೆ. ಚಿತ್ರ

ಿರಲ್ಲಿ ಕಂಡುಬರುವ ಬಟ್ಟಲು ಅತ್ಯಂತ ಸೂಕ್ಷ್ಮ ಕುಸುರಿಯಿಂದ ಕೂಡಿದ್ದಲ್ಲದೇ ಪ್ರಕೀರ್ಣಕವಾದ ಸಂಯೋಜನೆಯನ್ನು ಹೊಂದಿದೆ. ಅರೇಬಿಕ್ ಭಾಷೆಯ ಅಕ್ಷರಗಳನ್ನು ಬಟ್ಟಲಿನ ಅಲಂಕಾರಿಕ ವಿನ್ಯಾಸಗಳನ್ನಾಗಿ ದುಡಿಸಿಕೊಂಡ ಕ್ರಮದಿಂದ ಈ ಬಟ್ಟಲು ಅಪ್ಯಾಯಮಾನವೆನಿಸುತ್ತದೆ. ಅತ್ಯಂತ ಅಪರೂಪದ ಬಿದ್ರಿ ಬಟ್ಟಲುಗಳು ಇವುಗಳಾಗಿದ್ದು ಪ್ರಾಚೀನರಲ್ಲಿ ಬಿದ್ರಿ ಕಲೆಯ ಮೂಲಕವಾಗಿ ಅಲಂಕಾರಿಕ ಪ್ರಜ್ಞೆಯ ಪ್ರತೀಕವಾಗಿವೆ.

*****

೦೯. ಭರಣಿಗಳು

ರಾಜ ಪರಿವಾರದಲ್ಲಿ ಅಷ್ಟೇ ಏಕೆ ಜನಸಾಮಾನ್ಯರ ಮನೆಗಳಲ್ಲೂ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಡಲು ಭರಣಿಗಳು ಇದ್ದೇ ಇರುತ್ತವೆ. ಆದರೆ ಬಿದ್ರಿ ಭರಣಿಗಳು ಅಪರೂಪ. ಬಿದ್ರಿ ಭರಣಿಗಳಲ್ಲಿ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಟ್ಟರೆ ಪದಾರ್ಥಗಳು ಕೆಡದೇ ಬಹುಕಾಲ ಬಾಳಿಕೆ ಬರುತ್ತವೆ. ಇದಕ್ಕೆ ಕಾರಣ ಬಿದ್ರಿ ಕಲೆಗೆ ಬಳಸಿಕೊಳ್ಳುವ ಲೋಹದ ಗುಣ. ಇಂತಹ ವಿಶಿಷ್ಟ ಗುಣವನ್ನು ಹೊಂದಿರುವ ಬಿದ್ರಿ ಭರಣಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. **ಭರಣಿ,** ಅಫ್ತಾಬಿ ಮತ್ತು ತರ್ಕಶಿ ತಂತ್ರ

ಅತ್ಯಂತ ಸೂಕ್ಷ್ಮ ಕುಸುರಿಯಿಂದ ಗಮನಸೆಳೆಯುವ ಈ ಭರಣಿಯಲ್ಲಿ ಹಲವು ಹಂತಗಳ ವಿನ್ಯಾಸ ರಚನೆಗಳಿವೆ. ಮುಚ್ಚಳದಲ್ಲಿ ಎರಡು ಹಂತಗಳಿದ್ದರೆ, ಭರಣಿಯಲ್ಲಿ ಹತ್ತು ಹಂತಗಳಲ್ಲಿ ಪಟ್ಟಿಕೆಯ ರೂಪದಲ್ಲಿ ವಿನ್ಯಾಸಗಳಿವೆ. ಮುಚ್ಚಳದಲ್ಲಿ ಏಕದಳ ವಿನ್ಯಾಸಗಳ ಒಂದು ವರ್ತುಲ ಪಟ್ಟಿಕೆ, ನಂತರದ ಪಟ್ಟಿಕೆಯಲ್ಲಿ ಹೂವುಗಳ ವಿನ್ಯಾಸದೊಂದಿಗೆ ಬಳ್ಳಿಗಳ ವಿನ್ಯಾಸಗಳು ಅಲಂಕೃತವಾಗಿ ಸಂಯೋಜಿಸಲ್ಪಟ್ಟಿವೆ. ಭರಣಿಯಲ್ಲಿ (ಮೇಲಿನಿಂದ ಕೆಳಕ್ಕೆ) ಮೊದಲ ಪಟ್ಟಿಕೆಯಲ್ಲಿ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಕಂಡುಬರುವಂತಹ ಪರ್ಣವಿನ್ಯಾಸಗಳು ಮೇಲ್ಮುಖವಾಗಿ ರಚಿಸಲ್ಪಟ್ಟಿವೆ. ಎರಡನೆಯ ಪಟ್ಟಿಕೆಯಲ್ಲಿ ಹಗ್ಗದಂತಹ ವಿನ್ಯಾಸವನ್ನು ರಚಿಸಲಾಗಿದೆ. ತದನಂತರದ ಪಟ್ಟಿಕೆಯಲ್ಲಿ ತ್ರಿದಳ ವಿನ್ಯಾಸಗಳೊಂದಿಗೆ ಬಿಂದುಗಳಿಂದ ರಚನೆಗೊಂಡ ಹೂವಿನಂತಹ ವಿನ್ಯಾಸಗಳು ಒಡಮೂಡಿವೆ. ಮತ್ತೊಂದು ಕೆಳಗಿನ ಪಟ್ಟಿಕೆಯಲ್ಲಿ ಪ್ರಧಾನ ವಿನ್ಯಾಸಗಳು ಹೂವುಗಳೊಂದಿಗೆ ರಚಿಸಲ್ಪಟ್ಟಿವೆ. ತ್ರಿದಳ ಹೂವಿನ ವಿನ್ಯಾಸವು ಬಳ್ಳಿಯ ಬಳಕುವಿಕೆಯೊಂದಿಗೆ ರಚಿಸಲ್ಪಟ್ಟಿರುವುದರಿಂದ ಪ್ರಧಾನ ವಿನ್ಯಾಸವಾಗಿ ಗೋಚರವಾಗುತ್ತದೆ. ಈ ಪಟ್ಟಿಕೆಯ ಕೆಳಪಟ್ಟಿಕೆಯಲ್ಲಿ ಮೂರನೆಯ ಪಟ್ಟಿಕೆಯಲ್ಲಿರುವಂತಹ ವಿನ್ಯಾಸಗಳು ಪುನರಾವರ್ತನೆಗೊಂಡಿವೆ. ಕೆಳಗೆ ಉದ್ದನೆಯ ಪರ್ಣಗಳಂತಹ ವಿನ್ಯಾಸಗಳು ಭರಣಿಯನ್ನುಓರಣವಾಗಿ ಸುತ್ತವರೆದಿವೆ. ಭರಣಿಯ ಉದರದ ಕೆಳಭಾಗದಲ್ಲಿ ಪಟ್ಟಿಕೆಗಳೆಲ್ಲವೂ

ಮೇಲ್ಭಾಗದಲ್ಲಿ ಗೋಚರವಾಗುವ ಪಟ್ಟಿಕೆಗಳ ವಿನ್ಯಾಸಗಳನ್ನೇ ಹೊಂದಿದೆ. ಆಕರ್ಷಕ ಆಕಾರದಲ್ಲಿ ನಿರ್ಮಾಣಗೊಂಡ ಈ ಭರಣಿಯು ಚಿತ್ರ ೨ರಲ್ಲಿ ಕಂಡುಬರುವ ಭರಣಿಯನ್ನೇ ಹೋಲುತ್ತದೆ.

೨. **ಭರಣಿ,** ತರ್ಕಶಿ ತಂತ್ರ

ಈ ಭರಣಿಯ ವಿನ್ಯಾಸಗಳನ್ನು ಗಮನಿಸಿದರೆ ಬಹುಶಃ ೧೯-೨೦ನೆಯ ಶತಮಾನದ ಅಂತ್ಯದಲ್ಲಿ ನಿರ್ಮಾಣಗೊಂಡಿರುವ ತಳ್ಳಿಹಾಕುವಂತಿಲ್ಲ. ಪ್ರಾಚೀನವೆನ್ನಬಹುದಾದ ವಿನ್ಯಾಸಗಳು ಗೌಣವಾಗಿದ್ದು ಜ್ಯಾಮಿತಿಕ ವಿನ್ಯಾಸಗಳೇ ಈ ಭರಣಿಯನ್ನು ಅಲಂಕರಿಸಿವೆ. ಮುಚ್ಚಳದಲ್ಲಿ ವರ್ತುಲಾಕಾರದ ವಿನ್ಯಾಸದಲ್ಲಿ ಜ್ಯಾಮಿತಿಕ ವಿನ್ಯಾಸಗಳು ರಚನೆಗೊಂಡಿವೆ. ಇದರಂತೆಯೇ ಭರಣಿಯ ಮೇಲಿನ ವಿನ್ಯಾಸಗಳು ಅವುಗಳನ್ನೇ ಹೋಲುತ್ತವೆ. ಭರಣಿಯ ಕಂಠದಲ್ಲಿ ಮತ್ತು ಕೆಳಭಾಗದಲ್ಲಿ ಇಸ್ಲಾಮಿಕ್ ವಾಸ್ತು ಶಿಲ್ಪದ ವಿನ್ಯಾಸಗಳನ್ನು ಹೋಲುವ ವಿನ್ಯಾಸಗಳು ಮೈದಾಳಿವೆ. ಅಡಿಪೀಠದಲ್ಲಿ ಎಲೆಯಂತಹ ವಿನ್ಯಾಸಗಳು ಓರಣವಾಗಿ ರಚನೆಗೊಂಡಿದ್ದು, ಇಂತಹ ವಿನ್ಯಾಸಗಳು ಪ್ರಸ್ತುತ ಬಿದ್ರಿಕಲೆಯಲ್ಲಿ ಕಂಡುಬರುತ್ತವೆ.

೩. **ಭರಣಿ** (೧೮ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಭರಣಿಯ ವಿನ್ಯಾಸಗಳು ಪ್ರಾಚೀನತೆಯ ಪ್ರತೀಕವಾಗಿವೆ. ಇತರ ಎರಡೂ ಭರಣಿಗಳಿಗಿಂತ ಈ ಭರಣಿಯ ವಿನ್ಯಾಸ ವಿಭಿನ್ನವಾಗಿದ್ದು, ಭರಣಿಯ ಮೇಲಿನ ವಿನ್ಯಾಸಗಳೂ ಸಹ ಸಂಕ್ಷೇಪಯುಕ್ತವಾಗಿವೆ. ಮುಚ್ಚಳದ ಮೇಲೆ ಯಾವುದೇ ಬಗೆಯ ವಿನ್ಯಾಸಗಳನ್ನು ಮೂಡಿಸದ ಕರ್ಮಿಯು ಭರಣಿಯ ಕಂಠದ ಮೇಲೆ ಅರ್ಧ ವರ್ತುಲದಲ್ಲಿ ತ್ರಿದಳಗಳ ವಿನ್ಯಾಸವನ್ನು ರಚಿಸಿದ್ದಾನೆ. ಅದರ ಸುತ್ತಣ ಎಲೆಗಳ-ಹೂವುಗಳ ವಿನ್ಯಾಸಗಳನ್ನು ಮೂಡಿಸಲಾಗಿದೆ. ಉದರದ ಮೇಲ್ಭಾಗದ ಪಟ್ಟಿಕೆಯಲ್ಲಿ ನಾಲ್ಕು ದಳಗಳ ಹೂವಿನ ವಿನ್ಯಾಸಗಳನ್ನು ಬಳ್ಳಿಯಂತಹ ರೇಖೆಯನ್ನು ಬಳಸಿಕೊಂಡು ರಚಿಸಲಾಗಿದೆ. ಭರಣಿಯ ಉದರ ಭಾಗದಲ್ಲಿ ಹೂವಿನ ಗಿಡದ ವಿನ್ಯಾಸ ಪ್ರಧಾನವಾಗಿದೆ. ಚಿತ್ರ ೧ರಲ್ಲಿ ಕಂಡುಬರುವಂತಹ ಸೂಕ್ಷ್ಮ ಕುಸುರಿ ಇಲ್ಲಿ ಗೌಣವಾಗಿದ್ದು, ಅಸ್ಪಷ್ಟತೆಯ ವಿನ್ಯಾಸಗಳು ಪ್ರಕಟವಾಗಿವೆ.

ಉಪಸಂಹಾರ

ಪ್ರಸ್ತುತ ಈ ಉಪ ಅಧ್ಯಾಯದಲ್ಲಿ ಮೂರು ಭರಣಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರ ೨ರಲ್ಲಿ ಕಂಡುಬರುವ ಭರಣಿಯು ಇತ್ತೀಚಿನ ರಚನೆಯಾಗಿದ್ದನ್ನು ಅದರಲ್ಲಿನ ವಿನ್ಯಾಸಗಳಿಂದ ಗುರುತಿಸಬಹುದಾಗಿದೆ. ಇನ್ನೆರಡು ಭರಣಿಗಳು ಪ್ರಾಚೀನವೆನ್ನಬಹುದಾದ ವಿನ್ಯಾಸಗಳನ್ನು ಹೊಂದಿದ್ದು, ಚಿತ್ರ ೧ರಲ್ಲಿ ಕಂಡುಬರುವ ಭರಣಿಯು ಅತ್ಯಂತ ಸೂಕ್ಷ್ಮ ವಿನ್ಯಾಸ ಮತ್ತು ಪ್ರಕೀರ್ಣಕ ಸಂಯೋಜನೆಯಿಂದ ಕೂಡಿದೆ. ಚಿತ್ರ ೩ರಲ್ಲಿ ಕಂಡುಬರುವ ಭರಣಿಯು ಪ್ರಮಿತಿಯಿಲ್ಲದ

ಕುಶಲಕರ್ಮಿ ರಚಿಸಿರಬಹುದಾದ ಸಾಧ್ಯತೆಗಳನ್ನು ಅಲ್ಲಿ ರಚನೆಗೊಂಡಿರುವ ವಿನ್ಯಾಸಗಳಿಂದ ಹೇಳಬಹುದಾಗಿದೆ.

*****

೧೦. ಸುರಾಹಿಗಳು

ಡೆಕ್ಕನ್ ಪರಿಸರದಲ್ಲಿ ಸುರಾಹಿಗಳಿಗೆ ಮಹತ್ವದ ಸ್ಥಾನವಿತ್ತು. ನೀರನ್ನು ಸಂಗ್ರಹಸಿಡಲು ಈ ಸುರಾಹಿಗಳನ್ನು ಬಳಸಿಕೊಳ್ಳುತ್ತಿದ್ದು ಚರಿತ್ರೆಯಿಂದ ತಿಳಿದು ಬಂದಿದೆ. ಲೋಹದಿಂದ ತಯಾರಾದ ಈ ಸುರಾಹಿಗಳಲ್ಲಿ ನೀರನ್ನು ಸಂಗ್ರಹಿಸಿಡುವುದರಿಂದ ನೀರಿನಲ್ಲಿ ತಾಮ್ರದ ಅಂಶ ಹೆಚ್ಚಾಗುವ ಹಾಗೂ ಆರೋಗ್ಯ ವೃದ್ಧಿಸುವುದರ ಕಾರಣವಾಗಿ ಹಿನ್ನೆಲೆಯಲ್ಲಿ, ಈ ಸುರಾಹಿಗಳಿಗೆ ಬಹು ಬೇಡಿಕೆ ಆಗಲೂ ಇತ್ತು, ಈಗಲೂ ಇದೆ. ಇವು ಬಹುತೇಕವಾಗಿ ಆಳರಸರ ಅರಮನೆಗಳಲ್ಲಿ ಬಳಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಸುರಾಹಿಗಳಿಗೆ ಅಲಂಕಾರಿಕ ವೈಭವೀಕರಣ ಸಹಜವಾಗಿಯೇ ಬಂದಿರುವುದಾಗಿದೆ. ಇಂತಹ ಮೂರು ಸುರಾಹಿಗಳನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧. ಸುರಾಹಿ (ಕ್ರಿ.ಶ.೧೮೫೦) ತರ್ಕಶಿ ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಸುರಾಹಿಯು ಚಿತ್ರ ೧ರಲ್ಲಿ ಕಂಡುಬರುವ ಪೀಕದಾನಿಯ ರಚನಾ ತಂತ್ರ ಮತ್ತು ವಿನ್ಯಾಸವನ್ನೇ ಹೊಂದಿದೆ. ಈ ಸುರಾಹಿ ಮುಚ್ಚಳದಲ್ಲಿ ನಾಲ್ಕೈದು ವರ್ತುಲಾಕಾರದ ಅಂಕಗಳನ್ನು ಹೊಂದಿದರೆ, ಸುರಾಹಿಯಲ್ಲಿ ಸುಮಾರು ೨೪-೨೫ ಅಂಕಗಳನ್ನು ಹೊಂದಿದೆ. ಪ್ರತಿಯೊಂದು ಅಂಕದಲ್ಲೂ ರಚನೆಗೊಂಡಿರುವ ಹೂವಿನಗಿಡಗಳ, ಪರ್ಣಗಳ ಮತ್ತು ಜ್ಯಾಮಿತಿಕ ವಿನ್ಯಾಸಗಳೆಲ್ಲವೂ ಒಂದೇ ಬಗೆಯ ಅಂದರೆ ಬೆಳ್ಳಿಯ ಹುದುಗಿಸುವಿಕೆಯ ತಂತ್ರದಿಂದ ರಚಿಸಲ್ಪಟ್ಟಿವೆ. ತ್ರಿಕೋನಾಕಾರದ ಎಲೆಯ ವಿನ್ಯಾಸಗಳು ಕೆಳ ಮತ್ತು ಮೇಲ್ಮುಖವಾಗಿ ಅಲ್ಲಲ್ಲಿ ರಚಿಸಲ್ಪಟ್ಟಿವೆ. ಈ ಸುರಾಹಿಯಲ್ಲಿ ಕಂಡು ಬರುವ ಅಲಂಕಾರಿಕ ಪ್ರಧಾನ ಆಶಯ ಹೂವಿನ ವಿನ್ಯಾಸ. ಕುಶಲಕರ್ಮಿ ಈ ಸುರಾಹಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಂಖ್ಯೆಯಲ್ಲಿ ಹೂವುಗಳ ವಿನ್ಯಾಸಗಳನ್ನು ರಚಿಸುವುದರ ಮೂಲಕ ತನ್ನಲ್ಲಿರುವ ಪ್ರಗಲ್ಭ ಬುದ್ಧಿಮತ್ತೆಯನ್ನು ಪ್ರದರ್ಶಿಸಿದ್ದಾನೆ. ಸುರಾಹಿಯ ಉದರ ಭಾಗದಲ್ಲಿರುವಅಂಡಾಕಾರದ ಖಾನೆಗಳಲ್ಲಿ ಸುಮಾರು ಒಂಭತ್ತು ಹೂವುಗಳ ವಿನ್ಯಾಸಗಳನ್ನು ಸೂಕ್ಷ್ಮ ಕುಸುರಿಯಿಂದ ರಚಿಸಲ್ಪಟ್ಟಿದ್ದಾನೆ. ಪ್ರಾಕೃತಿಕ ಸಹಜವಾದ ಗಿಡಗಳ ದೇಟುಗಳನ್ನು, ಎಲೆಗಳನ್ನು ವಿವರವಾಗಿ ರಚಿಸಿರುವ ಕರ್ಮಿಯು ಸುರಾಹಿಯ ಪ್ರತಿಯೊಂದು ಅಂಕಣದಲ್ಲೂ ಅಸಾಧಾರಣವಾದ ತಂತ್ರಗಾರಿಕೆಯನ್ನೂ, ಕುಶಲ ಕರ್ಮವನ್ನು ಸದ್ವಿನಿಯೋಗ ಮಾಡಿಕೊಂಡಿದ್ದಾನೆ.

೨. ಸುರಾಹಿ (೧೯ನೆಯ ಶತಮಾನ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಸುರಾಹಿ ಮೂರುದಳಗಳ ಸಂಪಿಗೆ ಹೂವಿನಂತಹ ವಿನ್ಯಾಸದಿಂದ ಅಲಂಕೃತಗೊಂಡಿದೆ. ಪ್ರತಿಯೊಂದು ಹೂವಿನ ಸುತ್ತಲೂ ರೇಖಾ ಅಂಕಣವನ್ನು ರಚಿಸಲಾಗಿದೆ. ಮೇಲ್ಭಾಗದ ಕಂಠದಲ್ಲಿ ಎಲೆಬಳ್ಳಿಯ ವಿನ್ಯಾಸ ಪಟ್ಟಿಕೆಯಲ್ಲಿ ರಚಿಸಲ್ಪಟ್ಟಿದೆ. ಸುರಾಹಿಯ ಉದರಭಾಗದಲ್ಲಿ ತ್ರಿದಳ ಎಲೆಗಳು ಒಂದರ ಮೇಲೊಂದು ಸಂಯೋಜಿಸಿದ ಪಟ್ಟಿಕೆಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಮೊಳೆಗಳಿಂದ ಹೊಂದಿಸಲಾಗಿದೆ. ಚಿತ್ರ ೧ರಲ್ಲಿ ಕಂಡು ಬರುವಂತಹ ಸೂಕ್ಷ್ಮ ಕುಸುರಿ ಇಲ್ಲಿ ಕಂಡು ಬರದಿದ್ದರೂ ಪ್ರಾಚೀನ ಕರ್ಮಿಗಳ ಸೃಜನಾತ್ಮಕ ಪರಂಪರೆಯ ಪ್ರತೀಕವಾಗಿದೆ ಈ ಸುರಾಹಿ.

೩. ಸುರಾಹಿ (೧೯ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಹಾಕ್ಸ್ ಏಶಿಯನ್ ಆರ್ಟ್ ಸಂಗ್ರಹದಲ್ಲಿರುವ ಈ ಸುರಾಹಿ ಆಕಾರದಲ್ಲಿ ಅತ್ಯಂತ ಸುಂದರ ರಚನೆಯನ್ನು ಹೊಂದಿದೆ. ಆದರೆ ಸೂಕ್ಷ್ಮ ವಿನ್ಯಾಸಗಳ ರಚನೆಯಿಂದ ಸುರಾಹಿಯ ಅಲಂಕಾರ ಅಥವಾ ವೈಭವೀಕರಣ ಚಿತ್ರ ೧ರಲ್ಲಿ ಕಂಡುಬರುವ ವಿನ್ಯಾಸಗಳನ್ನು ಹಿಮ್ಮೆಟ್ಟಿಸುವುದಿಲ್ಲ. ಆದರೆ ಇಲ್ಲಿ ಪ್ರಾಕೃತಿಕ ವಿನ್ಯಾಸಗಳೊಂದಿಗೆ ಜಲಚರಗಳ ವಿನ್ಯಾಸಗಳು ಅಲಂಕಾರಿಕವಾಗಿ ಮೈದಾಳಿವೆ. ಸುರಾಹಿಯ ಅಲಂಕಾರಿದ ಪ್ರಮುಖ ಆಶಯ ಮೀನುಗಳ ವಿನ್ಯಾಸ. ಪರಸ್ಪರ ಎದುರಾಗಿ ಎರಡು ಮೀನುಗಳನ್ನು ಅಲಂಕಾರಿಕ ನೆಲೆಯಲ್ಲಿ ಸಂಯೋಜಿಸಿರುವ ಕ್ರಮ ಇಲ್ಲಿದೆ. ಕಂಠದ ಮೇಲೆ ಎರಡು ಮತ್ಸ್ಯಗಳನ್ನು ತದ್ವಿರುದ್ಧವಾಗಿ ಸಂಯೋಜಿಸಿದ ಕ್ರಮವೂ ಸುರಾಹಿಯಲ್ಲಿದೆ. ಕಂಠದಲ್ಲಿ ಪರ್ಣಗಳ ವಿನ್ಯಾಸಗಳು ಲಾಲಿತ್ಯದ ಬಗೆಯಲ್ಲಿ ಸಂಯೋಜಿಸಲ್ಪಟ್ಟಿವೆ. ಬೆಳ್ಳಿಯ ಹುದುಗಿಸುವ ತಂತ್ರದಿಂದ ರಚನೆಗೊಂಡ ಈ ಸುರಾಹಿಯ ಹಿನ್ನೆಲೆಯ ಅವಕಾಶ ಹಾಗೆಯೇ ಉಳಿಸಿಕೊಂಡ ಕ್ರಮದಿಂದಾಗಿ ಆಕೃತಿಗಳು ಸ್ಪಷ್ಟ ನಡೆಯಲ್ಲಿವೆ.

ಉಪಸಂಹಾರ

ಪ್ರಸ್ತುತ ಈ ಉಪ ಅಧ್ಯಾಯದಲ್ಲಿ ಒಟ್ಟು ಮೂರು ಸುರಾಹಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೂರು ಸುರಾಹಿಗಳ ಆಕಾರಗಳು ಬಹುತೇಕವಾಗಿ ಒಂದೇ ಬಗೆಯಲ್ಲಿವೆ. ಆದರೆ ವಿನ್ಯಾಸದ ನೆಲೆಯಲ್ಲಿ ವಿಭಿನ್ನ ನೆಲೆಯಲ್ಲಿ ಗೋಚರವಾಗುತ್ತವೆ. ಚಿತ್ರ ೧ರಲ್ಲಿ ಕಂಡುಬರುವ ಸುರಾಹಿ ಅತ್ಯಂತ ಸೂಕ್ಷ್ಮ ವಿನ್ಯಾಸದಿಂದ ರಾಜ ವೈಭೋಗವನ್ನು ನೆನಪಿಸಿದರೆ, ಚಿತ್ರ ೨ಮತ್ತು ೩ರಲ್ಲಿ ಕಂಡುಬರುವ ಸುರಾಹಿಗಳು ಸಂಕ್ಷೇಪಯುಕ್ತ ವಿನ್ಯಾಸಗಳನ್ನು ಬೆಳ್ಳಿಯ ಕಾಗದಗಳಿಂದ ರಚಿಸಲ್ಪಟ್ಟಿದೆ. ಮೂರು ಸುರಾಹಿಗಳಲ್ಲಿ ಬಹುತೇಕವಾಗಿ ಪ್ರಾಕೃತಿಕ ವಿನ್ಯಾಸಗಳು ಎಂದಿನಂತೆಪ್ರಕಟವಾಗಿದ್ದರೂ ಸಹ, ಚಿತ್ರ ೩ರಲ್ಲಿ ಕಂಡುಬರುವ ಸುರಾಹಿಯಲ್ಲಿ ಮತ್ಸ್ಯಗಳನ್ನು ವಿನ್ಯಾಸವಾಗಿ ದುಡಿಸಿಕೊಂಡ ಕ್ರಮ ಇಲ್ಲಿರುವುದರಿಂದ ಒಂದು ಬಗೆಯಲ್ಲಿ ಸಮ್ಮಿಶ್ರ ವಿಷಯಗಳು ಈ ಸುರಾಹಿಯಲ್ಲಿ ಕಂಡು ಬರುತ್ತವೆ. ಒಟ್ಟಿನಲ್ಲಿ ಸುರಾಹಿಗಳು ಡೆಕ್ಕನ್ ಪರಿಸರದ ರಾಜ ವೈಭೋಗದ ಪ್ರತೀಕವಾಗಿವೆ.

*****

೧೧. ಹುಕ್ಕಾಗಳು

ಬಿದ್ರಿಯು ಸತು, ತಾಮ್ರ, ಸೀಸ ಮತ್ತು ತವರಗಳ ಮಿಶ್ರಣ, ಅದನ್ನು ಬೇಕಾದ ಆಕಾರಕ್ಕೆ ತಂದುಕೊಂಡು ಬೆಳ್ಳಿ, ಹಿತ್ತಾಳೆ ಮತ್ತು ಬಂಗಾರಗಳನ್ನು ಹೂವು ಮತ್ತು ಸಸ್ಯಗಳ ಚಿತ್ತಾರಗಳನ್ನು ರಚಿಸುವುದಕ್ಕೆ ಬಳಸಲಾಗುತ್ತಿದೆ. ಹುಕ್ಕಾ, ಸೈಲಾಬ್ಚಿ, ಅಫ್ತಾಬಾ, ಮೇಣಬತ್ತಿ, ಸ್ಟ್ಯಾಂಡು, ಮಂಚದ ಕಾಲು, ಉಗಲ್‌ದಾನ ಮುಂತಾದವು ಇದರಿಂದ ನಿರ್ಮಿತವಾಗುವ ಜನಪ್ರಿಯ ವಸ್ತುಗಳಾಗಿವೆ. ಅವು ಅತ್ಯಂತ ಸೊಗಸಾಗಿ ಆಕರ್ಷಕವಾಗಿ ಕಾಣುತ್ತವಲ್ಲದೇ ಶ್ರೇಷ್ಠ ಮಟ್ಟದ ಕರಕುಶಲತೆಗೆ ನಿರ್ದೇಶನಗಳಾಗಿದ್ದು ಇವುಗಳಲ್ಲಿ ಹುಕ್ಕಾ ಬಹು ಪ್ರಮುಖವಾಗಿದ್ದುದಲ್ಲದೇ ಅತ್ಯಂತ ಜನಪ್ರಿಯವಾದ ಅಮಲು ಬರಿಸುವ ಪದಾರ್ಥವನ್ನು ಸೇವಿಸುವ ಸಲಕರಣೆಯಾಗಿದೆ.

ಡೆಕ್ಕನ್ ಪರಿಸರದಲ್ಲಿ ಹುಕ್ಕಾ ಪಡೆದ ಜನಪ್ರಿಯತೆ ಇಂದಿಗೂ ಜೀವಂತವಾಗಿದೆ. ಕ್ರಿ.ಶ.ಸು.೧೬೦ಳರಲ್ಲಿ ದಖನ್‌ರ ಆಸಕ್ತಿಯಿಂದಾಗಿ ಭಾರತವನ್ನು ಪ್ರವೇಶಿಸಿದ ಹುಕ್ಕಾ ಸೇವನೆ ಬಹುಬೇಗ ಜನರನ್ನು ಆಕರ್ಷಿಸಿತು. ತಂಬಾಕನ್ನು ಬೆಂಕಿಯ ಕೆಂಡದ ಮೇಲೆ ಹಾಕಿ ಅದರ ಹೊಗೆಯನ್ನು ಸೇವಿಸುವುದರಿಂದ ಒಂದು ಅಮಲು ಸೇವಿಸಿದವರಿಗೆ ಆಗುತ್ತಿತ್ತು. ಹುಕ್ಕಾ ಸೇವನೆ ಕ್ರಮೇಣವಾಗಿ ವ್ಯಸನವಾದಾಗ ಅದಕ್ಕೆ ಪೂರಕವಾದ ಸಲಕರಣೆಗಳ ಉತ್ಪತ್ತಿಯೂ ಸಹ ಆಗತೊಡಗಿತು. ಸಹಜವಾಗಿ ಬೀದರಿನ ಬಿದ್ರಿ ಕುಶಲಕರ್ಮಿಗಳು ಸಹ ಹುಕ್ಕಾದ ಸಲಕರಣೆಗಳನ್ನು ಉತ್ಪತ್ತಿ ಮಾಡಿ ರಾಜ ಪರಿಸರದ ರಾಜ ಮನೆತನದವರಿಗೂ ಪೂರೈಸಿದರು. ಹೀಗಾಗಿ ಹುಕ್ಕಾ ಸೇವನೆ ಬಹುಬೇಗ ರಾಜ ಮಾನ್ಯಾತೆ ಮತ್ತು ಜನಸಾಮಾನ್ಯರ ಮಾನ್ಯತೆಯನ್ನು ಪಡೆದುಕೊಂಡು ಇಂದಿಗೂ ಅದು ಜೀವಂತವಾಗಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಬಹಳಷ್ಟು ಹುಕ್ಕಾ (ನೀರಿನ ನಳಿಗೆಯಿರುವ ಬುಡ, ವಾಸ್ತವವಾಗಿ ನೀರು ತುಂಬುವ ಪಾತ್ರೆ)ಗಳು ನೆಲದ ಮೇಲಿರುವಂತೆ ನಿರ್ಮಿತವಾಗಿವೆ. ಆದರೆ ಎಲ್ಲಿ ಬೇಕೆಂದರಲ್ಲಿಗೆ ಒಯ್ಯಲುಸಾಧ್ಯವಾಗುವಂಥ ಉಪಕರಣಗಳೂ ಇದ್ದವು. ಇಂಥ ಸಮಯದಲ್ಲಿ ಅದನ್ನು ಒಯ್ಯಲು ಸೇವಕನೊಬ್ಬ ಬೇಕಾಗುತ್ತಿತ್ತು. ಬೇಟೆ ಅಥವಾ ಇನ್ನಿತರ ಸಂಚಾರ ಸಂದರ್ಭಗಳಲ್ಲಿ ಅದರ ಅವಶ್ಯಕತೆಯಿತ್ತು. ಇಂಥ ಶಂಕುವಿನ ಆಕಾರದ ಹುಕ್ಕಾಗಳ ಭಾರತೀಯ ವರ್ಣಚಿತ್ರಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ, ಇರಾನದ ಮೊಗಲ ದೂತಾವಾಸದಲ್ಲಿರುವ ಸುಮಾರು ೧೭ನೆಯ ಶತಮಾನಕ್ಕೆ ಸೇರಿದ ವರ್ಣಚಿತ್ರ ಶಂಕುವಿನ ಆಕಾರದ ಹುಕ್ಕಾವನ್ನು ಕಾಣುವುದು ಅಪರೂಪ, ಜೆಬ್ರೋವಸ್ಕಿಯವರು ತಮ್ಮ ಪುಸ್ತಕದಲ್ಲಿ ಕೇವಲ ಮೂರು ಹುಕ್ಕಾಗಳನ್ನು ಪ್ರಸ್ತಾಪಿಸಿದ್ದಾರೆ. ಇವು ೧೮ ಮತ್ತು ೧೯ನೆಯ ಶತಮಾನಕ್ಕೆ ಸೇರಿದವುಗಳಾಗಿದ್ದು, ಅದಕ್ಕಿಂತ ಮೊದಲಿನವು ದೊರೆತಿಲ್ಲ.

ಹುಕ್ಕಾ ರಚನೆ ಹೀಗಿದೆ. ನೀರನ್ನು ಸಂಗ್ರಹಿಸುವ ಪಾತ್ರೆ, ಅದಕ್ಕಿರುವ ವರ್ತುಲಾಕಾರದ ಬಾಯಿ, ಈ ಬಾಯಿಗೆ ಲಂಬವಾಗಿ ನಳಿಕೆಯೊಂದನ್ನು ಇಟ್ಟು ಮೇಲೆ ಬೆಂಕಿಯ ಕೆಂಡವನ್ನು ಹಾಕಿ

ಅದರಲ್ಲಿ ತಂಬಾಕು ಹಾಕುವುದು, ಪಾತ್ರೆಯ ಪಾರ್ಶ್ವ ಬದಿಯಲ್ಲಿ ತೆರೆದ ಬಾಯಿಗೆ ಜೋಡಿಸಿದ ಹುಕ್ಕಾ ಸೇದಲು ಅನುಕೂಲಕರವಾದ ರೀತಿಯಲ್ಲಿ ಸಿದ್ಧಪಡಿಸಿದ ನಳಿಕೆ. ಲಂಬವಾಗಿ ನಿಂತ ನಳಿಕೆಯಲ್ಲಿನ ಬೆಂಕಿಯಲ್ಲಿನ ತಂಬಾಕು ಪಾತ್ರೆಯಲ್ಲಿನ ನೀರಿನ ಮಧ್ಯೆ ಬಂದು ನಳಿಕೆಯ ಮುಖಾಂತರ ಅದನ್ನು ಸೇವಿಸಿದಾಗ ತಂಪಾದ ಅನುಭವವಾಗುತ್ತದೆ. ಹೀಗೆ ಸೇವಿಸಿದ ಹೊಗೆಯಿಂದ ಒಂದು ಬಗೆಯ ಅಮಲು ಸೇವಿಸಿದವರಿಗೆ ಆಗುತ್ತದೆ.

ಹುಕ್ಕಾ ಸೇವನೆ ಅಂದು ಇಂದು ಕೇವಲ ಪುರುಷರಿಗೆ ಮಾತ್ರ ಸೀಮಿತವಾಗದೇ ಸ್ತ್ರೀಯರಿಗೆ ಅನ್ವಯವಾಗುತ್ತಿತ್ತು. ಬಹಮನಿ ಅರಸರ ಕಾಲದಲ್ಲಿ ರಾಜ ಪರಿವಾರದವರೆಲ್ಲ, ವಿಶೇಷವಾಗಿ ರಾಣಿಯರು ಸಹಿತ ಹುಕ್ಕಾ ಸೇವಿಸಿ ಅಮಲಿನಲ್ಲಿ ತೇಲುತ್ತಿದ್ದ ಸನ್ನಿವೇಶದ ಚಿತ್ರಗಳು ಇಂದಿಗೂ ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶನಗೊಂಡಿವೆ. (ಚಿತ್ರವನ್ನು ನೋಡಿ : ಅಧ್ಯಾಯ ೩ರಲ್ಲಿ ಚಿತ್ರ ೭. ಹುಕ್ಕಾದೊಂದಿಗೆ ಭಾರತಿಯ ಯುವತಿ) ಹೀಗೆ ಜನಸಾಮಾನ್ಯರನ್ನು ಬಿಡದೇ ರಾಜಪರಿವಾರದಲ್ಲೆಲ್ಲ ಪ್ರಿಯವಾದ ಹುಕ್ಕಾದ ರಚನೆ ಸಹಜವಾಗಿಯೇ ಅಲಂಕಾರಿಕ ನೆಲೆಯಲ್ಲಿ ರಚನೆಗೊಳ್ಳಲು ಆರಂಭವಾಯಿತು.

ಭೋಜನದ ಸಮಯದಲ್ಲಿ ಹುಕ್ಕಾಸೇವನೆ ಸಾಮಾನ್ಯವಾಗಿತ್ತು. ೧೯ನೇಯ ಶತಮಾನದ ಪ್ರಥಮಾರ್ಧದಲ್ಲಿ ಭಾರತದಲ್ಲಿದ್ದ ಯೋರೋಪಿಯನ್ನರು ಹೆಚ್ಚೆಚ್ಚು ಬಳಸುತ್ತಿದ್ದರು. ಸುಮಾರು ೧೮೪೦ರಲ್ಲಿ ಲಿನ್ನೇ ಗಿಲ್ಬರ್ಟ್‌ನು ಹುಕ್ಕಾ ಸೇವನೆಯನ್ನು ಕಾವ್ಯಾತ್ಮಕವಾಗಿ ವರ್ಣಿಸಿದ್ದಾನೆ. "ಕೊನೆಯ ಭಾಗವನ್ನು ಮೇಜಿನಿಂದ ಆಚೆಗೆ ತೆಗೆದರು. ಹುಕ್ಕಾಸೇವನೆ ಆರಂಭವಾಯಿತು. ಮೊದಲಿಗೆ ಹೊರಡುವುದು ಗುಳು ಗುಳು ಶಬ್ದ ಮಾಡುವ ಗುಳ್ಳೆ, ಹುಕ್ಕಾ ಸೇವನೆಯ ಆರಂಭವನ್ನು ಸೂಚಿಸಿತು. ಅನಂತರದಲ್ಲಿ ಮೋಹಪರವಶಗೊಳಿಸುವಂಥ ಪರಿಮಳವು ವಾತಾವರಣವೆನ್ನೆಲ್ಲ ವ್ಯಾಪಿಸಿತು. ಸುಂದರವಾದ ಕೊಳವೆಗಳು. ಕುರ್ಚಿಯ ಕೈಗಳ ಕೆಳಗಿನಿಂದ ನುಸುಳಿಕೊಂಡು ಬರುತ್ತವೆ. ಧೂಮಪಾನ ಹವ್ಯಾಸವು ಬೇರೂರಿದವರು ತಮ್ಮ ಹುಕ್ಕಾಗಳನ್ನು ಜಿಗುಲಿಗೆ ಬದಲಾಯಿಸಿರುತ್ತಾರೆ. ಏಕಾಂತದಲ್ಲಿ ಅವು ಕೆಟ್ಟ ಸ್ನೇಹಿತರೇನಲ್ಲ. ಆದರೆ ಸಂಗೀತ ಮತ್ತು ಹಾಡುಗಾರಿಕೆಗಳಿಗೆ ಬರ್ಬರ ಪಕ್ಕವಾದ್ಯಗಳೆನಿಸುತ್ತವೆ. ಪಿಯಾನೋವನ್ನು ನುಡಿಸುವಾಗ ಹುಕ್ಕಾದಿಂದ ಹೊರಡುವ ಗರಗರ ಶಬ್ದ ಅಸಮಂಜಸವೆನಿಸುತ್ತವೆ" ಎನ್ನುತ್ತಾನೆ. ಹುಕ್ಕಾದ ಕುರಿತು ಇಂತಹ ವರ್ಣನೆಗಳು ಇತಿಹಾಸದಲ್ಲಿ ಬಹಳಷ್ಟು ಇವೆ.

ಹೀಗಾಗಿ ಹುಕ್ಕಾಗಳು ರಾಜ ವೈಭವವನ್ನು ಪ್ರತಿನಿಧಿಸುವ ನಿಟ್ಟಿನಲ್ಲಿ ಬಹು ವಿಶಿಷ್ಟ ವಿನ್ಯಾಸಗಳ ಸಂಯೋಜನೆಯೊಂದಿಗೆ ತುಂಬ ಅಲಂಕಾರಿಕ ನೆಲೆಯಲ್ಲಿ ರಚನೆಗೊಂಡಿರುವುದನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

(ಅ) ಪಾತ್ರೆಯಾಕಾರದ ಹುಕ್ಕಾ ತಳಗಳು

ಹುಕ್ಕಾಗಳಲ್ಲಿ ಪ್ರಮುಖವಾಗಿ ಎರಡು ಬಗೆಯ ಆಕಾರದಲ್ಲಿ ರಚನೆಗೊಂಡ ಹುಕ್ಕಾಗಳು ಹೇರಳವಾಗಿ ಲಭ್ಯವಾಗುತ್ತವೆ. ಒಂದು ವರ್ತುಲಾಕಾರದ (ಪಾತ್ರೆಯಂತಹ) ತಳ ಇನ್ನೊಂದು ಗಂಟೆಯಾಕಾರದ ಹುಕ್ಕಾ ತಳ. ಇನ್ನೂ ಎರಡು ಬಗೆಯ ಹುಕ್ಕಾ ತಳಗಳು ಸಹ ಕ್ಷೇತ್ರ ಕಾರ್ಯದಲ್ಲಿ ಲಭ್ಯವಾಗಿದ್ದು ಒಂದು ಹೂಜಿಯಾಕಾರದ ಹುಕ್ಕಾ ತಳ, ಇನ್ನೊಂದು ತಟ್ಟೆಯ ಸಹಿತವಾಗಿ ಪಾತ್ರೆಯನ್ನು ಹೊಂದಿದ ಹುಕ್ಕಾ ತಳಗಳು ಸಹ ಇವೆ. ಇಲ್ಲಿ ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಪಾತ್ರೆಯಾಕಾರದ ಹುಕ್ಕಾತಳಗಳನ್ನು ಪ್ರತ್ಯೇಕವಾಗಿ ಮತ್ತು ಗಂಟೆಯಾಕಾರದ ಹುಕ್ಕಾ ತಳಗಳನ್ನು ಸಹ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ.

೧. (ಅ). ಹುಕ್ಕಾ ತಳ (೧೭ನೆಯ ಶತಮಾನ)

ತೆಹನಿಶಾನ, ಜರ್‌ನಿಶಾನ್, ಅಫ್ತಾಬಿ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಪ್ರಸ್ತುತ ಹುಕ್ಕಾ ತಳಕ್ಕೆ ಎಂಟು ಹಂತಗಳಲ್ಲಿ ವರ್ತುಲಾಕಾರದ ಪಟ್ಟಿಕೆಗಳ ಮೇಲೆ ವಿವಿಧ ಬಗೆಯ ವಿನ್ಯಾಸಗಳು ರಚಿಸಲ್ಪಟ್ಟಿವೆ. ಕಂಠದ ಮೇಲ್ಭಾಗದ ಪುಷ್ಪಾವರಣದ ಕಮಾನುಗಳುಳ್ಳ ಖಾನೆಯ ಒಳಾವರಣದಲ್ಲಿ ಎಂದಿನಂತೆ ಪರ್ಣಗಳ ವಿನ್ಯಾಸಗಳು ಒಡಮೂಡಿವೆ. ಕೆಳಭಾಗಕ್ಕೆ ಹೊರಚಾಚಿದ ಪಟ್ಟಿಕೆಯ ಮೇಲೆ ಪರ್ಣಗಳಂತಹ ವಿನ್ಯಾಸಗಳು ರಚಿಸಲ್ಪಟ್ಟಿವೆ. ಕಂಠದ ಭಾಗದಲ್ಲಿ ಶರಚಿನ್ಹೆಯಂತಹ ರೇಖಾತ್ಮಕ ವಿನಯಾಸಗಳು ರಚಿಸಿದ್ದು ಅವು ಹಗ್ಗದಂತೆ ಭಾಸವಾಗುತ್ತವೆ. ತದನಂತರದ ಪಟ್ಟಿಕೆಯಲ್ಲಿ ತ್ರಿದಳ ಪರ್ಣಗಳ ವಿನ್ಯಾಸಗಳು ಕೆಳಮುಖವಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದು, ಅವುಗಳಿಗೆ ಪೂರಕವಾಗಿ ಬಳ್ಳಿಗಳಂತಹ ರಚನೆಗಳು ಇವೆ. ಈ ಪಟ್ಟಿಕೆಯ ಬಾಹ್ಯದಲ್ಲಿ ಮತ್ತೊಂದು ಪಟ್ಟಿಕೆ ಇದ್ದು ವರ್ತುಲಾಕಾರದ ಬಳ್ಳಿಗಳ ರಚನೆ ಇದೆ. ಪಾತ್ರೆಯ ಎದೆಯ ಭಾಗದಲ್ಲಿ ಹೂವು ಮತ್ತು ಎಲೆಗಳಿಂದ ಕೂಡಿದ ಬಳ್ಳಿಯ ವಿನ್ಯಾಸವಿದೆ. ಇದರ ನಂತರ ಮತ್ತೊಂದು ಪಟ್ಟಿಕೆಯಲ್ಲಿ ಐದನೆಯ ಪಟ್ಟಿಕೆಯ ವಿನ್ಯಾಸಗಳು ಪುರಾವರ್ತನೆಗೊಂಡಿವೆ. ಪಾತ್ರೆಯ ಉದರಭಾಗದಲ್ಲಿ ಪ್ರಧಾನವಾದ ವಿನ್ಯಾಸಗಳ ಸಂಯೋಜನೆ ಮಹತ್ವದ್ದು. ಷಡ್ಭುಜಗಳನ್ನು ಹೊಂದಿದ ಅರ್ಧ ಕಮಾನಿನ ಆಕಾರದಲ್ಲಿ ರಚನೆಗೊಂಡ ವರ್ತುಲಗಳಂತಹ ಎರಡೆರಡು ಆಕೃತಿಗಳ ಮೂಲೆಗಳಲ್ಲಿ ಹೂಬಳ್ಳಿಗಳ ವಿನ್ಯಾಸಗಳು ಕೆಳ ಮತ್ತು ಮೇಲ್ಭಾಗದಲ್ಲಿ ಪರಸ್ಪರ ಅಭಿಮುಖವಾಗಿ ರಚನೆಗೊಂಡಿವೆ. ಈ ವರ್ತುಲದ ಒಳಾವರಣದಲ್ಲಿ ಏಳು ದಳಗಳ ಮೂರು ಹೂವಿನ ವಿನ್ಯಾಸಗಳು ಪ್ರಧಾನವಾಗಿ ರಚನೆಗೊಂಡಿದ್ದು, ಇದಕ್ಕೆ ಗಿಡಗಳರೆಂಬೆಗಳು ಹಾಗೂ ಎರಡು ಎಲೆಗಳ ವಿನ್ಯಾಸಗಳು ಅತ್ಯಂತ ಸುಕುಮಾರತೆಯ ನೆಲೆಯಲ್ಲಿ ರಚನೆಗೊಂಡಿವೆ. ಈ ಪ್ರಧಾನ ಪಟ್ಟಿಕೆಯ ತಳದಲ್ಲಿ ಮತ್ತೊಂದು ಪಟ್ಟಿಕೆಯಲ್ಲಿ ಎಂದಿನಂತೆ ನಾಲ್ಕು ದಳಗಳ ಹೂವಿನ ಆಕೃತಿ

ಬಳ್ಳಿಯ ಸಹಿತವಾಗಿ ರಚಿಸಲ್ಪಟ್ಟಿದೆ. ಅತ್ಯಂತ ಸೂಕ್ಷ್ಮ ವಿನ್ಯಾಸಗಳ ಪ್ರಕೀರ್ಣಕ ಸಂಯೋಜನೆಯಿಂದ ರಚನೆಗೊಂಡ ಈ ಹುಕ್ಕಾದ ಪಾತ್ರೆ ಡೆಕ್ಕನ್ ಸಂದರ್ಭದಲ್ಲಿನ ಆಳರಸರ ಕಲಾತ್ಮಕ ಅಭಿರುಚಿಯ ಪ್ರತೀಕವಾಗಿದೆ.

೧. (ಬ). **ಹುಕ್ಕಾ ತಳ** (೧೭ನೆಯ ಶತಮಾನ)

ತೆಹನಿಶಾನ, ಜರ್‌ನಿಶಾನ್, ಅಫ್ತಾಬಿ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾದ ಪಾತ್ರೆಯು ಚಿತ್ರ ೧ರಲ್ಲಿ ಕಂಡುಬರುವ ಹುಕ್ಕಾದ ವಿನ್ಯಾಸಕ್ಕಿಂತ ಭಿನ್ನವಾಗಿದ್ದು, ಅದರಷ್ಟು ಪ್ರಕೀರ್ಣಕ ಸಂಯೋಜನೆಯನ್ನು ಹೊಂದಿಲ್ಲ. ಆದರೆ ರಚನೆಯ ಉದ್ದಿಶ್ಯದಲ್ಲಿ ಪ್ರಕೃತಿಯ ಸಂಯೋಜನೆಯನ್ನು ಚಿತ್ರಿಸಿರುವ ಕ್ರಮ ಇಲ್ಲಿದೆ. ಪಾತ್ರೆಯ ಉದರಭಾಗದ ಮಧ್ಯ ಪಟ್ಟಿಕೆಯಲ್ಲಿ ತಾವರೆ ಹೂಗಳ ವಿನ್ಯಾಸಗಳು ಅವುಗಳ ದೇಟುಗಳ ಸಹಿತವಾಗಿ ಚಿತ್ರಿತಗೊಂಡಿವೆ. ಅರಳಿದ ಹೂವು, ಮೊಗ್ಗು ಹೀಗೆ ಜಲ ಸಸ್ಯಗಳನ್ನು ಸಾಂಕೇತಿಕ ನಿರೂಪಣೆ ಇಲ್ಲಿದೆ. ಕೆಳಪಟ್ಟಿಕೆಯಲ್ಲಿ ನೀರನ್ನು ಅರ್ಧ ವರ್ತುಲಾಕಾರದ ರೇಖೆಗಳಿಂದ ಸಾಂಕೇತಿಕವಾಗಿ ತೋರಿಸಿರುವ ಕುಶಲಕರ್ಮಿ ಪ್ರಗಲ್ಭ ಬುದ್ಧಿ ಮತ್ತೆ ಅಭಿನಂದನಾರ್ಹವಾಗಿದೆ. ತದನಂತರದ ಪಟ್ಟಿಕೆಯಲ್ಲಿ ಪಂಚದಳಗಳ ಹೂವುಗಳ ವಿನ್ಯಾಸಗಳು ಕೆಲ ಮತ್ತು ಮೇಲ್ಮುಖವಾಗಿ ಅರ್ಧ ವರ್ತುಲಾಕಾರದಲ್ಲಿ ರಚನೆಗೊಂಡಿವೆ. ಆ ನಂತರದ ಪಟ್ಟಿಕೆಯಲ್ಲಿ ಪರ್ಣಗಳ ವಿನ್ಯಾಸಗಳು ಮೇಲ್ಮುಖವಾಗಿ ರಚಿಸಲ್ಪಟ್ಟಿವೆ. ಇವೇ ಬಗೆಯ ರಚನಾ ವಿನ್ಯಾಸ ಪಾತ್ರೆಯ ಎದೆಯ ಮೇಲ್ಭಾಗದಲ್ಲೂ ಪುನರಾವರ್ತಿತಗೊಂಡಿವೆ. ಒಟ್ಟಿನಲ್ಲಿ ಪಾತ್ರೆಯ ಹಿನ್ನೆಲೆಯ ಅವಕಾಶವನ್ನು ಸಾಕಷ್ಟು ಉಳಿಸಿಕೊಂಡಿರುವ ಕರ್ಮಿಯು ಪ್ರತಿ ವಿನ್ಯಾಸದಲ್ಲೂ ಲಾಲಿತ್ಯ ಭಾವವನ್ನು ಅತ್ಯಂತ ಸಮರ್ಥವಾಗಿ ಕಾಯ್ದುಕೊಂಡಿದ್ದಾನೆ.

೨. **ಹುಕ್ಕಾ ತಳ** (ಕ್ರಿ.ಶ.೧೬೫೦-೧೭೦೦) ತೆಹನಿಶಾನ ಮತ್ತು ಅಫ್ತಾಬಿ ತಂತ್ರ

ಡೋರೀಸ್ ಡ್ಯೂಕ್ ಫೌಂಡೇಶನ್ ಫಾರ್ ಇಸ್ಲಾಮಿಕ್ ಆರ್ಟ್‌ನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಮೇಲಿನ ಹುಕ್ಕಾ ಮೂಲವಾಗಿದ್ದು, ಕಾಲನ ತುಳಿತದಲ್ಲಿ ಅದರ ವಿನ್ಯಾಸಗಳು ಕಿತ್ತುಹೋಗಿರುವುದನ್ನು ಕಾಣಬಹುದಗಿದೆ. ಇದನ್ನು ಸಂಗ್ರಹಿಸಿದ ಸದರಿ ಫೌಂಡೇಶನ್ ಹುಕ್ಕಾವನ್ನು ಪೂರ್ಣವಾಗಿ ಸಂಸ್ಕರಿಸಿ ಕಿತ್ತು ಹೋಗಿದ್ದ ವಿನಯಾಸಗಳನ್ನು ಪುನರಪಿ ರಚಿಸಿರುವುದನ್ನು ಕೆಳಚಿತ್ರದಲ್ಲಿ ಕಾಣಬಹುದಾಗಿದೆ. ಪಾತ್ರೆಯ ಉದರಭಾಗದಲ್ಲಿ ಪ್ರಧಾನ ವಿನ್ಯಾಸದ ಹೊರ ಆರು ಕಮಾನುಗಳುಳ್ಳ ವರ್ತುಲವು ಚಿತ್ರ ೧ (ಅ)ರಲ್ಲಿ ಕಂಡುಬರುವ ಆಕಾರವನ್ನೇ ಹೊಂದಿದೆ. ಆದರೆ ಒಳಾವರಣದ ವಿನ್ಯಾಸಗಳು ಅದಕ್ಕಿಂತ ವಿಭಿನ್ನವಾಗಿವೆ. ಮಧ್ಯದಲ್ಲಿ ಆರು ಹೂವುಗಳ ವಿನ್ಯಾಸ, ಇವುಗಳನ್ನು ಸುಕುಮಾರತೆಯಿಂದ

ಬಳಸಿಕೊಂಡ ದೇಟುಗಳಿಂದ ಕೂಡಿದ ಪರ್ಣಗಳ ವಿನ್ಯಾಸಗಳು ಒಡಮೂಡಿವೆ. ಇದೇ ಬಗೆಯ ವಿನ್ಯಾಸಗಳುಪಾರ್ಶ್ವಗಳೆರಡರಲ್ಲಿ ಸಹ ಪುನರಾವರ್ತಿತಗೊಂಡಿವೆ. ಪಾತ್ರೆಯ ಎದೆಯ ಭಾಗದ ಮೇಲ್ಭಾಗದಲ್ಲಿ ಆರು ಹಂತಗಳಲ್ಲಿ ವಿವಿಧ ಅಳತೆಗಳ ಪಟ್ಟಿಕೆಗಳಿದ್ದು, ಅವುಗಳಲ್ಲಿ ಹೂಬಳ್ಳಿಗಳ ವಿನ್ಯಾಸಗಳು ಎಂದಿನಂತೆ ಮೂಡಿಬಂದಿವೆ. ಅತ್ಯಂತ ಪ್ರಕೀರ್ಣಕ ಸಂಯೋಜನೆಯಿಂದ ಗಮನಸೆಳೆಯುವ ಈ ಹುಕ್ಕಾ ಪಾತ್ರೆಯು ಸೂಕ್ಷ್ಮತಮ ವಿನ್ಯಾಸಗಳಿಂದಲೂ ಸಹ ಗಮನಾರ್ಹವೆನಿಸುತ್ತದೆ.

೩. **ಹುಕ್ಕಾ ತಳ** (೧೭ನೆಯ ಶತಮಾನ) ಜರ್‌ನಿಶಾನ್ ಮತ್ತು ಅಫ್ತಾಬಿ ತಂತ್ರ

ಮೆಟ್ರೋಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್‌ನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಐದು ಹಂತಗಳ ಪಟ್ಟಿಕೆಗಳ ವಿನ್ಯಾಸದಿಂದ ಕೂಡಿದ ಈ ಹುಕ್ಕಾ ಪಾತ್ರೆಯಲ್ಲಿ ಮೂರು ದಳಗಳ ಎಲೆಗಳ ವಿನ್ಯಾಸ, ಇದನ್ನು ಸುತ್ತುಬಳಸಿಕೊಂಡ ಲಾಲಿತ್ಯಪೂರ್ಣವಾಗಿ ರಚನೆಗೊಂಡ ದೇಟು ಸಹಿತವಾದ ಸೃಜನಾತ್ಮಕವಾದ ಹೂವಿನ ವಿನ್ಯಾಸಗಳೆರಡು ತಲೆಕೆಳಗಾಗಿ ರಚನೆಗೊಂಡಿವೆ. ಇನ್ನುಳಿದ ಅವಕಾಶದಲ್ಲಿ ಆರು, ನಾಲ್ಕು ದಳಗಳ ಹೂವಿನ ವಿನ್ಯಾಸಗಳು ಅಲ್ಲಲ್ಲಿ ರಚನೆಗೊಂಡಿವೆ. ಇವೇ ಬಗೆಯ ರಚನೆಗಳು ಪಾತ್ರೆಯ ಸುತ್ತಣದಲ್ಲಿ ಪುನರಾವರ್ತಿತಗೊಂಡಿವೆ. ಪಾತ್ರೆಯ ಮೇಲ್ಭಾಗದಲ್ಲಿ ಪರ್ಣಗಳ ಸಾಲು, ಒಳಾವರಣದಲ್ಲಿ ಹೂಬಳ್ಳಿಗಳಿಂದ ಅಲಂಕೃತಗೊಂಡ ಪಟ್ಟಿಕೆಗಳು ರಚನೆಗೊಂಡಿವೆ. ದಟ್ಟ ತಂತ್ರವನ್ನು ದುಡಿಸಿಕೊಂಡ ಹುಕ್ಕಾದ ವಿನ್ಯಾಸ ಚಿತ್ರ ೧(ಬ)ರಲ್ಲಿ ಕಂಡುಬರುವ ಹುಕ್ಕಾದಂತೆ ಸ್ವಲ್ಪ ವಿಭಿನ್ನ ನೆಲೆಯಲ್ಲಿ ಕಂಡುಬರುತ್ತದೆ.

೪. **ಹುಕ್ಕಾದ ತಳ** (೧೭ನೆಯ ಶತಮಾನ) ಜರ್‌ನಿಶಾನ್ ಮತ್ತು ಅಫ್ತಾಬಿ ತಂತ್ರ

ಹೈದರಬಾದಿನ ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹವಾಗಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾದ ಅಲಂಕಾರಿಕ ವಿನ್ಯಾಸಗಳು ವಿಶಿಷ್ಟವಾದ ರಚನೆಯಿಂದ ಕೂಡಿವೆ. ಪಾತ್ರೆಯ ಉದರ ಭಾಗದಲ್ಲಿ ಅಷ್ಟದಳಗಳ ವಿನ್ಯಾಸ, ಅದರ ಮಧ್ಯದಲ್ಲಿ ಸೃಷ್ಟಿಯಾದ ದೇಟು ಸಹಿತವಾಗಿರುವ ತಾವರೆ ಹೂವಿನ ವಿನ್ಯಾಸ ಸೋಜಿಗವೆನಿಸುತ್ತದೆ. ಪಾರ್ಶ್ವಗಳೆರಡರಲ್ಲಿ ಗೋದಿ ತೆನೆಯನ್ನು ಹೋಲುವ ವಿನ್ಯಾಸಗಳು ರಚನೆಗೊಂಡಿವೆ. ಪಾತ್ರೆಯ ಮೇಲ್ಭಾಗದ ಪಟ್ಟಿಕೆಗಳಲ್ಲಿ ಎಂದಿನಂತೆ ಹೂಬಳ್ಳಿಗಳ ವಿನ್ಯಾಸಗಳು ರಚನೆಗೊಂಡಿವೆ. ಕಂಠದ ಮೇಲೆ, ಪಾತ್ರೆಯ ಉದರ ಭಾಗದಲ್ಲಿನ ವಿನ್ಯಾಸಗಳು ಪುನರಾವರ್ತಿತಗೊಂಡಿವೆ. ಚಿತ್ರ ೨ರಲ್ಲಿ ಕಂಡು ಬರುವ ಪ್ರಕೀರ್ಣಕ ಸಂಯೋಜನೆ ಇಲ್ಲದಿದ್ದರೂ ದಟ್ಟ ಆಕೃತಿಗಳಲ್ಲಿ ಸುಕುಮಾರತೆಯನ್ನು ಕುಶಲಕರ್ಮಿಯು ಕಾಯ್ದುಕೊಂಡು ಬಂದಿದ್ದಾನೆ.

೫. ಹುಕ್ಕಾ ತಳ (೧೮ನೆಯ ಶತಮಾನ) ಜರ್‌ನಿಶಾನ್ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾದಲ್ಲಿ ಕುಶಲಕರ್ಮಿಯ ಸೃಜನಾತ್ಮಕ ಪ್ರಯೋಗಶೀಲತೆಯ ಪ್ರಜ್ಞೆ ಗಮನಾರ್ಹವಾಗಿರುತ್ತದೆ. ಪ್ರಾಕೃತಿಕ ವಿನ್ಯಾಸಗಳಾಧಾರಿತ ಹುಕ್ಕಾಗಳನ್ನು ಈಗಾಗಲೇ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿ ಪ್ರಾಕೃತಿಕ ವಿನ್ಯಾಸಗಳನ್ನು ಸೃಜನಾತ್ಮಕಕ್ರಿಯೆಗೆ ಒಳಪಡಿಸಿ ಅವುಗಳನ್ನು ವಿರುಪಗೊಳಿಸಿದ್ದರೂ ಅವು ಅಲಂಕಾರಿಕ ಭಾವವನ್ನು ಹೊರಹಾಕುವ ಕ್ರಿಯೆ ಇಲ್ಲಿ ಗಮನಾರ್ಹವಾದುದು. ಈ ಹುಕ್ಕಾದ ಪಾತ್ರೆಯಲ್ಲಿ ವರ್ತುಲಗಳೇ ಪ್ರಮುಖ ಆಶಯಗಳಾಗಿವೆ. ಪಾತ್ರೆಯ ಉದರ ಭಾಗದಲ್ಲಿ ವರ್ತುಲಗಳೆರಡನ್ನು ಬೆಳ್ಳಿಯ ಕಾಗದದ ಪಟ್ಟಿಕೆಯಿಂದ ದಟ್ಟವಾಗಿ ರಚಿಸಲಾಗಿದೆ. ಒಳಾವರಣದಲ್ಲಿ ಬೆಳ್ಳಿಯ ತಂತಿಗಳಿಂದ ನಕ್ಷತ್ರಾಕಾರದ ವಿನ್ಯಾಸಗಳು ಒಡಮೂಡಿವೆ. ಮಧ್ಯದಲ್ಲಿ ನಾಲ್ಕು ದಳಗಳ ಹೂವಿನಂತಹ ವಿನ್ಯಾಸಗಳು ರಚನೆಗೊಂಡಿವೆ. ಇದೇ ಬಗೆಯ ರಚನೆ ಕಂಠದ ತಳಭಾಗದಲ್ಲೂ ಪುನರಾವರ್ತಿತಗೊಂಡಿವೆ. ಕಂಠದಲ್ಲಿ ಶರಚಿನ್ಹೆಯಂತಹ ರೇಖಾ ವಿನ್ಯಾಸಗಳು, ಮೇಲ್ಬಾಗದಲ್ಲಿ ಉದರ ಭಾಗದಂತಹ ವಿನ್ಯಾಸಗಳು ಮೂಡಿವೆ. ಪ್ರಾಕೃತಿಕ ಆಶಯಗಳ ಯತಾರ್ಥ ಮುದ್ರೆ ಇಲ್ಲಿ ಗೌಣವಾಗಿದ್ದರೂ ಸೂಕ್ಷ್ಮ ಕುಸುರಿಗೆ ತನ್ನ ಮೈಯೊಡ್ಡಿರುವ ಹುಕ್ಕಾ ಬಾಹ್ಯ ನೋಟದಲ್ಲಿ ಗಮನಾರ್ಹವೆನಿಸುತ್ತದೆ.

೬. ಹುಕ್ಕಾ ತಳ (೧೭–೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾದಲ್ಲಿ ಹೂವಿನ ಗಿಡವೇ ಪ್ರಧಾನ ಆಶಯವಾಗಿದೆ. ಬಹುದಳಗಳ ಹೂವುಗಳೆರಡನ್ನು ಪಾರ್ಶ್ವಗಳೆರಡರಲ್ಲಿ ಚಿತ್ರಿಸಿರುವ ಕುಶಲಕರ್ಮಿಯು ಆ ಹೂವುಗಳಿಗೆ ಪ್ರಮಾಣಬದ್ಧವಾದ ರೆಂಬೆಗಳನ್ನು ಪರ್ಣಗಳ ಸಹಿತವಾಗಿ ಚಿತ್ರಿಸಿದ್ದಾನೆ. ಈ ಪ್ರಧಾನ ವಿನ್ಯಾಸದ ಪಾರ್ಶ್ವಗಳೆರಡರಲ್ಲಿ ಪರ್ಣಯುಕ್ತ ಅಶೋಕ ಗಿಡವನ್ನು ಹೋಲುವ ವಿನ್ಯಾಸ ಹುಕ್ಕಾದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಕಂಠದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಪರ್ಣಗಳ, ಹೂ ಬಳ್ಳಿಗಳ ವಿನ್ಯಾಸಗಳು ಎಂದಿನಂತೆ ಒಡಮೂಡಿವೆ.

೭. ಹುಕ್ಕಾ ತಳ (೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಹಿಂದಿನ ಎರಡು ಹುಕ್ಕಾ ಪಾತ್ರೆಗಳ ಆಕಾರಕ್ಕಿಂತ ಕೊಂಚ ಪ್ರಬುದ್ಧತೆಯಲ್ಲಿ ದುರ್ಬಲವಾಗಿರುವ ಈ ಹುಕ್ಕಾ ಪಾತ್ರೆಯಲ್ಲಿ ಮೂರು ಹೂವುಗಳಿಂದ ಕೂಡಿದ ಗಿಡದ ವಿನ್ಯಾಸವಿದೆ. ಕಣಗಿಲ ಗಿಡದ ಎಲೆಯಂತೆ ಕಂಡುಬರುವ ಇಲ್ಲಿನ ಎಲೆಗಳ ವಿನ್ಯಾಸಗಳಲ್ಲಿ ಸುಕುಮಾರತೆಯಿದೆ. ಹೂ ದಳಗಳ ಹಿನ್ನಲೆಯಲ್ಲಿ ದಟ್ಟ ಬೆಳ್ಳಿಯ ಛಾಯೆ ಇದೆ.

ಪಾತ್ರೆಯ ಕಂಠದ ಕೆಳಭಾಗದಲ್ಲಿ ಎಂದಿನಂತೆ ಹೂಬಳ್ಳಿಗಳಿಂದ ಕೂಡಿದ ವಿನ್ಯಾಸಪಟ್ಟಿಕೆಗಳು ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಉದರ ಭಾಗದಲ್ಲಿ ಕಂಡುಬರುವ ವಿನ್ಯಾಸಗಳು ಪುನರಾವರ್ತಿತಗೊಂಡಿವೆ. ಸೂಕ್ಷ್ಮ ವಿನ್ಯಾಸಕ್ಕಿಂತ ದಟ್ಟ ವಿನ್ಯಾಸದತ್ತ ಆಸಕ್ತಿ ತೋರಿರುವ ಕರ್ಮಿಯು ತನ್ನ ಕರ್ಮದ ಆದಿಯಲ್ಲಿ ರಚಿಸಿರುವ ಕಾರಣವಾಗಿ ಮಡಿಕೆಯ ಮತ್ತು ವಿನ್ಯಾಸಗಳಲ್ಲಿ ಪ್ರಬುದ್ಧತೆಯ ಅಂಶ ತುಸು ಗೌಣವಾಗಿದೆ.

೮. ಹುಕ್ಕಾ ತಳ (೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಹೈದರಬಾದಿನ ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹವಾಗಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಹಿಂದಿನ ಎಲ್ಲ ಹುಕ್ಕಾ ತಳಗಳಿಗಿಂತ ವಿಭಿನ್ನವಾಗಿರುವ ಈ ಹುಕ್ಕಾ ತಳದ ಒಟ್ಟು ಆಕಾರದಲ್ಲಿ ಹಾಗೂ ವಿನ್ಯಾಸದಲ್ಲೂ ಸಹ ವಿಭಿನ್ನ ವಿಶೇಷಣಗಳಿಂದ ಕೂಡಿದೆ. ಪಾತ್ರೆಯ ತಳದಲ್ಲಿ ಚಪ್ಪಟೆಯಾಕಾರ ಕಂಠದಲ್ಲೂ ಸಹ ಸಮಾನಾಂತರವಾಗಿ ಚಪ್ಪಟೆಯಾಗಿದೆ. ಅಲ್ಲಿ ಮೆಟ್ಟಿಲುಗಳಂತಹ ವಿನ್ಯಾಸಗಳನ್ನು ಪುಷ್ಪದಂತೆ ರಚಿಸಲಾಗಿದೆ. ಇನ್ನು ಪಾತ್ರೆಯ ಅಲಂಕಾರಿಕ ನೆಲೆಯಲ್ಲಿ ಗ್ರಹಿಸುವುದಾದರೆ, ಸಮಾನಾಂತರವಾದ ಪಟ್ಟಿಕೆಗಳಲ್ಲಿ ಏಕಪ್ರಕಾರದ ಆರೇಳು ದಳಗಳ ಹೂವಿನ ವಿನ್ಯಾಸಗಳು ಸಾಲುಸಾಲಾಗಿ ಒಂದರ ಕೆಳಗೆ ಒಂದರಂತೆ ಸಂಯೋಜಿಸಲ್ಪಟ್ಟಿವೆ. ಹೂವುಗಳನ್ನು ಸುತ್ತುಬಳಸಿಕೊಂಡ ಬಳ್ಳಿಯು ಲಾಲಿತ್ಯಪೂರ್ಣವಾಗಿ ಪರ್ಣಗಳಿಂದ ರಚನೆಗೊಂಡಿದೆ. ಇದೇ ಬಗೆಯ ರಚನಾ ವಿನ್ಯಾಸಗಳು ಕಂಠದ ಮೇಲೆ ಪುನರಾವರ್ತನೆಗೊಂಡಿವೆ. ಅತ್ಯಂತ ಸೂಕ್ಷ್ಮವಾದ ವಿನ್ಯಾಸಗಳನ್ನು ಹುದುಗಿಸಿರುವ ಪ್ರಗಲ್ಭ ಕರ್ಮಿಯ ಕುಶಲತೆ ಈ ಹುಕ್ಕಾದ ಅಲಂಕಾರಿಕ ವೈಭವವನ್ನು ಹೆಚ್ಚಿಸಿದೆ.

೯. ಹುಕ್ಕಾ ತಳ (೧೮ನೆಯ ಶತಮಾನ) ಜರ್‌ನಿಶಾನ್ ಮತ್ತು ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಚಿತ್ರ ೮ರಲ್ಲಿ ಕಂಡುಬರುವ ಹುಕ್ಕಾದ ರಚನೆಯನ್ನೇ ಇದು ಹೋಲುತ್ತದೆಯಾದರೂ, ವಿನ್ಯಾಸಗಳಲ್ಲಿ ಕೊಂಚ ಬದಲಾವಣೆ ಕಂಡುಬರುತ್ತದೆ. ಹಿಂದಿನ ಹುಕ್ಕಾದಲ್ಲಿ ತಳ ಮತ್ತು ಕಂಠದ ಕೆಳಭಾಗ ಚಪ್ಪಟೆಯಾಗಿದ್ದರೆ ಈ ಹುಕ್ಕಾದ ತಳ ವರ್ತುಲಾಕಾರವಾಗಿ ರಚನೆಗೊಂಡಿದೆ. ಪಾತ್ರೆಯ ಉದರಭಾಗದಲ್ಲಿ ಏಳುದಳಗಳ ಹೂವಿನ ವಿನ್ಯಾಸಗಳನ್ನು ಸುತ್ತುಬಳಸಿಕೊಂಡು ಪರ್ಣ ಸಹಿತವಾದ ಬಳ್ಳಿಗಳು ಪಟ್ಟಿಕೆಯ ಒಳಾವರಣದಲ್ಲಿ ಅಲಂಕಾರಿಕ ಬದ್ಧತೆಯನ್ನು ಪ್ರದರ್ಶಿಸಿವೆ. ಕಂಠದ ಕೆಳಭಾಗದಲ್ಲಿ ಪಟಿಕೆಯ ರುಪದಲ್ಲಿ ಎಂದಿನಂತೆ ಹೂ ಬಳ್ಳಿಗಳ ವಿನ್ಯಾಸಗಳು ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಉದರ ಕಂಡುಬರುವ ಹೂವಿನ ವಿನ್ಯಾಸಗಳೇ ಒಡಮೂಡಿದ್ದು, ಅವು ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಪ್ರಧಾನವಾಗಿಕಂಡು ಪುಷ್ಪಾವರಣದ

ಕಮಾನಿನಂತಹ ರಚನೆಯಲ್ಲಿ ಅಲಂಕೃತಗೊಂಡಿವೆ. ಒಟ್ಟಿನಲ್ಲಿ ಸೂಕ್ಷ್ಮ ವಿನ್ಯಾಸಗಳಲ್ಲಿ ಸುಕುಮಾರತೆ ಇರುವ ಕಾರಣವಾಗಿ ಹುಕ್ಕಾ ವೈಭವೀಕರಣದ ಪ್ರತೀಕವಾಗಿದೆ.

೧೦. **ಹುಕ್ಕಾ ತಳ** (೧೭ನೆಯ ಶತಮಾನ) ಜರ್‌ನಿಶಾನ್ ಮತ್ತು ಅಫ್ತಾಬಿ ತಂತ್ರ

ಕುಶಲನಾದ ಕಲಾಕಾರನು ನಿತ್ಯಬಳಕೆಯ ವಸ್ತುವನ್ನು ಉತ್ತಮ ಅಭಿರುಚಿಯ ತತ್ವಗಳಿಗನುಸಾರವಾಗಿ ನಿರ್ಮಿಸಿದರೆ ಅದು ಅಲಂಕರಣಕಲೆ ಅಥವಾ ಉಪಕಲೆಗಳ ವರ್ಗಕ್ಕೆ ಸೇರುತ್ತದೆ. ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ (ಕ್ರಿ.ಪೂ. ೩ನೇಯ ಶತಮಾನ) ಈ ಪರಂಪರೆಯು ಬೆಳೆದು ಬಂದಿದೆಯಷ್ಟೇ ಅಲ್ಲ, ಈಗಲೂ ಮುಂದುವರೆದಿದೆ. ವೈವಿಧ್ಯ ಗುಣಮಟ್ಟ ಮತ್ತು ಮಾಧ್ಯಮಗಳು ಅಭಿರುಚಿಗೆ ತಕ್ಕಂತೆ, ತಲೆಮಾರುಗಳ ಸ್ಥಾನಮಾನಕ್ಕೆ ತಕ್ಕಂತೆ ಬೆಳವಣಿಗೆಯನ್ನು ಹೊಂದುತ್ತ ಬಂದಿವೆ. ಆ ಪ್ರಕ್ರಿಯೆಯು ಇಂದಿಗೂ ಮುಂದುವರಿದಿರುವುದಕ್ಕೆ ಈ ಹುಕ್ಕಾ ಒಂದು ನಿದರ್ಶನವಷ್ಟೆ.

ನವದೆಹಲಿಯ ನ್ಯಾಶನಲ್ ಮ್ಯೂಸಿಯಂನ ಸಂಗ್ರಹದಲ್ಲಿರುವ **ಈ** ಹುಕ್ಕಾದ ತಳವು ಅನನ್ಯವಾದ ಚೆಲುವಿಕೆಯಿಂದ ಕೂಡಿದೆ. ವರ್ತುಲಾಕೃತಿಯ ಈ ಹುಕ್ಕಾದ ತಲಭಾಗವುಹೈದರಾಬಾದಿನದಾಗಿದೆ. ಇದರ ಮೇಲೆ ೧೯ನೆಯ ಶತಮಾನದ ಹಿಂದಿ ಕವಿಯಾದ ಮಲಿಕ ಮಹಮ್ಮದ ಜೈಸಿಯ ಪದ್ಮಾವತದ ಕಥೆಯನ್ನು ನಿರೂಪಿಸಲಾಗಿದೆ. ವಿವಿಧ ಬಗೆಯ ಆಯತಗಳಲ್ಲಿ ಕಥೆಯ ಹಲವಾರು ಸನ್ನಿವೇಶಗಳನ್ನು ಬೆಳ್ಳಿಯ ಕಾಗದಗಳಿಂದ ಏಕ ಪ್ರಕಾರದ ಛಾಯೆಯಂತೆ ಕತ್ತರಿಸಿ ಹುದುಗಿಸಲಾಗಿದೆ. ಕಥಾ ನಿರೂಪಣೆಗೆ ಪೂರಕವಾಗಿ ಅರಮನೆಯಂತಹ ಪರಿಸರವನ್ನು ಸೂಚಿಸುವುದಕ್ಕಾಗಿ ಮುಸ್ಲಿಂ ವಾಸ್ತು ಶಿಲ್ಪದ ಅನೇಕ ವಿನ್ಯಾಸಗಳನ್ನು ಇಲ್ಲಿ ಮಾನವಾಕೃತಿಗಳೊಂದಿಗೆ ರಚಿಸಲಾಗಿದೆ. ವಾಡಿಕೆಯಂತೆ ಕಾಲನ ತುಳಿತಕ್ಕೆ ಸಿಕ್ಕಿ ಹುಕ್ಕಾದ ಹಲವಾರು ಚಿತ್ರಗಳು ಕಿತ್ತುಹೋಗಿದ್ದು, ಕಥೆಯೊಂದನ್ನು ಅಮಲು ಬರಿಸುವ ಸಲಕರಣೆಯ ಮೇಲೆ ಚಿತ್ರಿಸಿರುವ ಕ್ರಮ ಅನನ್ಯವಾದುದು. ಬಿದ್ರಿ ಕಲೆಗಳಲ್ಲಿ ಬಹುತೇಕವಾಗಿ ಸಸ್ಯ ವಿನ್ಯಾಸಗಳೇ ಅಧಿಕ ಮತ್ತು ಅವುಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದ್ದರೂ ಈ ಹುಕ್ಕಾದಲ್ಲಿ ಮಾತ್ರ ಪದ್ಮಾವತದ ಕಥೆಯ ನಿರೂಪಣೆ ಒಡಮೂಡಿದ್ದು ವಿಸ್ಮಯವೆನಿಸುತ್ತದೆ. ಇದು ಸುಮಾರು ೧೮ನೆಯ ಶತಮಾನಕ್ಕೆ ಸೇರಿದ್ದು ಅತ್ಯುತ್ತಮವಾದ ಕಲಾಕೃತಿಗಳಲ್ಲೊಂದೆಂದು ಪರಿಗಣಿತವಾಗಿದೆ.

೧೧. **ಹುಕ್ಕಾ ತಳ** (೧೮ನೆಯ ಶತಮಾನ) ಜರ್‌ನಿಶಾನ್, ತರ್ಕಶಿ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ **ಈ** ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಚಿತ್ರ ೪ ಮತ್ತು ೬ರಲ್ಲಿ ಕಂಡು ಬರುವಂತಹ ವಿನ್ಯಾಸ ಇಲ್ಲಿಯೂ ಪುನರಾವರ್ತನೆಗೊಂಡಿದೆ. ಆದರೆ ಹುಕ್ಕಾದ ಉದರಭಾಗದಲ್ಲಿ ಬಹು ಸೂಕ್ಷ್ಮವಾದ ವಿನ್ಯಾಸಗಳು ಸುಕುಮಾರತೆಯಿಂದ ರಚನೆಗೊಂಡಿವೆ. ಲಾಲಿತ್ಯಪೂರ್ಣವಾಗಿ

ರಚನೆಗೊಂಡಿರುವ ಹೂವಿನ ಗಿಡದ ವಿನ್ಯಾಸವೊಂದರಲ್ಲಿ ಸಂಪಿಗೆ ಹೂವನ್ನು ನೆನಪಿಸುವ ವಿನ್ಯಾಸಗಳು ರಚನೆಗೊಂಡಿವೆ. ಇದರ ಎರಡೂ ಪಾರ್ಶ್ವಗಳಲ್ಲಿ ಚಿತ್ರ ೪ಮತ್ತು ೬ರಲ್ಲಿ ಕಂಡುಬರುವಂತಹ ಉದ್ದನೆಯ ಎಲೆಯಂತಹ ವಿನ್ಯಾಸ ಲಂಬವಾಗಿ ರಚನೆಗೊಂಡಿವೆ. ಕಂಠದ ಕೆಳಭಾಗದಲ್ಲಿ ಹೂ ಬಳ್ಳಿಗಳ ವಿನ್ಯಾಸಗಳಿಂದ ಕೂಡಿದ ಪಟ್ಟಿಕೆಯಲ್ಲಿ ಎಂದಿನಂತೆ ರಚನೆಗೊಂಡಿವೆ. ಒಟ್ಟಿನಲ್ಲಿ ಅತ್ಯಂತ ಪ್ರಕೀರ್ಣಕ ಬಗೆಯಲ್ಲಿ ಸಂಯೋಜನೆಗೊಂಡ ಇಲ್ಲಿನ ವಿನ್ಯಾಸಗಳಲ್ಲಿ ಕುಶಲಕರ್ಮಿಯ ಪ್ರಗಲ್ಭ ಮತಿಯನ್ನೂ ಹಾಗು ಕುಶಲ ಚಳಕವನ್ನೂ ಕಾಣಬಹುದಾಗಿದೆ.

೧೨. ಹುಕ್ಕಾ ತಳ (೧೭-೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ವರ್ತುಲಾಕಾರದಲ್ಲಿ ನಿರ್ಮಾಣಗೊಂಡಿದೆ. ಹೂವಿನ ಗಿಡವೊಂದರ ವಿನ್ಯಾಸ ಈ ಹುಕ್ಕಾದ ಪ್ರಮುಖ ಆಶಯ. ಅಲಂಕಾರಿಕ ನೆಲೆಯಲ್ಲಿ ರಚನೆಗೊಂಡ ಗಿಡವೊಂದರಲ್ಲಿ ತ್ರಿದಳ ವಿನ್ಯಾಸದಂತಹ ಹೂಗಳ ರಚನೆಗಳು ತಲೆಕೆಳಗಾಗಿ ಒಡಮೂಡಿವೆ. ಅವುಗಳ ಸರಚನೆಯಲ್ಲಿ ಲಾಲಿತ್ಯವನ್ನು ಕಾಯ್ದುಕೊಂಡು ಬಂದ ಕುಶಲಕರ್ಮಿಯು ಹುಕ್ಕಾದ ಮೇಲ್ಭಾಗವನ್ನು ಒಂದೇ ಬಗೆಯ ವಿನ್ಯಾಸಗಳಿಂದ ಅಲಂಕರಿಸಿದ್ದಾನೆ. ಸೂಕ್ಷ್ಮವಾದ ಹುದುಗಿಸುವಿಕೆಯ ಕಾರಣವಾಗಿ ಗಮನಾರ್ಹವೆನಿಸುವ ಈ ಹುಕ್ಕಾ ವಾಡಿಕೆಯಂತೆ ಚಿತ್ರಗಳ ವಿವರಗಳು ಕಿತ್ತು ಹೋಗಿವೆ.

ಉಪಸಂಹಾರ

ಪ್ರಸ್ತುತ ಉಪ ಅಧ್ಯಾಯದಲ್ಲಿ ಒಟ್ಟು ಹದಿಮೂರು ವರ್ತುಲಾಕಾರದ ಹುಕ್ಕಾ ತಳಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರ ೧(ಬ), ೩ ಮತ್ತು ೪ರಲ್ಲಿ ಕಂಡುಬರುವ ಹುಕ್ಕಾಗಳ ವಿನ್ಯಾಸಗಳು ಅಲ್ಪ ಭಿನ್ನತೆಯಿದ್ದರೂ ರಚನೆಯ ನೆಲೆಯಲ್ಲಿ ಒಂದನ್ನೊಂದು ಹೋಲುತ್ತವೆ. ಚಿತ್ರ೧(ಅ) ಮತ್ತು ೨ರಲ್ಲಿ ಕಂಡುಬರುವ ಕೆಲವು ವಿನ್ಯಾಸಗಳು ಪರಸ್ಪರ ಒಂದನ್ನೊಂದು ಹೋಲುತ್ತವೆ. ಚಿತ್ರ ೫ರಲ್ಲಿ ಕಂಡು ಬರುವ ಹುಕ್ಕಾ ಇಲ್ಲಿರುವ ಹುಕ್ಕಾಗಳಲ್ಲಿಯೇ ವಿಭಿನ್ನವಾದ ರಚನೆಯನ್ನು ಹೊಂದಿರುವುದನ್ನು ಅಧ್ಯಯನ ಸಂದರ್ಭದಲ್ಲಿ ಹೇಳಲಾಗಿದೆ. ಚಿತ್ರ ೮ ಮತ್ತು ೯ರಲ್ಲಿ ಕಂಡುಬರುವ ಹುಕ್ಕಾಗಳು ಸಹ ಇತರ ಹುಕ್ಕಾಗಳ ರಚನೆಗಿಂತ ವಿಭಿನ್ನವಾಗಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದ್ದು ಇಲ್ಲಿ ಲಂಬವಾದ ಪಟ್ಟಿಕೆಗಳ ರೂಪದಲ್ಲಿ ವಿನ್ಯಾಸಗಳು ರಚನೆಗೊಂಡಿರುವುದನ್ನು ವಿಶೇಷವಾಗಿ ಗುರುತಿಸಬಹುದಾಗಿದೆ. ಚಿತ್ರ ೧೦ರಲ್ಲಿ ಕಂಡು ಬರುವ ಹುಕ್ಕಾದ ಮೇಲಿನ ವಿನ್ಯಾಸ ಪದ್ಮಾವತ ಕಥೆಯ ಆಧಾರಿತ ನಿರೂಪಣ ಚಿತ್ರವಾಗಿದೆ. ಬಿದ್ರಿ ಕಲೆಗಳಲ್ಲಿ ಇಂತಹ ವಿನ್ಯಾಸಗಳು ಕಂಡುಬರುವುದು ಅಪರೂಪವಾಗಿದ್ದು, ಬಹುತೇಕವಾಗಿ ಬಿದ್ರಿ ಕಲೆಗಳು ಸಸ್ಯ ಆಧಾರಿತ ವಿನ್ಯಾಸಗಳನ್ನೇ ಅವಲಂಬಿಸಿರುತ್ತವೆ ಎಂಬುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಒಟ್ಟಿನಲ್ಲಿ ಅಪರೂಪವೆನಿಸುವ ಇಲ್ಲಿನ ಬಿದ್ರಿ ಹುಕ್ಕಾ ಪಾತ್ರೆಗಳಲ್ಲಿ ವಿಸ್ಮಯವೆನಿಸುವ ಸೂಕ್ಷ್ಮ ವಿನ್ಯಾಸಗಳು ಮೈದಾಳಿವೆ. ಇಲ್ಲಿನ ವಿನ್ಯಾಸಗಳು ಅಂದಿನ ಕುಶಲಕರ್ಮಿಗಳ ಆಸಕ್ತಿ, ಶ್ರದ್ಧೆಯ ಪ್ರತೀಕವಾಗಿವೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಆದರೆ ದುರಂತವೆಂಬಂತೆ ಇಂದಿನ ಬಿದ್ರಿ ಕಲೆಗಳಲ್ಲಿ ಇಂತಹ ವಿನ್ಯಾಸಗಳು ಗೌಣವಾಗಿ ಘೂಲಝುಡಿ ವಿನ್ಯಾಸ ಮಾತ್ರವೇ ಅಸ್ತಿತ್ವದಲ್ಲಿದೆ. ಆಧುನಿಕ ಸಂದರ್ಭದ ಬಿದ್ರಿ ಕುಶಲಕರ್ಮಿಗಳು ಸಹ ಪ್ರಾಚೀನ ವಿನ್ಯಾಸಗಳನ್ನು ರಚಿಸುವಲ್ಲಿ ಹಿಂದೇಟು ಅಥವಾ ಸೋಮಾರಿತನ ತೋರುತ್ತಿರುವುದು ಬಿದ್ರಿ ಕಲೆ ಅಳಿವಿನಂಚಿನಲ್ಲಿದೆ ಎಂಬುದರ ಸಂಕೇತವಾಗಿರುವುದು ದಿಟ.

*****

(ಬ) ಗಂಟೆಯಾಕಾರದ ಹುಕ್ಕಾ ತಳಗಳು

ಈ ಹಿಂದೆ ವರ್ತುಲಾಕಾರದ (ಪಾತ್ರೆಯಂತಹ) ಹುಕ್ಕಾ ತಳಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಇಲ್ಲಿ ಗಂಟೆಯಾಕಾರದ ಹುಕ್ಕಾ ತಳಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

೧೩. ಹುಕ್ಕಾ ತಳ (೧೮ನೆಯ ಶತಮಾನ) ತೆಹನಿಶಾನ್, ತರ್ಕಶಿ ಮತ್ತು ಜರ್‌ನಿಶಾನ್ ತಂತ್ರ

ನವದೆಹಲಿಯ ನ್ಯಾಶನಲ್ ಮ್ಯೂಸಿಯಂನ ಸಂಗ್ರಹದಲ್ಲಿರುವ **ಈ** ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಅಷ್ಟದಳಗಳ ಹೂವಿನಾಕೃತಿ ಮತ್ತು ಎಲೆಯ ವಿನ್ಯಾಸ ಈ ಹುಕ್ಕಾ ಅಲಂಕರಣದ ಪ್ರಮುಖ ಆಶಯ. ಹುಕ್ಕಾದ ಉದರ ಭಾಗದಲ್ಲಿ ವಜ್ರಾಕೃತಿಯಲ್ಲಿ ಎಲೆಗಳನ್ನು ಸಂಯೋಜಿಸಿ ಮಧ್ಯದಲ್ಲಿ ಎಂಟುದಳಗಳ ಹೂವಿನ ವಿನ್ಯಾಸವನ್ನು ಹುಕ್ಕಾದ ಮೇಲೆಲ್ಲ ಚಿತ್ರಿಸಲಾಗಿದೆ. ಅದೇ ಬಗೆಯ ಹೂವಿನ ವಿನ್ಯಾಸವನ್ನು ಹುಕ್ಕಾದ ಅಡಿಯಲ್ಲಿ ಮತ್ತು ಕಂಠದ ಕೆಳಭಾಗದ ಪಟ್ಟಿಕೆಯಲ್ಲಿ ಪರ್ಣಗಳ ಸಹಿತವಾಗಿ ಚಿತ್ರಿಸಲಾಗಿದೆ. ಕಂಠದ ಮಧ್ಯದಲ್ಲಿ ಕಣ್ಣಿನಾಕಾರದ ರೇಖಾ ವಿನ್ಯಾಸಗಳು ರಚನೆಗೊಂಡಿವೆ. ಕಂಠದಲ್ಲಿ ಮತ್ತೊಂದು ಪಟ್ಟಿಕೆಯಲ್ಲಿ ತ್ರಿದಳ ಹೂವಿನ ವಿನ್ಯಾಸ ತಲೆಕೆಳಗಾಗಿ ರಚನೆಗೊಂಡಿದೆ. ಕಂಠದ ಮೇಲ್ಭಾಗದಲ್ಲಿ ಪಟ್ಟಿಕೆಯ ರೂಪವಾಗಿ ಹೊರಚಾಚಿದ ಕಂಠದ ಮೇಲೂ ತ್ರಿದಳ ವಿನ್ಯಾಸಗಳು ರಚನೆಗೊಂಡಿವೆ. ಕಂಠದ ಪೂರ್ಣ ಮೇಲ್ಭಾಗದಲ್ಲಿ ಉದರದ ಮೇಲೆ ರಚಿತಗೊಂಡಂತಹ ವಿನ್ಯಾಸಗಳೇ ಪುನರಪಿ ಚಿತ್ರಿತಗೊಂಡಿವೆ. ಇಲ್ಲಿನ ಎಲ್ಲ ವಿನ್ಯಾಸಗಳು ಹುಕ್ಕಾದ ಅಡಿಪೀಠದಲ್ಲಿ ದೊಡ್ಡದಾಗಿ ರಚಿತಗೊಂಡು ಮೇಲ್ಭಾಗಕ್ಕೆ ಹೋದಂತೆಲ್ಲ ಚಿಕ್ಕ ಆಕಾರವನ್ನು ಪಡೆದು ಹುಕ್ಕಾ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಕರ್ಮಿಯ ಪ್ರಗಲ್ಭ ಬುದ್ಧಿಮತ್ತೆಯ ಪ್ರತೀಕವಾಗಿರುವ ಈ ಹುಕ್ಕಾ ಅತ್ಯಂತ ಸೂಕ್ಷ್ಮ ವಿನ್ಯಾಸಗಳನ್ನು ಪ್ರಕೀರ್ಣಕ ಬಗೆಯಲ್ಲಿ ಸಂಯೋಜಿಸಲ್ಪಟ್ಟಿದೆ. ಹಿತ್ತಾಳೆಯ ಕಾಗದದಲ್ಲಿ ಒಡಮೂಡಿದ ಇಲ್ಲಿನ ವಿನ್ಯಾಸಗಳು ಚಿನ್ನದ ಮೆರಗನ್ನು ಹುಕ್ಕಾಕ್ಕೆ ತಂದುಕೊಟ್ಟಿವೆ.

೧೪. ಹುಕ್ಕಾ ತಳ, ತರ್ಕಶಿ ಮತ್ತು ಅಫ್ತಾಬಿ ತಂತ್ರ

ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಚಿತ್ರ ೮ ಮತ್ತು ೯ರಲ್ಲಿ ಕಂಡುಬರುವ ವರ್ತುಲಾಕಾರದ ಹುಕ್ಕಾ ತಳಗಳಲ್ಲಿನ ವಿನ್ಯಾಸಗಳಂತೆ ಈ ಹುಕ್ಕಾದ ವಿನ್ಯಾಸವು ಸಹ ರಚನೆಗೊಂಡಿದೆ. ಅಡಿಪೀಠಕ್ಕೆ ಮೂರುಕಾಲುಗಳನ್ನು ಹೊಂದಿರುವ ವಿಶಿಷ್ಟ ಹುಕ್ಕಾ ಇದು. ಮೇಲಿನಿಂದ ಕೆಳಕ್ಕೆ ಲಾಲಿತ್ಯದಿಂದ ಇಳಿಬಿದ್ದ ಎಲೆಗಳಂತಹ ಪಟ್ಟಿಕೆಯಲ್ಲಿ ನಾಲ್ಕು ದಳಗಳ ಹೂವಿನ ಆಕೃತಿಗಳಿಗೆ ಪರ್ಣಗಳ ಸಹಿತವಾದ ಬಳ್ಳಿಗಳು ಸುತ್ತು ಬಳಸಿಕೊಂಡಿವೆ. ಪ್ರತೀ ಪಟ್ಟಿಕೆಯನ್ನು ವಿಂಗಡಿಸಲು ಹಗ್ಗದಂತಹ ವಿನ್ಯಾಸ ಸೂಕ್ಷ್ಮ ತಂತ್ರದಿಂದ ರಚಿಸಲ್ಪಟ್ಟಿದೆ. ಈ ಎಲ್ಲ ಪಟ್ಟಿಕೆಗಳಿಗೆ ಆಧಾರವಾಗಿರುವಂತೆ ಕಂಠದ ಕೆಳಭಾಗದಲ್ಲಿ ಎಲೆಗಳಂತಹ ರಚನೆಗಳು ಹುಕ್ಕಾದ ಅಲಂಕಾರವನ್ನು ಇಮ್ಮಡಿಗೊಳಿಸಿವೆ. ಕಂಠದಲ್ಲಿ ಹಗ್ಗದಂತಹ ವಿನ್ಯಾಸ, ಅದರ ಮೇಲೆ ಹೊರ ಚಾಚಿರುವ ಕಂಠ ಪಟ್ಟಿಕೆಯಲ್ಲಿ ಹೂವಿನಂತಹ ವಿನ್ಯಾಸಗಳು ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಪಟ್ಟಿಕೆಯ ಒಳಾವರಣದಲ್ಲಿ ಒಂದೇ ಒಂದು ಹೂವಿನ ರಚನೆ ಎರಡು ಪರ್ಣಗಳ ಸಹಿತವಾಗಿ ರಚನೆಗೊಂಡಿದೆ. ಈ ಹುಕ್ಕಾವನ್ನು ತಲೆಕೆಳಗಾಗಿ ನೋಡಿದರೆ ಒಂದು ಸುಂದರ ದಸವಾಳದ ಹೂವಿನಂತೆ ಕಂಗೊಳಿಸುತ್ತದೆ. ಬಹು ಅಪರೂಪದ ವಿನ್ಯಾಸವನ್ನು ಅತ್ಯಂತ ಸೂಕ್ಷ್ಮ ತಂತ್ರಜ್ಞಾನದಿಂದ ರಚಿಸಲ್ಪಟ್ಟ ಈ ಹುಕ್ಕಾ ಇಲ್ಲಿರುವ ಹುಕ್ಕಾಗಳಲ್ಲಿಯೇ ಅನನ್ಯವಾದ ವಿನ್ಯಾಸವನ್ನು ಹೊಂದಿದ, ಅಂದಿನ ಆಳರಸರ ಕಲಾಭಿರುಚಿಯ ಪ್ರತೀಕವಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

೧೫. ಹುಕ್ಕಾ ತಳ (೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಫೂಲಝುಡಿ ಶೈಲಿಯಲ್ಲಿ ರಚನೆಗೊಂಡ ಈ ಹುಕ್ಕಾವು ಬಹು ಸೂಕ್ಷ್ಮ ವಿನ್ಯಾಸದಿಂದ ರಚಿಸಲ್ಪಟ್ಟಿದೆ. ಉದರ ಭಾಗದಲ್ಲಿ ಫೂಲಝುಡಿ ವಿನ್ಯಾಸಗಳನ್ನು ಹೊಂದಿದ್ದು ಕಂಠದಲ್ಲಿ ಮತ್ತು ಅಡಿಪೀಠದಲ್ಲಿ ಹೂಬಳ್ಳಿಗಳ ವಿನ್ಯಾಸಗಳು ಪಟ್ಟಿಕೆಯ ಒಳಾವರಣದಲ್ಲಿ ಪ್ರಕಟವಾಗಿವೆ. ಕಂಠದಲ್ಲಿ ಎಲೆಯಂತಹ ವಿನ್ಯಾಸಗಳು ತಲೆಕೆಳಗಾಗಿ ರಚನೆಗೊಂಡಿವೆ. ಅತ್ಯಂತ ಪಕ್ವಯುತ ಕುಶಲಕರ್ಮಿಯ ಕುಸುರಿಯ ಕೈಚಳಕದಲ್ಲಿ ರೂಪುಗೊಂಡ ಈ ಹುಕ್ಕಾ ಅಲಂಕಾರಿಕ ನೆಲೆಯಲ್ಲಿ ಚಿಕಣಿ ಕಲೆಗಾರಿಕೆಯ ಅನುಭವವನ್ನು ನೀಡುತ್ತದೆ.

೧೬. ಹುಕ್ಕಾ ತಳ (ಕಿ.ಶ.೧೭೫೦–೧೮೦೦) ತರ್ಕಶಿ ಮತ್ತು ಜರ್‌ನಿಶಾನ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾದಲ್ಲಿ ಮೂರ್ನಾಲ್ಕು ಬಗೆಯ ಚಿಕಣಿ ರೂಪದ ವಿನ್ಯಾಸಗಳಿವೆ. ಹುಕ್ಕಾದ ಉದರ ಭಾಗದಲ್ಲಿ ಎರಡು ಬಗೆಯ ವಿನ್ಯಾಸಗಳು ಜ್ಯಾಮಿತಿಕ ಆಕಾರದ ಪಟ್ಟಿಕೆಯಲ್ಲಿ ಮೈದಾಳಿವೆ. ನಾಲ್ಕು ದಳಗಳ ಹೂವಿನ ವಿನ್ಯಾಸ ಒಂದು ಪಟ್ಟಿಕೆಯಲ್ಲಿದ್ದರೆ

ಇನ್ನೊಂದು ಪಟ್ಟಿಕೆಯಲ್ಲಿ ನಕ್ಷತ್ರಾಕಾರದ (ಘೂಲಝುಡಿ) ವಿನ್ಯಾಸಗಳು ಸಂಯೋಜಿಸಲ್ಪಟ್ಟಿವೆ. ಪಟ್ಟಿಕೆಗಳ ಕೆಳ ಮತ್ತು ಮೇಲ್ಭಾಗದ ಮೂಲೆಗಳಲ್ಲಿ ಹೂ ಮತ್ತು ಪರ್ಣಗಳ ವಿನ್ಯಾಸ ಪರಸ್ಪರ ತದ್ವಿರುದ್ಧವಾಗಿ ಸಂಯೋಜಿಸಲ್ಪಟ್ಟಿವೆ. ಕಂಠದ ಕೆಳಭಾಗದಲ್ಲಿ ನಾಲ್ಕು ಪಟ್ಟಿಕೆಗಳಿದ್ದುಹೂ ಮತ್ತು ಪರ್ಣಗಳ ವಿನ್ಯಾಸಗಳು ಕ್ರಮವಾಗಿ ಸಂಯೋಜಿಸಲ್ಪಟ್ಟಿವೆ. ಇವೇ ನಾಲ್ಕೂ ಪಟ್ಟಿಕೆಗಳ ವಿನ್ಯಾಸಗಳು ಹುಕ್ಕಾದ ಕೆಳ ಅಂಚಿನಲ್ಲಿ ಪುನರಪಿ ಸಂಯೋಜಿಸಲ್ಪಟ್ಟಿವೆ. ಕಂಠದ ಉಬ್ಬು ಭಾಗದಲ್ಲಿ ಶರಚಿನ್ಹೆಯಂತಹ ರೇಖಾತ್ಮಕ ವಿನ್ಯಾಸ, ಅದರ ಮೇಲ್ಭಾಗದಲ್ಲಿ ಹೊರಚಾಚಿದ ಪಟ್ಟಿಕೆಯಲ್ಲಿ ತ್ರಿದಳ ವಿನ್ಯಾಸಗಳು ರಚನೆಗೊಂಡಿವೆ. ಮೇಲ್ಭಾಗದಲ್ಲಿ ಉದರದ ವಿನ್ಯಾಸಗಳು ಪುನರಾವರ್ತನೆಗೊಂಡಿವೆ. ಒಟ್ಟಿನಲ್ಲಿ ಈ ಹುಕ್ಕಾವು ಸೂಕ್ಷ್ಮ ತಂತ್ರಗಾರಿಕೆಯ ನೆಲೆಯಲ್ಲಿ ಅಲಂಕಾರಿಕ ವೈಭವವನ್ನು ಪ್ರಕಟಿಸುವಲ್ಲಿ ಒಂದು ಪ್ರಬುದ್ಧ ಕಲಾಕೃತಿಯಾಗಿ ರೂಪುಗೊಂಡಿದೆ.

೧೭. ಹುಕ್ಕಾ ತಳ (ಕಿ.ಶ.೧೭೫೦-೧೮೦೦) ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಇಲ್ಲಿರುವ ಹುಕ್ಕಾಗಳ ವಿನ್ಯಾಸಗಳಿಗಿಂತ ವಿಭಿನ್ನವಾದ ವಿನ್ಯಾಸವನ್ನು ಹೊಂದಿದ ಕೃತಿ ಇದಾಗಿದೆ. ಲಂಬ ರೇಖಾ ಪ್ರಧಾನ ವಿನ್ಯಾಸವನ್ನು ಮೈಗೂಡಿಸಿಕೊಂಡ ಇಲ್ಲಿನ ವಿನ್ಯಾಸಗಳು ನವಿಲು ಗರಿಯ ವಿನ್ಯಾಸವನ್ನೇ ನೆನಪಿಸುತ್ತವೆ. ಆದರೂ ಮುಸ್ಲಿಂ ವಾಸ್ತು ಶಿಲ್ಪದ ಕಮಾನಿನ ಅಧಿಕೃತ ಪ್ರತಿನಿಧಿಯಂತೆಯೂ ಸಹ ಈ ವಿನ್ಯಾಸಗಳು ಗೋಚರಿಸುತ್ತವೆ. ಕಂಠದ ಕೆಳಗಿನ ಪಟ್ಟಿಕೆಗಳಲ್ಲಿ ಕಮಾನಿನಂತಹ ವಿನ್ಯಾಸಗಳು, ಅರ್ಧ ವರ್ತುಲಕಾರದ ವಿನ್ಯಾಸಗಳು ಹಾಗೂ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಕಂಡು ಬರುವ ಪಟಿಕೆಗಳ ವಿನ್ಯಾಸಗಳು ತಲೆಕೆಳಗಾಗಿ ಮೂಡಿವೆ. ಕಂಠದ ಮೇಲ್ಭಾಗದಲ್ಲಿ ಉದರದ ವಿನ್ಯಾಸಗಳೇ ಪುನರಪಿ ರಚನೆಗೊಂಡಿವೆ. ಒಟ್ಟಿನಲ್ಲಿ ರೇಖಾ ಪ್ರಧಾನವಾದ ಈ ಹುಕ್ಕದ ವಿನ್ಯಾಸ ಇತರ ಹುಕ್ಕಾಗಳು ನೀಡುವಂತಹ ಅಲಂಕಾರಿಕ ಅನುಭವಕ್ಕಿಂತ ವಿಭಿನ್ನ ಅನುಭವವನ್ನೇ ನೀಡುತ್ತದೆ.

೧೮. ಹುಕ್ಕಾ ತಳ (೧೯ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಇಂಡಿಯಾ ಮತ್ತು ಟಿಬೇಟಿಯನ್ ಆರ್ಟ್‌ನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದ್ದು ಅಡಿಪೀಠವು ತಟ್ಟೆಯಕಾರದಲ್ಲಿ ರೂಪುಗೊಂಡಿದೆ. ಇಲ್ಲಿ ಹುಕ್ಕಾದ ಪಾತ್ರೆಗಿರುವ ಮಹತ್ವ ತಟ್ಟೆಗೂ ಸಹ ಇದೆ. ಹುಕ್ಕಾ ಪಾತ್ರೆಯಲ್ಲಿ ಪ್ರಧಾನವಾಗಿ ಹೂವಿನ ಆಕೃತಿಯೊಂದು ಗಿಡದ ಸಹಿತವಾಗಿ ರಚನೆಗೊಂಡಿದೆ. ಮುಖ್ಯ ಹೂವಿನ ಕೆಳಗೆ ಎರಡು ಚಿಕ್ಕದಾದ ಹೂವಿನ ವಿನ್ಯಾಸಗಳು ಸಹ ರಚನೆಗೊಂಡಿವೆ. ಅತೀ ಸೂಕ್ಷ್ಮ ನೆಲೆಯಲ್ಲಿ ರಚನೆಗೊಂಡ ಪಟ್ಟಿಕೆಯಲ್ಲಿ ವಿನ್ಯಾಸ ಹುಕ್ಕಾದ ಅಲಂಕಾರಿಕ ವೈಭವವನ್ನು, ಲಾವಣ್ಯವನ್ನು ಹೆಚ್ಚಿಸಿದೆ. ಇದರ ಪಾರ್ಶ್ವಗಳೆರಡರಲ್ಲಿ ಪಟ್ಟಿಕೆಗಳಿದ್ದು ಅಲ್ಲಿ ಹೂ ಬಳ್ಳಿಗಳ ವಿನ್ಯಾಸಗಳು ರಚಿಸಲ್ಪಟ್ಟಿವೆ. ಇದೇ ರೀತಿಯ ವಿನ್ಯಾಸಗಳು

ತಟ್ಟೆಯಲ್ಲೂ ಪುನರಪಿ ಮೂಡಿವೆ. ಪಾತ್ರೆಯ ಕೆಳ ಅಂಚಿನಲ್ಲಿ ಮತ್ತು ಮೇಲಂಚಿನಲ್ಲಿ ಒಂದೇ ಬಗೆಯ ಹೂ ಬಳ್ಳಿಗಳ ವಿನ್ಯಾಸಗಳು ಗೋಚರವಾಗುತ್ತವೆ. ಕಂಠದಲ್ಲಿ ಎಂದಿನಂತೆ ಶರಚಿನ್ಹೆಯ ವಿನ್ಯಾಸಗಳು ಉಬ್ಬು ಭಾಗದಲ್ಲಿ ರಚನೆಗೊಂಡಿವೆ. ಹುಕ್ಕಾ ಪಾತ್ರೆ ಮತ್ತು ತಟ್ಟೆಗಳಲ್ಲಿರುವ ವಿನ್ಯಾಸಗಳು ಏಕಪ್ರಕಾರದವುಗಳಾಗಿವೆ. ವಿಶಿಷ್ಟ ವಿನ್ಯಾಸದಿಂದ ಕೂಡಿದ ಈ ತಟ್ಟೆ ಸಹಿತ ಹುಕ್ಕಾ ಇತರ ಹುಕ್ಕಾಗಳಿಗಿಂತ ಅಂದವಾಗಿದ್ದು ಆಳರಸರ ಕಲಾಪೋಷಣೆಯ ಪ್ರತೀಕವಾಗಿದೆ.

೧೯. **ಹುಕ್ಕಾ ತಳ** (೧೯ನೆಯ ಶತಮಾನ) ಜರ್‌ನಿಶಾನ್ ಮತ್ತು ತರ್ಕಶಿ ತಂತ್ರ

ಹೈದರಾಬಾದ್‌ನ ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾ ವಸ್ತು ಸಂಗ್ರಹಾಲಯದ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ವಿಶೇಷವಾದ ವಿನ್ಯಾಸ ಮೂರು ಹಂತಗಳಲ್ಲಿದ್ದು ಅಪರೂಪವೆನ್ನಬಹುದಾದ ವಾಸ್ತು ನಿರ್ಮಾಣಗಳ ವಿನ್ಯಾಸಗಳು ಇಲ್ಲಿ ಮೂಡಿವೆ. ಒಂದು ಬಗೆಯ ಪ್ರಕೃತಿ ಚಿತ್ರಣದ ರಚನಾ ಮಾದರಿಯನ್ನು ಈ ಹುಕ್ಕಾ ಹೊಂದಿದೆ. ಹುಕ್ಕಾ ಉದರ ಭಾಗದಲ್ಲಿ ಮುಖ್ಯವಾಗಿ ಮೂರು ಹಂತಗಳ ಪಟ್ಟಿಕೆಗಳಿವೆ. ಮೊದಲ ಪಟ್ಟಿಕೆಯಲ್ಲಿ ಹುಲಿಯೊಂದು ಮುಗ್ಧ ಪ್ರಾಣಿಯೊಂದನ್ನು ಬೇಟೆಯಾಡುವ ದೃಶ್ಯವಿದೆ. ದೂರದಲ್ಲಿರುವಂತೆ ಧಾರ್ಮಿಕ ನಿರ್ಮಾಣವೊಂದು ರಚನೆಗೊಂಡಿದೆ. ಇತರ ಭಾಗದಲ್ಲಿ ಹೂ ಬಳ್ಳಿಗಳ, ಪರ್ಣಗಳು ಅಲಂಕಾರಿಕ ನೆಲೆಯ ವಿನ್ಯಾಸಗಳು ರಚನೆಗೊಂಡಿವೆ. ಎರಡನೆಯ ಪಟ್ಟಿಕೆಯಲ್ಲಿ ನದಿಯನ್ನು ಸಾಂಕೇತಿಕವಾಗಿ ತೋರಿಸಿ, ಅದರ ದಡದಲ್ಲಿ ಧಾರ್ಮಿಕ ವಾಸ್ತುಗಳನ್ನು ದಟ್ಟಕಾನನದಲ್ಲಿರುವಂತೆ ರಚಿಸಲಾಗಿದ್ದು, ಅಲ್ಲಲ್ಲಿ ಪಕ್ಷಿಗಳ ಆಕೃತಿಗಳನ್ನು ತರುಲತೆಗಳ ಮಧ್ಯೆ ರಚಿಸಲ್ಪಟ್ಟಿವೆ. ಮೂರನೆಯ ಪಟ್ಟಿಕೆಯಲ್ಲಿ ಹೂ ಬಳ್ಳಿಗಳ ವಿನ್ಯಾಸಗಳು ಲಾಲಿತ್ಯದಿಂದ ರಚಿಸಲ್ಪಟ್ಟಿವೆ. ಕಂಠದಲ್ಲಿ ಎಂದಿನಂತೆ ಅವೇ ಹೂ ಬಳ್ಳಿಗಳ ವಿನ್ಯಾಸಗಳು ರಚನೆಗೊಂಡದ್ದು ಕಂಡುಬರುತ್ತದೆ. ಒಟ್ಟಾರೆ ಈ ಹುಕ್ಕಾದಲ್ಲಿ ಯಾವುದೋ ಮಹತ್ವದ ಧಾರ್ಮಿಕ ಸ್ಥಳವೊಂದರ ನಿರೂಪಣೆಯನ್ನು ಕುಶಲಕರ್ಮಿ ಬಿದ್ರಿಯಲ್ಲಿ ನಿರೂಪಿಸಿದ್ದು, ಇದು ಯಾವ ಧಾರ್ಮಿಕ ಸ್ಥಳದ ದೃಶ್ಯ ನಿರೂಪಣೆ ಎಂಬುದು ಅಗೋಚರವಾಗಿದೆ. ಈ ಕುರಿತು ವಸ್ತು ಸಂಗ್ರಹಾಲಯದಲ್ಲಿಯೂ ಸಹ ಯಾವುದೇ ಮಾಹಿತಿ ಲಭ್ಯವಾಗಲಿಲ್ಲ. ಆದರೂ ಬಿದ್ರಿಕಲೆಗಳಲ್ಲಿಯೇ ಅನನ್ಯವಾದ ದೃಶ್ಯ ನಿರೂಪಣೆಯನ್ನು ಹೊಂದಿದ ಕಲಾಕೃತಿ ಇದಾಗಿದೆ.

೨೦. **ಹುಕ್ಕಾ ತಳ** (೧೮ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

ಹೈದರಾಬಾದಿನ ಸಾಲಾರ್‌ಜಂಗ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಗಂಟೆಯಾಕಾರವನ್ನೇ ಪ್ರಮುಖ ಆಶಯವನ್ನಾಗಿಟ್ಟುಕೊಂಡು ವಿನ್ಯಾಸಗಳಿಗೆ ಸಸ್ಯಗಳ ಪ್ರೇರಣೆ ಪಡೆದುದಾಗಿದೆ. ಕೇವಲ ಹತ್ತು ಪರ್ಣಗಳನ್ನು + ಚಿನ್ಹೆಯಲ್ಲಿ ಸಂಯೋಜಿಸಿ ಚಮತ್ಕಾರಿಕ ಅಚ್ಚರಿಯನ್ನು ನೋಡುಗರಿಗೆ ನೀಡುವ

ಉದ್ದಿಶ್ಯವನ್ನು ಸಹ ಈ ಹುಕ್ಕಾ ಹೊಂದಿದೆ. ಒಂದೇ ಬಗೆಯ ಪರ್ಣಗಳನ್ನು + ಚಿಹ್ನೆಯಲ್ಲಿ ಜೋಡಿಸಿ ಒಳಾವರಣದಲ್ಲಿ ಮೀನಿನ ಆಕಾರವನ್ನು ಹೋಲುವಂತಹ ಸಸ್ಯಾಧಾರಿತ ವಿನ್ಯಾಸಗಳು ಹುಕ್ಕಾದ ಉದರಭಾಗದಲ್ಲಿ ಪೂರ್ಣವಾಗಿ ಆವರಿಸಲ್ಪಟ್ಟಿವೆ. ಅದೇ ಬಗೆಯ ವಿನ್ಯಾಸಗಳು ಕಂಠದ ಮೇಲ್ಭಾಗದಲ್ಲೂ ಪುನರಾವರ್ತಿತಗೊಂಡಿವೆ. ಹುಕ್ಕಾ ಕೆಳ ಅಂಚಿನ ಪಟ್ಟಿಕೆಯಲ್ಲಿ ಹೂಬಳ್ಳಿಗಳ ವಿನ್ಯಾಸಗಳು ಒಡಮೂಡಿವೆ. ಬಿದ್ರಿಕಲೆಯಲ್ಲಿ ಪಳಗಿದ ಅತ್ಯಂತ ಸೂಕ್ಷ್ಮಗ್ರಾಹಿಯಾದ ಕುಶಲಕರ್ಮಿಗೆ ಮಾತ್ರ ಇಂತಹ ಚಮತ್ಕಾರಿಕ ವಿನ್ಯಾಸಗಳನ್ನು ಸೃಷ್ಟಿಸಲು ಸಾಧ್ಯ ಎಂಬುದಕ್ಕೆ ಈ ಹುಕ್ಕಾ ಒಂದು ನಿದರ್ಶನವಾಗುತ್ತದೆ. ಅಲಂಕಾರಿಕ ದೃಷ್ಟಿಯಿಂದಲೂ ಅತೀ ರಮ್ಯ ನೆಲೆಯಲ್ಲಿ ಈ ಹುಕ್ಕಾ ಸ್ಥಾನ ಪಡೆಯುತ್ತದೆ.

೨೧. ಹುಕ್ಕಾ ತಳ (೧೮ನೆಯ ಶತಮಾನ) ಜರ್‌ನಿಶಾನ ಮತ್ತು ಅಫ್ತಾಬಿ ತಂತ್ರ

ನ್ಯಾಶನಲ್ ಮ್ಯೂಸಿಯಂ ಆಫ್ ಏಶಿಯನ್-ಗ್ಯೂಯಿಮೆಟ್ ಆರ್ಟ್ಸ್ ಸಂಗ್ರಹದಲ್ಲಿರುವ **ಈ** ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಹಿಂದಿನ ಹುಕ್ಕಾದಷ್ಟು ಸೂಕ್ಷ್ಮ ವಿನ್ಯಾಸಗಳನ್ನು ಹೊಂದಿರದ ಈ ಹುಕ್ಕಾ ಎರಡು ಬಗೆಯ ಹೂವಿನ ಗಿಡಗಳ ವಿನ್ಯಾಸವನ್ನೇ ತನ್ನ ಅಲಂಕಾರದ ಪ್ರಮುಖ ಆಶಯವನ್ನಾಗಿಸಿಕೊಂಡಿದೆ. ಒಂದು ಗುಲಾಬಿ ಗಿಡವನ್ನು ಇನ್ನೊಂದು ಕಣಗಿಲ ಗಿಡದ ವಿನ್ಯಾಸವನ್ನು ಹೋಲುತ್ತಿವೆ. ಕಂಠದಲ್ಲಿ ಮತ್ತು ಪಾತ್ರೆಯ ಕೆಳ ಅಂಚಿನಲ್ಲಿ ಎಲೆಗಳ ವಿನ್ಯಾಸಗಲು ಪಟ್ಟಿಕೆಯ ರೂಪದಲ್ಲಿ ಮೈದಾಳಿವೆ. ಕಂಠದ ಮೇಲ್ಭಾಗದಲ್ಲಿ ಉದರದ ವಿನ್ಯಾಸಗಳೇ ಪುನರಪಿ ಮೂಡಿವೆ.

೨೨. ಹುಕ್ಕಾ ತಳ, ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಕೋಲ್ಕಾತ್ತಾದ ಇಂಡಿಯನ್ ಮ್ಯೂಸಿಯಂ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಹುಕ್ಕಾದ ಚಿತ್ರ ವಸ್ತು ಸಂಗ್ರಹಾಲಯದಿಂದ ಸಂಗ್ರಹಿಸಿದ್ದು ಹುಕ್ಕಾದ ವಿನ್ಯಾಸಗಳೆಲ್ಲ ಕಿತ್ತು ಹೋಗಿವೆ. ಹೀಗಾಗಿ ಸ್ಪಷ್ಟವಾದ ವಿವರಗಳು ದಕ್ಕದಿದ್ದರೂ, ಕಂಡುಬರುವ ವಿನ್ಯಾಸಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಚಿತ್ರ ೧೯ರಲ್ಲಿ ಕಂಡುಬರುವ ದೃಶ್ಯಾತ್ಮಕ ನಿರೂಪಣೆಯನ್ನೇ ಹೋಲುವ ರೀತಿಯಲ್ಲಿ ಈ ಹುಕ್ಕಾದಲ್ಲಿಯೂ ಅಂತಹುದೇ ದೃಶ್ಯಾತ್ಮಕ ನಿರೂಪಣೆ ಇಲ್ಲಿ ಒಡಮೂಡಿದೆ. ಹುಲಿಯೊಂದು ಮುಗ್ಧ ಪ್ರಾಣಿಯೊಂದರ ಮೇಲೆ ದಾಳಿ ನಡೆಸುತ್ತಿರುವ ಸನ್ನಿವೇಶ ಬಹು ಸೂಕ್ಷ್ಮವಾಗಿ ರಚಿಸಲ್ಪಟ್ಟಿದೆ. ಹಿನ್ನೆಲೆಯಲ್ಲಿ ಅರಮನೆಯನ್ನು ಹೋಲುವಂತಹ ವಿನ್ಯಾಸವೊಂದಿದ್ದು ಅದು ಸಹ ಬಹು ಸೂಕ್ಷ್ಮ ತಂತ್ರದಿಂದ ರಚಿಸಲ್ಪಟ್ಟಿದೆ. ಸುತ್ತಲೂ ಗಿಡಮರಗಳ, ತರುಲತೆಗಳ ವಿನ್ಯಾಸಗಳು ಅರಮನೆಯ ಸುತ್ತಲಿನ ಉದ್ಯಾನವನವನ್ನೂ ಹಾಗೂ ದಟ್ಟ ಕಾನನವನ್ನು ನೆನಪಿಸುತ್ತವೆ. ಹುಕ್ಕಾದ ಕಂಠದ ಕೆಳಭಾಗದಲ್ಲಿ ಮತ್ತು ಕೆಳ ಅಂಚಿನ ಪಟ್ಟಿಕೆಯಲ್ಲಿ ಸುಂದರವಾದ ಹೂ ಬಳ್ಳಿಗಳ ವಿನ್ಯಾಸಗಳು ರಚಿಸಲ್ಪಟ್ಟಿವೆ. ಕಂಠದ ಮೇಲ್ಭಾಗದಲ್ಲೂ ಅರಮನೆಯನ್ನು ಹೋಲುವಂತಹ ವಿನ್ಯಾಸ ಅಸ್ಪಷ್ಟವಾಗಿ

ಕಂಡುಬರುತ್ತದೆ. ಒಟ್ಟಿನಲ್ಲಿ ಅತ್ಯಂತ ಸೂಕ್ಷ್ಮತಮ ತಂತ್ರಗಾರಿಕೆಯಿಂದ ಸೂಕ್ಷ್ಮ ವಿನ್ಯಾಸವನ್ನು ಪ್ರಗಲ್ಭ ಕುಶಲಕರ್ಮಿಯು ನೀಡಿದ್ದು ವಿಶೇಷವಾಗಿದೆ.

೨೩. ಹುಕ್ಕಾ ತಳ, ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಕೋಲ್ಕತ್ತಾದ ಇಂಡಿಯನ್ ಮ್ಯೂಸಿಯಂ ಸಂಗ್ರಹದಲ್ಲಿರುವ **ಈ** ಹುಕ್ಕಾದ ತಳವು ಗಂಟೆಯಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಹುಕ್ಕಾವು ಅಲಂಕಾರಿಕ ವಿನ್ಯಾಸಗಳಿಂದ ಬಹು ಪ್ರಕೀರ್ಣಕವಾಗಿ ಸಂಯೋಜಿಸಲ್ಪಟ್ಟಿದೆ. ಬಹು ಸೂಕ್ಷ್ಮವಾದ ವಿನ್ಯಾಸಗಳು ಇಡೀ ಹುಕ್ಕಾವನ್ನು ವೈಭವೀಕರಿಸಿವೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಹುಕ್ಕಾದ ಕಂಠದ ಕೆಳಗಿನ ಮತ್ತು ಕೆಳ ಅಂಚಿನಲ್ಲಿ ಹೂಬಳ್ಳಿಗಳ ವಿನ್ಯಾಸಗಳು ರಚನೆಗೊಂಡಿವೆ. ಮಧ್ಯಭಾಗದಲ್ಲಿ ಪ್ರಧಾನವಾಗಿ ಅರ್ಧವರ್ತುಲಾಕಾರವಾಗಿ ವಿವಿಧ ಬಗೆಯ ಚಿಕಣಿ ವಿನ್ಯಾಸಗಳಿವೆ. ಒಳ ಮತ್ತು ಹೊರಭಾಗದಲ್ಲಿಸುಂದರ ಹೂ ವಿನ್ಯಾಸಗಳು ಲಾವಣ್ಣಪೂರ್ವಕವಾಗಿ ರಚಿಸಲ್ಪಟ್ಟಿವೆ. ವಾಡಿಕೆಯಂತೆ ಇಲ್ಲಿನ ವಿನ್ಯಾಸಗಳು ಕ್ಷೀಣಿಸಿದ್ದು ವಿವರಕ್ಕೆ ದಕ್ಕದಾಗಿವೆ. ಆದರೆ ಮೇಲ್ನೋಟಕ್ಕೆ ಬಹು ಸೂಕ್ಷ್ಮ ವಿನ್ಯಾಸಗಳು ದಟ್ಟವಾಗಿ ಸಂಯೋಜನೆಗೊಂಡ ಅಪೂರ್ವ ಹುಕ್ಕಾ ಇದಾಗಿದೆ.

೨೪. ಹುಕ್ಕಾ ತಳ (೧೮-೧೯ನೆಯ ಶತಮಾನ) ತರ್ಕಶಿ ಮತ್ತು ಅಫ್ತಾಬಿ ತಂತ್ರ

(ವಿ.ಸೂ. ಇದರಲ್ಲಿನ ವಿನ್ಯಾಸಗಳು ತಲೆಕೆಳಗಾಗಿ ಇರುವುದರಿಂದ ಅಧ್ಯಯನದ ಅನುಕೂಲತೆಗೆ ತಕ್ಕ ಹಾಗೆ ಹುಕ್ಕಾವನ್ನು ತಲೆಕೆಳಗಾಗಿ ಬಳಸಿಕೊಳ್ಳಲಾಗಿದೆ. ಇದನ್ನು ಸಂಗ್ರಹಿಸಿರುವ ವಸ್ತು ಸಂಗ್ರಹಾಲಯದ ಪರಿಚಯ ಪತ್ರದಲ್ಲಿ ಸಹ ಈ ಸೂಚನೆಯನ್ನು ಪ್ರಕಟಿಸಲಾಗಿದೆ)

ಹಾಕ್ಸ್ ಏಶಿಯನ್ ಆರ್ಟ್ಸ್ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಶಂಕುವಿನಾಕಾರದಲ್ಲಿ ನಿರ್ಮಾಣಗೊಂಡಿದೆ. ಗುಲಾಬಿ ಹೂವನ್ನು ಹೋಲುವ ವಿನ್ಯಾಸಗಳು ಏಕಪ್ರಕಾರವಾಗಿ ಐದು ಸಾಲುಗಳಲ್ಲಿ ಪುನರಾವರ್ತನೆಗೊಂಡಿವೆ. ಕಂಠದ ಮೇಲ್ಭಾಗದಲೂ ಸಹ ಇವೇ ವಿನ್ಯಾಸಗಳು ಮೂಡಿವೆ. ಮೂರು ಪಟ್ಟಿಕೆಗಳಲ್ಲಿ ವಿವಿಧ ಬಗೆಯ ಹೂವಿನ ವಿನ್ಯಾಸಗಳು ರಚಿಸಲ್ಪಟ್ಟಿವೆ. ಶಂಖುವಿನ ಆಕಾರದಲ್ಲಿ ರಚನೆಗೊಂಡ ಇಂತಹ ಹುಕ್ಕಾ ಬಹು ಅಪರೂಪ. ತಳದಲ್ಲಿನ ಪಟ್ಟಿಕೆಗಳಲ್ಲಿ ವಿಷಮ ದಳ ಅಥವಾ ಎಲೆ ಕಾಣುವುದಿಲ್ಲ. ಶಂಕುವಿನ ತುದಿಯ ಭಾಗವು ಸ್ವಲ್ಪ ಕುಗ್ಗುತ್ತ ಬಂದಿದೆ. ಮೇಲ್ಭಾಗದ ಅಂಚು ಸ್ವಲ್ಪ ಮುಕ್ಕಾಗಿದೆ. ಇದನ್ನು ತಯಾರಿಸಿದ ದ್ರವ್ಯವನ್ನು ಗಮನಿಸಿ ಹೇಳುವುದಾದರೆ ಈ ಹುಕ್ಕಾವು ಸಣ್ಣ-ಪುಟ್ಟ ದೋಷಗಳಿದ್ದರೂ ಉತ್ತಮವಾದ ಸ್ಥಿತಿಯಲ್ಲಿದೆ.

೨೫. ಹುಕ್ಕಾ ತಳ (೧೮ನೆಯ ಶತಮಾನ) ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಹೂಜಿಯಾಕಾರದಲ್ಲಿ ನಿರ್ಮಾಣಗೊಂಡಿದೆ. ಚಿತ್ರ ೧೨ರಲ್ಲಿ ಕಂಡುಬರುವ ಸುರಾಹಿಗಳಲ್ಲಿನ ರಚನಾ ತಂತ್ರವನ್ನು ಮತ್ತು ವಿನ್ಯಾಸಗಳನ್ನು ಈ ಹುಕ್ಕಾ ಸಹ ಹೊಂದಿದೆ. ಮೇಲ್ನೋಟಕ್ಕೆ ಇದು

ಸೂಜಿಯಂತೆ ಕಂಡು ಬಂದರೂ ಮೂಲದಲ್ಲಿ ಹುಕ್ಕಾ. ಬಹುಸೂಕ್ಷ್ಮ ವಿನ್ಯಾಸಗಳಿಂದ ಕೂಡಿದ ಈ ಹುಕ್ಕಾದ ಉದರ ಭಾಗದಲ್ಲಿ ಮುಖ್ಯವಾಗಿ ನಾಲ್ಕು (ಮುನ್ನೆಲೆಯಲ್ಲಿ ಮೂರು ಕಂಡರೆ, ಹಿನ್ನೆಲೆಯಲ್ಲಿ ಒಂದು) ಅಪರಿಚಿತವೆನ್ನಬಹುದಾದ ಖಾನೆಗಳಲ್ಲಿ ಆರು ಹೂವುಗಳ ವಿನ್ಯಾಸ ಒಡಮೂಡಿದೆ. ಅವುಗಳಿಗೆ ಸಂಬಂಧಪಟ್ಟ ಗಿಡದ ಕಾಂಡ ಎಲೆಗಳಲ್ಲಿ ಲಾವಣ್ಯದ ಹೊಳಹು ಕಂಡುಬರುತ್ತದೆ. ಹುಕ್ಕಾದ ಕೆಳಭಾಗದಲ್ಲಿ ಐದು ದಳಗಳ ವಿನ್ಯಾಸಗಳು ಓರಲಾಗಿ ಏಳು ಬಿಂದುಗಳ ಮಧ್ಯೆ ಅಲಂಕೃತಗೊಂಡಿವೆ. ಅದರ ಕೆಳಗಿನ ಪಟ್ಟಿಕೆಯಲ್ಲಿ ಎಂದಿನಂತೆ ಹೂವಿನ ವಿನ್ಯಾಸಗಳು ರಚಿಸಲ್ಪಟ್ಟಿವೆ. ಅಡಿಪೀಠದಲ್ಲಿ ಎಲೆಗಳಂತಹ ಸಣ್ಣ ಪಟ್ಟಿಕೆಗಳು ಲಂಬವಾಗಿ ರಚನೆಗೈಯಲ್ಪಟ್ಟಿವೆ. ಉದರದ ಮೇಲ್ಭಾಗದ ಪಟ್ಟಿಕೆಯಲ್ಲಿ ಕೆಳಗಿನ ಪಟ್ಟಿಕೆಯಲ್ಲಿರುವ ವಿನ್ಯಾಸಗಳೇ ಪುನರಾವರ್ತನೆಗೊಂಡಿವೆ. ಕಂಠದ ಕೆಳಗಿನ ಪಟ್ಟಿಕೆಯಲ್ಲಿ ತಲೆಕೆಳಗಾಗಿರುವ ಹೂವಿನ ಗೊಂಚಲುಗಳು ರಚಿಸಲ್ಪಟ್ಟಿವೆ. ಒಟ್ಟಿನಲ್ಲಿ ಅಲಂಕಾರಿಕ ಒಲವಿನೆಡೆಗೆ ದೃಷ್ಟಿನೆಟ್ಟ ಈ ಹುಕ್ಕಾದ ವಿನ್ಯಾಸವು ದರ್ಶಕನಲ್ಲಿ ವಿಸ್ಮಯವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ.

೨೬. ಹುಕ್ಕಾ ತಳ (೧೮ನೆಯ ಶತಮಾನ) ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಚಿತ್ರ ೧೮ರಲ್ಲಿ ಕಂಡುಬರುವ ಹುಕ್ಕಾದ ಹೋಲಿಕೆಯನ್ನೇ ಹೊಂದಿದ್ದು, ತಟ್ಟೆಯಾಕಾರದ ಅಡಿಪೀಠದಲ್ಲಿ ಒಂದಾಗಿದೆ. ೧೮ರಲ್ಲಿನ ಹುಕ್ಕಾವು ಗಂಟೆಯಾಕಾರದಲ್ಲಿದ್ದರೆ, ಇಲ್ಲಿ ವರ್ತುಲಾಕಾರದಲ್ಲಿ ರಚನೆಗೊಂಡಿರುವುದು ಇದರ ವಿಶೇಷಣ. ಚಿತ್ರ ೨೫ರಲ್ಲಿ ಕಂಡುಬರುವ ಹುಕ್ಕದ ಹೂವುಗಳ ವಿನ್ಯಾಸಗಳನ್ನೇ ಯಥಾವತ್ತಾಗಿ ಹೋಲುವ ಇಲ್ಲಿನ ವಿನ್ಯಾಸಗಳಿಗೆ ಅರ್ಧ ಕಮಾನುಗಳುಳ್ಳ ಪಟ್ಟಿಕೆಯಂತಹ ರಚನೆ ಇರುವುದು ಮಾತ್ರ ಭಿನ್ನತೆ. ಎರಡು ಖಾನೆಗಳು ಸೇರುವ ಮೂಲೆಗಳಲ್ಲಿ ಎಂದಿನಂತೆ ಪರಸ್ಪರ ತದ್ವಿರುದ್ಧವಾದ ಹೂಗಳ ವಿನ್ಯಾಸಗಳು ಹುಕ್ಕಾವನ್ನು ಅಲಂಕೃತಗೊಳಿಸಿವೆ. ಕಂಠದಲ್ಲಿ ಬಹುಬಗೆಯ ವಿನ್ಯಾಸಗಳು ಈ ಹಿಂದಿನ ಹುಕ್ಕಾದ ವಿನ್ಯಾಸಗಳನ್ನೇ ಹೋಲುತ್ತವೆ. ಅಡಿಪೀಠದಲ್ಲಿಯೂ ಸಹ ಕಂಠದ ಕೆಳಗಿನ ವಿನ್ಯಾಸಗಳೇ ಪುನರಾವರ್ತನೆಗೊಂಡಿವೆ. ಆದರೆ ಈ ಎರಡೂ ಹುಕ್ಕಾಗಳು ಆಕಾರದಲ್ಲಿ ವಿಭಿನ್ನವಾಗಿದ್ದು ಅತ್ಯಂತ ಪ್ರಗಲ್ಭ ಕುಶಲಕರ್ಮಿಯ ಮೂಸೆಯಿಂದ ಅರಳಿರಲು ಸಾಧ್ಯವೆಂಬುದನ್ನು ಇಲ್ಲಿನ ಸೂಕ್ಷ್ಮ ವಿನ್ಯಾಸಗಳೇ ಪ್ರಕಟಪಡಿಸುತ್ತವೆ.

೨೭. ಹುಕ್ಕಾ ತಳ (೧೯ನೆಯ ಶತಮಾನ) ಅಫ್ತಾಬಿ ಮತ್ತು ತರ್ಕಶಿ ತಂತ್ರ

ಓರಿಯೆಂಟಲ್ ಎಂಟಿಕ್ಸ, ನ್ಯೂಜಿಲೆಂಡ್‌ನ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಚಿತ್ರ ೨೭ರಲ್ಲಿ ಕಂಡುಬರುವ ಹುಕ್ಕಾದ ಆಕಾರವನ್ನೇ ಹೊಂದಿದ್ದು, ಪಾತ್ರೆಯು ಸ್ವಲ್ಪ ಪ್ರಮಾಣದಲ್ಲಿ ಚಪ್ಪಟೆಯಾಗಿ ರಚನೆಯಾಗಿದೆ. ಕಂಠದಲ್ಲಿ ಪರ್ಣ ವಿನ್ಯಾಸಗಳು ತಲೆಕೆಳಗಾಗಿ ಇದರ ಎರಡೂ ಪಾರ್ಶ್ವಗಳಲ್ಲಿ ಹೂವುಗಳ ವಿನ್ಯಾಸವಿದೆ. ಕೆಳಪಟ್ಟಿಕೆಯಲ್ಲಿ ಓರಲಾಗಿರುವ ಹೂವಿನ ವಿನ್ಯಾಸಗಳು

ಅಲಂಕೃತಗೊಂಡಿವೆ. ಉದರಭಾಗದಲ್ಲಿ ಓರಲಾಗಿರುವ ಪಟ್ಟಿಕೆಗಳಲ್ಲಿ ರೇಖಾತ್ಮಕ ಶೈಲಿಯಲ್ಲಿ ರಚನೆಗೊಂಡ ಹೂವುಗಳ ವಿನ್ಯಾಸಗಳು ಅಲಂಕೃತಗೊಂಡಿವೆ. ಇದೇ ಬಗೆಯ ವಿನ್ಯಾಸಗಳು ತಟ್ಟೆಯಲ್ಲೂ ಪುನರಾವರ್ತಿತಗೊಂಡಿವೆ. ಕಂಠದಲ್ಲಿ ರೇಖಾತ್ಮಕ ಪಟ್ಟಿಕೆಗಳು ಲಂಬವಾಗಿ ರಚನೆಗೊಂಡಿವೆ. ಹಿಂದಿನ ಎರಡೂ (೨೫/೨೬) ಹುಕ್ಕಾಗಳಿಗೆ ಹೋಲಿಸಿದರೆ ಅವುಗಳಲ್ಲಿ ಇರುವಷ್ಟು ನಯಗಾರಿಕೆ, ಸೂಕ್ಷ್ಮ ರಚನೆ ಈ ಹುಕ್ಕಾದಲ್ಲಿ ಗೌಣವಾಗಿದ್ದರೂ ದರ್ಶಕನನ್ನು ತೃಪ್ತಿಪಡಿಸುವಷ್ಟು ಸೌಂದರ್ಯವನ್ನು ಮೈಗೂಡಿಸಿಕೊಂಡಿದೆ.

ಉಪಸಂಹಾರ

ಪ್ರಸ್ತು ಉಪ ಅಧ್ಯಾಯದಲ್ಲಿ ಒಟ್ಟು ಹದಿನೈದು ಗಂಟೆಯಾಕಾರದ ಹುಕ್ಕಾಗಳು ಸೇರಿದಂತೆ ವಿವಿಧ ಆಕಾರಗಳ ಹುಕ್ಕಾಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿನ ಪ್ರತಿಯೊಂದು ಹುಕ್ಕಾವು ವಿಭಿನ್ನ ಆಶಯಗಳ ಅಂಲಕರಣ ಉದ್ದಿಶ್ಯವನ್ನು ಹೊಂದಿರುವುದು ಕಂಡುಬರುತ್ತದೆ. ವಿಶೇಷವಾದ ಆಕಾರಗಳನ್ನು ಹೊಂದಿರುವ ಹುಕ್ಕಾಗಳಲ್ಲಿ ೧೪/೧೮/೨೬ ಹಾಗೂ ೨೭ಇವು ಒಂದನ್ನೊಂದು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಹೋಲಿಕೆಯಾಗುತ್ತವೆ. ಆದರೆ ಚಿತ್ರ ೩೪ರಲ್ಲಿ ಕಂಡುಬರುವ ಹುಕ್ಕಾ ಶಂಖುವಿನ ಆಕಾರವನ್ನು ಹೊಂದಿದ್ದು ಬಿದ್ರಿಕಲೆಯಲ್ಲಿ ತುಂಬಪರಿಚಿತವೆನ್ನಬಹುದಾದ ವಿನ್ಯಾಸಗಳನ್ನು ಮೈಗೂಡಿಸಿಗೊಂಡಿದೆ. ಚಿತ್ರ ೨೫ ಸಹ ಅನನ್ಯವಾದ ಆಕಾರವನ್ನು ಹೊಂದಿದ್ದು ಅತ್ಯಂತ ಸೂಕ್ಷ್ಮವಾದ ಅಲಂಕಾರಿಕ ವಿನ್ಯಾಸದ ಒಲವು ಹೊಂದಿದೆ. ಇನ್ನುಳಿದ ಗಂಟೆಯಾಕಾರದ ಹುಕ್ಕಾಗಳಲ್ಲಿ ಚಿತ್ರ ೧೪ರಲ್ಲಿ ಕಂಡುಬರುವ ಹುಕ್ಕಾ ವಿಶೇಷವಾಗಿದೆ. ಹೂವಿನ ಪಟ್ಟಿಕೆಗಳಂತಹ ರಚನೆಯನ್ನು ಹೊಂದಿದ ಇದು ತಲೆಕೆಳಗಾಗಿ ನೋಡಿದರೆ ಒಂದು ಸಲುಂದರ ಪುಷ್ಪಾಕೃತಿಯನ್ನು ಪ್ರಕಟಪಡಿಸುತ್ತದೆ. ಚಿತ್ರ೧೯ ಮತ್ತು ೨೨ರಲ್ಲಿ ಕಂಡು ಬರುವ ವಿನ್ಯಾಸಗಳು ಬಿದ್ರಿಕಲೆಯಲ್ಲಿ ಕಂಡುಬರುವ ವಿನ್ಯಾಸಗಳಲ್ಲಿಯೇ ಅಪರೂಪದ ವಿನ್ಯಾಸಗಳಾಗಿವೆ. ಈ ಎರಡೂ ಹುಕ್ಕಾಗಳಲ್ಲಿ ದೃಶ್ಯಾತ್ಮಕ ನಿರೂಪಣೆಯ ಮುಖಾಂತರವಾಗಿ ಕರ್ಮಿಯು ಅಲಂಕಾರಿಕ ಒಲವನ್ನು ಪ್ರಕಟಿಸಿರುವುದು ಕಂಡುಬರುತ್ತದೆ. ಚಿತ್ರ೨೦ರಲ್ಲಿ ಕಂಡುಬರುವ ಹುಕ್ಕಾದ ವಿನ್ಯಾಸಗಳು ಹುಕ್ಕಾದ ಆಕಾರದಲ್ಲಿಯೇ + ಚಿನ್ಹೆಯಲ್ಲಿ ಚಮತ್ಕಾರಿಕ ಒಲವಿನಲ್ಲಿ ಪ್ರಕಟವಾಗಿವೆ. ಚಿತ್ರ೧ರಲ್ಲಿ ಕಂಡುಬರುವ ಹುಕ್ಕಾ ಅತೀಸೂಕ್ಷ್ಮ ಮತ್ತು ಹೆಚ್ಚು ಸ್ಪಷ್ಟತೆಯನ್ನು ಹೊಂದಿರುವ ವಿನ್ಯಾಸಗಳಿಂದ ಕೂಡಿದುದಾಗಿದೆ. ಒಟ್ಟಿನಲ್ಲಿ ಅಲಂಕಾರಿಕ ಒಲವು ಹೊಂದಿರುವ ಇಲ್ಲಿನ ಹುಕ್ಕಾಗಳು ಅಂದಿನ ಜನರಲ್ಲಿ ತಾವು ನಿತ್ಯ ಬಳಸಬಹುದಾದ ವಸ್ತುಗಳಲ್ಲಿ ಅಲಂಕಾರಿಕ ಆಶಯದ ಪ್ರತೀಕವಾಗಿವೆ ಎಂಬುದನ್ನು ಪ್ರಕಟಿಸುತ್ತವೆ.

ಪೂರ್ಣ ಪ್ರಮಾಣದ ಹುಕ್ಕಾ

೨೮. ಹುಕ್ಕಾ (ಕ್ರಿ.ಶ.೧೮೬೫) ತರ್ಕಾಶಿ ಮತ್ತು ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಈ ಹುಕ್ಕಾ ಮೂಲತಃ ಕೋಲ್ಕತ್ತಾದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹವಾಗಿತ್ತು. ಸಂಗ್ರಹಾಲಯದ ಆಡಳಿತ ಮಂಡಳಿಯ ವಿದೇಶಿ ವ್ಯಾಮೋಹದಿಂದಾಗಿ ಈ ಹುಕ್ಕಾ ಲಂಡನ್ನಿನ ವಸ್ತುಸಂಗ್ರಹಾಲಯಕ್ಕೆ ಕೊಡುಗೆಯಗಿ ಸಲ್ಲಿಸಲ್ಪಟ್ಟಿರುವುದು ಭಾರತದ ಸಾಂಸ್ಕೃತಿಕ ಪರಂಪರೆಯಲ್ಲೊಂದು ದುರಂತವೆಂದು ಭಾವಿಸಿದರೆ ಅತಿಶಯೋಕ್ತಿಯೇನಲ್ಲ.

ಇಲ್ಲಿರುವ ಹುಕ್ಕಾ ಪೂರ್ಣ ಪ್ರಮಾಣದ್ದು. ಈ ಹಿಂದೆ ಅಧ್ಯಯನ ಮಾಡಿದ ಹುಕ್ಕಾಗಳು ತಳ ಮಾತ್ರ, ಮೇಲ್ಭಾಗದ ನಳಿಕೆಗಳು ಸಂಗ್ರಹಾಲಯದವರಿಗೂ ಲಭ್ಯವಾಗಿಲ್ಲ. ಹೀಗಾಗಿ ಈ ಹುಕ್ಕಾ ಅಪರೂಪದ್ದು ಎಂದು ಹೇಳಿದ್ದು.

ಈ ಹುಕ್ಕಾದ ತಳ ಈ ಹಿಂದಿನ ಎಲ್ಲ ಹುಕ್ಕಾಗಳ ತಳಕ್ಕಿಂತ ವಿಭಿನ್ನವಾದ ರಚನೆಯನ್ನು ಹೊಂದಿದೆ. ಅಡಿಪೀಠದಲ್ಲಿ ತ್ರಿಮಾನ ರೂಪದಲ್ಲಿ ಹೂವುಗಳ ವಿನ್ಯಾಸವನ್ನು ಲೋಹದಲ್ಲಿ ರಚಿಸಲಾಗಿದೆ. ಒಳಭಾಗದಲ್ಲಿ ಬೆಳ್ಳಿಯ ಹುದುಗಿಸುವಿಕೆಯ ವಿನ್ಯಾಸಗಳು ಎಂದಿನಂತೆ ಒಡಮೂಡಿವೆ. ಕೆಳಭಾಗದಲ್ಲಿ ಹೂವಿನ ವಿನ್ಯಾಸ ಪರ್ಣಗಳ ಸಹಿತವಾಗಿ ಅಲಂಕೃತಗೊಂಡಿದೆ. ಮೇಲಂಚಿನಲ್ಲಿ ತೆಳುವಾದ ಲೋಹದ ಉಬ್ಬು ಪಟ್ಟಿಕೆ ಹುಕ್ಕಾವನ್ನು ಸುತ್ತುವರೆದಿದೆ. ಉದರಭಾಗದಲ್ಲಿ ಒಂದು ಪಟ್ಟಿಕೆಯಲ್ಲಿ ಪರ್ಣಗಳ ವಿನ್ಯಾಸ, ಮೊಗದೊಂದು ಪಟ್ಟಿಕೆಯಲ್ಲಿ ತ್ರಿದಳಗಳ ವಿನ್ಯಾಸಗಳು ಚಿಕಣಿ ರೂಪದಲ್ಲಿ ಒಡಮೂಡಿವೆ. ಹುಕ್ಕಾದ ಮೇಲ್ಭಾಗದಲ್ಲಿ ನಳಿಕೆಯನ್ನು ಕೂರಿಸುವ ರಂಧ್ರದ ಸುತ್ತ ಕಮಲದ ಹೂವಿನ ತ್ರಿಮಾನರಚನೆ ಮಾಡಲಾಗಿದೆ. ನಳಿಕೆಯದ್ದಕ್ಕೂ ಹೂವುಗಳ, ಮೊಗ್ಗುಗಳ ವಿನ್ಯಾಸಗಳು ಲೋಹದ ಹಾಳೆಯಲ್ಲಿ ರಚನೆಗೊಂಡು ಹುಕ್ಕಾದ ಅಲಂಕರವನ್ನು ಇಮ್ಮಡಿಗೊಳಿಸಿವೆ. ಎಡ ಪಾರ್ಶ್ವದಲ್ಲಿ ಕಮಲದ ಮೊಗ್ಗಿನ ರಚನೆ, ಲಂಬ ನಳಿಕೆಯ ಮೇಲ್ಭಾಗದಲ್ಲಿ ಮತ್ತೊಂದು ಅರಳಿದ ಕಮಲದ ಹೂವಿನ ರಚನೆಗಳು ಇವೆ. ಇದರ ಮೇಲ್ಭಾಗದಲ್ಲಿ ತ್ರಿಮಾನದಲ್ಲಿ ರಚಿಸಿದ ವಿವಿಧ ಹೂಗಳ ವಿನ್ಯಾಸಗಳು ನಾಲ್ಕು ಹಂತಗಳಲ್ಲಿ ಅಲಂಕೃತಗೊಂಡಿವೆ. ಅಲ್ಲಿಂದ ಮೂರು ಸರಪಳಿಗಳು ಜೋಲಾಡುತ್ತಿದ್ದು, ಅವುಗಳ ತುದಿಯಲ್ಲಿ ಹೂವಿನ ಮೊಗ್ಗುಗಳನ್ನು ರಚಿಸಲಾಗಿದೆ.

ದರ್ಶಕನನ್ನು ಮೊದಲ ನೋಟದಲ್ಲಿಯೇ ತೃಪ್ತಿಪಡಿಸುವ ಈ ಹುಕ್ಕಾ ವೈಭವೋಪೇತ ಜೀವನ ಕ್ರಮದ ಪ್ರತಿನಿಧಿಯಾಗಿದೆ. ಶ್ರೀಮಂತ ಜನರ ಅಲಂಕಾರಿಕ ಪ್ರಜ್ಞೆಯಿಂದಾಗಿ ಅಂದು ಬಿದ್ರಿ ಕಲಾವಿದರು ಸಹ ಶ್ರೀಮಂತ ಶ್ರಮಜೀವಿಗಳಾಗಿದ್ದರು ಎಂಬುದಕ್ಕೆ ಈ ಹುಕ್ಕಾ ಸಾಕ್ಷಿಯಾಗುತ್ತದೆ.

೨೯. ಹುಕ್ಕಾ (ಇತ್ತೀಚಿನ ಬಿದ್ರಿ ಕಲೆ) ತರ್ಕಶಿ ತಂತ್ರ

ಬೀದರಿನ ಬಿದ್ರಿ ಕುಶಲಕರ್ಮಿ ಅಬ್ದುಲ್ ಖದೀರ ಅವರ ವೈಯಕ್ತಿಕ ಸಂಗ್ರಹದಲ್ಲಿರುವ ಈ ಹುಕ್ಕಾದ ತಳವು ಪೂಲಝುಡಿ ವಿನ್ಯಾಸವನ್ನು ಹೊಂದಿದೆ. ಅಡಿಪೀಠದಲ್ಲಿ, ಪಾತ್ರೆಯಲ್ಲಿ ಹಾಗೂ ಬೆಂಕಿಯ ಕುಂಡದಲ್ಲಿ ವರ್ತುಲಕಾರದ ಆವರಣ ಘೂಲಝುಡಿ ವಿನ್ಯಾಸಗಳಿಂದ ತುಂಬಿದೆ. ನಳಿಕೆಯ ಮಧ್ಯದಲ್ಲಿ ಅಲ್ಲಲ್ಲಿ ಅಲಂಕಾರಿಕ ಉಬ್ಬುಗಳಲ್ಲಿ ರೇಖಾತ್ಮಕ ವಿನ್ಯಾಸಗಳು ವಿವಿಧ ಬಗೆಯಲ್ಲಿ ರಚನೆಗೊಂಡು ಹುಕ್ಕಾವನ್ನು ಅಲಂಕೃತಗೊಳಿಸಿವೆ.

ಉಪಸಂಹಾರ

ಪ್ರಸ್ತುತ ಇಲ್ಲಿ ಪೂರ್ಣ ಪ್ರಮಾಣದ ಎರಡು ಹುಕ್ಕಾಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರ ೨೮ರಲ್ಲಿ ಕಂಡುಬರುವ ಹುಕ್ಕಾ ತುಂಬ ಹಳೆಯ ತಲೆಮಾರಿನದು. ಅಲ್ಲಿ ಅತ್ಯಂತ ಪಾರಂಪರಿಕ ವಿನ್ಯಾಸಗಳೇ ಪ್ರಧಾನವಾಗಿ ಕಾಣಿಸಿಕೊಂಡಿವೆ. ೨೯ರಲ್ಲಿ ಕಂಡುಬರುವ ಹುಕ್ಕಾ ಇತ್ತೀಚಿನದಾದರೂ ವಿನ್ಯಾಸಗಳು ಪ್ರಾಚೀನ ಬಿದ್ರಿಕಲೆಯಲ್ಲಿ ಕಾಣಿಸಿಕೊಂಡ ಘೂಲಝುಡಿ ವಿನ್ಯಾಸವನ್ನು ಹೊಂದಿದೆ. ಆದರೆ ಚಿತ್ರ೨೯ರ ಹುಕ್ಕಾದ ರಚನೆಯ ಮುಂದೆ ಈ ಹುಕ್ಕಾದ ರಚನೆ, ವಿನ್ಯಾಸಗಳೆಲ್ಲವೂ ಗೌಣವೆನಿಸಿದರೂ, ಈ ಹೊತ್ತಿನ ಸಂದರ್ಭದಲ್ಲಿ ಅದು ಉತ್ತಮ ವಿನ್ಯಾಸದ ಹುಕ್ಕಾ ಎಂದು ಮಾನ್ಯತೆ ಪಡೆಯುವದರಲ್ಲಿ ಎರಡು ಮಾತಿಲ್ಲ.

*****

೧೨. ಹೂಜಿಗಳು

ಇಲ್ಲಿ ಅಧ್ಯಯನಕ್ಕೆ ದುಡಿಸಿಕೊಳ್ಳುತ್ತಿರುವ ಹೂಜಿಗಳು ರಾಜವೈಭೋಗದ ನೀರುದಾನಿಗಳು. ನೀರನ್ನು ಅದರಲ್ಲಿ ಸಂಗ್ರಹಿಸಿ, ಬೇಕಾದಾಗ ಲೋಟವೊಂದಕ್ಕೆ ಬೇಕಾದಷ್ಟು ಹಾಕಿಕೊಂಡು ಕುಡಿಯುವ ಪದ್ಧತಿಗೆ ಬಳಸಲ್ಪಡುವ ಒಂದು ಮನೆ ಬಳಕೆ ವಸ್ತು. ಸಾಮಾನ್ಯರು ಚರಿಗೆಗಳನ್ನು ಬಳಸಿದರೆ, ರಾಜ ಪರಿವಾರದವರು ಚಿನ್ನ, ಬೆಳ್ಳಿಯ ಹೂಜಿಗಳನ್ನು ಬಳಸುವ ಪರಂಪರೆ ನಮ್ಮ ದೇಶದಲ್ಲಿತ್ತು. ಇಂತಹ ಹೂಜಿಗಳನ್ನು ಸಾಧ್ಯವಾದಷ್ಟು ವೈಭವೀಕರಣದ ನೆಲೆಯಲ್ಲಿ ಅಲಂಕರಿಸುವ ಪರಿಪಾಠ ಬೆಳೆದಂತೆಲ್ಲ ವಿವಿಧ ಲೋಹದ ವಸ್ತುಗಳು ಜಾರಿಗೆ ಬಂದವು. ಇಂತಹ ವಸ್ತುಗಳಲ್ಲಿ ಬಿದ್ರಿ ಹೂಜಿಗಳು ಒಂದಾಗಿವೆ.

ಬಿದ್ರಿ ಹೂಜಿಗಳು ಬೀದರಿನ ಪರಿಸರದಲ್ಲಿ ಮಾತ್ರ ಉತ್ಪನ್ನವಾಗುವಂತಹ ವಸ್ತು. ಅಂದಿನ ಬೀದರ ಬಹಮನಿಗಳ ರಾಜಧಾನಿಯಾಗಿ, ಪ್ರಮುಖ ವಾಣಿಜ್ಯ ಸ್ಥಳವಾಗಿ ಅಷ್ಟೇ ಅಲ್ಲ ಪ್ರಮುಖ ಆಳರಸರು ತಮ್ಮ ವಾಸ್ತವ್ಯಕ್ಕಾಗಿ ಬೃಹತ್ ಅರಮನೆಗಳನ್ನು ನಿರ್ಮಿಸಿದ ಊರು. ರಕ್ಷಣೆಗಾಗಿ ಸುಂದರ ವಿನ್ಯಾಸದ ಕೋಟೆಯನ್ನೂ ಕಟ್ಟಿದವರು. ಸಹಜವಾಗಿ ಮುಸ್ಲಿಂ ಅರಸರು ವಿಲಾಸಿ ಜೀವನ ಕ್ರಮದ

ಜಾಡಿನಲ್ಲಿದ್ದವರು. ಅವರಿಗೆ ಅಲ್ಲಿ ಕಂಡಿದ್ದು ಮುಖ್ಯ ಕಸಬು ಬಿದ್ರಿ ಕಲೆ ಮತ್ತು ಕುಶಲಕರ್ಮಿಗಳು. ಹೀಗಾಗಿ ಅರಮನೆಗಳಲ್ಲಿ ಬಿದ್ರಿ ವಸ್ತುಗಳು ಚಿನ್ನ-ಬೆಳ್ಳಿಗಳ ಹುದುಗಿಸುವಿಕೆಯಿಂದ ಚೆಲುವು ಪಡೆದು ಅರಮನೆಗಳಲ್ಲಿ ಸ್ಥಾನ ಪಡೆದವು. ಕರ್ಮಿಗಳಿಗೆ ರಾಜ ಮರ್ಯಾದೆಗಳು, ಜೊತೆಗೆ ಹೇರಳವಾದ ಆದಾಯವೂ ಲಭಿಸಿತು.

ಬಿದ್ರಿ ಹೂಜಿಗಳಲ್ಲಿ ನೀರನ್ನು ಸಂಗ್ರಹಿಸಿಡುವುದರಿಂದ ನೀರಿಗೆ ಕಬ್ಬಿಣದ ಅಂಶ ಸೇರ್ಪಡೆಯಾಗಿ ಆರೋಗ್ಯ ವೃದ್ಧಿಯಾಗುವುದರ ಜೊತೆಗೆ ಯಾವುದೇ ರೋಗ ರುಜಿನಗಳು ಬರದಂತೆ ತಡೆಯುವ ಶಕ್ತಿ ಬಿದ್ರಿ ಹೂಜಿಗಳಿಗೆ ಇದೆ. ಹೀಗಾಗಿ ಬಿದ್ರಿ ಹುಕ್ಕಾಗಳಿಗೆ ಇದ್ದಂತಹಬೇಡಿಕೆ ಬಿದ್ರಿ ಹೂಜಿಗಳಿಗೂ ಇತ್ತು. ಉತ್ಪಾದನೆಯಾಗುವ ಹೂಜಿಗಳಲ್ಲಿ ತರಾವರಿ ವಿನ್ಯಾಸಗಳು ಕುಶಲಕರ್ಮಿಗಳಿಂದ ಪ್ರಕಟವಾಗತೊಡಗಿದವು. ಆಳರಸರು ತಮಗೆ ಬೇಕಾದಂತಹ ವಿನ್ಯಾಸಗಳಲ್ಲಿ ಹೂಜಿಗಳನ್ನು ಮಾಡಿಸಿಕೊಂಡು ಬಳಸುತ್ತಿದ್ದ ಉದಾಹರಣೆಗಳು ಚರಿತ್ರೆಯಲ್ಲಿ ಲಭ್ಯವಾಗುತ್ತವೆ. ಬಹುತೇಕವಾಗಿ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿರುವ ಪ್ರಾಚೀನ ಬಿದ್ರಿ ಹೂಜಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

೧. ಹೂಜಿ (೧೭ನೆಯ ಶತಮಾನ) ಅಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯು ಅಪೂರ್ವ ಕಲಾಕೃತಿಯಾಗಿದೆ. ಸುಕುಮಾರತೆಯಿಂದ ರಚನೆಗೊಂಡ ಬಳ್ಳಿಗಳು, ಅವುಗಳಿಂದ ಉದ್ಭವವಾದ ಲಾಲಿತ್ಯಪೂರ್ಣ ಪರ್ಣಗಳು, ಲಾವಣ್ಯದ ಭಾವವನ್ನು ಹೊರಸೂಸುವ ಹೂವಿನ ಮೊಗ್ಗುಗಳು, ಎರಡೆರಡು ಬಳ್ಳಿಗಳನ್ನು ಕಟ್ಟಿಹಾಕಿದ ಹೂವಿನ ವಿನ್ಯಾಸಗಳನ್ನು ಅದ್ಭುತವಾಗಿ ಚಿತ್ತಾರಗೈದ ಕುಶಲಕರ್ಮಿಯ ಪ್ರಗಲ್ಭಪೂರ್ಣ ಕುಸುರಿಯನ್ನು ಎಷ್ಟು ವರ್ಣಿಸಿದರೂ ಸಾಲದು.

ಬಹುತೇಕ ಬಿದ್ರಿಕಲೆಗಳಲ್ಲಿ ವಿನ್ಯಾಸವನ್ನು ಮೂಡಿಸುವ ಭಾಗದಲ್ಲಿ ಕೆತ್ತಿ ಬೆಳ್ಳಿಯನ್ನು ಹುದುಗಿಸಿದರೆ, ಇಲ್ಲಿ ಬಿದ್ರಿ ಮೇಲ್ಮೈನ್ನೇ ವಿನ್ಯಾಸಕ್ಕೆ ದುಡಿಸಿಕೊಂಡ ಬಗೆ ಅಚ್ಚರಿಯೆನಿಸುತ್ತದೆ. ವಿವರವಾಗಿ ಹೇಳುವುದಾದರೆ ವಿನ್ಯಾಸದ ಭಾಗವನ್ನು ಬಿಟ್ಟು ಹಿನ್ನಲೆಯ ಅವಕಾಶವನ್ನು ಬಗೆದು ಅಲ್ಲಿ ವಿನ್ಯಾಸಗಳಿಗೆ ತಕ್ಕಂತೆ ಬೆಳ್ಳಿ ಮತ್ತು ಬಂಗಾರವನ್ನು ತುಂಬುವ ತಂತ್ರವನ್ನು ಇಲ್ಲಿ ಅನುಸರಿಸಲಾಗಿದೆ. ಹೀಗಾಗಿ ಇಡೀ ಬಿದ್ರಿ ಕಲೆಗಳಲ್ಲಿ ಅತ್ಯಂತ ವಿಭಿನ್ನವಾದ, ಅನನ್ಯವಾದ ರಚನಾ ತಂತ್ರಗಾರಿಕೆಯನ್ನು ಹೊಂದಿದ ಕಲಾಕೃತಿ ಇದಾಗಿದೆ.

ನೀರುದಾನಿಯ ಉದರ ಭಾಗದಲ್ಲಿ ಎಲ್ಲಿಯೂ ಬೇರ್ಪಡದ ಬಳ್ಳಿಯು ವರ್ತುಲಕಾರವಾಗಿ ಹಬ್ಬಿದೆ. ಬಳ್ಳಿಯ ಆದಿ ಅಥವಾ ಅಂತ್ಯಗಳು ತಕ್ಷಣಕ್ಕೆ ಯವ ದರ್ಶಕನಿಗೂ ನಿಲುಕಲಾರದು ಎಂಬ ಅಚ್ಚರಿ ಈ ಕಲಾಕೃತಿಯಿಂದ ವೇದ್ಯವಾಗುತ್ತದೆ. ಆದರೂ ಸೂಕ್ಷ್ಮವಾಗಿ ಗಮನಿಸಿದರೆ ಕಂಠದ ಕೆಳಭಾಗದ ಪ್ರಮುಖ ವಿನ್ಯಾಸದಿಂದ ಬಳ್ಳಿಯ ಆದಿಯನ್ನು, ಅಂತ್ಯವನ್ನು ತಳದಲ್ಲಿ ರಚನೆಗೊಂಡ

ವಿನ್ಯಾಸದಲ್ಲಿ ಕಾಣಬಹುದಾಗಿದೆ. ಇಂತಹ ಪ್ರಮುಖ ವಿನ್ಯಾಸಗಳು ಕಂಠದ ಕೆಳಭಾಗದ ಸುತ್ತಲೂ ಮತ್ತು ತಳಭಾಗದ ಸುತ್ತಲೂ ರಚಿಸಲ್ಪಟ್ಟಿವೆ. ಉದರಭಾಗದಲ್ಲಿ ರಚನೆಗೊಂಡ ವಿನ್ಯಾಸಗಳು ಹೂಜಿಯ 'ಹಿಡಿ'ಯಲ್ಲಿ, ನೀರಿನ ನಳಿಕೆಯಲ್ಲಿ ಪುನರಾವರ್ತನೆಗೊಂಡಿವೆ.

ಕಂಠದ ಮೇಲ್ಭಾಗದಲ್ಲಿ ಮುಸ್ಲಿಂ ವಾಸ್ತು ಶಿಲ್ಪದಲ್ಲಿ ಕಂಡುಬರುವ ಪುಷ್ಪಾವರಣದ ಕಮಾನಿನ ವಿನ್ಯಾಸದಲ್ಲಿ ಪ್ರತಿಬಿಂಬ ವಿನ್ಯಾಸ ರಚನೆಗೊಂಡಿವೆ. ಅದೇ ರೀತಿಯಾಗಿ ಷಡ್ಭುಜಾಕೃತಿಯ ಅಡಿಪೀಠದ ಪ್ರತಿಯೊಂದು ಮುಖದಲ್ಲೂ ಏಕಪ್ರಕಾರದ ಪ್ರತಿಬಿಂಬಿ ವಿನ್ಯಾಸಗಳು ತಲೆಕೆಳಗಾಗಿ ರಚನೆಗೊಂಡಿವೆ. ಅತ್ಯಂತ ಪ್ರಕೀರ್ಣಕವೆನ್ನಬಹುದಾದ ಈ ಹೂಜಿಯ ಸಂಯೋಜನೆ ಬಿದ್ರಿ ಕಲೆಗಳಲ್ಲಿಯೇ ಅಪರೂಪದಲ್ಲಿ ಅಪರೂಪವಾಗಿದೆ. ಅಲಂಕಾರಿಕ ಒಲವಿನ ಮನಸುಗಳಿಗೆ ಖಂಡಿತ ತಂಪನೆರೆಯುವ ಈ ಹೂಜಿ ವಸ್ತು ಸಂಗ್ರಹಾಲಯದ ಕಿರೀಟವಿದ್ದಂತೆ ಎಂದರೆ ಅತಿಶಯೋಕ್ತಿಯಾಗಲಾರದು. ರಚನೆಗೊಂಡಿದ್ದು ಹಿಡಿಯಲ್ಲಿ, ನೀರಿನಳಿಕೆಯಲ್ಲಿ ಹೂಬಳ್ಳಿಯನ್ನು ಹೋಲುವ ರಚನೆಗಳು ಅಲಂಕೃತಗೊಂಡಿವೆ. ಕಂಠದಲ್ಲಿರುವ ಹಗ್ಗದಂತಹ ಪಟ್ಟಿಕೆಗಳ ವಿನ್ಯಾಸ ಅಡಿಪೀಠದಲ್ಲಿಯೂ ಒಡಮೂಡಿವೆ. ಒಟ್ಟಿನಲ್ಲಿ ಅಲಂಕಾರ ಪ್ರಧಾನವಾದಿ ಹೂಜಿ ಚಿತ್ರ ೧ರಲ್ಲಿ ಕಂಡುಬರುವ ಹೂಜಿಯ ಅಲಂಕಾರಿಕ ವೈಭವವನ್ನು ಮೀರಿಸದೇ ಇದ್ದರೂ ಅದರದೇ ನೆಲೆಯಲ್ಲಿ ಚಾರಿತ್ರಿಕ ಮಹತ್ವವನ್ನು ಗಳಿಸಿದೆ ಎಂದರೆ ಅತಿಶಯೋಕ್ತಿಯೇನಲ್ಲ.

೫. ಹೂಜಿ (೧೮ನೆಯ ಶತಮಾನ) ಅಫ್ತಾಬಿ ತಂತ್ರ

ಹೈದರಾಬಾದಿನ ಸಾಲಾರ್ ಜಂಗ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯಲ್ಲಿ ಪರ್ಣ ಮತ್ತು ಹೂವಿನ ವಿನ್ಯಾಸಗಳು ಪ್ರಧಾನ ಆಶಯವಾವಾಗಿವೆ. ಹೂಜಿಯ ಉದರಭಾಗದಲ್ಲಿರುವ ಹೂಗಳ ಸುತ್ತ ಬಹು ಸೂಕ್ಷ್ಮವಾದ ಅಲಂಕಾರಿಕ ವಿನ್ಯಾಸಗಳು ಅಂಡಾಕಾರದಲ್ಲಿ ರಚನೆಗೊಂಡಿವೆ. ಕಂಠದ ಕೆಳಭಾಗದಲ್ಲಿ ಮುಸ್ಲಿಂ ಶೈಲಿಯ ಪರ್ಣಗಳ ವಿನ್ಯಾಸಗಳು, ತದನಂತರದ ಕೆಳಭಾಗದಲ್ಲಿ ಪರ್ಣದಂತಹ ವಿನ್ಯಾಸಗಳು ಪಟ್ಟಿಕೆಯಲ್ಲಿ ರೂಪುಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಉದರದ ವಿನ್ಯಾಸಗಳೇ ಪುನರಾವರ್ತಿತಗೊಂಡಿವೆ. ಮುಚ್ಚಳದಲ್ಲೂ ಸಹ ಅದೇ ವಿನ್ಯಾಸಗಳು ರಚನೆಗೊಂಡಿವೆ. ಕಂಠದಲ್ಲಿರುವಂತಹ ವಿನ್ಯಾಸಗಳು ಅಡಿಪೀಠದಲ್ಲಿ ಅಲಂಕೃತಗೊಂಡಿವೆ. ನೀರಿನಳಿಕೆಯಲ್ಲಿ ಮತ್ತು ಹಿಡಿಕೆಯಲ್ಲಿ ಪರ್ಣಗಳಂತಹ ವಿನ್ಯಾಸಗಳು ರಚನೆಗೊಂಡಿದ್ದು ಕಂಡುಬರುತ್ತವೆ.

೬. ಹೂಜಿ, ತೆಹನಿಶಾನ ಮತ್ತು ತರ್ಕಶಿ ತಂತ್ರ

ಕೋಲ್ಕತ್ತಾದ ಇಂಡಿಯನ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯ ಉದರಭಾಗದಲ್ಲಿ ಪ್ರಧಾನವಾದ ಹೂವಿನ ಗಿಡದ ವಿನ್ಯಾಸವು ಪರ್ಣಗಳ ಸಹಿತವಾಗಿ ರಚನೆಗೊಂಡಿದೆ. ಅದೇ ಬಗೆಯ ವಿನ್ಯಾಸ ಹೂಜಿಯ ಉದರಭಾಗದ ಸುತ್ತಲೂ ಪುನರಾವರ್ತನೆಗೊಮಡಿರುವುದನ್ನು ಕಾಣಬಹುದಾಗಿದೆ. ಕಂಠದ ಭಾಗದಲ್ಲಿ ಮೂರ್‍ನಾಲ್ಕು

ಪಟ್ಟಿಕೆಗಳಲ್ಲಿ ತ್ರಿದಳ ಹೂವುಗಳ ಹಾಗೂ ಪರ್ಣಗಳಂತಹ ರಚನೆಗಳು ಹೂಜಿಯ ಅಲಂಕಾರವನ್ನು ಇಮ್ಮಡಿಗೊಳಿಸಿವೆ. ಕಂಠದ ಮೇಲ್ಭಾಗದಲ್ಲೂ ಸಹ ತ್ರಿದಳ ವಿನ್ಯಾಸಗಳು ರಚನೆಗೊಂಡರೆ, ಅಡಿಪೀಠದಲ್ಲಿ ತಲೆಕೆಳಗಾಗಿರುವ ಹೂ ಬಳ್ಳಿಗಳು ಅಲಂಕೃತಗೊಂಡಿವೆ. ನೀರಿನಳಿಕೆ ಹಾಗೂ ಹಿಡಿಕೆಯಲ್ಲಿ ತ್ರಿದಳ ರಚನೆಗಳು ಪುನರಾವರ್ತನೆಗೊಂಡಿವೆ. ಸೂಕ್ಷ್ಮ ಮತ್ತು ದಟ್ಟ ವಿನ್ಯಾಸಗಳ ಸಮ್ಮಿಶ್ರ ತಂತ್ರ ಈ ಹೂಜಿಯಲ್ಲಿ ಮೂಡಿದ್ದು ಚಾರಿತ್ರಿಕ ನೆಲೆಯಲ್ಲಿ ಮಹತ್ವದ್ದು.

೭. ಹೂಜಿ (೧೭ನೆಯ ಶತಮಾನ) ತೆಹನಿಶಾನ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯು ಇಲ್ಲಿರುವ ಹೂಜಿಗಳಿಗಿಂತ ವಿಭಿನ್ನವಾದುದು. ಉದರ ಭಾಗದಲ್ಲಿ ಕುಂಬಳಕಾಯಿಯಂತಹ ಉಬ್ಬು ವಿನ್ಯಾಸವನ್ನು ಹೊಂದಿದೆ. ಅದರ ಮೇಲ್ಮೈಯಲ್ಲಿ ಪ್ರತಿಬಿಂಬ ನೆಲೆಯಲ್ಲಿ ಪರ್ಣಗಳ ವಿನ್ಯಾಸಗಳು ಪರಸ್ಪರ ತದ್ವಿರುದ್ಧವಾಗಿ ಕೆಳ ಮತ್ತು ಮೇಲ್ಭಾಗದಲ್ಲಿ ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಐದು ದಳಗಳ ಹೂವಿನ ವಿನ್ಯಾಸವು ಒಡಮೂಡಿದ್ದು ಮೇಲ್ಭಾಗದಲ್ಲಿ

೨. ಹೂಜಿ (೧೭ನೆಯ ಶತಮಾನ) ಅಫ್ತಾಬಿ, ತಹನಿಶಾನ ಮತ್ತು ತರ್ಕಶಿ ತಂತ್ರ

ಹೈದರಾಬಾದಿನ ಜಗದೀಶ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯಲ್ಲಿ ಸೂಕ್ಷ್ಮ ವಿನ್ಯಾಸಗಳು ಗೌಣ. ಇಲ್ಲಿ ಏನಿದ್ದರೂ ದಟ್ಟ ವಿನ್ಯಾಸಗಳದೇ ಪ್ರಾಬಲ್ಯ. ಬೆಳ್ಳಿಯ ಕಾಗದಗಳನ್ನು ಹುದಗಿಸಿದ ಇಲ್ಲಿನ ಪರ್ಣಗಳ ಹಾಗೂ ಹೂವಿನ ವಿನ್ಯಾಸಗಳು ಹಿಂದಿನ ಹೂಜಿಯಷ್ಟು ಸುಕುಮಾರತೆಯನ್ನು ಹೊಂದಿಲ್ಲವೆಂಬುದು ದಿಟ. ಈ ಹೂಜಿಯಲ್ಲಿ ಪ್ರಧಾನವಾದ ಹೂವಿನ ಗಿಡವೊಂದರ ವಿನ್ಯಾಸ ಪ್ರಮುಖ ಆಶಯವಾಗಿದ್ದು, ಅದಕ್ಕೆ ಪೂರಕವಾಗಿ ಚಿಕ್ಕ ಚಿಕ್ಕ ಹೂವಿನಗಿಡಗಳ ವಿನ್ಯಾಸಗಳನ್ನು ಹೂಜಿಯ ಮೇಲ್ಮೈಯಲ್ಲಿ ರಚಿಸಲಾಗಿದೆ. ಮುಚ್ಚಳದ ಮೇಲೆ ಎಂದಿನಂತೆ ಹೂವಿನ ವಿನ್ಯಾಸಗಳು ವರ್ತುಲಾಕರದಲ್ಲಿ ರಚನೆಗೊಂಡಿವೆ. ಕಂಠದ ಕೆಳಭಾಗದಲ್ಲಿ ಹೂವಿನ ಸುರಳಿಯ ಪಟ್ಟಿಕೆ ರಚನೆಗೊಂಡಿದೆ. ನೀರಿನಳಿಕೆಯಲ್ಲಿ ದಟ್ಟವಾದ ವಿನ್ಯಾಸ ಅಲಂಕೃತಗೊಂಡಿದೆ.

೩. ಹೂಜಿ (ಕ್ರಿ.ಶ.೧೮೫೫) ತರ್ಕಶಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂಜಿಯು ಚಿತ್ರ ೨೫/೨೬ರಲ್ಲಿ ಕಂಡುಬರುವ ಹುಕ್ಕಾ ತಳಗಳ ತಂತ್ರಗಾರಿಕೆಯನ್ನೇ ಹೋಲುತ್ತಿದ್ದು, ವಿನ್ಯಾಸದಲ್ಲಿ ಕೊಂಚಮಟ್ಟಿನ ಭಿನ್ನತೆ ಕಂಡುಬರುತ್ತದೆ. ಹೂಜಿಯ ಉದರದಲ್ಲಿ ಅಂಡಕಾರದ ಆವರಣದಲ್ಲಿ ಐದಾರು ಹೂಗಳ ವಿನ್ಯಾಸ ಗಿಡಗಳ ಸಹಿತವಾಗಿ ಒಡಮೂಡಿದೆ. ಇಂತಹ ವಿನ್ಯಾಸಗಳು ಕಂಠದ ಮೇಲ್ಮೈಯಲ್ಲಿ ಮತ್ತು ಮುಚ್ಚಳದಲ್ಲಿ ಪುನರ್ ರಚನೆಗೊಂಡಿವೆ. ಕಂಠದಲ್ಲಿ

ಹಗ್ಗದಂತಹ ರಚನೆ, ಕೆಳಭಾಗದಲ್ಲಿ ತಲೆಕೆಳಗಾಗಿರುವ ಪುಷ್ಪಾವರಣವನ್ನು ಹೋಲುವ ಪಟ್ಟಿಕೆಯಲ್ಲಿ ಹೂವಿನ ಸುರುಳಿಗಳು ರಚನೆಗೊಂಡಿವೆ. ತದನಂತರದಲ್ಲಿ ಹಗ್ಗದಂತಹ ರಚನೆ, ಮತ್ತೆ ಹೂವಿನ ಸುರುಳಿಯನ್ನು ಹೊಂದಿದ ಪಟ್ಟಿಕೆ, ಓಲಾಕಾರದಲ್ಲಿ ರಚನೆಗೊಂಡ ಪಟ್ಟಿಕೆಗಳು ಕಂಠ ಭಾಗದಲ್ಲಿ ರಚನೆಗೊಂಡಿವೆ. ಇದೇ ಕಂಠದಲ್ಲಿನ ಪಟ್ಟಿಕೆಗಳ ವಿನಯಾಸಗಳು ಹೂಜಿಯ ಅಡಿಪೀಠದಲ್ಲಿ ಪುನರಪಿ ರಚನೆಗೊಂಡಿವೆ. ನೀರಿನಳಿಕೆ, ಹಿಡಿಕೆಯಲ್ಲಿ ಹೂವಿನ ಗೊಂಚಲುಗಳ ವಿನ್ಯಾಸಗಳು ಪಟ್ಟಿಕೆಯ ರೂಪದಲ್ಲಿ ಅಲಂಕೃತಗೊಂಡಿವೆ. ಒಟ್ಟಿನಲ್ಲಿ ಅಲಂಕಾರದ ಒಲವಿನ ದರ್ಶಕನ ಕ್ಷಣ ಹೊತ್ತು ಸ್ತಂಭೀಭೂತನನ್ನಾಗಿಸುವ ಗುಣ ಈ ಹುಜಿಯದಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

೪. ಹೂಜಿ (೧೭ನೆಯ ಶತಮಾನ) ಅಫ್ತಾಬಿ ತಂತ್ರ

ಚಿತ್ರ ೧ರಲ್ಲಿ ಕಂಡುಬರುವ ಹೂಜಿಯ ಆಕಾರವನ್ನೇ ಇದು ಯಥಾವತ್ತಾಗಿ ಹೋಲುತ್ತಿದ್ದು, ಮೇಲ್ಮೈಯಲ್ಲಿನ ವಿನ್ಯಾಸಗಳಲ್ಲಿ ವ್ಯತ್ಯಾಸಗಳಿವೆ. ಆ ಹೂಜಿಯಲ್ಲಿ ಸೂಕ್ಷ್ಮ ವಿನ್ಯಾಸಗಳ ಪಾರುಪತ್ಯವಿದ್ರೆ ಇಲ್ಲಿ ದಟ್ಟ ವಿನ್ಯಾಸಗಳು ಮೈದಾಳಿವೆ. ಪ್ರಧಾನವಾಗಿ ಹೂವಿನ ವಿನ್ಯಾಸಗಳನ್ನು ಆವರಿಸಿಕೊಂಡಿರುವ ಪರ್ಣಗಳಿಂದ ಕೂಡಿದ ಬಳ್ಳಿಗಳ ವಿನ್ಯಾಸಗಳು ಹೂಜಿಯ ಉದರಭಾಗದಲ್ಲಿ ಚಿತ್ತರಗೊಂಡಿವೆ. ಕಂಠದ ಕೆಳಭಾಗದಲ್ಲಿ ಪುಷ್ಪಾವರಣದ ವಿನ್ಯಾಸದ ಅವರಣದಲ್ಲಿ ಹೂವಿನ ವಿನ್ಯಾಸಗಳು ಪ್ರತಿಬಿಂಬಿದ ಬಗೆಯಲ್ಲಿ ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಸಹ ಅವೇ ಬಗೆಯ ವಿನ್ಯಾಸಗಳುಹೃದಯ ವಿನ್ಯಾಸವನ್ನು ಹೋಲುವಂತಹ ಪರ್ಣಗಳ ಪ್ರತಿಬಿಂಬ ರಚನೆಗಳು ಅಲಂಕೃತಗೊಂಡಿವೆ. ಹೂಜಿಯ ಬಾಯಿಯಲ್ಲಿ ಪರ್ಣಗಳ ವಿನ್ಯಾಸಗಳು, ಅಡಿಪೀಠದಲ್ಲಿ ತಲೆಕೆಳಗಾಗಿರುವ ಹೂವಿನ ವಿನ್ಯಾಸಗಳು ರಚನೆಗೊಂಡಿವೆ. ಬೆಳ್ಳಿಉ ಕಾಗದಗಳಿಂದ ರಚಿಸಲ್ಪಟ್ಟ ಈ ಹೂಜಿಯು ದಟ್ಟ ಛಾಯೆಯ ನೆಲೆಯಲ್ಲಿ ರಚನೆಗೊಂಡಿದ್ದು ಸೂಕ್ಷ್ಮ ಕುಸುರಿ ಗೌಣವಾಗಿವೆ. ಆದರೂ ಸಹ ಚಾರಿತ್ರಿಕ ಮಹತ್ವ ಈ ಹೂಜಿಗೆ ದಕ್ಕಿದೆ.

ಉಪಸಂಹಾರ

ಪ್ರಸ್ತುತ ಹೂಜಿಗಳ ಅಧ್ಯಾಯದಲ್ಲಿ ಏಳು ಬಗೆಯ ಹೂಜಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರ೧,೩ ಮತ್ತು ೪ರಲ್ಲಿ ಕಂಡುಬರುವ ಹೂಜಿಗಳ ವಿನ್ಯಾಸಗಳಲ್ಲಿ ಸೂಕ್ಷ್ಮ ಕುಸುರಿಯ ಒಲವು ವ್ಯಕ್ತವಾಗುತ್ತಿದೆ. ಚಿತ್ರ ೧ ಮತ್ತು ೪ರಲ್ಲಿ ಕಂಡುಬರುವ ಹೂಜಿಗಳ ಆಕಾರದಲ್ಲಿ ಸಾಮ್ಯತೆ ಇದ್ದು ವಿನ್ಯಾಸಗಳಲ್ಲಿ ವಿಭಿನ್ನತೆಯನ್ನು ಹೊಂದಿವೆ. ಚಿತ್ರ ೧ರಲ್ಲಿ ಕಂಡುಬರುವ ಹೂಜಿಯಲ್ಲಿ ಬಳ್ಳಿಯ ಸುರುಳಿ ಪ್ರಧಾನವಾಗಿದ್ದರೆ ಚಿತ್ರ ೪ರಲ್ಲಿ ಕಂಡುಬರುವ ಹೂಜಿಯಲ್ಲಿ ಹೂವುಗಳ ಮತ್ತು ಪರ್ಣಗಳ ವಿನ್ಯಾಸಗಳು ಪ್ರಧಾನವಾಗಿವೆ. ಚಿತ್ರ ೩ರಲ್ಲಿ ಕಂಡುಬರುವ ಹೂಜಿಯು ಚಿತ್ರ ೨ಜ/೨ಕರಲ್ಲಿ ಕಂಡುಬರುವ ಹಕ್ಕಾಗಳ ವಿನ್ಯಾಸವನ್ನು ಭಾಗಶಃ ಹೋಲುತ್ತವೆ. ಚಿತ್ರ೨,೫,೬ಮತ್ತು೭ರಲ್ಲಿ ಕಂಡುಬರುವ ವಿನ್ಯಾಸಗಳಲ್ಲಿ ಚಿತ್ರ ೧ರಲ್ಲಿ ಕಂಡುಬರುವ ಬಳಕುವ ಲಾವಣ್ಯದ ಒಲವು

ಗೌಣವಾಗಿದ್ದರೂ ಚಾರಿತ್ರಿಕವಾಗಿ ಮಹತ್ವ ಪಡೆದಿವೆ. ಚಿತ್ರ ೧ರಲ್ಲಿ ವಿಶೇಷವಾಗಿ ಬೆಳ್ಳಿ ಮತ್ತು ಬಂಗಾರದ ಹುದುಗಿಸುವಿಕೆಯನ್ನು ಒಳಗೊಂಡಿದ್ದರಿಂದ ಬಹಳ ವೈಭವೀಕರಣದ ನೆಲೆಯಲ್ಲಿ ಹೂಜಿ ದರ್ಶಕನಿಗೆ ಕಾಣಲ್ಪಡುತ್ತದೆ. ಅದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚರಿತ್ರೆಯ ಸಂದರ್ಭದಲ್ಲಿ ನಿಜಾಮರ ಕಲಾಪ್ರಜ್ಞೆಯನ್ನು ಒಂದೆಡೆ ಪ್ರಕಟಿಸಿದರೆ, ಇನ್ನೊಂದೆಡೆ ಅಂದಿನ ಕುಶಲಕರ್ಮಿಗಳ ಕಲಾರಚನೆಯ ಹಿಂದಿನ ಶ್ರದ್ಧೆಯ ಪ್ರತೀಕವಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

*****

೧೩. ಹೂದಾನಿಗಳು

ಅಲಂಕರಣವೇ ಪ್ರಧಾನ ಆಶಯವನ್ನು ಹೊಂದಿರುವ ವಸ್ತು ಹೂದಾನಿ. ಅರಮನೆ–ಮನೆಗಳ ಅಲಂಕರಣದಲ್ಲಿ ಹೂಗಳ ಮತ್ತು ಹೂದಾನಿಗಳ ಪಾತ್ರ ಅತೀ ಮಹತ್ವದ್ದು. ಹೂಗಳು ವಿಭಿನ್ನ ಬಗೆಯ ಅಲಂಕಾರಿಕ ಅನುಭವವನ್ನು ನೀಡುವುದಲ್ಲದೇ ಮನೆಯ ಪರಿಸರದಲ್ಲಿ ನೆಮ್ಮದಿ, ಸಂತೋಷ ನೀಡುವುದರ ಜೊತೆಗೆ ಪ್ರತಿಷ್ಠೆಯ ಸಂಕೇತವೂ ಆಗಿದೆ. ಹೂವುಗಳನ್ನು ಸುಂದರವಾಗಿ ಸಂಯೋಜಿಸಿ ಇಡಲು ಪಾತ್ರೆಯಂತಹ ವಸ್ತುವಿನ ಅಗತ್ಯತೆ ಕಂಡುಬಂದಾಗ ಕುಶಲಕರ್ಮಿಯ ಮೂಸೆಯಲ್ಲಿ ಸೃಷ್ಟಿಯಾಗಿದ್ದು ಹೂದಾನಿ. ಸಂಗ್ರಹಿಸುವರ ಸ್ಥಾನಮಾನಕ್ಕೆ ತಕ್ಕಂತೆ ಹೂದಾನಿಗೊಂದಿಷ್ಟು ಅಲಂಕರಣ ಮಾಡುವ ಪರಂಪರೆ ಡೆಕ್ಕನ್ ಪರಿಸರದಲ್ಲಿ ಕಾಣಿಸಿಕೊಂಡಿತು. ಅದು ವಿಶೇಷವಾಗಿ ಬಿದ್ರಿಕಲೆಗಳಲ್ಲಿ ಸಸ್ಯಗಳಾಧಾರಿತ ವಿನ್ಯಾಸಗಳ ಮುಖೇನವಾಗಿ ರಾಜ ಪೋಷಣೆಯ ಅಧೀನದಲ್ಲಿ ಬೆಳೆಯಿತು. ಹೀಗಾಗಿ ಬಿದ್ರಿಕಲೆಗಳಲ್ಲಿ ಹೂಜಿಗಳಂತೆ ಹೂದಾನಿಗಳೂ ಸಹ ಅತ್ಯಂತ ವೈಭವೀಕರಣ ಅಲಂಕಾರಿಕ ಒಲವಿನಲ್ಲಿ ಪ್ರಕಟವಾದವು. ಇಂತಹ ಹೂದಾನಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಹೂದಾನಿ (೧೯ನೆಯ ಶತಮಾನದ ಅಂತ್ಯ) ಜರ್‌ನಿಶಾನ ಮತ್ತು ತರ್ಕಶಿ ತಂತ್ರ

ಈ ಹೂದಾನಿ ಈ ಹೂದಾನಿಯ ಆಕಾರವು ಕೆಳಭಾಗದ ಉದರದಂತೆ ರಚನೆಗೊಮಡು ಮೇಲ್ಭಾಗದಲ್ಲಿ ಓರೆಯಾಗಿ ಒಳಭಾಗದಲ್ಲಿ ನೀಳಾಕಾರವನ್ನು ಹೊಂದಿದೆ. ತ್ರಿಕೋನಾಕಾರದ ಆವರಣದಲ್ಲಿ ಪ್ರಧಾನ ಹೂವಿನ ಆಕೃತಿ ಪರ್ಣ ಮತ್ತು ದೇಟುಗಳ ಸಹಿತ ಸುಕುಮಾರತೆಯ ನೆಲೆಯಲ್ಲಿ ರಚನೆಗೊಂಡಿದೆ. ಮೇಲ್ಭಾಗಕ್ಕೆ ಹೋದಂತೆಲ್ಲ ಹೂವಿನ ಮೊಗ್ಗು ಮತ್ತು ಪರ್ಣಗಳು ಲಾಲಿತ್ಯಪೂರ್ಣವಾಗಿ ರಚನೆಗೊಂಡಿವೆ. ಕಂಠದಲ್ಲಿ ಎರಡು ಪಟ್ಟಿಕೆಗಳ ವಿನ್ಯಾಸದ ಮಧ್ಯೆ ಹೂವಿನಾಕೃತಿಯೊಂದು ಅಲಂಕೃತಗೊಂಡಿದೆ. ಕೆಳಭಾಗದಲ್ಲಿ ಮುಸ್ಲಿಂ ವಾಸ್ತು ಶಿಲ್ಪದಲ್ಲಿಕಂಡುಬರುವಂತಹ ರೇಖಾತ್ಮಕ ಪರ್ಣಗಳಂತಹ ವಿನ್ಯಾಸಗಳು ಮೇಲ್ಮುಖವಾಗಿ ಸಂಯೋಜಿಸಲ್ಪಟ್ಟಿವೆ. ದಟ್ಟ ವಿನ್ಯಾಸದ ನೆಲೆಯಿಂದ ರಚನೆಗೊಂಡ ಈ ಹೂದಾನಿ ಸೂಕ್ಷ್ಮ ಕುಸುರಿಯ ಒಲವನ್ನು ಹೊಂದಿಲ್ಲವೆಂಬುದು ದಿಟ.

೨. **ಹೂದಾನಿ** (೧೯ನೆಯ ಶತಮಾನದ ಅಂತ್ಯ) ಜರ್‌ನಿಶಾನ ಮತ್ತು ಆಫ್ತಾಬಿ ತಂತ್ರ

ಈ ಹೂದಾನಿಯ ತಳವು ವರ್ತುಲಾಕಾರದ ಉದರವನ್ನು ಹೊಂದಿದ್ದು ಕಂಠದ ಮೇಲ್ಭಾಗದಲ್ಲಿ ನಳಿಕೆಯಂತಹ ನೀಳವಾದ ರಚನೆಯನ್ನು ಹೊಂದಿದೆ. ಉದರ ಭಾಗದಲ್ಲಿ ಮೂರ್ನಾಲ್ಕು ಬಗೆಯ ವಿನ್ಯಾಸಗಳು ಹೂವಿನ ವಿನ್ಯಾಸಗಳು ಪರ್ಣ ಹಾಗೂ ಬಳ್ಳಿಗಳ ಸಮೇತವಾಗಿ ಸುಕುಮಾರತೆಯಿಂದ ರಚಿಸಲ್ಪಟ್ಟಿವೆ. ಸುರುಳಿಯಂತೆ ಆಕರ್ಷಕವಾಗಿ ಹೂದಾನಿಯ ಉದರದ ತುಂಬೆಲ್ಲ ರಚನೆಗೊಂಡ ಇಲ್ಲಿನ ವಿನ್ಯಾಸಗಳು ಹೂಜಿಯ ಅಲಂಕಾರವನ್ನು ವೈಭವೀಕರಿಸಿವೆ. ಕಂಠದ ಕೆಳ ಭಾಗದಲ್ಲಿ ಹೂವಿನ ವಿನ್ಯಾಸ ಮೂಡಿದೆ. ಮೇಲ್ಭಾಗದಲ್ಲಿ ಪರ್ಣಗಳ ವಿನ್ಯಾಸಗಳು ರಚನೆಗೊಂಡು ನಳಿಕೆಯನ್ನು ಪುಷ್ಪದ ಬಗೆಯಲ್ಲಿ ಎತ್ತಿ ಹಿಡಿದಿವೆ. ನಳಿಕೆಯಲ್ಲಿ ಉದರದಲ್ಲಿ ಮೂಡಿದಂತಹ ರಚನೆಗಳು ಪುನರಾವರ್ತಿನೆಗೊಂಡಿವೆ. ಅಡಿಪೀಠದಲ್ಲಿ ಹೂವು ಮತ್ತು ತ್ರದಳ ಪರ್ಣಗಳ ವಿನ್ಯಾಸಗಳು ಸುಕುಮಾರತೆಯಿಂದ ರಚನೆಗೊಂಡಿವೆ. ಒಟ್ಟಿನಲ್ಲಿ ಅತ್ಯಂತ ಅಲಂಕಾರಿಕ ನೆಲೆಯಲ್ಲಿ ರಚನೆಗೊಂಡ ಈ ಹೂದಾನಿ ಕುಶಲಕರ್ಮಿಯ ಕುಸುರಿಯ ನೈಪುಣ್ಯತೆಯ ಪ್ರತೀಕವಾಗಿದೆ.

೩. **ಹೂದಾನಿ** (೧೯ನೆಯ ಶತಮಾನದ ಅಂತ್ಯ) ಜರ್‌ನಿಶಾನ ಮತ್ತು ಆಫ್ತಾಬಿ ತಂತ್ರ

ಈ ಹೂದಾನಿಯಲ್ಲಿ ಓರಲಾಗಿರುವ ವಿನ್ಯಾಸಯುಕ್ತ ಪಟ್ಟಿಕೆಗಳಲ್ಲಿ ಮಧ್ಯೆ ಹೂಬಳ್ಳಿಗಳ ರಚನೆ ಪ್ರಮುಖವಾದುದು. ಬಲಭಾಗದಲ್ಲಿ ಹೂಬಳ್ಳಿಗಳ ವಿನ್ಯಾಸಗಳು ದಟ್ಟವಾಗಿ ಮೂಡಿದ್ದು ಎಡಭಾಗದಲ್ಲಿ ಅವು ಕ್ರಮೇಣ ಚಿಕ್ಕ ರೂಪಗಳಾಗಿ ಪಟ್ಟಿಕೆಯ ಮಧ್ಯೆ ಗೌಣವಾಗುತ್ತವೆ. ಮೇಲ್ಭಾಗದಲ್ಲಿ ಇಂತಹ ಪಟ್ಟಿಕೆಗಳು ಹೂದಾನಿಯನ್ನು ಸುತ್ತುವರೆದು ಅಲಂಕರಿಸಿದ್ದು ಅವುಗಳ ಮಧ್ಯೆ ಹೂ ಬಳ್ಳಿಗಳ ವಿನ್ಯಾಸಗಳು ಸುರುಳಿಯಾಕಾರದಲ್ಲಿ ರಚನೆಗೊಂಡಿವೆ. ಕಂಠದ ಮೇಲ್ಭಾಗದಲ್ಲಿ ಉದರದ ಪಟಿಕೆಗಳಂತಹ ರಚನೆಗಳ ಮಧ್ಯೆ ಹೂವಿನ ಸುರುಳಿಗಳು ಅಲಂಕರಣಗೊಂಡಿವೆ. ಅಡಿಪೀಠದಲ್ಲಿ ಪರ್ಣಗಳ ವಿನ್ಯಾಸಗಳು ಲಂಬವಾಗಿ ರಚನೆಯಗಿದ್ದು ಹೂದಾನಿಯ ಅಲಂಕಾರವನ್ನು ಇಮ್ಮಡಿಗೊಳಿಸಿವೆ.

೪. **ಹೂದಾನಿ** (೧೯ನೆಯ ಶತಮಾನದ ಅಂತ್ಯ) ಜರ್‌ನಿಶಾನ ಮತ್ತು ಆಫ್ತಾಬಿ ತಂತ್ರ

ಈ ಹೂದಾನಿಯು ಕುಂಬಳಕಾಯಿಯ ಆಕಾರದ ಪ್ರೇರಣೆಯನ್ನು ಹೊಂದಿದ್ದು ಉಬ್ಬು ಪಟ್ಟಿಕೆಗಳನ್ನು ಉದರದ ಮೇಲೆ ಹೊಂದಿದೆ. ಪ್ರತೀ ಪಟ್ಟಿಕೆಯಲ್ಲೂ ಹೂವಿನ್ ಮತ್ತು ಪರ್ಣಗಳ ವಿನ್ಯಾಸಗಳು ಒಂದರ ಕೆಳಗೆ ಒಂದರಂತೆ ರಚನೆಗೊಂಡಿವೆ. ಕಂಠ ಭಾಗದಲ್ಲಿ ಹೂವಿನ ಸುರುಳಿಯ ಪಟ್ಟಿಕೆ, ಅದರ ಮೇಲ್ಭಾಗದಲ್ಲಿ ಪರ್ಣಗಳು ಪರಸ್ಪರ ತದ್ವರುದ್ಧವಾಗ ರಚಿಸಲ್ಪಟ್ಟಿವೆ. ನಳಿಕೆಯಲ್ಲಿ ಉದರದ ವಿನ್ಯಾಸಗಳೇ ಪಟ್ಟಿಕೆಯೊಂದರಲ್ಲಿ ಪುನರಾವರ್ತನೆಗೊಂಡಿವೆ. ಮೇಲ್ಭಾಗದ ಕಂಠದಲ್ಲಿ ಅಂಡಾಕಾರದ ಆಕೃತಿಯಲ್ಲಿ ಹೂವಿನ ವಿನ್ಯಾಸ ಅಲಂಕೃತಗೊಂಡಿದೆ. ಅಡಿಪೀಠದಲ್ಲಿ ಕಂಠದಲ್ಲಿನಪರ್ಣಗಳಂತಹ ವಿನ್ಯಾಸಗಳು ತಲೆಕೆಳಗಾಗಿ ಅಲಂಕೃತಗೊಂಡಿವೆ. ವಿನ್ಯಾಸಗಳಲ್ಲಿ

ಪ್ರಬುದ್ಧತೆಯಿಂದ ಮೂಡಿರುವುದರಿಂದ ಹಾಗೂ ಅಲಂಕಾರದಲ್ಲಿ ವಿಶೇಷ ಒಲವನ್ನು ಹೊಂದಿರುವ ಕಾರಣವಾಗಿ ಈ ಹೂಜಿಯ ದರ್ಶಕನನ್ನು ಕ್ಷಣಮಾತ್ರದಲ್ಲಿ ಆಕರ್ಷಿಸಬಹುದಾಗಿದೆ.

೫. ಹೂದಾನಿ (೧೯ನೆಯ ಶತಮಾನದ ಅಂತ್ಯ) ಆಫ್ತಾಬಿ ತಂತ್ರ

ಈ ಹೂದಾನಿ ಘೂಲಝುಡಿ ಶೈಲಿಯಲ್ಲಿ ರಚನೆಗೊಂಡ ಈ ಹೂದಾನಿಯು ವರ್ತುಲಾಕಾರದ ಉದರವನ್ನು ಹೊಂದಿದೆ. ಹೂಬಳ್ಳಿಗಳ ಸುರುಳಿಯಿಂದ ಉದರದಲ್ಲಿ ಬಾದಾಮಿ ಬೀಜದಂತಹ ಆವರಣದಲ್ಲಿ ಘೂಲಝುಡಿ ಶೈಲಿಯ ನಕ್ಷತ್ರಾಕಾರದ ವಿನ್ಯಾಸಗಳು ಒಡಮೂಡಿವೆ. ಈ ಪ್ರಧಾನ ವಿನ್ಯಾಸವನ್ನು ಪ್ರತ್ಯೇಕಿಸುವ ಹಾಗೆ ಘೂಲಝುಡಿ ಶೈಲಿ ವಿನ್ಯಾಸಗಳು ಪಟ್ಟಿಕೆಯಲ್ಲಿ ರೂಪುಗೊಮಡಿವೆ. ಮೇಲ್ಭಾಗದ ಪಟ್ಟಿಕೆ ಹೂಬಳ್ಳಿಗಳ ಸುರುಳಿಗಳಿಂದ ರಚಿಸಲ್ಪಟ್ಟಿದೆ. ಕಂಠ ಮತ್ತು ಅಡಿಪೀಠದಲ್ಲಿ ಪುಷ್ಪಾವರಣವನ್ನು ಬಿಂಬಿಸುವಂತಹ ವಿನ್ಯಾಸಗಳು ತಲೆಕೆಳಗಾಗಿ ರಚಿಸಲ್ಪಟ್ಟಿವೆ. ಕಂಠಕ್ಕೆ ಹಗ್ಗದಂತಹ ರಚನೆ ಹೊಂದಿದೆ. ಅತ್ಯಂತ ಸೂಕ್ಷ್ಮ ರಚನಾ ತಂತ್ರಗಾರಿಕೆಯನ್ನು ಹೊಂದಿದ ಹೂಜಿಯಲ್ಲಿ ಬಳ್ಳಿಗಳಲ್ಲಿ ಸುಕುಮಾರತೆ, ಹೂವಿನಂತಹ ರಚನೆಗಳಲ್ಲಿ ಲಾವಣ್ಯದ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ.

೬. ಹೂದಾನಿ (೧೯ನೆಯ ಶತಮಾನದ ಅಂತ್ಯ) ಆಫ್ತಾಬಿ ತಂತ್ರ

ಈ ಹೂದಾನಿಯ ಉದರಭಾಗದಲ್ಲಿ ಅಂಡಾಕಾರದ ಪಟ್ಟಿಕೆಯಲ್ಲಿ ಸೇವಂತಿಗೆ ಹೂವನ್ನು ಹೋಲುವ ಹೂವಿನ ಗಿಡದ ವಿನ್ಯಾಸ ರಚನೆಗೊಂಡಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಸುಕುಮಾರತೆಯ ನೆಲೆಯಲ್ಲಿ ರಚನೆಗೊಂಡ ಆಕೃತಿಯಲ್ಲಿ ಹೂವಿನ ವಿನ್ಯಾಸಗಳು ರಚನೆಗೊಂಡಿವೆ. ಮತ್ತೊಮದು ಪಟ್ಟಿಕೆಯಲ್ಲಿ ಚಿಕ್ಕ ಚಿಕ್ಕ ವಿನ್ಯಾಸಗಳನ್ನು ಹೊಂದಿದ ದಟ್ಟ ಪಟ್ಟಿಕೆ, ತದನಂತರದ ಪಟ್ಟಿಕೆಯಲ್ಲಿ ಕೆಳಪಟ್ಟಿಕೆಯಲ್ಲಿ ಮೂಡಿದ ವಿನ್ಯಾಸಗಳೇ ಪುನರಾವರ್ತನೆಗೊಂಡಿವೆ. ಕಂಠದಲ್ಲಿ ಉಬ್ಬಿದ ರಚನೆ ಮೇಲ್ಭಾಗದಲ್ಲಿ ಕೆಳಗಿನ ಎರಡೂ ಪಟ್ಟಿಕೆಯಲ್ಲಿ ಮೂಡಿದ ವಿನ್ಯಾಸಗಳೇ ಪುನರಾವರ್ತಿತಗೊಂಡಿವೆ. ಅಡಿಪೀಠದಲ್ಲಿ ಅರ್ಧವರ್ತುಲಾಕಾರದ ವಿನ್ಯಾಸಗಳು ರಚನೆಗೊಂಡಿವೆ. ಈ ಹೂಜಿಯ ರಚನಾ ತಂತ್ರಗಾರಿಕೆ ವಿಭಿನ್ನವಾಗಿದ್ದು ಬೇರೆಲ್ಲ ಬಿದ್ರಿ ಕಲೆಗಳಲ್ಲಿ ವಿನ್ಯಾಸಕ್ಕೆ ತಕ್ಕಂತೆ ಬೆಳ್ಳಿಯನ್ನು ಹುದುಗಿಸಿದರೆ, ಇಲ್ಲಿ ವಿನ್ಯಾಸವನ್ನು ಹೊರತುಪಡಿಸಿ ಹಿನ್ನೆಲೆಯ ಅವಕಾಶಕ್ಕೆ ಬೆಳ್ಳಿಯ ಕಾಗದಗಳನ್ನು ಹುದಗಿಸಿರುವ ತಂತ್ರವನ್ನು ಅನುಸರಿಸಲಾಗಿದೆ. ಹೀಗಾಗಿ ವಿನ್ಯಾಸಗಳೆಲ್ಲವೂ ಕಪ್ಪು ವರ್ಣದಿಂದ ಕಂಡುಬಂದರೂ ಹೂಜಿಯ ಅಲಂಕಾರಕ್ಕೆ ಯಾವುದೇ ಕುಂದು ಬರದೇ ಅಲಂಕಾರಿಕ ಒಲವು ಅತ್ಯಂತ ಪ್ರಬುದ್ಧ ನೆಲೆಯಿಂದ ಕೂಡಿದೆ.

೭. ಹೂದಾನಿ (೧೭ನೆಯ ಶತಮಾನ) ಜರ್‌ನಿಶಾನ ಮತ್ತು ಆಫ್ತಾಬಿ ತಂತ್ರ

ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿರುವ ಈ ಹೂದಾನಿಯು ಚಾರಿತ್ರಿಕವಾಗಿ ಮಹತ್ವವುಳ್ಳದ್ದು. (ಕೆಳಗಿನಿಂದ) ಹನ್ನೊಂದು ಪಟ್ಟಿಕೆಗಳಲ್ಲಿ ಮೂರ್‍ನಾಲ್ಕು

ಪಟ್ಟಿಕೆಗಳನ್ನು ಹೊರತುಪಡಿಸಿದರೆ ಇನ್ನುಳಿದ ಪಟ್ಟಿಕೆಗಳಲ್ಲಿ ವಿನ್ಯಾಸಗಳು ಪುನರವರ್ತನೆಯನ್ನು ಹೊಂದಿರುವುದು ದರ್ಶಕರ ಗಮನಕ್ಕೆ ಬಾರದೇ ಇರದು. ಪ್ರಧಾನವಾಗಿರುವಉದರದ ವಿನ್ಯಾಸದಲ್ಲಿ ಪುಷ್ಪಾವರಣದ ಆಕೃತಿಯೊಂದರಲ್ಲಿ ಎಂಟುದಳಗಳ ಹೂವಿನ ವಿನ್ಯಾಸಗಳು ಏಕಪ್ರಕಾರವಾಗಿ ಎಲ್ಲ ಖಾನೆಗಳಲ್ಲಿ ರಚನೆಗೊಂಡಿವೆ. ಪ್ರತಿಯೊಂದು ಖಾನೆಗೆ ಬಂಧನವನ್ನು ಏರ್ಪಡಿಸಿದಂತೆ ನಾಲ್ಕು ದಳಗಳ ಹೂವಿನ ವಿನ್ಯಾಸವು ರಚನೆಗೊಂಡಿದೆ. ಮೇಲಿನ ಪಟ್ಟಿಕೆಯಲ್ಲಿ ಶಂಖುವಿನ ಆಕೃತಿಯ ವಿನ್ಯಾಸಗಳು ಪಟ್ಟಿಕೆಯಲ್ಲಿ ಒಡಮೂಡಿವೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಹುವಿನ ಮತ್ತು ಪರ್ಣಗಳ ವಿನ್ಯಾಸಗಳು ಅಲಂಕೃತಗೊಂಡಿವೆ. ಉದರ ವಿನ್ಯಾಸಗಳೇ ಮೆಲ್ಭಾಗದಲ್ಲಿ ಪುನರಪಿ ಅಲಂಕೃತಗೊಂಡಿವೆ. ಒಟ್ಟಿನಲ್ಲಿ ಹೂದಾನಿಯ ನಕ್ಷೆಗಳಲ್ಲಿ ಸೂಕ್ಷ್ಮ ಕುಸುರಿ ಗೌಣವಾಗಿದ್ದರೂ, ಅಲಂಕಾರಿಕವಾಗಿ ಮತ್ತು ಚಾರಿತ್ರಿಕವಾಗಿ ಮಹತ್ವಪೂರ್ಣ ಕಲಾಕೃತಿ ಇದಾಗಿದೆ.

ಉಪಸಂಹಾರ

ಪ್ರಸ್ತುತ ಅಧ್ಯಾಯದಲ್ಲಿ ಏಳು ಹೂದಾನಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸೂಕ್ಷ್ಮ ಕುಸುರಿಯ ವಿನ್ಯಾಸದ ಒಲವನ್ನು ಚಿತ್ರ೨,೪,೫ ಮತ್ತು ೬ರಲ್ಲಿ ಕಂಡುಬರುವ ಹೂದಾನಿಗಳಲ್ಲಿ ಕಾಣಬಹುದಾಗಿದೆ. ಚಿತ್ರ೨ ಮತ್ತು ೪ರಲ್ಲಿ ಕಂಡುಬರುವ ಹೂದಾನಿಗಳು ಹಾಗೂ ಚಿತ್ರ ೫ ಮತ್ತು ೬ರಲ್ಲಿ ಕಂಡುಬರುವ ಹೂದಾನಿಗಳು ಆಕಾರದಲ್ಲಿ ಒಂದನ್ನೊಂದು ಹೋಲುತ್ತಿದ್ದರೂ ವಿನ್ಯಾಸದ ನೆಲೆಯಲ್ಲಿ ವಿಭಿನ್ನವಾಗಿವೆ. ಚಿತ್ರ ೭ರಲ್ಲಿ ಕಂಡುಬರುವ ಹೂದಾನಿಯು ಗಮನಾರ್ಹವೆನಿಸುವ ಅಲಂಕರಣವನ್ನು ಹೊಂದಿರದಿದ್ದರೂ ಚಾರಿತ್ರಿಕವಾಗಿ ಮಹತ್ವದ್ದು. ಇಲ್ಲಿನ ಹೂದಾನಿಗಳಲ್ಲಿ ಹೂವಿನ ಸುಳುಹುಗಳು, ಹೂವಿನ ತರಾವರಿ ಆಕೃತಿಗಳು ಅಲಂಕಾರಿಕ ಒಲವಿನ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು, ಕುಶಲಕರ್ಮಿಯ ಕಾಯಕ ಶ್ರದ್ಧೆ ಇಲ್ಲಿ ಬಹು ಪ್ರಮುಖವಾದುದು.

ಪ್ರಾಚೀನ ಬಿದ್ರಿಕಲೆಗಳ ಅಧ್ಯಾಯದ ಉಪಸಂಹಾರ

ಪ್ರಸ್ತುತ ದೇಶ–ವಿದೇಶಗಳ ವಸ್ತುಸಂಗ್ರಹಾಲಯಗಳಲ್ಲಿ ಮತ್ತು ಕುಶಲಕರ್ಮಿಗಳ ವೈಯಕ್ತಿಕ ಸಂಗ್ರಹದಲ್ಲಿರುವ ಹದಿಮೂರು ಬಗೆಯ ಬಿದ್ರಿ ಕಲೆಗಳನ್ನು ಈ ಅಧ್ಯಾಯದಲ್ಲಿ (೧.೧) ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಹುತೇಕ ಬಿದ್ರಿ ಕಲೆಗಳಲ್ಲಿ ಸಸ್ಯಗಳ ಅಲಂಕಾರಿಕ ವಿನ್ಯಾಸಗಳು ವೈಭವೀಕರಣದ ನೆಲೆಯಲ್ಲಿ ರಚನೆಗೊಂಡಿದ್ದು ಅಧ್ಯಯನ ಕಂಡುಬಂದಿದೆ. ಕೆಲವು ಬಿದ್ರಿ ಕಲೆಗಳಲ್ಲಿ ಜಲಚರಗಳ, ಪ್ರಾಣಿ–ಪಕ್ಷಿಗಳ ವಿನ್ಯಾಸಗಳು ಸಹ ಮೂಡಿಬಂದಿವೆ. ಇನ್ನು ಕೆಲವು ಬಿದ್ರಿ ಕಲೆಗಳಲ್ಲಿ ಪ್ರಾಚೀನ ಕಥಾನಕಗಳನ್ನು ದೃಶ್ಯಾತ್ಮಕವಾಗಿ ಬಿಂಬಿಸಿರುವ ವಸ್ತುಗಳು ಸಹ ಕಂಡುಬಂದಿವೆ. ಜೊತೆಗೆ ವಾಸ್ತು ವಿನ್ಯಾಸಗಳು ಬಿದ್ರಿ ಕಲೆಗಳ ಅಲಂಕಾರದ ಭಾಗವಾಗಿ ಒಡಮೂಡಿವೆ. ಹೀಗೆ ತರಾವರಿ ವಿನ್ಯಾಸಗಳು ಬಿದ್ರಿ ಕಲೆಗಳನ್ನು ವೈಭವೀಕರಿಸಿವೆ ಎಂದರೆ ಅತಿಶಯೋಕ್ತಿಯೇನಲ್ಲ.

*****

೧.೨. ಆಧುನಿಕ ಬಿದ್ರಿ ಕಲೆಗಳು

ಪ್ರಸ್ತುತ ದೇಶ–ವಿದೇಶಗಳ ವಸ್ತುಸಂಗ್ರಹಾಲಯಗಳಲ್ಲಿ ಮತ್ತು ಕುಶಲಕರ್ಮಿಗಳ ವೈಯಕ್ತಿಕ ಸಂಗ್ರಹದಲ್ಲಿರುವ ಪ್ರಾಚೀನ ಬಿದ್ರಿಕಲೆಗಳನ್ನು ಹಿಂದಿನ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಕಳೆದ ಐದಾರು ಶತಮಾನಗಳಿಂದ ಬೆಳದು ಬಂದ ಪಾರಂಪರಿಕ ಕರಕುಶಲ ೨೧ನೆಯ ಶತಮಾನದಲ್ಲಿ ತನ್ನ ಅಂತಃಸ್ವರೂಪವನ್ನು ಹೇಗೆ ಬದಲಾಯಿಸಿಕೊಂಡಿದೆ ಎಂಬುದಕ್ಕೆ ಉದಾಹರಣೆಯಾಗಿ ಇಲ್ಲಿ ಆಯ್ದ ಆಧುನಿಕ ಸಂದರ್ಭದ ಬಿದ್ರಿಕಲೆಗಳನ್ನು ಅಧ್ಯಯನ ಮಾಡಲಾಗುವುದು. ಪಾರಂಪರಿಕವಾದ ಕೆಲವಾರು ತಂತ್ರಗಳನ್ನು ಮೈಗೂಡಿಸಿಕೊಂಡಿರುವ ಇಂದಿನ ಬಿದ್ರಿಕಲೆಯ ಕುಶಲಕರ್ಮಿಗಳು ಜನಸಾಮಾನ್ಯರ ಆಸಕ್ತಿಗೆ ಅನುಗುಣವಾಗಿ ತಮ್ಮ ಅಭವ್ಯಕ್ತಿಯನ್ನು ಹೇಗೆ ಪರಿವರ್ತಿಸಿಕೊಂಡಿದ್ದಾರೆ ಎಂಬುದಕ್ಕೆ ಇಲ್ಲಿನ ಬಿದ್ರಿಕಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗಷ್ಟೇ ನಮ್ಮ ತಿಳುವಳಿಕೆಗೆ ನಿಲುಕಬಹುದು. ಅಂತಹ ಬಿದ್ರಿಕಲೆಗಳನ್ನು ಮುಖ್ಯವಾಗಿ ಐದು ಗುಂಪುಗಳನ್ನಾಗಿ ವಿಂಗಡಿಸಿ ಅಧ್ಯಯನ ಮಾಡುವ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಳ್ಳಲಾಗಿದೆ.

೫.೨

೧. ಅಲಂಕಾರಿಕ ವಸ್ತುಗಳ ಸಮೂಹ

ಅ. ಹೂದಾನಿಗಳು

ಬ. ಪ್ರಾಣಿ, ಪಕ್ಷಿ ವಸ್ತುಗಳು

೨. ಕಛೇರಿ ವಸ್ತುಗಳು

ಅ. ಕಾಗದ ಕತ್ತರಿಸುವ ಚಾಕು

ಬ. ಕಾಗದ ಹಿಡಿ (ಕ್ಲಿಪ್)

ಕ. ಕಾಗದದ ಮೇಲಿಡುವ ಭಾರದ ವಸ್ತು (ಪೇಪರ್ ವೇಟ್)

ಡ. ಲೇಖನಿ ಪೆಟ್ಟಿಗೆ (ಪೆನ್ ಬಾಕ್ಸ್) **೩. ಗೃಹೋಪಯೋಗಿ ವಸ್ತುಗಳು**

ಅ. ಆಭರಣ ಪೆಟ್ಟಿಗೆ

ಬ. ಕುಂಕುಮ ಭರಣಿಗಳು

ಕ. ಉಮರ್ ಖಯಾಮ್

ಡ. ಬಟ್ಟಲುಗಳು

ಇ. ಮೇಣಬತ್ತಿ ನಿಲುವು

ಈ. ಪೂಜಾ ಸಾಮಗ್ರಿ

೪. ಪುರುಷರು ಬಳಸುವ ವಸ್ತುಗಳು

ಅ. ಅಂಗಿಯ ಗುಂಡಿಗಳು

ಬ. ಸೊಂಟ ಪಟ್ಟಿಗಳು (ಬೆಲ್ಟ್‌ಗಳು)

ಕ. ಕೀ ನಿಲುವು / ಕೀ ಹಿಡಿಗಳು

ಡ. ಸಿಗರೇಟ್ ಬೂದಿಯ ಪೆಟ್ಟಿಗೆ

೫. ಕ್ರೀಡಾ ಸಾಮಗ್ರಿಗಳು

ಅ. ಚದುರಂಗ ಸಾಮಗ್ರಿ

ಹೀಗೆ ಆಧುನಿಕ ಬಿದ್ರಿ ಕಲೆಗಳನ್ನು ವಿವರವಾಗಿ ವರ್ಗಿಸಿಕರಿಸಿಕೊಂಡು ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

೧. ಅಲಂಕಾರಿಕ ವಸ್ತುಗಳ ಸಮೂಹ

ಅ. ಹೂದಾನಿಗಳು

ಮನೆಯೊಂದರ ಅಲಂಕರಣಕ್ಕೆ ಅಥವಾ ಕೌಟುಂಬಿಕ ಪ್ರತಿಷ್ಠೆಯನ್ನು ಪ್ರದರ್ಶಿಸುವುದಕ್ಕಾಗಿ ಅಲಂಕರಣದ ವಸ್ತುಗಳು ಬಹು ಪ್ರಾಚೀನ ಕಾಲದಿಂದಲೂ ಮನೆ–ಅರಮನೆಗಳಲ್ಲಿ ಪ್ರಾತಿನಿಧ್ಯ ಪಡೆದಿದ್ದವು. ಬೆಳ್ಳಿ ಅಥವಾ ಚಿನ್ನದ ಕುಸುರಿಯುಳ್ಳ ವಸ್ತುಗಳು ಕೊಳ್ಳುವರ ಸಾಮರ್ಥ್ಯದ ಮೇಲೆ ಉತ್ಪಾದನೆಯಾಗುತ್ತಿದ್ದ ಕಾಲದಲ್ಲಿ, ಬಿದ್ರಿ ವಸ್ತುಗಳು ಬಹುತೇಕವಾಗಿ ರಾಜಪರಂಪರೆಗೆ ಸೀಮಿತವಾಗಿದ್ದವು ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಬಿದ್ರಿ ವಸ್ತುಗಳು ಬಹುತೇಕವಾಗಿ ಇಸ್ಲಾಮಿಕ್ ಪರಂಪರೆಯ ಜಾಡಿನಲ್ಲಿ ಬೆಳೆದುಬಂದಿರುವುದರಿಂದ ಅವುಗಳಲ್ಲಿ ಇಸ್ಲಾಮಿಕ್ ಆಶಯಗಳಾದ ಅಲಂಕಾರಿಕ ಹೂಬಳ್ಳಿಗಳು, ನಕ್ಷತ್ರಗಳು, ಪುಷ್ಪ ಕಮಾನುಗಳೇ ಅಧಿಕ ಸಂಖ್ಯೆಯಲ್ಲಿ ಒಡಮೂಡಿದವು. ಇಂತಹ ವಿಶಿಷ್ಟ ಕಲಾಪರಂಪರೆ ತನ್ನ ಐದಾರು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದು, ಅದು ಅಂದಂದಿನವರ ಅಗತ್ಯಕ್ಕೆ ತಕ್ಕ ಹಾಗೆ ತನ್ನ ಅಂತಃ ಸ್ವರೂಪವನ್ನು ಪಲ್ಲಟಗೊಳಿಸುತ್ತಲೇ ಬಂದಿದೆಯಾದರೂ, ಪಾರಂಪರಿಕ ರಚನಾ ತಂತ್ರಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಉಳಿಸಿಕೊಂಡಿದೆ. ಎಂಬುದಕ್ಕೆ ಇಲ್ಲಿನ ಹೂದಾನಿಗಳೇ ಉತ್ತಮ ಉದಾಹರಣೆಯಾಗಬಲ್ಲವು. ಇಲ್ಲಿರುವ ೧೨ ಹೂದಾನಿಗಳನ್ನು ಪ್ರಕೀರ್ಣಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಚಿತ್ರ ೧ರಲ್ಲಿ ಕಂಡುಬರುವ ಹೂದಾನಿಯು ಪ್ರಾಚೀನ ಹೂದಾನಿಗಳಲ್ಲಿ ಕಂಡುಬಾರದ, ಆದರೆ ಇತ್ತೀಚಿನ ಆಶಯದ ಆಕೃತಿಯನ್ನು ಹೊಂದಿದ ಹೂದಾನಿಯಾಗಿದೆ. ಬೀದರಿನ ಬಿದ್ರಿ ಕುಶಲಕರ್ಮಿಯಾದ ಅಬ್ದುಲ್ ಹಮೀದ್ ಅವರು ಸಿದ್ಧಪಡಿಸಿರುವ ಈ ಹೂದಾನಿಯು ಅಫ್ತಾಬಿ ತಂತ್ರದಲ್ಲಿ ಒಡಮೂಡಿದೆ. ಹೂದಾನಿಯ ಬಾಯಿ ಹೂವಿನ ದಳಗಳಂತೆ ವಿನ್ಯಾಸಗೊಂಡು ಅರಳಿದ್ದುಕಂಠದಲ್ಲಿ ಇಸ್ಲಾಮಿಕ್ ಶೈಲಿಯ ರಚನೆಗಳಿವೆ. ಹೂಜಿಯ ಉದರ ಭಾಗದ ಪಟ್ಟಿಕೆಗಳಲ್ಲಿ ಪ್ರಧಾನವಾದ ಹೂವಿನಿಂದ ಹುಟ್ಟಲ್ಪಟ್ಟ ಬಳ್ಳಿಯ ರಚನೆ ಇದೆ. ಮಧ್ಯದ ಪಟ್ಟಿಕೆಯಲ್ಲಿ ಇಂಗ್ಲೀಷಿನ 'ಎ' ಆಕಾರದ ರಚನೆಗಳು ಸಿಂಗರಿಸಿಲ್ಪಟ್ಟಿವೆ. ಇದಕ್ಕಿಂತ ವಿಭಿನ್ನವಾದ ಆಕಾರವನ್ನು ಹೊಂದಿದ ಚಿತ್ರ ೨ರಲ್ಲಿ ಕಂಡುಬರುವ ಹೂದಾನಿಯು ಪಾರಂಪರಿಕ ನೆಲೆಯಲ್ಲಿ ರಚನೆಗೊಂಡಿದೆ. ತರ್ಕಶಿ ಮತ್ತು ಅಫ್ತಾಬಿ ತಂತ್ರಗಾರಿಕೆಯಲ್ಲಿ ರಚನೆಗೊಂಡ ಈ ಹೂದಾನಿಯ ಉದರ ಭಾಗದಲ್ಲಿ ಅಂಡಾಕಾರದ ಆಕೃತಿಯ ಒಳಾವರಣದಲ್ಲಿ ಫೂಲ್‌ಝುಡಿ ವಿನ್ಯಾಸಗಳಿವೆ. ಸುತ್ತಲೂ ಅಫ್ತಾಬಿ ತಂತ್ರಗಾರಿಕೆಯ

ಹೂಬಳ್ಳಿಗಳ ವಿನ್ಯಾಸಗಳು ಅಲಂಕರಣಗೊಂಡಿವೆ. ಇದೇ ಬಗೆಯ ವಿನ್ಯಾಸಗಳು ಕಂಠದಲ್ಲಿ ಮತ್ತು ಅಡಿಪೀಠದಲ್ಲಿ ಪುನರಾವರ್ತನೆಗೊಂಡಿವೆ.

ಚಿತ್ರ ೩ರಲ್ಲಿ ಕಂಡುಬರುವ ಹೂದಾನಿಯು ವರ್ತುಲಾಕಾರದ ರಚನೆಯನ್ನು ಹೊಂದಿದ್ದು, ಅಫ್ತಾಬಿ ಮತ್ತು ತರ್ಕಶಿ ತಂತ್ರದ ವಿನ್ಯಾಸಗಳನ್ನು ಹೊಂದಿದೆ. ಉದರಭಾಗದ ಪಟ್ಟಿಕೆಯಲ್ಲಿ ಪ್ರಧಾನವಾಗಿ ಹೂಗಳ ರಚನೆಯನ್ನು ಬಳಸಿಕೊಂಡಿರುವ ಬಳ್ಳಿಗಳು ಹೂದಾನಿಯನ್ನು ಸುತ್ತಲೂ ಅಲಂಕರಣಗೊಳಿಸಿವೆ. ಅಡಿಪೀಠದ ಕಂಠದಲ್ಲಿ ಮೇಲ್ಭಾಗದ ಕಂಠದಲ್ಲಿ ಇಸ್ಲಾಮಿಕ್ ವಾಸ್ತುಶಿಲ್ಪದ ಪಟ್ಟಿಕೆಗಳ ವಿನ್ಯಾಸಗಳು ಪರಸ್ಪರ ತದ್ವಿರುದ್ಧವಾಗಿ ರಚನೆಗೊಂಡಿವೆ.

ಚಿತ್ರ ೪ ಮತ್ತು ೫ರಲ್ಲಿ ಕಂಡುಬರುವ ಹೂದಾನಿಗಳು ಬೀದರಿನ ಕುಶಲಕರ್ಮಿ ಮೊಹಮ್ಮದ ಮೊಯಿಜುದ್ದೀನ್ ಸಿದ್ಧಪಡಿಸಿದ್ದು, ಆಕಾರದಲ್ಲಿ ಒಂದೇಬಗೆಯಾಗಿದ್ದರೂ ತಂತ್ರಗಳಲ್ಲಿ ಭಿನ್ನವಾಗಿವೆ. ಚಿತ್ರ ೪ರಲ್ಲಿ ಕಂಡುಬರುವ ಹೂದಾನಿಯು ಅಫ್ತಾಬಿ ತಂತ್ರದಲ್ಲಿ ವಿನ್ಯಾಸಗಳನ್ನು ಹೊಂದಿದೆ. ರೇಖಾತ್ಮಕ ಮತ್ತು ತಗಡಿನ ಹುದುಗಿಸುವಿಕೆಯನ್ನು ಹೊಂದಿರುವ ಈ ಹೂದಾನಿಯಲ್ಲಿ ಹೂವಿನ ವಿನ್ಯಾಸ ಪ್ರಧಾನವಾಗಿದ್ದು ಉದರ ಭಾಗದ ಪಟ್ಟಿಕೆಯಲ್ಲಿ ವರ್ತುಲಾಕರದ ಆವರಣದೊಳಗೆ ರಚನೆಗಳು ಅಲಂಕರಣಗೊಂಡಿವೆ. ಚಿತ್ರ೫ರಲ್ಲಿ ಕಂಡುಬರುವ ಹೂದಾನಿಯು ತರ್ಕಶಿ ಮತ್ತು ಜರ್ ನಿಶಾನ್ ತಂತ್ರವನ್ನು ಹೊಂದಿದ್ದು ಉದರ ಮತ್ತು ಕಂಠದ ನಳಿಕೆಯ ಭಾಗದಲ್ಲಿ ಅರ್ಧ ವರ್ತುಲಾಕಾರದ ತಗಡಿನ ವಿನ್ಯಾಸಗಳು ರಚನೆಗೊಂಡಿವೆ. ಕಂಠದಲ್ಲಿ ಎಂದಿನಂತೆ ಇಸ್ಲಾಮಿಕ್ ಶೈಲಿಯ ಪಟ್ಟಿಕೆಗಳು ಹೂದಾನಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ.

ಚಿತ್ರ ೬ರಲ್ಲಿ ಕಂಡುಬರುವ ಹೂದಾನಿಯು ಬೀದರಿನ ಕುಶಲಕರ್ಮಿ ಮೊಹಮ್ಮದ ಮೊಯಿಜುದ್ದೀನ್ ಸಿದ್ಧಪಡಿಸಿದ್ದು, ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ. ತರ್ಕಶಿ ತಂತ್ರದಲ್ಲಿ ರಚಿಸಲ್ಪಟ್ಟ ಈ ಹೂದಾನಿಯು ವಜ್ರಾಕೃತಿಯ ವಿನ್ಯಾಸಗಳನ್ನು ಉದರ ಮತ್ತು ಕಂಠದ ಮೇಲ್ಭಾಗದಲ್ಲಿ ಹೊಂದಿದೆ. ಪ್ರತಿಯೊಂದು ವಜ್ರಾಕೃತಿಯ ಪಾರ್ಶ್ವದಲ್ಲಿ ನಾಲ್ಕು ಖಾಲಿ ಖಾನೆಗಳಿದ್ದರೆ, ಇನ್ನೊಂದು ಆಕೃತಿಯಲ್ಲಿ ಲಂಬ ರೇಖೆಗಳು ರಚನೆಗೊಂಡಿವೆ. ಕಂಠದಲ್ಲಿ ಮತ್ತು ಅಡಿಪೀಠದಲ್ಲಿ ಎಂದಿನ ಇಸ್ಲಾಮಿಕ್ ಶೈಲಿಯ ರೇಖಾತ್ಮಕ ಪಟ್ಟಿಕೆಗಳು ಗೋಪುರದ ಬಗೆಯಲ್ಲಿ ಒಂದಕ್ಕೊಂದು ತಳಕುಗೊಂಡಿವೆ.

ಚಿತ್ರ ೭ರಲ್ಲಿ ಕಂಡುಬರುವ ಹೂದಾನಿಯು ಬೀದರಿನ ಕುಶಲಕರ್ಮಿ ಮೊಹಮ್ಮದ ಉಸ್ಮಾನ್ ಅವರು ರಚಿಸಿದ್ದು ತರ್ಕಶಿ ತಂತ್ರದಲ್ಲಿ, ಫೂಲಝುಡಿ ವಿನ್ಯಾಸಗಳನ್ನು ಹೊಂದಿದೆ. ಉಬ್ಬಾದ ಪಟ್ಟಿಕೆಗಳಲ್ಲಿ ಫೂಲಝುಡಿಯ ವಿನ್ಯಾಸಗಳು ಬಹು ಸೂಕ್ಷ್ಮವಾಗಿ ರಚನೆಗೊಳಿಸಲ್ಪಟ್ಟಿವೆ. ಕಂಠದಲ್ಲಿ ಎಂದಿನ ಹೂಬಳ್ಳಿಗಳ ಸುರುಳಿಗಳು ಒಂದು ಪಟ್ಟಿಕೆಯಲ್ಲಿ ರಚನೆಗೊಂಡಿವೆ.

ಚಿತ್ರ ೮ಮತ್ತು ೯ರಲ್ಲಿ ಕಂಡುಬರುವ ಹುದಾನಿಗಳು ಒಂದೇ ಆಕಾರವನ್ನು ಹೊಂದಿದು, ಇವೆರಡನ್ನು ಬೀದರಿನ ಕುಶಲಕರ್ಮಿ ಅಬ್ದುಲ್ ಖದೀರ್ ಅವರು ರಚಿಸಿದ್ದಾರೆ. ಚಿತ್ರ ೮ ತರ್ಕಶಿ ತಂತ್ರದಿಂದ ರಚಿಸಲ್ಪಟ್ಟಿದೆ. ಉದರದಲ್ಲಿ ರೇಖಾತ್ಮಕ ಪುಷ್ಪಾವರಣದಲ್ಲಿ ಬಿಂದುಗಳಿಂದ ಕೂಡಿದ ಹೂವಿನ ವಿನ್ಯಾಸ ಹೂದಾನಿಯ ಅಲಂಕಾರಿಕ ವೈಭವವನ್ನು ಇಮ್ಮಡಿಗೊಳಿಸಿದೆ. ಅರ್ಧಭಾಗದ ಮೇಲೆ ಪರ್ಣಗಳ ವಿನ್ಯಾಸಗಳಿಂದ ಕೂಡಿದ ಅಲಂಕಾರಿಕ ಶೈಲಿಯ ದೇಟು ರಚನೆಗೊಂಡಿದೆ. ಕಂಠದ ಮೇಲ್ಭಾಗದಲ್ಲಿ ಎಂದಿನಂತೆ ಇಸ್ಲಾಮಿಕ್ ಶೈಲಿಯ ರೇಖಾತ್ಮಕ ಪಟ್ಟಿಕೆಗಳು ರಚನೆಗೊಂಡಿವೆ. ಚಿತ್ರ ೯ರಲ್ಲಿ ಕಂಡುಬರುವ ಹೂದಾನಿಯು ತರ್ಕಶಿ ತಂತ್ರದ, ಘೂಲ್‌ಝುಡಿ ವಿನ್ಯಾಸವನ್ನು ನೀಳವಾದ ಪುಷ್ಪದಂತಹ ಆವರಣದಲ್ಲಿ ಹೊಂದಿದೆ. ಈ ವಿನ್ಯಾಸವು ಪ್ರಸ್ತುತ ಬಿದ್ರಿಕಲೆಯಲ್ಲಿ ಅತ್ಯಂತ ಪ್ರಚಲಿತವಿರುವ ವಿನ್ಯಾಸವಾಗಿದೆ.

ಚಿತ್ರ ೧೦,೧೧ ಮತ್ತು ೧೨ರಲ್ಲಿ ಕಂಡುಬರುವ ಹೂದಾನಿಗಳು ಪಾರಂಪರಿಕ ಶೈಲಿಯನ್ನು ಧಿಕ್ಕರಿಸಿ, ಆಧುನಿಕ ಮಜಲಿಗೆ ತಕ್ಕಂತೆ ರೂಪಾಂತರಗೊಂಡ ಕೃತಿಗಳಾಗಿವೆ. ತರ್ಕಶಿ ತಂತ್ರವನ್ನು ಮೈಗೂಡಿಸಿಕೊಂಡ ಇಲ್ಲಿನ ಹೂದಾನಿಗಳಲ್ಲಿ ಮೊದಲನೆಯದು ಡಾಲ್ಫಿನ್ ಆಕಾರವನ್ನು, ೧೧ರ ಹೂದಾನಿಯು ಲಾಟೀನಿನ ಗಾಜಿನ ಆಕಾರವನ್ನು ಹಾಗೂ ೧೨ರ ಹೂದಾನಿಯು ನವಿಲಿನ ಆಕಾರವನ್ನು ಹೊಂದಿವೆ. ಪಾರಂಪರಿಕ ವಿನ್ಯಾಸಗಳನ್ನು ದೂರವಿರಿಸಿಮ ಅಪ್ರಬುದ್ಧವಾದ ಅಥವಾ ವಾಣಿಜ್ಯೋದ್ದೇಶದ ಹಿನ್ನಲೆಯಲ್ಲಿ ರಚನೆಗೊಂಡ ಇಲ್ಲಿನ ವಿನ್ಯಾಸಗಳಲ್ಲಿ ನವಿಲು, ಹೂವಿನ ವಿನ್ಯಾಸಗಳು ರಚನೆಗೊಂಡಿವೆ.

ಟ. ಅಲಂಕಾರಿಕ ಪ್ರಾಣಿ, ಪಕ್ಷಿಗಳು

ಹೂದಾನಿಗಳಿಗೆ ಹೂಗಳನ್ನು ನಿತ್ಯ ಅಲಂಕರಿಸಿದರೆ, ಇಲ್ಲಿನ ವಸ್ತುಗಳು ಕೇವಲ ಅಲಂಕಾರಿಕ ಉದ್ದೇಶದ ನೆಲೆಯಲ್ಲಿ ರಚನೆಗೊಂಡಿವೆ. ಮನೆಯ ಡ್ರಾಯಿಂಗ್ ರೂಮಿನಲ್ಲಿ ಅಥವಾ ಕಛೇರಿಯ ಮೇಜಿನ ಮೇಲೆ ಅಲಂಕಾರಕ್ಕಾಗಿ ರರಚನಬೆಗೊಂಡು ಆನೆ ಮತ್ತು ಬಾತುಕೋಳಿಗಳು ಕೃತಿಗಳು ತರ್ಕಶಿ (೧,೩,೪) ತಂತ್ರವನ್ನು ಇನ್ನೊಂದು ಅಫ್ತಾಬಿ (೨) ತಂತ್ರವನ್ನು ಹೊಂದಿದೆ. ಘೂಲಝುಡಿ ವಿನ್ಯಾಸವನ್ನು ಒಳಗೊಂಡಿರುವ ಇಲ್ಲಿನ ಆನೆಗಳ ಮೇಲು ಹೊದಿಕೆಯಲ್ಲಿ ಅಲಂಕರಣದ ಆಶಯ ವ್ಯಕ್ತವಾಗಿದೆ. ಇದೇ ಬಗೆಯ ವಿನ್ಯಾಸ (೩) ಬಾತುಕೋಳಿಯ ಕೆಳಭಾಗದಲ್ಲಿ ಕಾಣಬಹುದಾಗಿದೆ. ಚಿತ್ರ ೨ರಲ್ಲಿ ಕಂಡು ಬರುವ ಬಾತುಕೋಳಿಯ ಕೆಳಭಾಗದಲ್ಲಿ ಅಫ್ತಾಬಿ ತಂತ್ರದ ರಚನೆಗೊಂಡ ಹೂವು ಮತ್ತು ಪರ್ಣಗಳ ವಿನ್ಯಾಸಗಳು ರಚನೆಗೊಂಡಿವೆ.

೨. ಕಛೇರಿ ವಸ್ತುಗಳು

ಪ್ರಾಚೀನ ಬಿದ್ರಿಕಲೆಯಲ್ಲಿ ಕಛೇರಿ ಉಪಯೋಗಕ್ಕಾಗಿ ಸಲಕರಣೆಗಳು ಇರಲಿಲ್ಲವೆಂಬುದು ದಿಟ. ಆದರೆ ಕಾಲಚಕ್ರ ಉರುಳಿದಂತೆಲ್ಲ ಪಾರಂಪರಿಕ ಬಿದ್ರಿ ಕಲೆಯ ಅಸ್ತಿತ್ವ

ಕ್ಷೀಣಿಸುತ್ತಿದ್ದಂತೆಬೀದರಿನ ಬಿದ್ರಿ ಕುಶಲಕರ್ಮಿಗಳು ಅನ್ಯ ಮಾರ್ಗವನ್ನು ಹುಡುಕಿದ ಪರಿಣಾಮವಾಗಿ ಹುಟ್ಟಿಕೊಂಡಿದ್ದು ಕಛೇರಿ ಸಲಕರಣೆಗಳು. ಬಿದ್ರಿ ಕಲೆಯಲ್ಲಿ ಉತ್ಪಾದನೆಗೊಂಡ ಕಾಗದ ಕತ್ತರಿಸುವ ಚಾಕು, ಕಾಗದದ ಹಿಡಿ, ಕಾಗದದ ಮೇಲಿಡುವ ಭಾರದ ವಸ್ತು (ಪೇಪರ್ ವೇಟ್) ಲೇಖನಿ ಪೆಟ್ಟಿಗೆ (ಪೆನ್ ಬಾಕ್ಸ)ಗಳನ್ನು ಇಲ್ಲಿ ಅಧ್ಯಯನಕ್ಕೆ ದುಡಿಸಿಕೊಳ್ಳಲಾಗಿದೆ.

ಇಲ್ಲಿ ಮೂರು ಬಗೆಯ ಕಾಗದ ಕತ್ತರಿಸುವ ಚಾಕುಗಳು ಇದ್ದು ಮೊದಲಿನೆರಡು ಚಾಕುಗಳಲ್ಲಿ ಪಾರಂಪರಿಕ ವಿನ್ಯಾಸವಾದ ಘೂಲ್‌ಝುಡಿ ಒಡಮೂಡಿದೆ. ಮೂರನೆಯದರಲ್ಲಿ ಸಾಮಾನ್ಯವಾದ ಪರ್ಣಗಳ ವಿನ್ಯಾಸವನರನು ರಚಿಸಲಾಗಿದೆ.

ಕಾಗದದ ಹಿಡಿಯಲ್ಲಿ ಮಾನವ ಬೆರಳುಗಳನ್ನು ಉಬ್ಬು ಶಿಲ್ಪದಂತೆ ರಚಿಸಿದ್ದು, ಒಂದು ಹೂವಿನ ವಿನ್ಯಾಸವನ್ನು ರೇಖಾತ್ಮಕವಾಗಿ ರಚಿಸಲಾಗಿದೆ. ಕಾಗದದ ಮೇಲಿಡುವ ಭಾರದ ವಸ್ತುವಿನಲ್ಲಿ ಪ್ರಚಲಿತದಲ್ಲಿರುವ ಘೂಲ್‌ಝುಡಿ ವಿನ್ಯಾಸಗಳು ವರ್ತುಲಾಕಾರದ ಆವರಣದಲ್ಲಿ ರಚಿಸಲ್ಪಟ್ಟಿವೆ.

ಲೇಖನಿ ಪೆಟ್ಟಿಗೆಯಲ್ಲಿ ಮೊದಲನೆಯದರಲ್ಲಿ ತರ್ಕಶಿ ತಂತ್ರದಿಂದ ಸಾಮಾನ್ಯ ನೆಲೆಯ ರೇಖಾತ್ಮಕ ಹೂವಿನ ವಿನ್ಯಾಸ ಒಡಮೂಡಿದೆ. ಎರಡನೆಯದರಲ್ಲಿ ಆಯತಾಕಾರದಲ್ಲಿ ಘೂಲ್‌ಝುಡಿ ವಿನ್ಯಾಸಗಳು ಮೂಲೆಯಿಂದ ಮೂಲೆಯ ಸಾಲಿನಲ್ಲಿ ಅಲಂಕರಿಸಲ್ಪಟ್ಟಿವೆ.

ಆಧುನಿಕ ಬದುಕಿನ ತಿರುವುಗಳಿಗೆ ತಕ್ಕಂತೆ ಬಿದ್ರಿ ಕುಶಲಕರ್ಮಿಗಳು ಇಂತಹ ನಿತ್ಯ ಮಾರಾಟವಾಗುವ ವಸ್ತುಗಳನ್ನು ಉತ್ಪಾದಿಸಲು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿರುವ ಕಾರಣವಾಗಿ ಪಾರಂಪರಿಕ ವಿನ್ಯಾಸಗಳು ಮತ್ತು ತಂತ್ರಗಳು ಗೌಣವಾಗುತ್ತಿರುವದಕ್ಕೆ ಮೇಲಿನ ವಸ್ತುಗಳ ಅಧ್ಯಯನವೇ ಸಾಕ್ಷಿ.

೩. ಗೃಹೋಪಯೋಗಿ ವಸ್ತುಗಳು

ಗೃಹ ಕೃತ್ಯಗಳಿಗಾಗಿ ಹಾಗೂ ವ್ಯಕ್ತಿಗತ ಅಲಂಕರಣಕ್ಕಾಗಿ ಬಳಸುವ ವಸ್ತುಗಳ ಸಮೂಹ ಇಲ್ಲಿವೆ. ಅವುಗಳಲ್ಲಿ ಆಭರಣ ಪೆಟ್ಟಿಗೆ, ಕುಂಕುಮ ಭರಣಿಗಳು, ಉಮರ್ ಖಯಾಮ್, ಬಟ್ಟಲುಗಳು, ಮೇಣಬತ್ತಿ ನಿಲುವು ಹಾಗೂ ಪೂಜಾ ಸಾಮಗ್ರಿಗಳು ನಿತ್ಯ ಬಳಕೆಯಾಗುವ ವಸ್ತುಗಳಾಗಿವೆ. ಅವುಗಳನ್ನು ಇಲ್ಲಿ ಅಧ್ಯಯನಕ್ಕೆ ದುಡಿಸಿಕೊಳ್ಳಲಾಗಿದೆ.

ಅ. ಆಭರಣ ಪೆಟ್ಟಿಗೆಗಳು

೧ರಲ್ಲಿರುವ ಆಭರಣ ಪೆಟ್ಟಿಗೆ ವಿಶಿಷ್ಟವಾದುದು. ಸಮ್ಮಿಶ್ರ ನೆಲೆಯ ಬಿದ್ರಿ ಆಭರಣ ಪೆಟಿಗೆ ಇದು. ಅಂಚಿನಲ್ಲಿ ಬಿದ್ರಿ ಕಲೆ ಅಫ್ತಾಬಿ ತಂತ್ರದಲ್ಲಿ ಅಲಂಕರಿಸಲ್ಪಟ್ಟಿವೆ. ಮಧ್ಯದಲ್ಲಿ ಮೊಘಲ್ ಶೈಲಿ ವರ್ಣಚಿತ್ರಗಳು ಆನೆಯ ದಂತದ ಮೇಲೆ ಚಿತ್ರಿಸಲ್ಪಟ್ಟಿವೆ. ಇಲ್ಲಿನ ಚಿತ್ರಗಳು

ರಾಜಪರಿವಾರದವರಾಗಿದ್ದು, ಮೂಲತಃ ರಾಜಸ್ಥಾನದ ಕುಶಲಕರ್ಮಿಗಳು ಈ ಚಿತ್ರಗಳನ್ನು ರಚಿಸಿದ್ದಾರೆ. ೨ರಲ್ಲಿ ಕಂಡುಬರುವ ಪೆಟ್ಟಿಗೆಯು ಸಹ ಅಫ್ತಾಬಿ ತಂತ್ರದಿಂದ ರಚಿಸಲ್ಪಟ್ಟಿದ್ದು ಪೆಟ್ಟಿಗೆಯ ಮುಚ್ಚಳದಲ್ಲಿ ಮೂಡಿರುವ ವಿನ್ಯಾಸಗಳು ಪೆಟ್ಟಿಗೆಯ ಸುತ್ತಲೂ ರಚಿಸಲ್ಪಟ್ಟಿವೆ. ವಿನ್ಯಾಸಗಳ್ಲಲಿ ಎಂದಿನ ಹೂವಿನ ಮತ್ತು ಬಳ್ಳಿಗಳಸುಳುಹುಗಳು ಪೆಟ್ಟಿಗೆಯ ಅಲಂಕಾರವನ್ನು ವೃದ್ಧಿಸಿವೆ. ೩ರಲ್ಲಿ ಕಂಡುಬರುವ ಪೆಟ್ಟಿಗೆಯು ಅಫ್ತಾಬಿ ತಂತ್ರದಿಂದ ರಚಿಸಲ್ಪಟ್ಟಿದ್ದು ನಾಲ್ಕು ದಳಗಳಿಂದ ಹೆಣೆಯಲಾದ ವಿನ್ಯಾಸಗಳು ಚೌಕಾಕಾರವನ್ನು ಸೃಷ್ಟಿಸಿವೆ. ಅದರ ಆವರಣದಲ್ಲಿ ಹೂವಿನ ವಿನ್ಯಾಸವೊಂದು ರಚಿಸಲ್ಪಟ್ಟಿವೆ. ಬಹುಸೂಕ್ಷ್ಮ ವಿನ್ಯಾಸಗಳನ್ನು ಕುಶಲಕರ್ಮಿಯು ರಚಿಸಿದ್ದು ಪೆಟ್ಟಿಗೆ ಅಲಂಕಾರಿಕ ನೆಲೆಯಲ್ಲಿ ಮಹತ್ವಪೂರ್ಣವಾದುದು.

ಚಿತ್ರ ೪ರಲ್ಲಿ ಕಂಡುಬರುವ ಪೆಟ್ಟಿಗೆಯು ಆಕಾರದಲ್ಲಿ ಪಾರಂಪರಿಕ ಲಕ್ಷಣವನ್ನು ಹೊಂದಿದೆ. ತರ್ಕಶಿ ತಂತ್ರವನ್ನು ಹೊಂದಿರುವ ಈ ಪೆಟ್ಟಿಗೆಯಲ್ಲಿ ಫೂಲ್ ಝುಡಿ ವಿನ್ಯಾಸಗಳು ರಚಿಸಲ್ಪಟ್ಟಿವೆ. ಪೆಟ್ಟಿಗೆ ಆಕಾರಕ್ಕೆ ತಕ್ಕಂತೆ ಪಟ್ಟಿಕೆಗಳಲ್ಲಿ ಫೂಲ್‌ಝುಡಿ ವಿನ್ಯಾಸಗಳನ್ನು ಮೂಲೆಯಿಂದ ಮೂಲೆಗೆ ಸಂಯೋಜಿಸಿದ್ದು ಅಲಂಕಾರಿಕ ನೆಲೆಯಲ್ಲಿ ಮಹತ್ವದ್ದಾಗಿದೆ.

ಬ. ಕುಂಕುಮ ಭರಣಿಗಳು

ಇಲ್ಲಿ ಆರು ಬಗೆಯ ಕುಂಕುಮ ಭರಣಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಚಿತ್ರ ೧,೩, ಮತ್ತು ೫ರಲ್ಲಿ ಕಂಡುಬರುವ ವಿನ್ಯಾಸಗಳು ರೇಖಾಪ್ರಧಾನವಾಗಿದ್ದು ತರ್ಕಶಿ ತಂತ್ರದಿಂದ ರಚಿಸಲಾಗಿದೆ. ಎರಡು ವರ್ತುಲಾಕಾರದಲ್ಲಿದ್ದು, ಇನ್ನೊಂದು ಮಾವಿನ ಆಕಾರವನ್ನು ಹೊಂದಿದೆ. ವರ್ತುಲಾಕಾರದ ಭರಣಿಯಲ್ಲಿ ಹೂವಿನ ವಿನ್ಯಾಸಗಳು ರಚಿಸಲ್ಪಟ್ಟರೆ ೫ರಲ್ಲಿ ಹೂವಿನಗಿಡದ ವಿನ್ಯಾಸಗಳು ರಚಿಸಲ್ಪಟ್ಟಿವೆ. ಚಿತ್ರ ೨ರಲ್ಲಿ ಕಂಡುಬರುವ ಭರಣಿಯು ಫೂಲ್‌ಝುಡಿ ವಿನಯಾಸವನನು ಹೊಂದಿದೆ. ಚಿತ್ರ ೪ರಲ್ಲಿ ಕಂಡುಬರುವ ಭರಣಿಯು ಇತರ ಭರಣಿಗಳಿಗಿಂತ ವಿಭಿನ್ನವಾಗಿದ್ದು ಅಫ್ತಾಬಿ ತಂತ್ರದಲ್ಲಿ ಹೂ ಬಳ್ಳಿಗಳ ವಿನ್ಯಾಸವನ್ನು ಹೊಂದಿದೆ. ಚಿತ್ರ೬ಲ್ಲಿ ಕಂಡುಬರುವ ಭರಣಿಯು ತರ್ಕಶಿ ಮತ್ತು ತೆಹನಿಶಾನ ತಂತ್ರದಲ್ಲಿ ರಚಿಸಲ್ಪಟ್ಟಿದ್ದು, ಬೆಳ್ಳಿ ತಗಡಿನ ಹುದುಗಿಸುವಿಕೆಯಿಂದ ವಿನ್ಯಾಸಗಳನ್ನು ರಚಿಸಲಾಗಿದೆ. ಪರ್ಣಗಳೇ ಪ್ರಧಾನವೆನಿಸುವ ಹೂವುಗಳನ್ನು ರೇಖಾತ್ಮಕವಾಗಿ ಚಿತ್ರಿಸಿರುವ ಇಲ್ಲಿನ ವಿನ್ಯಾಸ ಬಹು ಸಂಕೀರ್ಣ ಅನುಭವವನ್ನು ನೀಡುತ್ತದೆ.

ಕ. ಉಮರ್ ಖಯಾಮ್

ನೀರು ಅಥವಾ ತಂಪು ಪಾನೀಯಗಳನ್ನು ಶೇಖರಿಸಿಟ್ಟು ಅತಿಥಿಗಳು ಬಂದಾಗ ಲೋಟಗಳಲ್ಲಿ ಹಾಕಿಕೊಡಲು ಈ ಉಮರ್ ಖಯಾಮ್‌ಗಳು ರಚನೆಯಾಗಿವೆ. ಅಂತಹ ಐದು ಊಮರ್ ಖಯಾಮಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಚಿತ್ರ ೧೮ರಲ್ಲಿ ಕಂಡುಬರುವ ಉಮರ್ ಖಯಾಮ್ ತರ್ಕಶಿ ತಂತ್ರಗಾರಿಕೆಯಿಂದ ರಚಿಸಲ್ಪಟ್ಟಿದ್ದು ಸಾಮಾನ್ಯವೆನಿಸುವ ರೇಖಾತ್ಮಕ ವಿನ್ಯಾಸಗಳು ಒಡಮೂಡಿವೆ. ವಿಶೇಷವಾಗಿ ಸಸ್ಯಜನ್ಯ ವಿನ್ಯಾಸಗಳು ಈ ಖಯಾಮ್‌ನ್ನು ಅಲಂಕರಿಸಿವೆ. ೨ನೆಯ ಖಯಾಮ್‌ನಲ್ಲಿ ತರ್ಕಶಿ ತಂತ್ರವನ್ನು ದುಡಿಸಿಕೊಂಡು ಫೂಲ್‌ಝುಡಿ ವಿನ್ಯಾಸಗಳನ್ನು ವಿವಿಧ ಆಕಾರಗಳಲ್ಲಿ ಮೂಡಿಸಲಾಗಿದೆ. ಹಿಂದಿನ ಖಯಾಮ್‌ಗಿಂತ ಇದರಲ್ಲಿ ಸೂಕ್ಷ್ಮ ಕುಸುರಿ ಕಂಡುಬರುತ್ತದೆ. ೩ನೆಯದರಲ್ಲಿ ೨ನೆಯ ಖಯಾಮ್‌ನಂತೆ ರಚನೆಗೊಂಡಿದ್ದು ಉದರಭಾಗದಲ್ಲಿ ಮೊಘಲ್ ಶೈಲಿಯ ವರ್ಣಕಲಾಕೃತಿಯು ರಚನೆಯಾಗಿದೆ. ಚಿತ್ರ ೪ರಲ್ಲಿ ಕಂಡುಬರುವ ಉಮರ್ ಖಯಾಮ್‌ಗಳು ಅಫ್ತಾಬಿ ತಂತ್ರವನ್ನು ಒಳಗೊಂಡಿದ್ದು ಎಂದಿನಂತೆ ಉದರಭಾಗದಲ್ಲಿಅಂಡಾಕಾರದ ರಚನೆ ಹೂವಿನಿಂದ ಆವೃತ್ತವಾಗಿದೆ. ನಳಿಕೆಯಲ್ಲಿ ಎಂದಿನ ಅದೇ ಹೂವಿನ ವಿನ್ಯಾಸಗಳು ಪುನರಾವರ್ತನೆಗೊಂಡಿವೆ. ಚಿತ್ರ ೫ರಲ್ಲಿ ಕಂಡುಬರುವ ಉಮರ್ ಖಯಾಮ್ ಚಿತ್ರ ೪ರಲ್ಲಿ ಕಂಡುಬರುವ ಹೂಬಳ್ಳಿಗಳ ವಿನ್ಯಾಸಗಳು ಅಲ್ಪ ಬದಲಾವಣೆಗಳೊಂದಿಗೆ ಒಡಮೂಡಿವೆ. ಕಂಠದಲ್ಲಿ ಮತ್ತು ಪೀಠದಲ್ಲಿ ಎಂದಿನ ಇಸ್ಲಾಮಿಕ್ ಶೈಲಿಯ ಪಟ್ಟಿಕೆಗಳು ರಚನೆಗೊಂಡಿದ್ದು ಸೂಕ್ಷ್ಮ ಕುಸುರಿಯಿಂದಾಗಿ ದರ್ಶಕನ ಗಮನವನ್ನು ತೀವ್ರವಾಗಿ ಸೆಳೆಯುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ಡ. ಬಟ್ಟಲುಗಳು

ಇಲ್ಲಿರುವ ಬಟ್ಟಲು ತರ್ಕಶಿ ಮತ್ತು ಅಫ್ತಾಬಿ ತಂತ್ರಗಳನ್ನು ಮೈಗೂಡಿಸಿಕೊಂಡಿರುವ ಇಲ್ಲಿನ ಬಟ್ಟಲಿನ ಅಲಂಕಾರಿಕ ವಿನ್ಯಾಸಗಳು ಫೂಲ್‌ಝುಡಿ ನೆಲೆಯಲ್ಲಿ ರಚನೆಗೊಂಡಿವೆ. ಮಧ್ಯದಲ್ಲಿ ಪುಷ್ಪಾಕೃತಿಯು ಇದ್ದು ಅದರ ಸುತ್ತಲೂ ಇಸ್ಲಾಮಿಕ್ ಶೈಲಿಯ ಹೂವಿನ ಎಸಳುಗಳ ಸಮಾನಾಂತರವಾಗಿ ರಚನೆಗೊಂಡಿವೆ. ತದನಂತರದ ಆವರಣದಲ್ಲಿ ಎಂದಿನ ಫೂಲ್‌ಝುಡಿ ವಿನಯಾಸಗಳು ಮೂಲೆಯಿಂದ ಮೂಲೆಗೆ ಸಾಲಿನಲ್ಲಿ ಸಂಯೋಜಿಸಲ್ಪಟ್ಟಿವೆ. ನೋಡಲು ಆಕರ್ಷಕವೆನಿಸುವ ಇಂತಹ ಬಟ್ಟಲುಗಳು ಪ್ರಸ್ತುತ ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ.

ಇ. ಮೇಣಬತ್ತಿ ನಿಲುವುಗಳು

ಮೇಲ್ನೋಟಕ್ಕೆ ದೇವಾಲಯಗಳ ಆವಣದಲ್ಲಿರುವ ಗರುಡಗಂಬ ಅಥವಾ ದೀಪಸ್ತಂಬಗಳನ್ನೇ ಹೋಲುವ ಇಲ್ಲಿನ ಮೇಣಬತ್ತಿ ನಿಲುವುಗಳು ಅಡಿಪೀಠದಲ್ಲಿ ಚೌಕಾಕಾರದಲ್ಲಿದ್ದರೆ ಮೇಲ್ಭಾಗದ ನಿಲುವು ವರ್ತುಲಾಕಾರದ ರಚನೆಯಿಂದ ಕೂಡಿವೆ. ಮೇಣಬತ್ತಿಯನ್ನು ಇಡುವ ಸ್ಥಳವನ್ನು ಒಂದು ಬಗೆಯಲ್ಲಿ ಕಲಶದಂತೆ ಸುಂದರವಾಗಿ ರಚಿಸಲಾಗಿದೆ.

ಈ. ಪೂಜಾ ಸಾಮಗ್ರಿಗಳು

ಮನೆಯೊಮದರ ಪ್ರತಿಷ್ಠೆಗಳನ್ನು ಒರೆಗೆ ಹಚ್ಚುವ ಸಂದರ್ಭದಲ್ಲಿ ಆ ಮನೆಯಲ್ಲಿ ಆರತಿ ತಟ್ಟೆಗಳು ಹಿತ್ತಾಳೆಯವೋ ಅಥವಾ ಬೆಳ್ಳಿಯವೋ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಬೆಳ್ಳಿಯ ಸಾಮಗ್ರಿಗಳಾಗಿದ್ದರೆ ಆ ಮನೆಯ ಶ್ರೀಮಂತಿಕೆ ಸಂಕೇತವಾಗಿರುತ್ತದೆ. ಇಲ್ಲಿ ಬಿದ್ರಿ ಕಲೆಯಲ್ಲಿ ರಚನೆಗೊಂಡ ಆರತಿ ತಟ್ಟೆಗಳು ಅಧ್ಯಯನಕ್ಕೆ ಲಭ್ಯವಾಗಿವೆ. ಅಫ್ತಾಬಿ ಮತ್ತು ತರ್ಕಶಿ ತಂತ್ರಗಳಲ್ಲಿ ರಚನೆಗೊಂಡ ಇಲ್ಲಿನ ವಿನ್ಯಾಸಗಳು ಬೆಳ್ಳಿಯ ತಗಡುಗಳಿಂದ ಅಲಂಕರಿಸಲ್ಪಟ್ಟಿವೆ. ಮಧ್ಯದಲ್ಲಿ ಪೂಜಾ ಕೈಂಕರ್ಯಕ್ಕೆ ಸಂಬಂಧಿಸಿದ ಯಂತ್ರವೊಂದರ ನಕ್ಷೆಯನ್ನು ರಚಿಸಲಾಗಿದೆ. ಸುತ್ತಲೂ ಹೂವಿನ ವಿನ್ಯಾಸವನ್ನು ಪಟ್ಟಿಕೆಯ ರೂಪದಲ್ಲಿ ಸಂಯೋಜಿಸಲಾಗಿದೆ. ಅಂಚಿನಲ್ಲಿ ಫೂಲ್‌ಝಡಿ ವಿನ್ಯಾಸಗಳು ಮೂಲೆಮೂಲೆಗೆ ಸಂಯೋಜಿಸಿದ್ದು ಅತೀ ಸೂಕ್ಷ್ಮವಾಗಿ ರಚಿಸಲ್ಪಟ್ಟಿವೆ. ದೀಪದಾರತಿಗಳಲ್ಲೂ ತಟ್ಟೆಯಲ್ಲಿರುವ ವಿನ್ಯಾಸಗಳೇ ಪುನರಾವರ್ತನೆಯಾಗಿದ್ದು, ಚಿಕಣಿ ರೂಪದಲ್ಲಿ ಪ್ರಕಟವಾಗಿ ದೀಪದಾರತಿಯ ಅಲಂಕಾರಿಕ ವೈಭವವನ್ನು ಹೆಚ್ಚಿಸಿವೆ.

ಉ. ಪುರುಷರು ಬಳಸುವ ವಸ್ತುಗಳು

ಸ್ತ್ರೀಯರಿಗೆ ಮಾತ್ರ ಸೀಮಿತವಾಗದ ಬಿದ್ರಿಕಲೆಗಳು ಪುರುಷರ ಅವಶ್ಯಕತೆಗಳನ್ನು ಪೂರೈಸುವ ಸಾಮಗ್ರಿಗಳನ್ನು ಉತ್ಪಾದಿಸಿದ್ದಾರೆ. ಅವುಗಳಲ್ಲಿ ಅಂಗಿಯ ಗುಂಡಿಗಳು, ಸೊಂಟ ಪಟ್ಟಿಗಳು (ಬೆಲ್ಟ್‌ಗಳು), ಕೀ ನಿಲುವು / ಕೀ ಹಿಡಿಗಳು, ಸಿಗರೇಟ್ ಬೂದಿಯ ಪೆಟ್ಟಿಗೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪುರುಷರು ಧರಿಸುವ ಅಂಗಿಯ ಗುಂಡಿಗಳನ್ನು ತರ್ಕಶಿ ತಂತ್ರದಿಂದ ಫೂಲ್‌ಝಡಿ ವಿನ್ಯಾಸಗಳನ್ನು ವರ್ತುಲಾಕಾರದ ಆವರಣದಲ್ಲಿ ರಚಿಸಿದ್ದಾರೆ. ಸೊಂಟಪಟ್ಟಿಗಳಿಗೆ ಬೇಕಾದ ಹಿಡಿಗಳನ್ನು (ಬಕಲ್) ತರ್ಕಶಿ ತಂತ್ರದಿಂದ ರಚಿಸಿದ್ದಾರೆ. ಮೂರು ಹಿಡಿಗಳಲ್ಲಿ ವಿಭಿನ್ನವಾದ ರಚನೆಗಳಿದ್ದು ಬಹು ಸುಂದರವಾಗಿ ಒಡಮೂಡಿವೆ. ವಿಶೇಷವಾಗಿ ಸಸ್ಯಜನ್ಯ ವಿನ್ಯಾಸಗಳೇ ಇಲ್ಲಿನ ಅಲಂಕರಣದ ರೂವಾರಿಗಳೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಕೀನಿಲುವು, ಕೀ ಹಿಡಿಗಳ ವಿನ್ಯಾಸಗಳು ಜ್ಯಾಮಿತಿಕ ನೆಲೆಯಲ್ಲಿ ರಚನೆಗೊಂಡಿದ್ದು ಸರಳವಾದ ವಿನ್ಯಾಸಗಳನ್ನು ಹೊಂದಿವೆ. ಸಿಗರೇಟು ಬೂದಿಯ ಪೆಟ್ಟಿಗೆಯಲ್ಲಿ ಅದರ ಆಕಾರಕ್ಕೆ ತಕ್ಕಂತೆ ವರ್ತುಲಾಕಾರದ ಪಟ್ಟಿಕೆಯನ್ನು ಅರ್ಧಕ್ಕೆ ತುಂಡರಿಸಿ ರೇಖಾತ್ಮಕವಾಗಿ ಜ್ಯಾಮಿತಿಕ ನೆಲೆಯಲ್ಲಿ ರಚಿಸಲ್ಪಟ್ಟಿದೆ. ಬೂಟಿನ ವಿನ್ಯಾಸವನ್ನು ಹೊಂದಿದ ಸಿಗರೇಟು ಬೂದಿಯ ಪೆಟ್ಟಿಗೆಯಲ್ಲಿ ಅಫ್ತಾಬಿ ತಂತ್ರವನ್ನು ದುಡಿಸಿಕೊಂಡಿದ್ದು ಎಂದಿನಂತೆ ಹೂವಿನ ವಿನ್ಯಾಸವನ್ನು ರಚಿಸಲಾಗಿದೆ.

ಊ. ಕ್ರೀಡಾ ಸಾಮಗ್ರಿಗಳು

ಚೆಸ್ ಬೋರ್ಡ್‌ನ ರಚನೆ ಇಲ್ಲಿದೆ. ತರ್ಕಶಿ ತಂತ್ರದಿಂದ ರಚಿಸಿರುವ ಚದುರಂಗದ ತಟ್ಟೆಯನ್ನು ಅದರ ನಿಯಮಾನುಸಾರವಾಗಿ ಚೌಕಾಕಾರದಲ್ಲಿ ವಿಂಗಡಿಸಲಾಗಿದ್ದು, ಒಂದು ಚೌಕವು

ವಿನ್ಯಾಸ ರಹಿತವಾಗಿದ್ದರೆ, ಅದರ ಪಾರ್ಶ್ವಗಳೆರಡರ ಚೌಕವು ನಾಲ್ಕುದಳಗಳ ಹೂವಿನ ಎಸಳುಗಳಿಂದ ರಚಿಸಲ್ಪಟ್ಟಿದೆ. ಅಂಚಿನ ಪಟ್ಟಿಕೆಯಲ್ಲಿ ಹೂ ಬಳ್ಳಿಗಳ ವಿನ್ಯಾಸಗಳು ರಚನೆಗೊಂಡಿವೆ.

ಉಪಸಂಹಾರ

ಆಧುನಿಕ ಬಿದ್ರಿ ಕಲೆಯಲ್ಲಿ ಅಲಂಕಾರಿಕ ವಸ್ತುಗಳು, ಕಛೇರಿ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ಪುರುಷರು ಬಳಸುವ ವಸ್ತುಗಳು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಹುತೇಕ ಬಿದ್ರಿ ವಸ್ತುಗಳಲ್ಲಿ ಅಫ್ತಾಬಿ, ತರ್ಕಶಿ, ತೆಹ ನಿಶಾನಿ ತಂತ್ರಗಳು ಒಡಮೂಡಿವೆ. ಫೂಲ್‌ಝುಡಿ ವಿನ್ಯಾಸ ಪ್ರಚಲಿತದಲ್ಲಿರುವಂತೆ ಇಲ್ಲಿನ ಕೆಲವು ಕೃತಿಗಳಲ್ಲಿ ಅದೇ ಪುನರಾವರ್ತನೆಗೊಂಡಿದೆ. ಇನ್ನು ಕೆಲವು ಕೃತಿಗಳಲ್ಲಿ ತರ್ಕಶಿ ಶೈಲಿಯ ರೇಖಾತ್ಮಕ ವಿನ್ಯಾಸಗಳು ರಚನೆಗೊಂಡಿವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಕೃತಿಗಳು ಉಮರ್ ಖಯಾಮ, ಹೂದಾನಿಗಳಂತಹ ರಚನೆಗಳು ಆಕಾರದಲ್ಲಿ ಪಾರಂಪರಿಕ ಜಾಡಿನಲ್ಲಿ ಸಾಗಿದರೆ, ಕಛೇರಿ ವಸ್ತುಗಳು, ಚದುರಂಗ ಸಾಮಗ್ರಿ ಇಂತಹವುಗಳು ಪರಂಪರೆಯ ನೆರಳಿನಲ್ಲಿಲ್ಲ. ಈ ರಚನೆಗಳು ಪ್ರಸ್ತುತ ಬಿದ್ರಿಕಲೆ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬ ಸ್ಪಷ್ಟ ಚಿತ್ರಣ ನಮಗೆ ದೊರೆಯುತ್ತದೆ. ಬಹುತೇಕ ರಚನೆಗಳಲ್ಲಿ ಕಂಡುಬರುವ ಅಪ್ರಬುದ್ಧ ವಿನ್ಯಾಸಗಳು ಕುಶಲಕರ್ಮಿಯ ಅನಾಸಕ್ತಿಯ ದ್ಯೋತಕವಾಗಿವೆ. ಕಛೇರಿವಸ್ತುಗಳು, ಸಿಗರೇಟು ಪೆಟ್ಟಿಗೆಗಳು ವಾಣಿಜ್ಯೋದ್ದೇಶದ ಅಮಲಿನಲ್ಲಿ ತಯಾರಾದ ಹಿನ್ನೆಲೆಯಲ್ಲಿ ಅವುಗಳ ರಚನೆಗಳಲ್ಲಿ ಮಹತ್ವದ ಅಂಶಗಳು ಗೌಣವಾಗಿವೆ. ಫೂಲ್‌ಝುಡಿ ವಿನ್ಯಾಸ ಅತ್ಯಂತ ಸುಲಭ ತಂತ್ರದಲ್ಲಿ ರಚನೆಯಾಗುವ ನಿಟ್ಟಿನಲ್ಲಿ ಇಂದಿನ ಬಿದ್ರಿ ಕಲೆಯಲ್ಲಿ ಆ ವಿನ್ಯಾಸವೇ ಅತ್ಯಂತ ಪ್ರಚಲಿತವಾಗಿದೆ. ಹೂದಾನಿಗಳಲ್ಲಿ ಅದು ಬಹಳಷ್ಟು ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಅದಕ್ಕೆ ಸಮಾನಾಂತರವಾಗಿ ರೇಖಾತ್ಮಕ ವಿನ್ಯಾಸಗಳು ಅತ್ಯಂತ ಪ್ರಚಲಿತದಲ್ಲಿವೆ. ಆದರೆ ಇಂತಹ ರೇಖಾತ್ಮಕ ವಿನ್ಯಾಸಗಳಲ್ಲಿ ಯಾವುದೇ ಬಗೆಯ ಪಾರಂಪರಿಕ ಆಸಕ್ತಿ ಕಾಣದಾಗಿದೆ ಎಂಬುದು ದಿಟ. ಹಿಗೆ ಬಿದ್ರಿ ಕಲೆ ತನ್ನ ಪಾರಂಪರಿಕ ಸೊಗಡನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಸರಕಾರಗಳು, ವಿಶ್ವವಿದ್ಯಾಲಯಗಳು ಮತ್ತೆ ಆ ಪಾರಂಪರಿಕ ಸೊಗಡನ್ನು ತಂದುಕೊಡುವಲ್ಲಿ ಪ್ರಯತ್ನಸಬೇಕಾಗಿದೆ.

*****

ಬಿದ್ರಿ ಕಲೆಯ: ಪ್ರದರ್ಶನ ಮತ್ತು ಮಾರಾಟ ಹಾಗೂ ಪ್ರೋತ್ಸಾಹ

ಬೀದರನ ಬಿದ್ರಿ ಕಲೆಗೆ ಚಾರಿತ್ರಿಕವೆನ್ನಬಹುದಾದ ರಾಜಮನ್ನಣೆಯಿಂದ ಹಿಡಿದು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಸಹ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದ ಮನ್ನಣೆಗಳು ದೊರಕಿವೆ, ದೊರಕುತ್ತಲಿವೆ. ವಿಶೇಷವಾಗಿ ವಸ್ತು ಸಂಗ್ರಹಾಲಯಗಳಲ್ಲಿ, ವಾಣಿಜ್ಯ ಮೇಳಗಳಲ್ಲಿ ಪ್ರದರ್ಶನ ಕಾಣುವ ಇವು ಇಂದಿನ ಮೇಳಗಳಲ್ಲಿ ಮಾರಾಟಕ್ಕೂ ಲಭ್ಯವಾಗುತ್ತಲಿವೆ. ಅದೂ ಅತೀ ಹೆಚ್ಚಿನ ದರದಲ್ಲಿ! ಆದರೆ ಬಿದ್ರಿ ಕಲೆಗಳನ್ನು ರೂಪಿಸುವ ಕುಶಲಕರ್ಮಿಗಳ ಬದುಕು ಭಾರತದ ರೈತರಂತಯೇ ಇದೆ. ಅವರ ಸ್ಥಿತಿ ಸುಧಾರಣೆಯಾಗುವ ಲಕ್ಷಣಗಳಂತೂ ಇಲ್ಲವೆಂಬುದು ಸಂಶೋಧನ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕಂಡುಬಂದಿತು. ಈ ಬಿದ್ರಿ ಕಲೆಗೆ ಇಂದು ಲಭ್ಯವಾಗುತ್ತಿರುವ ಪ್ರೋತ್ಸಾಹ ನೀಡಲು ಸರಕಾರ, ಬ್ಯಾಂಕುಗಳು ಮುಂದೆ ಬಂದಿದ್ದರೂ ಅದು ಕುಶಲಕರ್ಮಿಗಳಿಗೆ ತೃಪ್ತಿಕರವೆನಿಸಿಲ್ಲ. ಈ ಹಿನ್ನೆಲೆಯಲ್ಲಿ ಬಿದ್ರಿ ಕಲೆಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಹಾಗೂ ಪ್ರೋತ್ಸಾಹ ನೀಡುವ ಸಂಘ ಸಂಸ್ಥೆಗಳ ಪರಿಚಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಿಕೊಡಲಾಗುವುದು.

೧. ಭಾರತದಲ್ಲಿನ ಬಿದ್ರಿ ಕಲಾವಸ್ತುಗಳ ಪ್ರದರ್ಶನ ಮತ್ತು ಮಾರಾಟ

೧. ಸಾಲಾರ ಜಂಗ ಮ್ಯೂಸಿಯಂ, ಹೈದರಾಬಾದ್

ಈ ಮ್ಯೂಸಿಯಂನಲ್ಲಿರುವ ಎಲ್ಲ ವೈವಿಧ್ಯಪೂರ್ಣವಾದ ಬಹು ಅಮೂಲ್ಯವಾದ ವಸ್ತುಗಳನ್ನು ಸಂಗ್ರಹಿಸಿದ ಕೀರ್ತಿ ದಿವಂಗತ ನವಾಬ ಯೂಸಫ್ ಖಾನ್ ಸಾಲಾರಜಂಗ–೩ ಇವನಿಗೆ ಸೇರುತ್ತದೆ. ಮೀರ ಯೂಸಫ್ ಖಾನನಿಗೆ ಕಲಾತ್ಮಕ ವಸ್ತುಗಳ ಸಂಗ್ರಹದಲ್ಲಿ ಅತೀವ ಆಸಕ್ತಿ ಇತ್ತು. ಹೀಗೆ ಸಂಗ್ರಹಿಸಿದ ವಸ್ತುಗಳನ್ನು ಸಂಗ್ರಹಾಲಯದ ರೂಪುಕೊಟ್ಟು ಲೋಕಾರ್ಪಣೆ ಮಾಡಬೇಕೆಂಬ ಕನಸು ನನಸಾಗಿದ್ದು ಅವನ ಮರಣದ ನಂತರ. ೧೯೫೧ರ ಡಿಸೆಂಬರ್ ೧೬ರಂದು ಅಂದಿನ ಪ್ರಧಾನಮಂತ್ರಿಗಳಾದ ಜವಾಹರಲಾಲ ನೆಹರು ಅವರು ಔಪಚಾರಿಕವಾಗಿ ಈ ವಸ್ತು ಸಂಗ್ರಹಾಲಯವನ್ನು ಲೋಕಾರ್ಪಣಗೊಳಿಸಿದರು. ಮ್ಯೂಸಿಯಂ ಒಡೆತನವು ನವಾಬಸಾಹೇಬನ ಉತ್ತರಾಧಿಕಾರಿಗಳವಶದಲ್ಲಿಯೇ ಇದ್ದು ಸಾಲಾರ್ ಜಂಗ್ ಎಸ್ಟೇಟ್ ಕಮೀಟಿ ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿತ್ತು. ೧೯೫೮ರ ಡಿಸೆಂಬರ್ ೨ರಂದು ನವಾಬನ ಉತ್ತರಾಧಿಕಾರಿಗಳು ಮ್ಯೂಸಿಯಂನ್ನು ಭಾರತ ಸರಕಾರದ ಸುಪರ್ದಿಗೆ ಒಪ್ಪಿಸಿದರು. ಅಂದಿನಿಂದ ಈ ವಸ್ತುಸಂಗ್ರಹಾಲಯವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಈ ವಸ್ತು ಸಂಗ್ರಹಾಲಯದಲ್ಲಿ ಸುಮಾರು ೨೦೦ ಬಿದ್ರಿಕಲೆಗಳ ಸಂಗ್ರಹವಿದೆ. ಕೇವಲ ಸಾಲಾರ ಜಂಗ್ ಮ್ಯೂಸಿಯಂನಲ್ಲಿ ಬಿದ್ರಿಕಲೆಗಳ ಕುರಿತೇ ಪ್ರತ್ಯೇಕ ಅಧ್ಯಯನ ಮಾಡುವಷ್ಟು ಆಕರ ಸಾಮಗ್ರಿ ಇಲ್ಲಿ ಇವೆ. ಇಲ್ಲಿ ಸಂಗ್ರಹಗೊಂಡಿರುವ ವಸ್ತುಗಳು ಅತ್ಯಂತ ವೈವಿಧ್ಯಪೂರ್ಣವಾಗಿವೆಯಷ್ಟೇ ಅಲ್ಲ, ಈ ದೇಶೀಯ ಕಲೆ ಮತ್ತು ಉದ್ದಿಮೆಯ ಮಟ್ಟವನ್ನು ಬಿತ್ತರಿಸುತ್ತದೆ. ಸಂಗ್ರಹಾಲಯದಲ್ಲಿ ಕಲಾಕೃತಿಗಳ ವಿಘುಲ ಸಂಗ್ರಹವಿದೆಯಾದರೂ ವೀಕ್ಷಣೆಗೆ ಲಭ್ಯವಾಗುವುದು ಚಿಕ್ಕ ಭಾಗ ಮಾತ್ರ. ೧೭ನೆಯ ಕೊಠಡಿಯಲ್ಲಿರುವ ಭಾರತೀಯ ಲೋಹದ ಪಾತ್ರೆ ಮತ್ತು ಆಯುಧಗಳು ವೈವಿಧ್ಯಮಯವಾಗಿವೆ. ಇಲ್ಲಿರುವ ಬಿದ್ರಿ ಪಾತ್ರೆಗಳು ವಿನ್ಯಾಸದಲ್ಲಿ ಹಾಗೂ ಕಲೆಗಾರಿಕೆಯಲ್ಲಿ ವಿಭಿನ್ನ ಪ್ರಕಾರಗಳಿವೆ. ಇಲ್ಲಿನ ಬಿದ್ರಿ ಪಾತ್ರೆಗಳು, ಹುಕ್ಕಾ ಸ್ಟ್ಯಾಂಡಗಳು, ತಟ್ಟೆಗಳು, ಬಟ್ಟಲುಗಳು, ಹೂಜಿಗಳು ಇನ್ನೂ ಮುಂತಾದ ವಸ್ತುಗಳು ಇಲ್ಲಿ ಸಂಗ್ರಹಗೊಂಡು ಪ್ರದರ್ಶನ ರೂಪದಲ್ಲಿವೆ.

೧೬, ಆಗಸ್ಟ ೨೦೦೪ರಿಂದ ಸಂಗ್ರಹಣಾಗಾರದಲ್ಲಿದ್ದ ಅನೇಕ ಬಿದ್ರಿ ಕಲಾಕೃತಿಗಳನ್ನು ಹೊರತೆಗೆದು ಸಾರ್ವಜನಿಕರ ವೀಕ್ಷಣೆಗಾಗಿ ಪ್ರದರ್ಶನಕ್ಕಿಟ್ಟಿದ್ದಾರೆ. ಮೂರನೇಯ ಸಾಲಾರಜಂಗ ಬಹಳಷ್ಟು ಕಲಾಕೃತಿಗಳು ಮ್ಯೂಸಿಯಂನ ಉಗ್ರಾಣದಲ್ಲಿದ್ದು ಬಿದ್ರಿ ಕಲೆಗಳಿಗಾಗಿಯೇ ಪ್ರತ್ಯೇಕ ಕಟ್ಟಡವೊಂದನ್ನು ನಿರ್ಮಿಸಿ ಅಲ್ಲಿನ ಎಲ್ಲ ಬಿದ್ರಿ ಕಲೆಗಳನ್ನು ಪ್ರದರ್ಶಿಸುವ ಯೋಜನೆಯನ್ನು ಮ್ಯೂಸಿಯಂನ ಆಡಳಿತ ಮಂಡಳಿ ಹೊಂದಿದೆ.

೧. ರಾಷ್ಟ್ರೀಯ ಕರಕುಶಲ ಹಾಗೂ ಕೈಮಗ್ಗ ವಸ್ತು ಪ್ರದರ್ಶನಾಲಯ, ನವದೆಹಲಿ

ರಾಷ್ಟ್ರೀಯ ಕರಕುಶಲ ಹಾಗೂ ಕೈಮಗ್ಗ ವಸ್ತು ಪ್ರದರ್ಶನಾಲಯವು ೧೯೫೬ರಲ್ಲಿ ಅಖಿಲ ಭಾರತ ಕರಕುಶಲ ನಿಗಮದಿಂದ ಆರಂಭವಾಯಿತು. ಇದು ಕೇವಲ ಸಂಗ್ರಹ ನಕಲು ಮಾಡುವಿಕೆ, ಪ್ರದರ್ಶನ ಇತ್ಯಾದಿಗಳಿಗಿಂತ ಪರಂಪರಾನುಗುಣಬವಾಗಿ ಬಂದಿದ್ದ ಕೃತಿ ನಿರ್ಮಾಣ ಕಾರ್ಯವು ಮುಂದುವರಿಯುವ ಕೊಂಡಿಯಂತೆ ರೂಪುಗೊಳ್ಳಬೇಕೆಂಬ ಆಶಯ ಉಳ್ಳದ್ದಾಗಿತ್ತು. ಎಂದರೆ ಗ್ರಾಮೀಣ ಪ್ರದೇಶದಿಂದ ಕಲಾವಿದರನ್ನು ಆಹ್ವಾನಿಸಿ ನುರಿತ ಹಿರಿಯ ಕಲಾವಿದರಿಂದ ಕ್ರಮಬದ್ಧ ಅಭ್ಯಾಸ ನೀಡಿ ಅಥವಾ ಕಾರ್ಯಾಗಾರ ಏರ್ಪಡಿಸಿ ಮತ್ತೆ ತಮ್ಮ ಪ್ರದೇಶದಲ್ಲಿ ಕಲೆಯನ್ನು ಮುಂದುವರೆಸುವಂತೆ ಪ್ರೋತ್ಸಾಹಿಸುವುದು ಮುಖ್ಯ ಉದ್ದೇಶವಾಗಿದೆ. ಹಾಗೂ ಕಲಾವಿದರ ಕೃತಿ ನಿರ್ಮಾಣಕ್ಕೆ ಬೇಕಾದ ಮೂಲ ಪದಾರ್ಥ ನೀಡುವುದು, ಸಮೀಪದ ಪಟ್ಟಣ ಪ್ರದೇಶದಲ್ಲಿ ಕೃತಿಗಳ ಮಾರಾಟಕ್ಕೆ ಮಳಿಗೆಗಳನ್ನು ತೆರೆಯುವದು ಸಹ ನಿಗಮದ ಕಾರ್ಯವಾಗಿತ್ತು. ಕೃತಿಕಾರನಿಗೆ ಮತ್ತು ಖಾಸಗಿ ವ್ಯಕ್ತಿಗಳಿಗೆ ಕೂಡ ಕೃತಿ ಮಾರಾಟಕ್ಕೆ ಅನುಕೂಲ ಮಾಡಿಕೊಟ್ಟಿದೆ.

೨. ಸುರಭಿ ಪ್ರದರ್ಶನ

ಕೇರಳ ರಾಜ್ಯದ ಕರಕುಶಲ ವಸ್ತುಗಳ ಅಪೆಕ್ಸ ಸಹಕಾರ ಸಂಘದಿಂದ ನಡೆಸಲ್ಪಡುವ ಸುರಭಿ ಪ್ರದರ್ಶನದ ಕನಕ ದಾಮೋದರ ಅಡಿಟೋರಿಯಂನ ೫೦ ಮಳಿಗೆಗಳಲ್ಲಿ ದೇಶಾದ್ಯಂತ

ಸಂಗ್ರಹಿಸಲಾದ ಅನೇಕ ವೈವಿಧ್ಯಮಯ ಕರಕುಶಲ ವಸ್ತುಗಳು ಇವೆ. ಹೈದರಾಬಾದ ಮಳಿಗೆಯಲ್ಲಿ ಬಿದ್ರಿ ಕೃತಿಗಳು ನಲ್ವತ್ತರಿಂದ ಐದು ಸಾವಿರ ಸಂಖ್ಯೆಯಲ್ಲಿವೆ. ಬೆಳ್ಳಿಯನ್ನು ಹುದುಗಿಸಿದ ಕಪ್ಪು ಲೋಹವು ಅತ್ಯುತ್ತಮ ಕಾಣಿಕೆಯಾಗಬಹದು. ಬಿದ್ರಿ ವಸ್ತುಗಳಲ್ಲಿ ಪೇಪರ್ ನೈಫ್, ಬೋಗಾಣಿ, ಅಗರಬತ್ತಿ ಸ್ಟ್ಯಾಂಡ್, ಹೇರ್ ಕ್ಲಿಪ್‌ಗಳು ಸಹ ಇಲ್ಲಿ ಪ್ರದರ್ಶನಗೊಂಡಿವೆಯಲ್ಲದೇ ಮಾರಾಟಕ್ಕೂ ಲಭ್ಯವಿವೆ.

೩. ಅಂಜಂತಾ–ಎಲ್ಲೋರಾ ಉತ್ಸವ

ಎಲ್ಲೋರಾ–ಔರಂಗಾಬಾದ ಉತ್ಸವವು ಎಲ್ಲೋರಾ ಮತ್ತು ಔರಂಗಾಬಾದಗಳ ವೈಭವವನ್ನು ಪ್ರದರ್ಶಿಸಿದೆ. ಅದು ೨೦೦೩ರ ಡಿಸೆಂಬರ್ ೧೩ರಿಂದ ೧೫ರವರೆಗೆ ನಡೆಯಿತು. ೧೭ನೆಯ ಶತಮಾನದ ಭವ್ಯ ಸ್ಮಾರಕ ಸೊನೇರಿ ಮಹಲಿನಲ್ಲಿ ಕಲೆ ಮತ್ತು ಕರಕುಶಲ ಗ್ರಾಮವನ್ನು ಆಯೋಜಿಸಿದ್ದು, ಅಲ್ಲಿ ಇತರ ರಾಜ್ಯಗಳ ಕರಕುಶಲ ವಸ್ತುಗಳೊಂದಿಗೆ ಬಿದ್ರಿ ಕಲೆಗಳ ಪ್ರದರ್ಶನ ಮತ್ತು ಮಾರಾಟವನ್ನು ಸಹ ಆಯೋಜಿಸಲಾಗಿತ್ತು.

೪. ಕರಕುಶಲವಸ್ತುಗಳ ಮೇಳ

ತಿರುಪತಿಯಲ್ಲಿ ಸೆಪ್ಟಂಬರ್ ೧೯ ರಿಂದ ಅಕ್ಟೋಬರ್ ೩, ೨೦೦೧ರ ವರೆಗೆ ವೆಂಕಟೇಶ್ವರ ಸ್ವಾಮಿಯ ಬ್ರಹ್ಮೋತ್ಸವದ ಜೊತೆಗೆ ಅಖಿಲ ಭಾರತ ಕರಕುಶಲವಸ್ತುಗಳ ಮೇಳ ನಡೆಯಿತು.

ಈ ಮೇಳವು "ಅರ್ಬನ್ ಹಾತ್" ಸ್ಥಳದಲ್ಲಿ ಜರುಗಿತು. ಇದನ್ನು ಕೇಂದ್ರದ ಜವಳಿ ಮಂತ್ರಾಲಯ ಹಾಗೂ ರಾಜ್ಯ ಸರಕಾರದ ಪ್ರವಾಸೋದ್ಯಮ ಖಾತೆಗಳು ಜೊತೆಯಾಗಿ ಏರ್ಪಡಿಸಿದ್ದವು. ತಿರುಚೂರ್ ರಸ್ತೆಯಲ್ಲಿ ನಡೆದ ಈ ಪ್ರದರ್ಶನ ವೆಚ್ಚ ಸುಮಾರು ೧.೬೧ ಕೋಟಿ. ಸ್ಥಳೀಯ ಕರಕುಶಲ ವಸ್ತುಗಳಿಗೆ ಹಾಗೂ ಕಲೆಗೆ ಪ್ರೋತ್ಸಾಹ ನೀಡುವುದು ಗುರಿ.

ಈ 'ಹಾತ್' ದೇಶದಲ್ಲಿ ಎರಡನೆಯದು ಹಾಗೂ ಆಂಧ್ರ ಪ್ರದೇಶದಲ್ಲಿ ಮೊದಲನೆಯದು. ಅದನ್ನು ಸೆಪ್ಟಂಬರ್ ೨೪ರಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಉದ್ಘಾಟಿಸಿದರು. ಸುಮಾರು ೧೦೦ ಕಲಾಕಾರರು, ಕುಶಲಕರ್ಮಿಗಳು ಮತ್ತು ನೇಕಾರರು ದೇಶದ ವಿವಿಧ ಭಾಗಗಳಿಂದ ಬಂದು ಮೇಳದಲ್ಲಿ ಭಾಗವಹಿಸಿದರು. ನಮ್ಮ ರಾಜ್ಯದಿಂದ ಪ್ರದರ್ಶಿತವಾದ ವಸ್ತುಗಳೆಂದರೆ ಕೊಂಡಪಳ್ಳಿಯ ಆಟಿಕೆಗಳು, ಕಲಾಂಕರಿಯ ಅಚ್ಚುಗಳು, ಕಾಷ್ಠ ಮತ್ತು ಶಿಲೆಯ ವಿಗ್ರಹಗಳು, ಪೊಚಂಪಳ್ಳಿಯ ಟೈ, ಬಣ್ಣದ ದ್ರವ್ಯಗಳು ಮತ್ತು ಬಳೆಗಳು. ಜೊತೆಗೆ ಬಿದ್ರಿ ಕಲೆ, ಗಂಧ ಮಣಿಯ ಆಭರಣ, ಘುಲ್ಕನ ಮತ್ತು ಚಿಕಣಿ ವಸ್ತು ದ್ರವ್ಯಗಳು, ಕಂಚಿನ ಮೂರ್ತಿಗಳು ಮುಂತಾವುಗಳನ್ನು ನಿರ್ಮಿಸುವ ಕುಶಲಕರ್ಮಿಗಳು ದೇಶದ ವಿವಿಧ ಭಾಗಗಳಿಂದ ಮಳಿಗೆಗಳನ್ನು ತೆರೆದಿದ್ದರು. ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದ ಜಿ.ಕೃಷ್ಣರಾವ್ ಅವರು– ತಿರುಪತಿಯ ಪ್ರಮುಖವಾದ ಯಾತ್ರಾಕ್ಷೇತ್ರವಾದುದರಿಂದ ತಮ್ಮ ಇಲಾಖೆಯ ಗಾಹಕರನ್ನು ಆಕರ್ಷಿಸುವ ಪ್ರಯತ್ನ

ಮಾಡಬೇಕಾಗಿಲ್ಲ. ಆದ್ದರಿಂದ ಇಲಾಖೆಯ ಹೊಣೆಯೆಂದರೆ ತಯಾರಕ ಮತ್ತು ಗ್ರಾಹಕರ ನಡುವೆ ಮಧ್ಯವರ್ತಿಗಳಿಗೆ ಅವಕಾಶ ನೀಡದೆ ಸಂಬಂಧವೇರ್ಪಡಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಅಲ್ಲದೆ ತಿರುಪತಿಯನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೆಂದರೆ ಕಾಷ್ಠಶಿಲ್ಪ ಮತ್ತು ಕಲಂಕಾರಿ ಮುದ್ರಣಗಳಂಥ ಸ್ಥಳೀಯ ಕುಶಲಕಲೆಗಳ ಬಗೆಗಿನ ಅದರ ಸಂಬಂಧ.

೫. ಹರ್ಯಾನಾ ಎಂಪೋರಿಯಾ

ಆಂಧ್ರ ಪ್ರದೇಶದ ರೇಷ್ಮೆ ಸೀರೆ ಹಾಗು ಬದ್ರಿ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟವನ್ನು ಹರಿಯಾಣಾ ರಾಜ್ಯ ಸಣ್ಣ ಕೈಗಾರಿಕಾ ಮತ್ತು ರಫ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಪಿ.ಕೆ.ಗುಪ್ತಾ ಅವರು ಸೆಪ್ಟೆಂಬರ್ ೨೨, ೨೦೦೩ ರಂದು ಹರಿಯಾಣ ಎಂಪೋರಿಯಾದಲ್ಲಿ ಉದ್ಘಾಟಿಸಿದರು. ಪ್ರದರ್ಶನವು ಒಂದು ತಿಂಗಳ ವರೆಗೆ ಮುಂದುವರೆಯಿತು. ಇದರಲ್ಲಿ ಹಿತ್ತಾಳೆ, ಲೋಹ ಹಾಗೂ ಬಿದ್ರಿ ಪಾತ್ರೆಗಳಿದ್ದವು.

೬. ಭಾರತ ಕಲಾಭವನ ಆರ್ಟ್ ಗ್ಯಾಲರಿ

ಈ ಮ್ಯೂಸಿಯಂನಲ್ಲಿ ಸುಮಾರು ೧೩೦೦ ಅಲಂಕರಣ ವಸ್ತುಗಳ ಸಂಗ್ರಹವಿದೆ. ಅವುಗಳಲ್ಲಿ ಬಗೆ ಬಗೆಯ ಆಭರಣಗಳು, ಲೋಹಶಿಲ್ಪಗಳು, ಗಾಜಿನ ಪಾತ್ರೆಗಳು, ಹಸ್ತಿದಂತ, ಆಯುಧಗಳು ಮುಂತಾದವುಗಳಿವೆ. ಇವು ಹೆಚ್ಚಾಗಿ ಕಲಾಕುಶಲತೆಯಿಂದ ನಿರ್ಮಿಸಿದ ನಿತ್ಯೋಪಯೋಗಿ ವಸ್ತುಗಳಾಗಿವೆ. ಇಲ್ಲಿನ ಅಲಂಕರಣ ವಸ್ತುಗಳು ಸುಮಾರು ೧೭ ರಿಂದ ೨೦ ನೆಯ ಶತಮಾನದ ಅವಧಿಗೆ ಸೇರಿದವುಗಳಾಗಿವೆ. ಅಂದರೆ ಮೊಗಲರು, ಪ್ರಾಂತೀಯ ಮೊಗಲರು, ಈಸ್ಟ ಇಂಡಿಯಾ ಕಂಪನಿ ಮತ್ತು ಈಚಿನ ಕಾಲಾವಧಿಗೆ ಸೇರಿದವು. ಮೊಗಲರು ಭಾರತದಲ್ಲಿ ನೆಲೆಗೊಂಡು ಮೇಲೆ ವೈಭವೋಪೇತವಾದ ಜೀವನನ್ನು ನಡೆಸಿದರು. ಅವರ ನಿತ್ಯ ಬಳಕೆಯ ವಸ್ತುಗಳನ್ನು ಗಮನಿಸಿದರೆ ಸುಸಂಸ್ಕೃತವಾದ ಅಭಿರುಚಿಯ ಅರಿವಾಗುತ್ತದೆ. ಅಲಂಕರಣವಸ್ತುಗಳ ಬಗೆಗೆ ಅವರಿಗಿರುವ ಆಸಕ್ತಿಯನ್ನು ಅಕ್ಬರ್ ಬಾದಶಹನ (೧೫೬೮–೧೬೦೫) ಕಾಲದಿಂದಲೂ ಕಾಣಬಹುದು. ಅದು ಅವನ ಮಗನಾದ ಜಹಾಂಗೀರ (೧೬೦೫–೧೬೨೭) ಮತ್ತು ಶಹಾಜಹಾನ (೧೬೨೮–೧೬೫೮) ರ ಕಾಲದಲ್ಲಿ ಮತ್ತಷ್ಟು ಹೆಚ್ಚಿತು. ಅಲಂಕರಣವಸ್ತುಗಳ ನಿರ್ಮಾಣದ ಸಲುವಾಗಿ ಆಗ್ರಾ, ಫತೇಪುರ ಸಿಕ್ರಿ, ದಿಲ್ಲಿ, ಲಾಹೋರ ಮತ್ತು ಅಹಮದಾಬಾದಗಳಲ್ಲಿ ಸರಕಾರಿ ಕಾರ್ಯಾಗಾರಗಳು ಸ್ಥಾಪಿತವಾದವು. ಕುಶಲಕೆಲಸಗಾರರನ್ನು ದೇಶ ವಿದೇಶಗಳಿಂದ ಕರೆಸಿಕೊಳ್ಳಲಾಯಿತು. ಅವರನ್ನು ಮೊಗಲ್ ಪರಿವಾರದವರೆಂದು ಕರೆಯಲಾಯಿತು. ಇಂದಿಗೂ ಅದರ ಪ್ರತಿಸ್ಪಂಧನವನ್ನು ಗುರುತಿಸಬಹುದು.

ಸಮಕಾಲೀನ ಲಿಖಿತ ದಾಖಲೆಗಳ ಮೂಲಕ ಅನೇಕ ಸ್ವಾರಸ್ಯಕರವಾದ ಸಂಗತಿಗಳು ಗಮನ ಸೆಳೆಯುತ್ತವೆ. ಅಲ್ಲಿಯೂ ವಿಶೇಷವಾಗಿ ಸಾಮ್ರಾಟರು ಮತ್ತು ವಿವಿಧ ತೆರನಾದ ಕುಶಲಕಲೆಗಳು ಮತ್ತು ಕಲಾಕಾರದದ ಬಗ್ಗೆ ಅವರಿಗಿರುವ ವಿಶೇಷ ಆಸಕ್ತಿಗಳನ್ನು ಕುರಿತು. ವಿಶಿಷ್ಟವಾದ

ಸಾಧನೆಯನ್ನುಮಾಡಿದ ಕುಶಲಕಲೆಗಾರರಿಗೆ ನಾದಿರ-ಉಲ್-ಜಮನ (ಕಾಲಿದ ಆಶ್ವರ್ಯ), ನಾದಿರ್-ಉಲ್-ಅಸರ (ಯುಗದ ಅದ್ಭುತ), ಹುನಾರಮಂದ (ಕೌಶಲ್ಯ ಪೂರ್ಣ) ಇತ್ಯಾದಿ ಬಿರುದುಗಳನ್ನು ನೀಡಲಾಗುತ್ತಿತ್ತು. ಮೊಗಲರು ವರ್ಷವಿಡೀ ಅನೇಕ ಉತ್ಸವಗಳನ್ನು ಆಚರಿಸುತ್ತಿದ್ದರು. ಆ ಸಮಯದಲ್ಲಿ ಅವರು ಇತರರಿಗೆ ಉಪಹಾರದ ವಸ್ತುಗಳನ್ನು ಅರ್ಪಿಸುತ್ತಿದ್ದರಷ್ಟೇ ಅಲ್ಲ, ತಮಗೆ ಅರ್ಪಿಸಿದ ವಸ್ತುಗಳು ಕಲಾತ್ಮಕತೆಯನ್ನು ಮೆಚ್ಚುತ್ತಿದ್ದರು. ಆಸ್ಥಾನಿಕರು, ವಿದೇಶಿರಾಯಭಾರಿಗಳು, ವಾಣಿಜ್ಯ ವ್ಯವಹಾರನಿರತರು ಮತ್ತು ಮಾರಾಟಗಾರರೇ ಮೊದಲಾದವರು ಸುಲ್ತಾನರ ಅನುಗ್ರಹಕ್ಕೆ ಪಾತ್ರರಾಗುವುದಕ್ಕೋಸ್ಕರ ಅಪರೂಪದ ಮತ್ತು ವಿಶೇಷವಾದ ಕಲಾಭಿರುಚಿಯನ್ನು ಪ್ರಕಟಿಸುವ ವಸ್ತುಗಳಿಗಾಗಿ ಹುಡುಕಾಡುತ್ತಿದ್ದರು.

ಲೋಹದ ಪಾತ್ರೆಗಳು

ಅಲಂಕರಣಕಲೆಯ ಮಹತ್ವದ ಲಕ್ಷಣವೆಂದರೆ ಲೋಹದ ಪಾತ್ರೆಗಳನ್ನು ವಿವಿಧ ಮಾದರಿಗಳಲ್ಲಿ ಹಾಗೂ ಆಕಾರದಲ್ಲಿ ರೂಪಗೊಳಿಸುವುದು. ಇವುಗಳಲ್ಲಿ ಬಿದ್ರಿಕಲೆಯೂ ಒಂದು ಶ್ರೀಮಂತ ಮುಸಲ್ಮಾನರಲ್ಲಿ ಬಿದ್ರಿ ವಸ್ತುಗಳು ಜನಪ್ರಿಯವಾಗಿದ್ದವು. ಅವುಗಳಿಗೆ ದಕ್ಷಿಣ ಹಾಗೂ ಉತ್ತರ ಭಾರತದ ಆಸ್ಥಾನಗಳಲ್ಲಿ ತುಂಬ ಬೇಡಿಕೆಯಿತ್ತು ಭಾರತ ಕಲಾಭವನದ ಆರ್ಟ್ ಗ್ಯಾಲರಿಯಲ್ಲಿ ಕಡ ಮತ್ತು ಪಾನ್‌ದಾನ್ ವಸ್ತುಗಳನ್ನು ಪ್ರದರ್ಶಿಸಿದ್ದಾರೆ.

೭. ಕಾವೇರಿ ಪ್ರದರ್ಶನ ಬಿನ್ನೈ

ಕಾವೇರಿ ಪ್ರದರ್ಶನವು ಕರ್ನಾಟಕದ ಕಲಾತ್ಮಕ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಅಭಿವೃದ್ಧಿ ನಿಗಮವು ಈ ಪ್ರದರ್ಶನವನ್ನು ಆಯೋಜಿಸಿತ್ತು. ೧೩ ಡಿಸೆಂಬರ್ ೨೦೦೩ ರಂದು ಏರ್ಪಡಿಸಲಾದ ಈ ಪ್ರದರ್ಶನದಲ್ಲಿ ವಿಶಿಷ್ಟವಾದ ಕರಕುಶಲವಸ್ತುಗಳು ಕರ್ನಾಟಕದ ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುತ್ತಿದ್ದವು. ಬಿದ್ರಿ ಕಲೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದ ಈ ನಾಡು ಅನೇಕ ಆಕರ್ಷಕ ವಸ್ತುಗಳನ್ನು ಪ್ರದರ್ಶಿಸಿತು. ಉತ್ತರ ಕರ್ನಾಟಕ ಬೀದರಿನಿಂದ ಸಂಗ್ರಹಿಸಲ್ಪಟ್ಟ ಬಿದ್ರಿ ಪಾತ್ರೆಗಳ ವಿಶೇಷ ಸಂಗ್ರಹವು ಗಮನ ಸೆಳೆಯುವಂತಿತ್ತು. ಪ್ರದರ್ಶನವು ಮೂರು ದಿನಗಳ ಕಾಲ ಜರುಗಿತು.

೮. ಜಿಲ್ಲಾ ಪುರಾತತ್ವ ಮತ್ತು ಪರಂಪರೆಯ ಸಂಗ್ರಹಾಲಯ, ನಿಜಾಮಾಬಾದ

ನಿಜಾಮಾಬಾದಿನಲ್ಲಿ ೨೪-೧೦-೨೦೦೧ರಂದು ಜಿಲ್ಲಾ ಪುರಾತತ್ವ ಶಾಸ್ತ್ರೀಯ ಮ್ಯೂಸಿಯಂನ್ನು ಪ್ರಾರಂಭಿಸಲಾಯಿತು. ಇಲ್ಲಿ ಬಹುಸಂಖ್ಯೆಯಲ್ಲಿ ಕರಕುಶಲವಸ್ತುಗಳನ್ನು ಹಾಗೂ ಮಾನವ ನಾಗರೀಕತೆಯ ವಿಕಸನದ ವಿವಿಧ ಹಂತಗಳನ್ನು ಪ್ರತಿನಿಧಿಸುವ ಅವಶೇಷಗಳನ್ನು ಸಂಗ್ರಹಿಸಲಾಗಿದೆ. ಈ ಮ್ಯೂಸಿಯಂನಲ್ಲಿ ಸ್ಥೂಲವಾಗಿ ಮೂರು ವಿಭಾಗಗಳಿವೆ-ಪುರಾತತ್ವವಿಭಾಗ, ಶಿಲ್ಪವಿಭಾಗ ಹಾಗೂ ಕಂಚು ಮತ್ತು ಅಲಂಕರಣ ಕಂಡು ಮತ್ತು ಅಲಂಕರಣ ವಿಭಾಗವು ಬೇರೆ ಬೇರೆ

ಕಾಲಕ್ಕೆ ಸೇರಿದ ಕಂಚಿನ ಪಾತ್ರೆಗಳನ್ನು ಹೊಂದಿದ್ದರೆ, ಅಲಂಕರಣ ವಿಭಾಗದಲ್ಲಿ ಬಿದ್ರಿ ಪಾತ್ರೆ, ಪಿಂಗಾಣುಪಾತ್ರೆ ಹಾಗೂ ಗಾಜಿನ ಪಾತ್ರೆಗಳಿವೆ. ಇಲ್ಲಿ ಪ್ರದರ್ಶನಕ್ಕಿಟ್ಟಿರುವ ಪ್ರಮುಖವಾದ ವಸ್ತುಗಳೆಂದರೆಆಯುಧಗಳು, ಬಂಗಾರವನ್ನು ಹುದುಗಿಸಿದ ಕತ್ತಿಯ ಕವಚ, ಗುರಾಣು, ಎದೆಗಟ್ಟು, ಬಾಣ, ಬಾಗಿದ ಕತ್ತಿಗಳು ಕರಾರಿಗಳು ಇತ್ಯಾದಿ ಇವು ಹೆಚ್ಚಾಗಿ ಕುತುಬ್ ಶಾಹಿ ಮತ್ತು ಅಸಫಜಾಹಿಕಾಲಕ್ಕೆ ಸೇರಿದವುಗಳಾಗಿವೆ. ಈ ಮ್ಯೂಸಿಯಂನಲ್ಲಿ ಪ್ರದರ್ಶಿಸಲಾದ ಬಿದ್ರಿ ಪಾತ್ರೆಗಳಲ್ಲಿ ಹುಕ್ಕಾ, ಉಗಾಲವಾದಾನ, ಪಾನದಾನ, ಹೂದಾನಿಯೇ ಮುಂತಾದವುಗಳಿವೆ. ಈ ಎಲ್ಲ ವಸ್ತುಗಳನ್ನು ಪುರಾತತ್ವ ವಿಭಾಗದವರು ನಿಜಾಮಾಬಾದಿನ ಜಿಲ್ಲಾಧಿಕಾರಿಗಳ ವಿನಂತಿಯ ಮೇರೆಗೆ ಹೈದರಾಬಾದಿನಿಂದ ತಂದಿದ್ದಾರೆ.

೯. ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಮುಂಬಯಿ

ಮುಂಬಯಿನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಪ್ರಿನ್ಸ್ ಜಾರ್ಜ್ ಅವರ ಭಾರತಕ್ಕೆ ೧೯೦೫ರಲ್ಲಿ ಭೇಟಿ ನೀಡಿದಾಗ ಆರಂಭಗೊಂಡಿತು. ಈ ಕಟ್ಟಡಕ್ಕೆ ಪ್ರಿನ್ಸ್ ಜಾರ್ಜ್ ಅಡಿಗಲ್ಲನ್ನಿಟ್ಟರು. ಈಗ ಮ್ಯೂಸಿಯಂನ ಹೆಸರು ಬದಲಾಗಿದೆ. ಮ್ಯೂಸಿಯಂನ ನೆಲ ಅಂತಸ್ತಿನಲ್ಲಿರುವ ಸೆಂಟ್ರಲ್ ಹಾಲನ್ನು "ಕೀ ಗ್ಯಾಲರಿ"ಯನ್ನಾಗಿ ಬದಲಾಯಿಸಲಾಗಿದೆ. ಇಲ್ಲಿ ಮ್ಯೂಸಿಯಂನ ಬೇರೆ ಬೇರೆ ಗ್ಯಾಲರಿಗಳಲ್ಲಿರುವ ಕಲಾವಸ್ತುಗಳ ಮಾದರಿಗಳನ್ನಿಡಲಾಗಿದೆ. ಇದರ ಮೊದಲ ಮಹಡಿಯ ಮಧ್ಯದ ಬಾಲ್ಕನಿಯಲ್ಲಿ ೧೮ ಹಾಗೂ ೧೯ನೆಯ ಶತಮಾನಕ್ಕೆ ಸೇರಿದ ಹಸ್ತಿದಂತ ಹಾಗು ಬೆಳ್ಳಿಯ ಅಲಂಕರಣ ಕಲಾವಸ್ತುಗಳನ್ನು ಪ್ರದರ್ಶಿಸಲಾಗಿದೆ. ವರ್ಣಚಿತ್ರಗಳ ಗ್ಯಾಲರಿಯ ಎದುರಿನ ಹಾಲಿನಲ್ಲಿ ಅಲಂಕರಣ ಕಲಾವಸ್ತುಗಳಿದ್ದು ಭಾರತೀಯ ಆಭರಣಕಲೆಯ ಮಾದರಿಗಳು, ಬೆಳ್ಳಿಯ ವಸ್ತುಗಳೂ ಗಾಜಿನ ಲೇಪನಹುಳ್ಳ ಹೂಜಿಗಳು ಹಾಗೂ ಹುಕ್ಕಾ ಸ್ಟ್ಯಾಂಡುಗಳಿವೆ. ಬಿದ್ರಿ ಪಾತ್ರೆಗಳು ಅತ್ಯದ್ಭುತ ಕಲಾಕೌಶಲ್ಯದಿಂದ ಕೂಡಿದ್ದು ಇಂದಿನ ವಸ್ತುಗಳೊಂದಿಗೆ ವೈದೃಶ್ಯವನ್ನು ಹೊಂದಿವೆ. ಅವುಗಳನ್ನು ನೋಡುತ್ತಿದ್ದಂತೆ ಕರಕುಶಲತೆಯಲ್ಲಿ ೧೯ನೇಯ ಶತಮಾನದಿಂದೀಚೆಗೆ ಗುಣಮಟ್ಟವು ತೀವ್ರವಾಗಿ ಕುಸಿದಿರುವುದನ್ನು ಕಾಣಬಹುದು. ಮ್ಯೂಸಿಯಂನಲ್ಲಿ ಈ ಕೆಳಗಿನ ಬಿದ್ರಿ ಪಾತ್ರೆಗಳಿವೆ. ಅಲ್ಲದೇ ೧೯ನೇ ಶತಮಾನದ ಬಿದ್ರಿ ಕಲಾಕೃತಿಗಳಾದ ನವಿಲು, ಮೀನು, ಹೂಜೆ, ತಾಟು, ಹೂದಾನಿ, ಪಾನದಾನ, ಹುಕ್ಕಾ ಪೆಟ್ಟಿಗೆ, ಅತ್ತರ್ ಬಾಟಲಿ ಅಲ್ಲದೆ ಬಿದ್ರಿ ಕಲಾಕಾರ ಕ್ರಿ.ಶ.೧೮೭೦ರ ಚಿತ್ರವನ್ನು ಕೂಡ ಎರಡನೇ ಮಹಡಿಯಲ್ಲಿ ಪ್ರದರ್ಶಿಸಲಾಗಿದೆ.

೧೦. ಹೈದರಬಾದ್ ಮ್ಯೂಸಿಯಂ

ಲಾಲ್ ಬಹಾದ್ದೂರ ಶಾಸ್ತ್ರಿ ಭವನದ ಎದುರಿಗಿರುವ ಪುಟ್ಟ ಸಂಗ್ರಹಾಲಯವನ್ನು ೧೯೩೦ರಲ್ಲಿ ಇದೇ ಉದ್ದೇಶಕ್ಕಾಗಿ ಕಟ್ಟಲಾದ ಅರ್ಧವರ್ತುಲಾಕಾರದ ಕಟ್ಟಡವಾಗಿದೆ. ಇದರಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು, ಶಿಲ್ಪಗಳು, ವರ್ಣಚಿತ್ರಗಳು, ಶಾಸನಗಳು, ಹಸ್ತಪ್ರತಿಗಳು, ನಾಣ್ಯಗಳು,

ಆಯುಧಗಳು, ಬಿದ್ರಿ ಪಾತ್ರೆಗಳು, ಪಿಂಗಾಣಿ ಪಾತ್ರೆಗಳು, ವಸ್ತ್ರ-ಭೂಷಣಗಳು ಅಲ್ಲದೆ ೪೦೦೦ ವರ್ಷಗಳಷ್ಟು ಪುರಾತನವಾದ ಈಜಿಪ್ತರ ಮಮ್ಮಿಯ ಮಾದರಿಗಳು ಇವೆ. ಮ್ಯೂಸಿಯಂನ ಹಿಂಭಾಗದಲ್ಲಿರುವ ಅಜಂತಾ ಪೆವಿಲಿಯನ್‌ದಲ್ಲಿ ಅಜಂತಾದ ವರ್ಣಚಿತ್ರಗಳ ಪ್ರತಿಕೃತಿಗಳಿವೆ. ನಿಜಾಮರು ಸಂಗ್ರಹಿಸಿದ ಅಪರೂಪದ ಬಿದ್ರಿ ಕಲಾಕೃತಿಗಳ ಸಂಗ್ರಹವು ಜುಬಿಲಿ ಹಾಲ್‌ನಲ್ಲಿವೆ.

೧೧. ಲೇಪಾಕ್ಷಿ ಕರಕುಶಲವಸ್ತುಗಳ ಬಜಾರ – ೨೦೦೨

"ಲೇಪಾಕ್ಷಿ ಕ್ರಾಫ್ಟ್ಸ ಬಜಾರ" ಎಂಬ ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು ಎ.ಪಿ.ಎಚ್.ಡಿ.ಸಿ.ಎಲ್ ಸಂಸ್ಥೆಯ ಬೀಚ್ ರಸ್ತೆಯಲ್ಲಿರುವ ವಿಶ್ವಪ್ರಿಯ ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಿತು. ಈ ಪ್ರದರ್ಶನವು ಕಲಾಕಾರರ ಹಸ್ತ ನೈಪುಣ್ಯ, ಸೃಜನಶೀಲತೆ ಹಾಗತೂ ಕಲ್ಪಕತೆಗಳನ್ನು ಪ್ರತಿಬಿಂಬಿಸುವಂಥದಾಗಿತ್ತು. ಕರಕುಶಲವಸ್ತುಗಳಲ್ಲಿರುವ ಕಲಾತ್ಮಕ ಸೌಂದರ್ಯ ಮತ್ತು ಉಪಯುಕ್ತತೆಗಳು ನಿತ್ಯ ಜೀವನದ ನೀರಸ ವಾತಾವರಣಕ್ಕೆ ರಸಸ್ಪರ್ಶವನ್ನು ನೀಡಿ ನವೋತ್ಸಾಹವನ್ನು ತುಂಬುತ್ತವೆ. ಮನೆಯಾಗಲಿ, ಕಛೇರಿಯಾಗಲಿ ಇಂಥ ವಸ್ತುಗಳು ವಾತಾವರಣದ ಸೊಗಸನ್ನು ಹೆಚ್ಚಿಸುವ ಮೂಲಕ ಚೈತನ್ಯದಾಯಕವಾಗುತ್ತವೆ.

ಈ ಬಜಾರಿನಲ್ಲಿ ಅನೇಕ ಪ್ರಶಸ್ತಿ ಪುರಸ್ಕೃತರು ಭಾಗವಹಿಸಿದ್ದರು. ಬಿದ್ರಿ ಕಲಾಕಾರಲ್ಲೊಬ್ಬರಾದ ಮೊಹಮ್ಮದ ಕರೀಮುದ್ದೀನವರು ಹೇಳುವಂತೆ ಈ ಪ್ರದರ್ಶನದಲ್ಲಿ ತಾವು ಮತ್ತು ಸತುಗಳ ಮಿಶ್ರಣಕ್ಕೆ ಶುದ್ಧ ಬೆಳ್ಳಿಯನ್ನು ಹುದುಗಿಸಿ ಕಲಾಕೃತಿಗಳನ್ನು ಸಿದ್ಧಗೊಳಿಸಲಾಯಿತು. ಕೆಲವೊಮ್ಮೆ ಬೆಳ್ಳಿಯ ಬದಲು ಬಂಗಾರವನ್ನು ಬಳಸಲಾಗಿತ್ತು. ಕ್ರಾಫ್ಟ್ಸ ಬಜಾರಿನಲ್ಲಿ ಪ್ರದರ್ಶಿಸಿದ ವಸ್ತುಗಳಲ್ಲಿ ಸಿಗರೇಟು ಕೇಸು, ಪೇಪರ್-ಕಟರ್, ಕೋಟಿನ ಬಟನ್, ಕಿವಿಯ ರಿಂಗು, ಹೇರ ಕ್ಲಿಪ್, ಪೆನ್ ಸ್ಟ್ಯಾಂಡ್, ಹೂಜಿ, ಪಾತ್ರೆಗಳಿಗೆ ಪೆಟ್ಟಿಗೆ, ಪೇಪರ್‌ವೇಟ್, ಕಫ್ಲಿಂಕ್ಸ್, ಮೇಣಬತ್ತಿ ಸ್ಟ್ಯಾಂಡ್, ಕೀಚೈನ್ ಮತ್ತು ಶಹನಾಯಿ ಪಾತ್ರೆಗಳಿದ್ದವು. ಈ ಪ್ರದರ್ಶನವು ೧೦ ದಿನಗಳ ಕಾಲ ಜರುಗಿತು.

೧೨. ಸರದಾರ ವಲ್ಲಭಬಾಯಿ ಪಟೇಲ ಮ್ಯೂಸಿಯಂ ಸೂರತ

ಗುಜರಾತಿನಲ್ಲಿ ಸುಮಾರು ೨೬ ಮ್ಯೂಸಿಯಂಗಳಿವೆ. ಸರದಾರ ವಲ್ಲಭಬಾಯಿ ಪಟೇಲ್ ಮ್ಯೂಸಿಯಂ ಸೂರತದ ಮುನ್ಸಿಪಲ್ ಕಾರ್ಪೋರೇಶನ್ನಿನ ಹೆಮ್ಮೆಯಾಗಿದೆ. ಇಲ್ಲಿ ಸುಮಾರು ೧೦೩೬೮ ವಸ್ತುಗಳಿದ್ದು ಅವುಗಳಲ್ಲಿ ಬಿದ್ರಿ ಪಾತ್ರೆಗಳು ಹಾಗೂ ಲೋಹದ ಪಾತ್ರೆ ಮುಂತಾದವುಗಳಿವೆ. ಈ ಸಂಗ್ರಹವು ಸಾಕಷ್ಟು ದೊಡ್ಡದಾಗಿದ್ದು ಒಟ್ಟು ೧೪೨೮ ಲೋಹ ಬಿದ್ರಿ ವಸ್ತುಗಳನ್ನೊಳಗೊಂಡಿದೆ.

೧೩. ಜಗದೀಶ ಮತ್ತು ಕಮಲಾ ಮಿತ್ತಲ್ ಮ್ಯೂಸಿಯಂ, ಹೈದರಾಬದ

ಹೈದರಬಾದನಲ್ಲಿರುವ ಜಗದೀಶ ಮತ್ತು ಕಮಲಾ ಮಿತ್ತಲ್ ಮ್ಯೂಸಿಯಂ ಭಾರತೀಯ ಕಲಾಕ್ಷೇತ್ರದಲ್ಲಿ ತುಂಬಾ ಪರಿಚಿತವಾಗಿದೆ. ಇದಕ್ಕೆ ಇಲ್ಲಿನ ಸಂಗ್ರಹದಲ್ಲಿರುವ ಶ್ರೇಷ್ಠ ಕಲಾಕೃತಿಗಳೇ

ಕಾರಣ. ಈ ಮ್ಯೂಸಿಯಂಗೆ ಈ ಹೆಸರು ಬರುವುದಕ್ಕೆ ಕಾರಣರಾದವರು ಕಲಾವಿದ ದಂಪತಿಗಳಾದ ಜಗೀಶ ಮಿತ್ತಲ್ ಹಾಗೂ ಕಮಲಾ ಮಿತ್ತಲ್ ಅವರು. ಈ ದಂಪತಿಗಳು ೪೦ ವರ್ಷಕ್ಕೂ ಮೇಲ್ಪಟ್ಟ ಅವಧಿಯಲ್ಲಿ ಸಂಗ್ರಹಿಸಿದ ಸಾವಿರಾರು ಕಲಾಕೃತಿಗಳು ಇಲ್ಲಿವೆ. ಅವರು ಅವುಗಳನ್ನು ಮ್ಯೂಸಿಯಂನ ಮೂಲಕ ಪ್ರದರ್ಶಿಸಬೇಕೆಂಬುದು ಸಂಕಲ್ಪಿಸಿ ೧೯೭೬ನೇ ಮಾರ್ಚ್ ೩೦ ರಂದು ಹೈದರಾಬಾದನಲ್ಲಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟೊಂದನ್ನು ಸ್ಥಾಪಿಸಿ "ಜಗದೀಶ ಎಂಡ್ ಕಮಲಾ ಮಿತ್ತಲ್ ಮ್ಯೂಸಿಯಂ ಆಫ್ ಇಂಡಿಯನ್ ಆರ್ಟ್" ಎಂಬ ಹೆಸರಿನಲ್ಲಿ ಮ್ಯೂಸಿಯಂನ್ನು ಆರಂಭಿಸಿದರು.

ಈ ಮ್ಯೂಸಿಯಂನಲ್ಲಿ ಭಾರತೀಯ ಉಪಖಂಡದ ೧೯೦೦ರ ವರೆಗಿನ ಪಾರಂಪರಿಕ ಕಲೆ ಮತ್ತು ಕರಕುಶಲ ಕಲೆಗಳ ಸಂಗ್ರಹವಿದೆ. ಇಲ್ಲಿ ಸುಮಾರು ೧೫೮೦ ವಸ್ತುಗಳಿದ್ದು ಅವುಗಳಲ್ಲಿ ಬಿದ್ರಿ ಕಲಾಕೃತಿಗಳೂ ಸೇರಿವೆ. ಈ ಮ್ಯೂಸಿಯಂನ ಬಹುಸಂಖ್ಯೆಯ ಕಲಾಕೃತಿಗಳನ್ನು ಲಂಡನ್, ಯು.ಎಸ್.ಎ ಮತ್ತು ಫ್ರಾನ್ಸ್‌ಗಳಲ್ಲಿ ನಡೆದ ಭಾರತ ಉತ್ಸವಗಳಲ್ಲಿ ಪ್ರದರ್ಶಿಸಲಾಗಿತ್ತು. ಅದೇ ರೀತಿಯಲ್ಲಿ ಸಾಲಾರ್ ಜಂಗ ಮ್ಯೂಸಿಯಂನಲ್ಲಿ ನಡೆದ ರಾಷ್ಟ್ರೀಯ ಪ್ರದರ್ಶನಗಳಲ್ಲಿಯೂ ಪ್ರದರ್ಶಿಸಲಾಯಿತು.

೧೪. ಇಂಡಿಯನ್ ಮ್ಯೂಸಿಯಂ ಕಲ್ಕತ್ತಾ

ಇಂಡಿಯನ್ ಮ್ಯೂಸಿಯಂನ ಸಂಗ್ರಹದಲ್ಲಿರುವ ಡಮಾಸ್ಕೇಸ್ ಮತ್ತು ಬಿದ್ರಿಕಲೆಯ ವಸ್ತುಗಳನ್ನು ಕುರಿತು ಸಂಕ್ಷಿಪ್ತ ವೀಕ್ಷಣೆಯಿಂದ ಭಾರತೀಯ ಉಪಖಂಡದಲ್ಲಿ ರೂಢಿಯಲ್ಲಿರುವ ವೈವಿಧ್ಯಪೂರ್ಣವಾದ ಕರಕುಶಲವಸ್ತುಗಳ ಬಗೆಗೆ ತಿಳಿಯಬಹುದು. ಆ ಮೂಲಕ ಅವುಗಳ ಮೌಲ್ಯವನ್ನು ನಿರ್ಧರಿಸಲು ಪ್ರಯತ್ನಿಸಬಹುದು. ಪ್ರಾಚೀನತೆಯ ದೃಷ್ಟಿಯಿಂದ ಹೇಳುವುದಾದರೆ ಬಹಳಷ್ಟು ಕಲಾಕೃತಿಗಳು ಪ್ರಾಚೀನವೆನ್ನುವಂತಿಲ್ಲ. ಸಾಮಾನ್ಯವಾಗಿ ಹೆಚ್ಚಿನವು ೬೦ ರಿಂದ ೭೦ ವರ್ಷಗಳಷ್ಟು ಹಳೆಯವು ಹಾಗಾದರೂ ಕೆಲವಷ್ಟು ಕರಕುಶಲವಸ್ತುಗಳ ಪರಂಪರೆಯ ನಷ್ಟವಾಗಿರುವುದರಿಂದ ಅವುಗಳ ಸಂಗ್ರಹಕ್ಕೆ ವಿಶೇಷ ಮಹತ್ವವು ಪ್ರಾಪ್ತವಾಗುತ್ತದೆ.

ಒಟ್ಟು ೧೫೫ ಇನ್‌ಲೇ ವಸ್ತುಗಳನ್ನು ಟಿಬೇಟ, ಚೀನಾ, ಜಪಾನ್, ಪರ್ಶಿಯಾ, ಕೋಟ್ಲಿ ಲಾಹೋರ (ಪಾಕಿಸ್ತಾನ), ತ್ರಾವಣಕೋರ, ಸಿಯಾಲಕೋಟ (ಪಾಕಿಸ್ತಾನ), ತಾಲ್ಪುರ (ಸಿಂಧ) ಗುಜರಾತ (ಪಾಕಿಸ್ತಾನ), ಲಕ್ನೋ, ಜಯಪುರ, ರಾಜಪುತಾನಾ, ತ್ರಿವೇಂದ್ರಂ, ಮೊರದಾಬಾದ, ಮುರ್ಶಿದಬಾದ, ಖನ್ನಾ (ಪಂಜಾಬ), ಮತ್ತು ಕೆಲವು ಅಜ್ಞಾತಸ್ಥಳಗಳಿಂದ ಸಂಗ್ರಹಿಸಲಾಗಿದೆ. ೨೪ ವಸ್ತುಗಳನ್ನು ಬೀದರ / ಹೈದರಾಬಾದಗಳಿಂದ ಸಂಗ್ರಹಿಸಲಾಗಿದೆ.

೧೫. ಕರಕುಶಲವಸ್ತುಗಳ ಸಂಗ್ರಹಾಲಯ, ನವದೆಹಲಿ

ಈ ಮ್ಯೂಸಿಯಂನಲ್ಲಿ ೩೦ ವರ್ಷಗಳಿಂದ ವಸ್ತುಗಳನ್ನು ಸಂಗ್ರಹಿಸಿಲಾಗುತ್ತಿದೆ. ಇಲ್ಲಿ ಕಂಚಿನ ಪ್ರತಿಮೆಗಳು, ದೀಪಗಳು, ಧೂಪದಬುಚ್ಚಿ, ಉಪಕರಣಗಳು, ಗೃಹೋಪಕರಣಗಳು ಮತ್ತು ಇತರ

ನಿತ್ಯೋಪಯೋಗಿ ವಸ್ತುಗಳಿವೆ; ಕಟ್ಟಿಗೆ ಮತ್ತು ಕಲ್ಲಿನ ಕೆತ್ತನೆ ವಸ್ತುಗಳಿವೆ; ಹಸ್ತಿ ದಂತದ ಕಲಾಕೃತಿ, ಬೊಂಬೆಗಳು, ಸೂತ್ರದ ಗೊಂಬೆಗಳು; ಮುಖವಾಡಗಳು; ಆಭರಣಗಳು; ಬಿದ್ರಿಯನ್ನೊಳಗೊಂಡ ಅಲಂಕಾರಿಕ ವಸ್ತುಗಳು, ಟೆರಾಕೋಟಾ ವರ್ಣಚಿತ್ರ, ಬೆತ್ತ ಮತ್ತು ಬಿದ್ರಿ ವಸ್ತುಗಳು, ವಸ್ತ್ರ-ಭೂಷಣಗಳು-ಇವುಗಳನ್ನೆಲ್ಲ ಭಾರತದ ಬೇರೆ ಬೇರೆ ಭಾಗಗಳಿಂದ ಸಂಗ್ರಹಿಸಲಾಗಿದೆ.

ಈ ಸಂಗ್ರಹವು ಭಾರತೀಯ ಕರಕುಶಲಕಲಾ ಪರಂಪರೆಯ ಮುಂದುವರಿಕೆಯನ್ನು ಪ್ರತಿನಿಧಿಸುತ್ತದೆ. ಭಾರತೀಯ ಕಲಾಪರಂಪರೆಯ ಪ್ರಾಚೀನ ಹಾಗೂ ನವೀನ ಕಲಾಕೃತಿಗಳನ್ನು ಅಕ್ಕ ಪಕ್ಕದಲ್ಲಿ ಪ್ರದರ್ಶಿಸಲಾಗಿದೆ. ಇದರಿಂದ ಭಾರತದಲ್ಲಿ ಈವರೆಗೂ ಉಳಿದ ಬಂದಿರುವ ಮೇಲ್ಮಟ್ಟದ ಕಲಾ ಕೌಶಲ್ಯ ಹಾಗೂ ಸೃಜನಶೀಲತೆಗಳ ಶ್ರೇಷ್ಠತೆಯ ಅರಿವಾಗುತ್ತದೆ.

೨. ವಿದೇಶದಲ್ಲಿನ ಬಿದ್ರಿ ಕಲಾವಸ್ತುಗಳ ಪ್ರದರ್ಶನ ಮತ್ತು ಮಾರಾಟ

೧. ದುಬೈ ಮೇಳ – ೨೦೦೧

ಇಂಡಿಯನ್ ಪೆವಿಲಿಯನ್ ಅಥವಾ ಇಂಡಿಯಾ ಫೇರ್ ಎಂದು ಪ್ರಸಿದ್ಧವಾಗಿರುವ ಭಾಗವು ಗುಜರಾತಿನ ಮೇಲೆ ಕಲ್ಪಿತವಾಗಿತ್ತು. ಅದು ಭೂಕಂಪದ ದುರಂತಮಯ ಸ್ಥಳವಲ್ಲ ಬದಲಿಗೆ ಭಾರತೀಯ ಸಂಸ್ಕೃತಿಯ ಸಾರವನ್ನು ಬಿತ್ತರಿಸುವ ಗುಜರಾತಿನ ಜೀವಂತಿಕೆ ಹಾಗೂ ವರ್ಣಮಯವಾದ ಭಾಗ. ಈ ಮೇಳದಲ್ಲಿರುವ ಪ್ರತಿಯೊಂದು ಮಳಿಗೆಯೂ ಗುಜರಾತಿನ ಮನೆಗಳ ಪ್ರತಿಬಿಂಬವಾಗಿತ್ತು. ಸುಣ್ಣದ ಗಾರೆಯ ಕೆಲಸ ಹಾಗೂ ಕನ್ನಡಿಯ ಅಲಂಕಾರದ ಕುಸುರಿ ಕೆಲಸದಿಂದ ಗೋಡೆಯ ಅಂಚುಗಳು ಸಿಂಗರಿಸಲ್ಪಟ್ಟಿದ್ದವು. ಸಂಘಟದ ಪ್ರಕಾರ ಮೂರು ಟನ್‌ನ್ಷ್ಟು ಸುಣ್ಣ ಹಾಗೂ ೫೦೦ ಕಿಲೋದಷ್ಟು ಕನ್ನಡಿಯ ತುಣುಕುಗಳನ್ನು ಈ ಮಳಿಗೆಗಳನ್ನು ನಿರ್ಮಿಸಲು ಭಾರತದಿಂದ ತರಿಸಲಾಯಿತು. ೧೫೪ ಮಳಿಗೆಗಳಿರುವ ಭಾರತ ಮೇಳವು ಎಲ್ಲಕ್ಕಿಂತ ದೊಡ್ಡದಾಗಿತ್ತು.

ದುಬೈ ಶಾಪಿಂಗ್ ಫೆಸ್ಟಿವಲ್-೨೦೦೧ರಲ್ಲಿ ನಾವು ಹೊಸ ವಸ್ತುಗಳನ್ನು ಬಹಳಷ್ಟು ಮಳಿಗೆಗಳನ್ನು ವ್ಯವಸ್ಥೆಗೊಳಿಸಿದ್ದೇವೆ. ಏಕೆಂದರೆ ಕಳೆದ ವರ್ಷ ಅಪಾರವಾದ ಜನದಟ್ಟಣೆಯಿತ್ತು ಎಂಬುದಾಗಿ ದುಬೈನ ಇಂಡಿಯನ್ ಅಸೋಸಿಯೇಷನ್‌ನ ಗೌರವಸಲಹೆಗಾರರಾದ ಸುನೀಲ್ ಪಾಟಿಯಾ ಅವರು ಹೇಳುತ್ತಾರೆ.-"ಇಂಡಿಯಾ ಫೇರ್" ಎನ್ನುವುದು ವಿದೇಶಗಳಲ್ಲಿ ಸರಕಾರೇತರ ಸ್ವಯಂ ಸೇವಾ ಸಂಸ್ಥೆಯಿಂದ ಸಂಘಟಿತವಾದ ಅತೀ ದೊಡ್ಡಮೇಳ.

ಇಂಡಿಯಾ ಮೇಳದಲ್ಲಿ ಪ್ರದರ್ಶಿಸಿದ ವಸ್ತುಗಳೆಂದರೆ ಲೋಹಶಿಲ್ಪ, ಶಹರಾನಪುರದ ಕಾಷ್ಠಶಿಲ್ಪ, ಮೊರಾದಾಬಾದಿನ ಹಿತ್ತಾಳೆ, ಇಂದೂರಿನ ಚರ್ಮ, ಫರುಕ್ಕಾಬಾದದ ಝುರಿ, ಬೀದರಿನ ಬಿದ್ರಿಕಲೆ ಕುಶಲಕರ್ಮಿಗಳು ನೀಡುತ್ತಿದ್ದ ಪ್ರಾತ್ಯಕ್ಷಿಕೆಗಳು ಜನಸಂದಣಿಯನ್ನು ಆಕರ್ಷಿಸುತ್ತಿತ್ತು. ವಿಶೇಷವಾಗಿ ಪ್ರಸಿದ್ಧವಾದ ಬಿದ್ರಿಕಲೆಯಲ್ಲಿ ಬೆಳ್ಳಿಯನ್ನು ಹುದುಗಿಸುವಂಥ ಸೂಕ್ಷ್ಮವಾದ ಕುಶಲತೆಗಳ

ವೀಕ್ಷಣೆಗೆ ಗುಂಪುಗುಂಪಾಗಿ ಜನರು ಬರುತ್ತಿದ್ದರು. ಅಭಿಜ್ಞರು ಗುಂಪನ್ನು ಆಕರ್ಷಿಸುವ ಎರಡು ಮಳಿಗೆಗಳಿದ್ದವು. ಇವು ತುಂಬಾ ಜನಾಕರ್ಷಕವಾಗಿದ್ದು ೧೦೦ ರಿಂದ ೩೦೦ ದರ್‌ಹಂಗಳವರೆಗೆ ಬೆಲೆಯನ್ನು ಹೊಂದಿದ್ದವು. ಆ ವಸ್ತುಗಳನ್ನು ಹಳ್ಳಿಗಾಡಿನ ಕುಶಲಕರ್ಮಿಗಳು ಮಾಡುತ್ತಿದ್ದರು ಮತ್ತು ಅಲ್ಲಿ ಅಲಂಕರಣದ ವಸ್ತುಗಳಿದ್ದವು. ಭಾರತ ಮೇಳವು ವೀಕ್ಷಕರ ಕಣ್ಮನಗಳನ್ನು ತಣಿಸುತ್ತಿತ್ತು. ಅಲ್ಲಿನ ಕರಕುಶಲವಸ್ತುಗಳು ಭಾರತೀಯ ಪರಂಪರೆಯ ಸಾರವನ್ನು ಪ್ರಸ್ತುಪಡಿಸುತ್ತಿದ್ದವು.

೨. ಭಾರತದ ಕುಶಲಕಲೆಗಳು–ಅಶ್ಗಾಬಾತ್ ಪ್ರದರ್ಶನ

ಅಶ್ಗಾಬಾತ್‌ನ ಕೇಂದ್ರೀಯ ಗ್ರಂಥಾಲಯದ ಆವರಣದಲ್ಲಿ ನವೆಂಬರ್ ೨೦೦೩ರಂದು ಭಾರತೀಯ ಕಲೆ ಮತ್ತು ಕುಶಲಕಲೆಗಳ ಪ್ರದರ್ಶನವನ್ನೇರ್ಪಡಿಸಲಾಯಿತು. ಈ ಪ್ರದರ್ಶನವನ್ನು ಅಶ್ಗಾಬಾತ್‌ನ ಭಾರತೀಯ ದೂತಾವಾಸ ಹಾಗೂ ಭಾರತದ ಕ್ರಾಫ್ಟ್ ಕೌನ್ಸಿಲ್‌ಗಳು ಆಯೋಜಿಸಿದ್ದವು. ಈ ಪ್ರದರ್ಶನವು ಭಾರತೀಯ ಕಲಾಕಾರರ ಕುಶಲತೆ ಹಾಗೂ ಕರಕುಶಲಕಲೆಗಳಲ್ಲಿಯ ಉತ್ತಮ ಆಯ್ಕೆಯನ್ನು ಪ್ರತಿನಿಧಿಸುತ್ತಿತ್ತು. ತುರ್ಕಮೇನಿಸ್ತಾನದ ಭಾರತ ರಾಯಭಾರಿ ಆರ್.ಎಂ.ರಾಯ ಅವರ ಪ್ರಕಾರ ಭಾರತ ಮತ್ತು ತುರ್ಕಮೇನಿಸ್ತಾನಗಳ ನಡುವೆ ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಮಾಜಿಕ ಸಂಬಂಧಗಳನ್ನು ಬಲಪಡಿಸಲು ಭಾರತೀಯ ದೂತಾವಾಸವು ಸಾಧ್ಯವಿರುವ ಎಲ್ಲಾಪ್ರಯತ್ನಗಳನ್ನು ಮಾಡುತ್ತಿದೆ. ಭಾರತದ ಕೌನ್ಸಿಲ್ಲಿನ ಮಂಜರಿ ಮತ್ತು ನೇವಾಜ್ ಸಹಾಯ್ ಅವರು ಭೇಟಿ ನೀಡಿದ ಜನರಿಗೆ ಭಾರತದ ಕುಶಲ ಕಲೆಗಳ ಇತಿಹಾಸ ಮತ್ತು ಹಿನ್ನೆಲೆಗಳನ್ನು ವಿವರಿಸಿದರು. ಪ್ರದರ್ಶನದಲ್ಲಿ ಅತಿಥಿಗಳ ಎದುರಿನಲ್ಲಿ ತಮ್ಮ ಕರಕುಶಲತೆಯನ್ನು ಪ್ರದರ್ಶಿಸುವ ಅವಕಾಶವನ್ನು ಕೂಡ ಕಲಾಕಾರರಿಗೆ ಒದಗಿಸಲಾಗಿತ್ತು. ಅವರಲ್ಲಿ ಬಿದ್ರಿ ಕಲಾಕಾರರೂ ಸೇರಿದ್ದರು. ಈ ಪ್ರದರ್ಶನದಲ್ಲಿ ಬಿದ್ರಿ ಕಲೆಯ ಅನೇಕ ಅತ್ಯುತ್ತಮ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

೩. ಭಾರತ ಉತ್ಸವ–ಪೋರ್ಟ್‌ಹ್ಯುರೋನ್‌ನಲ್ಲಿ ಪ್ರದರ್ಶನ

ಜನವರಿ ೨೭ರಿಂದ ಮಾರ್ಚ್ ೧೦ರವರೆಗೆ ನಡೆದ ಭಾರತ ಉತ್ಸವದಲ್ಲಿ ಪ್ರದರ್ಶನ ನಡೆಯಿತು. ಈ ಪ್ರದರ್ಶನಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದು ಐವರು ಕಲಾಕಾರರನ್ನು ಆಮಂತ್ರಿಸಲಾಗಿತ್ತು. ಅವರಲ್ಲೊಬ್ಬರು ಬಿದ್ರಿ ಕಲಾಕಾರರು ನಿತ್ಯ ಪ್ರದರ್ಶನದ ಸಮಯದಲ್ಲಿ ಬೆಳ್ಳಿಯ ತಂತಿಯಿಂದ ಮಾಡಬಹುದಾದ ಕುಶಲಕಲೆಯನ್ನು ಪ್ರದರ್ಶಿಸಿದರು. ಈ ಪ್ರದರ್ಶನದ ಆದಾಯವನ್ನು ಗುಜರಾತಿನ ಭೂಕಂಪ ನಿಧಿಗೆ ದೇಣಿಗೆ ಕೊಡಲಾಯಿತು. ಈ ಪ್ರದರ್ಶನವು ಅತ್ಯತ್ತಮವಾದುದಾಗಿತ್ತೆಂದು ಅಲ್ಲಿ ಹಾಜರಿದ್ದವರು ಅಭಿಪ್ರಾಯಪಟ್ಟರು. ಬಿದ್ರಿ ಕಲಾಕುಶಲತೆಯಲ್ಲಿ ಅತ್ಯಂತ ಪ್ರಭಾವಿಯೆನಿಸಿತು. ಅಲ್ಲಿನ ಅನೇಕ ವ್ಯಕ್ತಿಗಳ ಕಲಾವಿದರ ಪರಿಚಯ

ಪಡೆದರು. ಈ ಮ್ಯೂಸಿಯಂನ ಆಯೋಜನೆಯು ಹ್ಯುರೋನ್‌ನ ಭಾರತೀಯ ಸಮಾಜವು ಸ್ವಪ್ರೇರಣೆಯಿಂದ ಮಾಡಿದ್ದಾಗಿದ್ದು ವ್ಯವಸ್ಥೆಯು ಅತ್ಯುತ್ತಮವಾದುದಾಗಿತ್ತು.

೪. ಮ್ಯೂಸಿಯಂ ಆಫ್ ಇಂಡಿಯಾನ್ ಆರ್ಟ್ ಬರ್ಲಿನ್

೧೯೬೩ ರ ಜನವರಿಯಲ್ಲಿ ಮ್ಯೂಸಿಯಂ ಆಫ್ ಇಂಡಿಯನ್ ಆರ್ಟ್ ಸಂಸ್ಥೆಯು ಸ್ಥಾಪನೆಯಾಯಿತು. ಇದೊಂದು ಸ್ವಯಂ ಆಡಳಿತದ ಸಂಸ್ಥೆಯಾಗಿದ್ದು "National Museums of the Prussion Cultural Hertage" ನೊಂದಿಗೆ ಸಹಯೋಗವನ್ನು ಹೊಂದಿದೆ. ಇದು ಕರಕುಶಲಕಲೆಗಳ ರಕ್ಷಣೆಗೆ ಬದ್ಧವಾದ ಪ್ರಮುಖವಾದ ಸಂಸ್ಥೆಗಳಲ್ಲೊಂದು. ಅಷ್ಟೇ ಅಲ್ಲ ಭಾರತೀಯ; ದಕ್ಷಿಣ ಮತ್ತು ಮಧ್ಯ ಏಶಿಯಾದ ಕಲೆಗಳ ಕುರಿತಾಗಿ ಸಂಶೋಧನೆಯನ್ನು ಕೂಡ ನಡೆಸುವ ಜರ್ಮನಿಯಲ್ಲಿರುವ ಸಂಸ್ಥೆಯಾಗಿದೆ.

ಈ ಸಂಸ್ಥೆಯ ಸ್ಥಾಪನೆಗಿಂತ ಮೊದಲು ದೊಡ್ಡ ಸಂಖ್ಯೆಯಲ್ಲಿ ಕಲಾಕೃತಿಗಳನ್ನು ಬರ್ಲಿನ್ನಿನ Cultural Anthropology (ಸಾಂಸ್ಕೃತಿಕ ಮಾನವಶಾಸ್ತ್ರ) ಮ್ಯೂಸಿಯಂನಲ್ಲಿ ಕಲಾವಿಭಾಗದಲ್ಲಿ ಸಂಗ್ರಹಿಸಡಲಾಗಿತ್ತು. ೧೮೨೯ ರಿಂದ ಸಂಗ್ರಹಿಸಲ್ಪಟ್ಟ ಕಲಾಕೃತಿಗಳನ್ನು ಜನಾಂಗೀಯ ಆಧಾರದಿಂದ ವಿಂಗಡಿಸಿ ೧೮೭೩ರಲ್ಲಿ ಸ್ಥಾಪಿತವಾದ ಮ್ಯೂಸಿಯಂನಲ್ಲಿಡಲಾಗಿತ್ತು. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿರುವ ಪ್ರದರ್ಶನದ ವಸ್ತುಗಳು ಭಾರತೀಯ ಕಲಾಕೃತಿಗಳು ಮತ್ತು ಮಾನವಶಾಸ್ತ್ರೀಯ ಸಂಗ್ರಹಗಳಲ್ಲಿ ವ್ಯತ್ಯಾಸವನ್ನುಂಟುಮಾಡುವುದು ಅನಿವಾರ್ಯ. ಈ ಮ್ಯೂಸಿಯಂ ಅತ್ಯಂತ ವ್ಯವಸ್ಥಿತವಾಗಿ ಬಿದ್ರಿ ಕೃತಿಗಳನ್ನೊಳಗೊಂಡು ಕಲಾಕೃತಿಗಳನ್ನು ಸಂಗ್ರಹಿಸುತ್ತದೆ. ಹಾಗಾಗಿ ಇಂದು ಅದೊಂದು ಜಗತ್ಪ್ರಸಿದ್ಧವಾದ ಪುರಾತತ್ವ ಶಾಸ್ತ್ರೀಯ ಹಾಗೂ ಕಲಾ ಇತಿಹಾಸವನ್ನು ಸಾರುವ ಮ್ಯೂಸಿಯಂಗಳಲ್ಲೊಂದಾಗಿದೆ. ಈ ಸಂಗ್ರಹಗಳು ಬೇರೆ ಬೇರೆ ವಿಭಾಗಗಳಲ್ಲಿವೆ. ಕರಕುಶಲವಸ್ತುಗಳು ಶ್ರೀಮಂತ ಗ್ರಾಹಕರ ಒಲವುಗಳನ್ನು ಪ್ರತಿಬಿಂಬಿಸುತ್ತವೆ. ಸಂಗ್ರಹಿಸಿದ ವಸ್ತುಗಳಲ್ಲಿ ಬಹುಅಮೂಲ್ಯವಾದ ವಸ್ತ್ರ-ಭೂಷಣಕಲೆ, ಗಾಜಿನ ಪಾತ್ರೆಗಳು, ಲೋಹದ ಹೂಜಿಗಳು ಮತ್ತು ಬಿದ್ರಿ ತಂತ್ರದಲ್ಲಿ ನಿರ್ಮಿತವಾದ ತಾಟು ಮುಂತಾದವುಗಳು ಸೇರಿವೆ.

೫. ಭಾರತೀಯ ಗ್ರಾಮ : ಶಾರ್ಜಾದ ರಮದಾನ ಉತ್ಸವ

"ಶಾರ್ಜಾ ರಮದಾನ ಶಾಪಿಂಗ್ ಫೆಸ್ಟಿವಲ್" ಎಂಬುದು ಶಾರ್ಜಾದ ಸರಕಾರದಿಂದ ಪ್ರಾಯೋಜಿತವಾದ ಕಾರ್ಯಕ್ರಮ. ದುಬೈದ ಉತ್ಸವಕ್ಕಿಂತ ೧೬ ವರ್ಷ ಮೊದಲೇ ಈ ಉತ್ಸವ ನಡೆಯಿತು. ಇದರ ನಿರ್ವಹಣೆಯ ಹೊಣೆಯು ಶಾರ್ಜಾದ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರಿಗೆ ಸೇರಿದ್ದಾಗಿತ್ತು. ಆ ಸಂಸ್ಥೆಯ "Indian Business and Professional Council" ಗೆ ಶಾರ್ಜಾದಲ್ಲಿ ಭಾರತೀಯ ಗ್ರಾಮವನ್ನು ಸಂಘಟಿಸುವಂತೆ ಕೇಳಿಕೊಂಡಿತು. ಇದಕ್ಕೆ ಎರಡೂ ದೇಶಗಳ ನಡುವಣ ವಾಣಿಜ್ಯ ಸಂಬಂಧವು ವೃದ್ಧಿಯಾಗಲೆಂಬುದು ಆಶಯ. "ಭಾರತೀಯ ಗ್ರಾಮ"ವು

ಪ್ರದರ್ಶಕರಿಗೆ ವ್ಯಾಪಾರಿಗಳ ಭೇಟಿ ಮತ್ತು ಮಾತುಕತೆಗೆ ವೇದಿಕೆಯನ್ನೊದಗಿಸಿತು. ಅಲ್ಲಿ ಬಿದ್ರಿ ಪಾತ್ರೆಗಳ ಮಳಿಗೆಯನ್ನು ಸೇರಿಸಿ ಇನ್ನೂ ಅನೇಕ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು.

೬. ಅರ್ಥರ್ ಎಂ. ಸ್ಯಾಕ್ಲರ್ ಮ್ಯೂಸಿಯಂ

ಹಾರ್ವರ್ಡ್ ವಿಶ್ವವಿದ್ಯಾಲಯದ ಅರ್ಥರ್ ಎಂ. ಸ್ಯಾಕ್ಲರ್ ಮ್ಯೂಸಿಯಂದಲ್ಲಿ ೨೧ ಜುಲೈ ೨೦೦೪ ರಂದು ಇಸ್ಲಾಮಿಕ್ ಲೋಹ ಕಲಾಕೃತಿಗಳನ್ನು ಕುರಿತು ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಲೋಹ ಕಲಾಕೌಶಲ್ಯದ ಪರಂಪರೆಯನ್ನು ಉಳಿಸಿಕೊಂಡು ಕೊನೆಯ ದೇಶವೇ ಭಾರತ. ಮೊಗಲರ ಆಸ್ಥಾನ ಮತ್ತು ಡೆಕ್ಕನ್ನಿಗೆ ಸೇರಿದ ಅತ್ಯಮೂಲ್ಯವಾದ ಹಾಗೂ ವಿಶಿಷ್ಟವಾದ ವಿನ್ಯಾಸಗಳನ್ನು ಮತ್ತು ಕರಕುಶಲತೆಯ ಕಲ್ಪಕತೆಯ ಪ್ರಕಾರಗಳನ್ನು ಪ್ರದರ್ಶಿಸಲಾಯಿತು. ದಕ್ಷಿಣ ಭಾರತದ ಬಿದ್ರಿ ವಸ್ತುಗಳನ್ನು ಈ ಪ್ರದರ್ಶನದಲ್ಲಿ ಸೇರಿಸಲಾಗಿತ್ತು. ಈ ಪ್ರದರ್ಶನದಲ್ಲಿದ್ದ ಬಹಳಷ್ಟು ವಸ್ತುಗಳು ಭಾರತೀಯ ಉಪಖಂಡಕ್ಕೆ ಸೇರಿದವುಗಳಾಗಿದ್ದು ಮೊಗಲರ ಪ್ರಭಾವವನ್ನು ಪ್ರತಿಬಿಂಬಿಸುವಂಥದಾಗಿತ್ತು.

೭. ನಪರ್‌ಸ್ಟೆಕ್ ಮ್ಯೂಸಿಯಂ

ಝೆಕ್ ರಿಪಬ್ಲಿಕ್‌ನ ಏಶಿಯನ್, ಆಫ್ರಿಕನ್ ಮತ್ತು ಅಮೇರಿಕನ್ ಕಲ್ಚರ್‌ನ ನಪರ್‌ಸ್ಟೆಕ್ ಮ್ಯೂಸಿಯಂ ಇಸ್ಲಾಮಿಕ್ ಕರಕುಶಲವಸ್ತುಗಳ ಪ್ರಸ್ತುತಿಯತ್ತ ಗಮನ ಹರಿಸಿದೆ. ಇಸ್ಲಾಮಿಕ್ ಸೃಜನಶೀಲತೆಯನ್ನು ಚಿಕ್ಕಚಿತ್ರಗಳ ಅಭಿವ್ಯಕ್ತಿಯಲ್ಲಿ ಕಾಣಬಹುದು. ಇದು ಬೆಳೆದು ಬಂದದ್ದುರಾಜಸ್ಥಾನಗಳ ಸಂಬಂಧವುಳ್ಳ ದೇಶಿಯ ಕಲಾಶಾಲೆಗಳಿಂದ, ಪರಂಪರಾಗತವಾದ ಭಾರತೀಯ ಕರಕುಶಲಕಲೆಗಳನ್ನು ಆಭರಣಗಳ ತಯಾರಿಕೆ, ಬಿದ್ರಿ ಕಲೆ, ವಸ್ತ್ರ–ಭೂಷಣ ವಿನ್ಯಾಸ ಇತ್ಯಾದಿಗಳಲ್ಲಿ ಪ್ರಮುಖವಾಗಿ ಕಾಣಬಹುದು. ಕಪ್ಪಾದ ಮೇಲ್ಮೈಯಲ್ಲಿ ಬೆಳ್ಳಿ ಅಥವಾ ಬಂಗಾರವನ್ನು ಹುದುಗಿಸಿದ ಬಿದ್ರಿ ಪಾತ್ರೆಗಳಿಗೆ ಕಲಾತ್ಮಕ ಮೌಲ್ಯ ಅಧಿಕವಾಗಿದೆ.

೮. ಇಂಡಿಯಾನಾ ಪೊಲೀಸ್ ಮ್ಯೂಸಿಯಂ ಆಫ್ ಆರ್ಟ್ಸ್, ಇಂಡಿಯಾನಾ

ಈ ಪ್ರದರ್ಶನದಲ್ಲಿ ಕ್ರಿ.ಶ.೧೭೫೦ ರಿಂದ ೧೮೫೦ರ ವರೆಗಿನ ಅವಧಿಯ, ಬಿದ್ರಿ ಕಲೆಯ ವಿಶಿಷ್ಟ ಪರಂಪರೆಯ ೧೦ ಮಾದರಿಗಳನ್ನು ಪ್ರದರ್ಶಿಸಲಾಯಿತು. ಇಲ್ಲಿ ಪ್ರದರ್ಶಿಸಲಾದ ಎಲ್ಲ ಬಿದ್ರಿಕಲಾಕೃತಿಗಳು ಬೆಲೆ ಬಾಳುವ ಲೋಹಗಳ 'ಇನ್‌ಲೇ'ಯನ್ನು ಹೊಂದಿದವುಗಳಾಗಿವೆ. ಹಾಗೂ ಹೊರಮೈನಲ್ಲಿ ಪುಷ್ಪಾಲಂಕಾರವಿದ್ದು ಅರೇಬಿಯನ್ ಶೈಲಿಯವಾಗಿವೆ. ಎಲ್ಲ ಕಲಾಕೃತಿಗಳನ್ನು ಸ್ಯಾಮ್ಯೂಯಲ್ ಜೋಸೆಫೋವಿಚರ್ ಸಂಗ್ರಹದಿಂದ ಉದಾರವಾಗಿ ಎರವಲು ಪಡೆಯಲಾಗಿದೆ.

೯. ದ ಜೇನ್ ಎಂಡ್ ಕೃಷ್ಣಾ ರಿಬೋರ್ಡ್ ಗ್ಯಾಲರಿ

ದ ಜೇನ್ ಎಂಡ್ ಕೃಷ್ಣಾ ರಿಬೋರ್ಡ್ ಗ್ಯಾಲರಿಯು ಆಯ್ದ ದಕ್ಷಿಣ ಏಶಿಯಾದ ವಸ್ತ್ರ ಭೂಷಣ ಹಾಗೂ ಅಲಂಕಾರಿಕ ವಸ್ತುಗಳನ್ನು ಪ್ರದರ್ಶಿಸುತ್ತಿದೆ. ಇವುಗಳನ್ನು ಕೃಷ್ಣಾ ರಿಬೋರ್ಡ್

ಅವರು ಉದಾರವಾಗಿ ದಾನ ಮಾಡಿದ್ದಾರೆ. ಈ ಗ್ಯಾಲರಿಯು ಅತ್ಯಂತ ಉಲ್ಲಾಸದಾಯಕ ಹಾಗು ಉವಲವಾದ ಸಂಗ್ರಹವನ್ನು ಹೊಂದಿದ್ದು ಪ್ರೇಕ್ಷಕರಿಗೆ ಭಾರತೀಯ ಆಸ್ಥಾನಗಳ ಅನುಭವ ಹಾಗೂ ಕಾಂತಿಗಳನ್ನು ನೀಡುತ್ತದೆ. ಕೃಷ್ಣಾರಾಯ್ ಅವರಿಗೆ ವಸ್ತ್ರ ಭೂಷಣಗಳಲ್ಲಿ ಆಸಕ್ತಿಯಿದ್ದರೆ, ಅವರ ಪತಿ ಜೇನ್ ರಿಬೋರ್ಡ್ ಅವರಿಗೆ ಆಭರಣಗಳು ಹಾಗೂ ಲೋಹದ ಕಲಾಕೃತಿಗಳಲ್ಲಿ ಆಸಕ್ತಿ. ಈ ಗ್ಯಾಲರಿಯಲ್ಲಿ ಪ್ರದರ್ಶಿಸಲಾದ ಆಭರಣಗಳು ಮತ್ತು ಅಲಂಕಾರಿಕ ವಸ್ತುಗಳು ಸಂಗ್ರಹದ ಗುಣಮಟ್ಟ ಸೆಳೆಯುವುದರಲ್ಲಿ ಹಿಂದೆ ಬೀಳುವುದಿಲ್ಲ. ಬಿದ್ರಿ ಪಾತ್ರೆಗಳಲ್ಲಿ ಹುಕ್ಕಾದ ತೆಳವೊಂದಿದ್ದು ಅದು ಅತ್ಯಂತ ಮನೋಹರವಾಗಿದೆ. ಇದು ೧೭ನೇ ಶತಮಾನಕ್ಕೆ ಸೇರಿದ್ದು ಅನಂತರದಲ್ಲಿ ಭಾರತದಲ್ಲಿ ತುಂಬ ಜನಪ್ರಿಯವಾದವು.

೩. ಬಿದ್ರಿ ಕಲಾವಸ್ತುಗಳಿಗೆ ನೀಡುತ್ತಿರುವ ಪ್ರೋತ್ಸಾಹ

ಪ್ರಾಚೀನ ಭಾರತದಿಂದ ಇಂದಿನವರೆಗೂ ಕರಕುಶಲಕಲೆಗಳ ಬಗ್ಗೆ ಅಧ್ಯಯನ ಮಾಡಿದಾಗ ಅವು ಅಳಿವಿಲ್ಲದಂತೆ ನಿರಂತರವಾಗಿ ಸಾಗಿ ಬಂದಿರುವುದನ್ನು ಕಾಣಬಹುದು. ಕೆಲವು ಕಲೆಗಳು ರೂಪ ವಿನ್ಯಾಸಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡಿರಬರುವುದು. ಅದು ಸ್ಥಳಿಯವಾಗಿ ದೊರೆಯುವ ವಸ್ತುಗಳಿಂದಾದುದು. ಆದರೆ ಬಹಳಷ್ಟು ಗ್ರಾಮೀಣ ಕಲೆಗಳು ವಿನ್ಯಾಸದಲ್ಲಿ ಏನೂ ಬದಲಾಗದೇ ಉಳಿದಿವೆ.[೧] ಆದರೆ ಬಿದ್ರಿ ಕಲೆ ಬಹಳಷ್ಟು ಆಧುನಿಕತೆಗೆ ತಕ್ಕಂತೆ ರೂಪಾಂತರ ಹೊಂದಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಆದರೂ ಸಹ ಈ ಕಲೆ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಅಹೋರಾತ್ರಿ ಹೋರಾಡುತ್ತಿರುವುದು ದಿಟ. ಕೃಷಿ ಪ್ರಧಾನವಾದ ಭಾರತದಲ್ಲಿ ಕರಕುಶಲತೆಗೆ ಎರಡನೆಯ ಸ್ಥಾನ. ಅಕ್ಕಸಾಲಿಗರಾದಿಯಾಗಿ ಅನೇಕ ಕಲಾವಿದರು ವ್ಯವಸಾಯ ಸಹ ಮಾಡುತ್ತಿದ್ದ ಬಗ್ಗೆ ಶಾಸನಗಳ ಆಧಾರವಿದೆ. ಇಂದಿಗೂ ಈ ಪದ್ಧತಿ ಕಾಣಬಹುದು. ಸಣ್ಣ ಪುಟ್ಟ ಯುದ್ಧ, ಊರಳಿವು, ಗೋಗ್ರಹಣ, ಪೆಣ್ಬುಯಲ್‌ಗಳ ವೇಳೆಯಲ್ಲಿ ಕರಕುಶಲ ಕಲಾವಿದರು ಹೋರಾಡಿ ಮಡಿದಿದ್ದಾರೆ.[೨]

ಕಳೆದ ಶತಮಾನದ ಆರಂಭದಿಂದ ಈ ಶತಮಾನದ ಮೊದಲ ಕೆಲ ದಶಕಗಳವರೆಗೆ ಭಾರತ ಹಿಂದೆಂದೂ ಕಾಣದಂತಹ ಸ್ಥಿತ್ಯಂತರವನ್ನು ಕಂಡಿತು. ವಸಾಹತುಶಾಹಿಯ ರಾಜ್ಯ ವಿಸ್ತರಣಾ ದಾಹ, ಮತೀಯ ಗಲಭೆ ಇತ್ಯಾದಿಗಳೊಂದಿಗೆ ಕ್ಷಾಮ, ಪ್ಲೇಗ್ ಮುಂತಾದ ಪಿಡುಗುಗಳ ಸೇರಿ ಕುಶಲಕಲೆಗೆ ವ್ಯವಧಾನವಿಲ್ಲದಾಯಿತು. ಜೊತೆಗೆ ವಿದೇಶ ವಸ್ತುಗಳ ಆಗಮನದಿಂದಾಗಿ ದೇಶೀಯ ವಸ್ತುಗಳು ಅವಜ್ಞೆಗೊಳಗಾದವು. ವಿದ್ಯಾಭ್ಯಾಸ ಹಾಗೂ ಪ್ರಚಾರ ಮಾಧ್ಯಮಗಳಿಂದಾಗಿ ಶತಮಾನಗಳಿಂದ ನಂಬಿಕೊಂಡು ಬಂದಿದ್ದ ಜನಜೀವನ ಅಥವಾ ಧಾರ್ಮಿಕ ನಂಬಿಕೆಗಳಲ್ಲಿ ಕಂಡುಬರುವ ಅನೇಕ ದೋಷಗಳು ಪ್ರಶ್ನಾರ್ಹವಾದವು. ಮುಖ್ಯವಾಗಿ ಕರಕುಶಲಕಲೆಗಳು ಸಾಮಾಜಿಕವಾಗಿ ಹಿಂದುಳಿದವರಲ್ಲಿಯೇ ಕೇಂದ್ರೀಕೃತವಾಗಿತ್ತು.[೩] ಇಂತಹ ಕಾರಣಗಳಿಂದಾಗಿ ಸಾಂಸ್ಕೃತಿಕ ಭಾರತದಲ್ಲಿ ಬಹುತೇಕ ಕರಕುಶಲಕಲೆಗಳು ಆಧುನಿಕ ಬದುಕಿನ ಮಜಲಿಗೆ ತಕ್ಕಂತೆ ರೂಪಾಂತರಗೊಳ್ಳುವ ಅಥವಾ

ಅವು ಜನಪ್ರಿಯ ಜಾಡಿನಲ್ಲಿ ಸಾಗುವ ಭರಾಟೆಯಲ್ಲಿ ತಮ್ಮ ಮೂಲ ಸ್ವರೂಪಗಳನ್ನು ಕಳೆದುಕೊಂಡು ಪಾರಂಪರಿಕ ಮಹತ್ವವನ್ನು ಕಳೆದುಕೊಳ್ಳತೊಡಗಿದವು. ಹೀಗಾಗಿ ಕುಶಲಕರ್ಮಿಗಳಿಗೆ ಯಾವುದೇ ಬಗೆಯ ಪ್ರೋತ್ಸಾಹವಿಲ್ಲದಂತಾಗಿ ಅನ್ಯ ಶಿಸ್ತುಗಳಲ್ಲಿ ಆಸಕ್ತಿ ತೋರಿದದರಿಂದ ಪಾರಂಪರಿಕ ಕಲೆಗಳಲ್ಲಿ ಒಂದಾದ ಬಿದ್ರಿಕಲೆಯೂ ಸಹ ಅನಾರೋಗ್ಯಕ್ಕೆ ಒಳಗಾಯಿತು. ಈ ಸಂದರ್ಭದಲ್ಲಿ ರಾಜ ಪರಂಪರೆಯಲ್ಲಿ ಕುಶಲಕರ್ಮಿಗಳಿಗೆ ಇದ್ದ ಪ್ರೋತ್ಸಹವನ್ನು ನೆನೆಪಿಸಿಕೊಳ್ಳುವುದು ಸಹ ಅಗತ್ಯವೆನಿಸುತ್ತದೆ.

ಕಳೆದ ಶತಮಾನದ ಆರಂಭದಲ್ಲಿ ರಾಜ ಮಹಾರಾಜರುಗಳು ಕುಶಲಕಲೆಗೆ ಪ್ರೋತ್ಸಾಹ ನೀಡಿದುದು ಕಂಡುಬರುತ್ತದೆ. ಮುಖ್ಯವಾಗಿ ಬರೋಡ, ಮೈಸೂರು, ಗ್ವಾಲಿಯರ್, ತಂಜಾವೂರು ಮುಂತಾದ ಬ್ರಿಟೀಷ್ ಆಶ್ರಿತ ಸ್ಥಳೀಯ ಸಂಸ್ಥಾನಗಳು ಕಲೆಯನ್ನು ಉಳಿಸಲು ಹಲವಾರು ಕ್ರಮಕೈಗೊಂಡವು. ಈ ಸಂಸ್ಥಾನಗಳಿಗೆ ದೇಶ–ವಿದೇಶದ ಅತಿಥಿಗಳು ಬರುತ್ತಿದ್ದು, ಅವರಿಗೆ ಕಾಣಿಕೆಯ ರೂಪದಲ್ಲಿ ಈ ಕಲಾಕೃತಿಗಳನ್ನು ನೀಡಲಾಗುತ್ತಿತ್ತು. ಸರಕಾರ ಹಾಗೂ ಖಾಸಗಿ ಸಂಗ್ರಹಾಲಯಗಳು ರೂಪುಗೊಂಡು ಈ ಬಗೆಯ ಕುಶಲ ವಸ್ತುಗಳನ್ನು ವ್ಯವಸ್ಥಿತವಾಗಿ ಪ್ರದರ್ಶಿಸುವಂತಾಯಿತು.[೪]

ಇಂತಹ ರಾಜ ಮನ್ನಣೆಯನ್ನು ಪಡೆದಿದ್ದ ಬೀದರಿನ ಬಿದ್ರಿ ಕಲೆಗಳು ಇಂದು ತೀರ ಅವನತಿಯ ಅಂಚಿನತ್ತ ಸಾಗಿದ ಸಂದರ್ಭದಲ್ಲಿ ಸ್ವಾತಂತ್ರಾನಂತರವೇ. ೧೯೫೨ರಲ್ಲಿ ಕನ್ನಡತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಕರಕುಶಲ ಕೈಗಾರಿಕೆಗಳ ಸಮಿತಿಗೆ ಅಧ್ಯಕ್ಷರಾಗಿ ಬಂದರು. ಅವರು ಕಲಾಕೃತಿಗಳನ್ನು ಗುರುತಿಸಿದಷ್ಟೇ ಅಲ್ಲದೇ ಕಲಾವಿದರಿಗೆ ಸ್ಥಾನಮಾನ ಗೌರವಗಳನ್ನುತಂದುಕೊಡಲು ಶ್ರಮಿಸಿದರು. ಇದರಿಂದ ದೇಶಕ್ಕೂ, ಕಲಾವಿದರಿಗೂ ಆರ್ಥಿಕವಾಗಿ ಲಾಭವಾಯಿತು. ಕಮಲಾದೇವಿ ಅವರಿಗೆ ಮದ್ರಾಸ್‌ನ ರುಕ್ಮಿಣಿದೇವಿ ಆರುಂದೇಲ್, ಕರ್ನಾಟಕದ ಜಿ.ವೆಂಕಟಾಚಲಂ, ಮುಂಬಯಿಯ ಮುಲ್ಕರಾಜ ಆನಂದ, ಮಧ್ಯಪ್ರದೇಶದಲ್ಲಿದ್ದ ವೆರಿಯರ್ ಎಲ್ವಿನ್ ಮುಂತಾದ ಅನೇಕ ಗಣ್ಯರ ನೆರವು ದೊರೆಯಿತು. ಈ ಹಿನ್ನೆಲೆಯಲ್ಲಿ ೧೯೬೪ರಲ್ಲಿ ವಿಶ್ವಕಲಾ ಪ್ರೇಮಿಗಳ ಸಹಕಾರದಿಂದ ವಿಶ್ವ ಕರಕುಶಲ ಸಮಿತಿ (ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್) ಆರಂಭವಾಯಿತು. ನ್ಯೂಯಾರ್ಕ್‌ನಲ್ಲಿ ನಡೆದ ಇದರ ಪ್ರಥಮ ಸಮ್ಮೇಳನಕ್ಕೆ ಕಮಾಲಾದೇವಿಯವರು ಉಪಾಧ್ಯಕ್ಷರಾಗಿದ್ದರು. ಅವರಿಗೆ ಆಫ್ರಿಕ, ಏಶಿಯಾ ಖಂಡಗಳಲ್ಲಿ ಕರಕುಶಲಕಲೆಯ ಬಗ್ಗೆ ಅಭಿರುಚಿ ಬೆಳೆಸುವ ಕಾರ್ಯ ನೀಡಲಾಯಿತು.[೫] ಹೀಗೆ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಭವಿಷ್ಯದ ದೂರದೃಷ್ಟಿಯ ಚಿಂತನೆಗಳ ಕ್ರಮವಾಗಿ ಬಿದ್ರಿಕಲೆಯಂತಹ ಕುಶಲಕರ್ಮಿಗಳಿಗೆ ರಾಷ್ಟ್ರೀಯ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳನ್ನು ನಿಡಿ ಪ್ರೋತ್ಸಾಹಿಸುವಂತಹ ಸಂಸ್ಥೆಗಳ ಉಗಮ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮಟ್ಟದಲ್ಲಿ ನೆಡೆದವು.

ಸ್ವಾತಂತ್ರ್ಯ ನಂತರದಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಗಳು ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಗಳು ಸ್ಥಾಪನೆಗೊಂಡು ಕರಕುಶಲ ಕರ್ಮಿಗಳಿಗೆ ಪ್ರಶಸ್ತಿ, ಸಹಾಯಧನವನ್ನು ಪ್ರಾರಂಭದಲ್ಲಿ

ನಿಡುತ್ತಿದ್ದವು. ಆದರೆ ರಾಷ್ಟ್ರೀಯ ಕರಕುಶಲ ನಿಗಮ ಮತ್ತು ಕರ್ನಾಟಕ ರಾಜ್ಯ ಕರಕುಶಲ ನಿಗಮಗಳು ಸ್ಥಾಪನೆಯಾದ ಮೇಲೆ ಕುಶಲಕರ್ಮಿಗಳನ್ನು ಎರಡೂ ಅಕಾಡೆಮಿಗಳು ದೂರವಿರಿಸಿದವು.

ಬಿದರಿನ ಕುಶಲಕರ್ಮಿಗಳಿಗೆ ಸರಕಾರದ ಮಟ್ಟದಲ್ಲಿ ಸಹಾಯ, ಪ್ರೋತ್ಸಾಹ ದೊರಕುತ್ತಿದ್ದರೂ ಅದೂ ನಿರೀಕ್ಷಿತ ಮಟ್ಟದಲ್ಲಿ ಕುಶಲಕರ್ಮಿಗಳನ್ನು ತೃಪ್ತಿಪಡಿಸುತ್ತಿಲ್ಲ. ಕುಶಲಕರ್ಮಿಗಳು ಪ್ರತಿಯೊಂದು ಬಿದ್ರಿ ಕಲೆಗಳಿಗೆ ಖರ್ಚು ಮಾಡಿದ ಒಟ್ಟು ಮೊತ್ತದಲ್ಲಿ ಶೇ ೫ರಷ್ಟು ಮಾತ್ರ ಲಾಭವನ್ನು ಪಡೆದರೆ, ಮಧ್ಯವರ್ತಿಗಳು ಶೇ ೯೫ರಷ್ಟು ಲಾಭವನ್ನು ಪಡೆಯುತ್ತಿದ್ದಾರೆ. ಉದಾಹರಣೆಗೆ ಕರ್ನಾಟಕದ ಸರಕಾರದ ಕಾವೇರಿ ಎಂಪೋರಿಯಮ್ ಬಿದ್ರಿ ಕಲಾವಿದರಿಂದ ಒಂದು ಸಣ್ಣ ಹೂದಾನಿಯನ್ನು ೧೦೦ರೂಪಾಯಿಗಳಿಗೆ ಖರೀದಿಸಿದರೆ ಅದು ತನ್ನ ಮಾರಾಟ ಮಳಿಗೆಯಲ್ಲಿ ಅದೇ ಹೂದಾನಿಯನ್ನು ಕನಿಷ್ಠ ೫೦೦-೬೦೦ರೂಪಾಯಿಗಳಿಗೆ ಮಾರುತ್ತದೆ. ಹೀಗಾಗಿ ಮಧ್ಯವರ್ತಿಗಳಿಗೆ ಹೆಚ್ಚಿನ ಲಾಭ ತರುವ ಈ ಬಿದ್ರಿಕಲೆ ಬಿದ್ರಿ ಕುಶಲಕರ್ಮಿಗಳಿಗೆ ಕೇವಲ ಶೇ ೫ರಷ್ಟು ಲಾಭವನ್ನು ಮಾತ್ರ ನೀಡುತ್ತಿರುವ ಹಿನ್ನೆಲೆಯಲ್ಲಿ ಭಾರತದ ರೈತನ ಸ್ಥಿತಿಗಿಂತ ಬಿದ್ರಿ ಕುಶಲಕರ್ಮಿಗಳು ಭಿನ್ನವಾಗಿಲ್ಲ.

ಬೀದರಿನ ಬಿದ್ರಿ ಕಲಾವಿದರ ಬದುಕಿಗೆ ಜೀವ ತುಂಬಲು ಕೆಲವು ಸಂಸ್ಥೆಗಳು ಬೀದರನಲ್ಲಿ ಇನ್ನು ಕೆಲವು ದೇಶದ ವಿವಿಧೆಡೆ ಕಾರ್ಯ ನಿರ್ವಹಿಸುತ್ತಿವೆ. ಅಂತಹ ಸಂಸ್ಥೆಗಳನ್ನು ಇಲ್ಲಿ ನಮೂದಿಸಿ ಅವುಗಳ ಕಾರ್ಯಚಟುವಟಿಕೆಗಳನ್ನು ವಿವರಿಸಲಾಗಿದೆ.

೧. ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಅಭಿವೃದ್ಧಿ ನಿಗಮ, ಬೆಂಗಳೂರು

ಈ ನಿಗಮವು ಬಿದ್ರಿ ಕಲಾವಿದರಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಶೇ ೨೫ರಷ್ಟು ರಿಯಾಯಿತಿ ದರದಲ್ಲಿ ನೀಡುತ್ತದೆ. ಅವರು ನೀಡಿದ ಕಚ್ಚಾ ಸಾಮಗ್ರಿಗಳಿಂದ ಉತ್ಪಾದಿಸಲ್ಪಟ್ಟ ಬಿದ್ರಿವಸ್ತುಗಳನ್ನು ಕುಶಲಕರ್ಮಿಗಳಿಂದ ಖರೀದಿಸಿ ಕಾವೇರಿ ಎಂಪೋರಿಯಂಗಳಿಗೆ ಮಾರಾಟ ಮಾಡಲು ನೀಡುತ್ತದೆ. ಬಿದ್ರಿ ಕುಶಲಕರ್ಮಿಗಳಿಗೆ ಪ್ರತೀ ತಿಂಗಳು ೩.೫೦೦/-ರೂಪಾಯಿಗಳನ್ನು ನೀಡಿ ಅಷ್ಟೇ ಮೊತ್ತದಲ್ಲಿ ಅವರಿಂದ ಉತ್ಪಾದಿಸಲ್ಪಟ್ಟ ಬಿದ್ರಿ ವಸ್ತುಗಳನ್ನು ಖರೀದಿಸುತ್ತಾರೆ. ನಿಗಮದವರು ಕಾವೇರಿ ಎಂಪೋರಿಯಮ್‌ಗಳ ಮುಖಾಂತರ ಅವುಗಳು ಮೂರು ಪಟ್ಟು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತವೆ. ಇದೇ ನಿಗಮವು ಸಧ್ಯ ೮೪ ಬಿದ್ರಿಕುಶಲಕರ್ಮಿಗಳ ಕುಟುಂಬಕ್ಕೆ ವಸತಿಗಾಗಿ ಮನೆಗಳನ್ನು ಕಟ್ಟಿಕೊಟ್ಟಿದ್ದು ಅದನ್ನು "ಬಿದ್ರಿ ಕಾಲೋನಿ" ಎಂದು ಹೆಸರಿಸಿದೆ. ವಾಸ್ತವವಾಗಿ ಬೀದರಿನಲ್ಲಿ ೯೦೦ಕ್ಕಿಂತಲೂ ಹೆಚ್ಚು ಬಿದ್ರಿ ಕುಶಲಕರ್ಮಿಗಳು ವಾಸವಾಗಿದ್ದಾರೆ. ಅವರಿಗೆ ಸರಕಾರದ (ನಿಗಮದ) ವಸತಿ ಭಾಗ್ಯ ದೊರೆಯುವುದು ಬಹುಶಃ ಮರೀಚಿಕೆಯಾಗಿದ್ದರೂ ಭವಿಷ್ಯದಲ್ಲಿ ಮನೆಗಳನ್ನು ನೀಡುವ ಭರವಸೆಗಳು ಮಾಧ್ಯಮಗಳಲ್ಲಿ ಆಗಾಗ ಪ್ರಕಟವಾಗುತ್ತಿರುವೆ.

ಇದೇ ನಿಗಮವು ಪ್ರತೀ ವರ್ಷ ರಾಜ್ಯ ಮಟ್ಟದ ಕರಕುಶಲ ಪ್ರದರ್ಶನ ಸಂಘಟಿಸಿ ಕುಶಲಕರ್ಮಿಗಳಿಂದ ಕಲಾಕೃತಿಗಳನ್ನು ಆಹ್ವಾನಿಸಿ ಅತ್ಯುತ್ತಮವೆನಿಸುವ ಕಲಾಕೃತಿಗಳಿಗೆ ರಾಜ್ಯ ಮಟ್ಟದ

ಪ್ರಶಸ್ತಿಯನ್ನು ೨೫,೦೦೦ರೂಪಾಯಿಗಳೊಂದಿಗೆ ಹಾಗೂ ಮೆರಿಟ್ ಪ್ರಶಸ್ತಿಯನ್ನು ಸಹ ನೀಡಿ ಪ್ರೋತ್ಸಾಹಿಸುತ್ತದೆ. ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ಕಲಾಕೃತಿಯೇ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗುತ್ತದೆ.

೨. ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ

ಬಹಳಷ್ಟು ಹಸ್ತಕಲೆಗಳಿಗೆ ಪ್ರೋತ್ಸಾಹವನ್ನು ನೀಡಿದಂತಹ ಸಮಿತಿಯು ಉತ್ತರ ಕರ್ನಾಟಕದ ಬಿದ್ರಿಕಲೆಯ ಪುನರುಜ್ಜೀವನದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಸಮಿತಿಯು ಕೈಮಗ್ಗ ಮತ್ತು ಕರಕುಶಲ ಕಲೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ವಾರ್ಷಿಕ ಎರಡು ಮೇಳಗಳನ್ನು ಆಯೋಜಿಸುತ್ತಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಕುಟೀರ ಎಂಬ ಹೆಸರಿನಿಂದ ಕರಕುಶಲಕಲೆಗಳ ವಾರ್ಷಿಕ ಮೇಳವನ್ನು ಆಯೋಜಿಸುತ್ತಿದೆ. ಸಮಿತಿಯು ಹೇಳುತ್ತದೆ – ಇದು ಎರಡು ಪ್ರಕಾರದ್ದು– ಕಲಾಕಾರನ ದೃಷ್ಟಿಕೋನದಿಂದ–ವಿನ್ಯಾಸಗಳ ಸೃಷ್ಟಿಗೆ ಸಹಾಯ–ಸಹಕಾರ, ಸಿದ್ಧವಸ್ತುವಿಗೆ ಮಾರುಕಟ್ಟೆಯ ಸೃಷ್ಟಿ ; ಗ್ರಾಹಕನ ದೃಷ್ಟಿಕೋನದಿಂದ ಸಮಿತಿಯು ಯಂತ್ರೋತ್ಪನ್ನಗಳ ಎದುರಿನಲ್ಲಿ ಕರಕುಶಲ ವಸ್ತುಗಳನ್ನಿಟ್ಟು ಅವುಗಳ ತುಲನಾತ್ಮಕ ಸೌಂದರ್ಯವನ್ನು ಮನಗಾಣಿಸಿ ಕರಕುಶಲ ವಸ್ತುಗಳು ಕಲಾತ್ಮಕತೆಯ ಮೆಚ್ಚುವ ಅಭಿರುಚಿಯನ್ನು ಉತ್ತೇಜಿಸಲು ಹವಣಿಸುತ್ತಿದೆ.

೩. ನಬಾರ್ಡ (ನ್ಯಾಶನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಆಂಡ್ ರೂರಲ್ ಡವೆಲಪ್‌ಮೆಂಟ್)

ನಬಾರ್ಡ ಸಂಸ್ಥೆಯು ಸಾಲಸಂಬಂಧಿಯಾದ ಗ್ರಾಮೀಣ ವಾಣಿಜ್ಯೋದ್ಯಮದ ಬೆಳವಣಿಗೆಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರ ಪರಿಣಾಮವಾಗಿ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ. ಅದರಲ್ಲಿಯೂ ವಿಶೇಷವಾಗಿ ಮಹಿಳೆಯರಲ್ಲಿ ವಾಣಿಜ್ಯೋದ್ಯಮಗಳು ಬೆಳೆದು ಬರುವಲ್ಲಿ ಹೆಚ್ಚಿನ ನೆರವು ದೊರೆತಿದೆ. ನಬಾರ್ಡ ಮತ್ತು ಸರಕಾರೇತರ ಸಂಸ್ಥೆಗಳಿಂದ ಬೆಂಬಲ ಪಡೆದು ತರಬೇತಿಯನ್ನು ಪಡೆದು ಬಹಳಷ್ಟು ಜನ ಗ್ರಾಮೀಣ ಮಹಿಳೆಯರು ಸಣ್ಣ ಉದ್ಯಮಿಗಳಾಗಿ ರೂಪುಗೊಂಡಿದ್ದಾರೆ. ಇದೇ ನಬಾರ್ಡ ಸಂಸ್ಥೆಯು ೨೦೦೪ನೆಯ ಮಾರ್ಚ್ ೧೧ರಿಂದ ೧೫ರ ವರೆಗೆ ದೆಹಲಿಯಲ್ಲಿ ನಬಾರ್ಡ್ ಒಮದು ರಾಷ್ಟ್ರೀಯ ಪ್ರದರ್ಶನವನ್ನು ಏರ್ಪಡಿಸಿತ್ತು. ಗ್ರಾಮೀಣ ಉದ್ಯಮಿದಾರರು ಉತ್ಪಾದಿಸಿದ ಬೀದರನ ಬಿದ್ರಿ ವಸ್ತುಗಳನ್ನು ಉತ್ಪಾದಿಸುವ ಕುಶಲಕರ್ಮಿಗಳನ್ನು ಆಹ್ವಾನಿಸಿತ್ತು ಮತ್ತು ಬಿದ್ರಿ ವಸ್ತುಗಳನ್ನು ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಸಹ ಮಾಡುವುದರ ಮೂಲಕ ಬಿದ್ರಿ ಕುಶಲಕರ್ಮಿಗಳಿಗೆ ರಾಷ್ಟ್ರೀಯ ಮಾರುಕಟ್ಟೆಗೆ ಒದಗಿಸಿಕೊಟ್ಟು ಪ್ರೋತ್ಸಾಹಿಸುತ್ತದೆ.

೪. ಆಂಧ್ರಪ್ರದೇಶ ಕರಕುಶಲಕಲೆಗಳ ಅಭಿವೃದ್ಧಿ ನಿಗಮ

ಈ ನಿಗಮದ ಪ್ರಯತ್ನದ ಫಲವಾಗಿ ಕಳೆದ ಎರಡು ದಶಕಗಳಿಂದೀಚೆಗೆ ಅಲ್ಲಿನ ಕುಶಲಕರ್ಮಿಗಳ ಜೀವನ ಶೈಲಿ ಬದಲಾಗಿದೆ. ಸಮಕಾಲೀನವಾದ ಅಭ್ಯಾಸ ಮತ್ತು ಅಭಿರುಚಿಗಳು ರೂಢವಾಗಿವೆ. ಈ ಕುಶಲಕರ್ಮಿಗಳಲ್ಲಿ ಹೆಚ್ಚಿನವರು ಹರಿಜನ, ಗಿರಿಜನ ಹಾಗೂ ಇತರ ಹಿಂದುಳಿದ

ವರ್ಗಕ್ಕೆ ಸೇರಿದವರಾಗಿದ್ದು, ತಲೆಮಾರಿನಿಂದ ತಲೆಮಾರಿಗೆ ಕುಶಲಕಲೆಯನ್ನು ಮುಂದುವರೆಸಿಕೊಂಡು ಬಂದವರಾಗಿದ್ದಾರೆ. ಆಂಧ್ರಪ್ರದೇಶ ಕರಕುಶಲಕಲೆಗಳ ಅಭಿವೃದ್ಧಿ ನಿಗಮವು ಸರಕಾರಿ ಸಂಸ್ಥೆಯಾಗಿದ್ದು ತನ್ನ ರಾಜ್ಯದಲ್ಲಿ ಉತ್ಪಾದಿಸಲ್ಪಡುವ ಕರಕುಶಲ ವಸ್ತುಗಳಿಗೆ ವಿದೇಶದಲ್ಲಿ ಮಾರುಕಟ್ಟೆಯೊಗಿಸಲು ಮಲೇಶಿಯಾದಲ್ಲಿ ಒಂದು ಮಾರಾಟ ಮಳಿಗೆಯನ್ನು ತೆರೆದಿದೆ. ಅಷ್ಟೇ ಅಲ್ಲದೇ ೬೦ವರ್ಷ ಮೀರಿದ ಕರಕುಶಲ ಕಲೆಗಾರರಿಗೆ ಪ್ರತೀ ತಿಂಗಳು ೫೦೦/–ರೂಗಳ ಮಾಸಾಶನವನ್ನು ನೀಡಿ ಪ್ರೋತ್ಸಾಹಿಸುತ್ತದೆ. ಇಂತಹ ಉಪಕ್ರಮಗಳನ್ನು ಕರ್ನಾಟಕ ಸರಕಾರವೂ ಕೈಗೊಂದ್ದಲ್ಲಿ ಬಿದ್ರಿಕಲಾವಿದರೂ ಸಹ ಉತ್ಸಾಹದಿಂದ ಬದುಕುವ ಮತ್ತು ತಮ್ಮ ಜೀವನಾಧಾರವಾದ ಬಿದ್ರಿಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಚಿಂತಿಸುತ್ತಾರೆ.

೫. ಆಶಾ ಕರಕುಶಲ ಕಲೆಗಳ ಸಂಸ್ಥೆ

ಆಶಾ ಕರಕುಶಲ ಕಲೆಗಳ ಸಂಸ್ಥೆಯ ಕುಶಲಕರ್ಮಿಗಳಿಗೆ ದೈಹಿಕವಾಗಿ, ಆರ್ಥಿಕವಾಗಿ, ಆಧ್ಯಾತ್ಮಿಕವಾಗಿ ಪರಿಸರಾತ್ಮಕವಾಗಿ ತನ್ನ ಆಕರ ಕೇಂದ್ರ ಮತ್ತು ತತ್ಸಂಬಂದೀಯಾದ ಕಾರ್ಯಕ್ರಮಗಳ ಮೂಲಕ ನೆರವು ನಿಡಲು ಆಸಕ್ತವಾದ ವೃತ್ತಿನಿರತರ ಸ್ವಯಂ ಸೇವಾ ಸಂಸ್ಥೆ. ಆಶಾ ಕಲ್ಯಾಣ ಕಾರ್ಯಕರ್ತರು ಬೇರೆ ಬೇರೆ ಉತ್ಪಾದಕರ ಗುಂಪುಗಳೊಂದಿಗೆ ಮತ್ತು ಸಹಕಾರಿಗಳೊಂದಿಗೆ ಕುಶಲಕರ್ಮಿಗಳ ಮತ್ತು ಅವರ ಕುಟುಂಬದವರೊಂದಿಗೆ ಜೊತೆಯಾಗಿಯೇ ನಡೆಯುತ್ತ ಅವರ ಕೌಶಲ್ಯದಲ್ಲಿ ಪಾಲ್ಗೊಳ್ಳುತ್ತ ಜಾತಿ ಧರ್ಮಗಳ ಬೇಧವಿಲ್ಲದೇ ಅವರಿಗೆ ವೈದ್ಯಕೀಯ ಹಾಗೂ ಶೈಕ್ಷಣಿಕ ನೆರವನ್ನು ನೀಡುತ್ತಾರೆ.

ಆಶಾ ಸಂಸ್ಥೆಯು ಬಹುಮಟ್ಟಿಗೆ ನಿರಾಶಾದಾಯಕ ಸ್ಥಿತಿಯಲ್ಲಿದ್ದ ಕುಶಲಕರ್ಮಿಗಳಿಗೆ ಮಾರುಕಟ್ಟೆಯ ದಾರಿಯನ್ನು ತೆರೆದು ತೋರುತ್ತ ಬದುಕಿಗೆ ಆಸೆಯನ್ನು ತಂದಿದೆ. ಪ್ರಾರಂಭದಿಂದಲೂ ಆಶಾ ಸಂಸ್ಥೆಯು ಸಾಗರೋತ್ತರ ದೇಶಗಳ ಮಾರುಕಟ್ಟೆಯ ಅಗತ್ಯ ಮತ್ತು ಗುಣ ಮಟ್ಟವನ್ನು ಮುಟ್ಟುವ ಸಲುವಾಗಿ ವಿವಿಧ ಅಭಿವೃದ್ಧಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುತ್ತ, ಕುಶಲಕರ್ಮಿಗಳು ತಮ್ಮ ಸಹಜ ಪರಿಸರದಲ್ಲಿ ಅಭಿವೃದ್ಧಿ ಹೊಂದುವುದಕ್ಕೆ ಹೆಚ್ಚಿನ ಒತ್ತು ನೀಡಿದೆ. ಇಂದು ಈಸಂಸ್ಥೆಯು ೧೧೩ ಉತ್ಪಾದಕರ ಗುಂಪುಗಳಿಗೆ ೫೦೦೦ ಕುಶಲಕರ್ಮಿಗಳಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವು ನೀಡುತ್ತಿದ್ದು, ಇವರಲ್ಲಿ ಬಿದ್ರಿ ಕಲಾವಿದರೂ ಸಹ ಒಳಪಟ್ಟಿದ್ದಾರೆ. ಅವರಲ್ಲಿ ಫಾತಿಮಾ ಅವರು ಆಶಾ ಸಂಸ್ಥೆಯ ನೆರವಿನಿಂದ ತಮ್ಮ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು, ತಂದುಕೊಂಡಿದ್ದಾರೆ.

೬. ರಾಷ್ಟ್ರೀಯ ಕರಕುಶಲ ಕಲೆಗಳ ಮತ್ತು ಕೈಮಗ್ಗದ ವಸ್ತುಗಳ ಸಂಗ್ರಹಾಲಯ, ದೆಹಲಿ

ಈ ಸಂಗ್ರಹಾಲಯವು ಪ್ರತೀ ತಿಂಗಳು ೫೦ಜನ ಕಲಾಕಾರರು ಹಾಗೂ ಕುಶಲಕರ್ಮಿಗಳನ್ನು ಭಾರತದೆಲ್ಲಡೆಯಿಂದ ಮ್ಯೂಸಿಯಂನಲ್ಲಿ ಊಟೋಪಚಾರ–ವಸತಿ ಸಹಿತವಾಗಿ ಸೌಲಭ್ಯಗಳನ್ನು ನೀಡಿ

ಆಮಂತ್ರಿಸುತ್ತದೆ. ಒಂದು ತಿಂಗಳು ಕಾಲ ಅಲ್ಲಿ ಅವರಿಗೆ ತಮ್ಮ ಕೌಶಲ್ಯದ ಪ್ರಾತ್ಯಕ್ಷಿಕೆಗೆ ಅವಕಾಶ, ಸೃಜನಶೀಲ ಪ್ರಯೋಗಗಳಿಗೆ ಅನುಕೂಲತೆ ಉತ್ಪಾದನೆಗಳನ್ನು ವಿಕ್ರಯಿಸುವ ಸೌಲಭ್ಯವನ್ನು ಪರಿಚಯಿಸಿಕೊಡುತ್ತದೆ. ಮ್ಯೂಸಿಯಂನ ಸಂಗ್ರಹದಲ್ಲಿರುವ ವಸ್ತುಗಳ ಮೂಲಕ ತನ್ನ ಕಳೆದು ಹೋದ ಪರಂಪರೆಯೊಂದಿಗೆ ಸಂಬಂಧ ಜೋಡಣೆ ಮತ್ತು ಹೊಸ ನಾಗರಿಕ ಸಮಾಜದೊಂದಿಗೆ ತೆರೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಇಲ್ಲಿ ಪ್ರಾತ್ಯಕ್ಷಿಕೆ ನೀಡುವ ಪ್ರತಿ ಕುಶಲಕರ್ಮಿಗೆ ಪ್ರತೀ ದಿನ ೨೫೦/–ರೂಪಾಯಿಗಳನ್ನು ಭತ್ಯೆಯನ್ನಾಗಿ ನಿಡುತ್ತದೆ. ಈ ಮ್ಯೂಸಿಯಂನ ಯೋಜನೆಯಲ್ಲಿ ಬೀದರಿನ ಬಿದ್ರಿ ಕುಶಲಕರ್ಮಿಗಳು ಬಹಳಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ.

೭. ಭಾರತ ಸರಕಾರದ ಜವಳಿ ಮಂತ್ರಾಲಯ, ನವದೆಹಲಿ

ಇವರು ಪ್ರತೀ ವರ್ಷ ಜವಳಿ ಮತ್ತು ಇತರ ಕುಶಲ ಕಲೆಗಳ ಕಲಾವಿದರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುತ್ತಾರೆ. ಈ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುವ ಉದ್ದೇಶ ಕುಶಲಕರ್ಮಿಗಳು ಪಾರಂಪರಿಕ ವಿನ್ಯಾಸಗಳಿಂದ ಕೂಡಿದ ಸೃಜನಶೀಲ ಕಲೆಗಳನ್ನು ಉತ್ಪಾದಿಸಲಿ ಎಂಬುದಾಗಿದೆ. ಈ ರಾಷ್ಟ್ರೀಯ ಪ್ರಶಸ್ತಿಯು ೫೦,೦೦೦/–ರೂಗಳ ಮೊತ್ತವನ್ನು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಇದುವರೆಗೆ ಈ ಪ್ರಶಸ್ತಿಯನ್ನು ಬಿದ್ರಿ ಕಲಾವಿದರಾದ ತಸಾದುಖ್ ಹುಸೇನ, ಶಹಾ ರಷೀದ್ ಖಾದ್ರಿ, ಅಬ್ದುಲ್ ಹಕೀಮ, ಮೊಹಮ್ಮದ ಅಬ್ದುಲ್ ರಹೀಮ್, ಮೊಹಮ್ಮದ ನಜೀಬ ಖಾನ್, ಮೊಹಮ್ಮದ ಮೊಯಿಜುದ್ದೀನ್, ಹಾಗೂ ಮೊಹಮ್ಮದ್ ಅಬ್ದುಲ್ ರೌಫ ಇವರುಗಳು ಈ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇಷ್ಟೇ ಅಲ್ಲದೇ ಇದೇ ಮಂತ್ರಾಲಯವು ನೀಡುವ ಗುರುತಿನ ಪತ್ರದ ಮೂಲಕವಾಗಿ ರೈಲ್ವೆ ಪ್ರಯಾಣದಲ್ಲಿ ಶೇ ೨೫ರಷ್ಟು ರಿಯಾಯಿತಿ ಪಡೆಯಬಹುದಾಗಿದೆ. ರಾಜೀವಗಾಂಧಿ ಹ್ಯಾಂಡಿಕ್ರಾಫ್ಟ್ ಹೆಲ್ತ್ ಇನ್‌ಸೂರೆನ್ಸ್ ಸ್ಕೀಮ್‌ನ ಅಡಿ ಕುಶಲಕರ್ಮಿಗಳಿಗೆ ವಾರ್ಷಿಕ ೧೫,೦೦೦/–ರೂಗಳ ವೈದ್ಯಕೀಯ ಸಹಾಯಧನ ನೀಡುತ್ತದೆ. ಈ ಸಹಾಯ ಧನವು ಕುಶಲಕರ್ಮಿಯ ಕುಟುಂಬದ ಎಲ್ಲ ಸದಸ್ಯರಿಗೂ ಅನ್ವಯವಾಗುತ್ತದೆ.

ಉಪಸಂಹಾರ

ಪ್ರಸ್ತುತ ಅಧ್ಯಾಯದಲ್ಲಿ ಬಿದ್ರಿಕಲೆಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯ ಕುರಿತು ಚರ್ಚಿಸಲಾಗಿದೆ. ಜೊತೆಗೆ ಬಿದ್ರಿ ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡುವ ಸಂಸ್ಥೆಗಳನ್ನು ಮತ್ತು ಅವು ನೀಡುವ ಪ್ರೋತ್ಸಾಹದ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ. ಸರಕಾರ ಬಿದ್ರಿಕಲೆಯ ಕುಶಲಕರ್ಮಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಹಲವು ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ ಅವು ಸಮರ್ಪಕವಾಗಿರದೇ ಸರಕಾರದ ಪರವಾಗಿ ಲಾಭದಾಯಕ ಯೋಜನೆಗಳೆನಿಸಿವೆ. (ಉದಾಹರಣೆಗೆ

ಕಾವೇರಿ ಎಂಪೋರಿಯಂ ವ್ಯಾವಹಾರಿಕತೆಯನ್ನು ಉಲ್ಲೇಖಿಸಲಾಗಿದೆ) ಸರಕಾರ ಅವರಿಗೆ ವಸತಿ ವ್ಯವಸ್ಥೆ, ಕಚ್ಚಾ ಸಾಮಗ್ರಿಯನ್ನು ಕಡಿಮೆ ಬೆಲೆಗೆ ನೀಡುವದು, ಅವರು ರಚಿಸಿದ ಕಲಾಕೃತಿಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಿ, ಕಡಿಮೆ ಲಾಭದಲ್ಲಿ ಮಾರಿಕೊಳ್ಳುವಂತಹ ಉಪಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ. ಅಷ್ಟೇ ಅಲ್ಲದೇ ಅವರಿಗೆ ಆಂಧ್ರ ಪ್ರದೇಶದ ಮಾದರಿಯಲ್ಲಿ ವಿದೇಶದಲ್ಲಿ ಮಾರಾಟ ಮಳಿಗೆಯನ್ನು ತೆರೆದು ಬಿದ್ರಿ ವಸ್ತುಗಳಿಗೆ ವಿದೇಶಿ ಮಾರುಕಟ್ಟೆಯ ಬೆಂಬಲವನ್ನು ಒದಗಿಸಿಕೊಡುವಂತಹ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಹೀಗಾದಲ್ಲಿ ಮಾತ್ರ ಬಿದ್ರಿ ಕಲೆ ತನ್ನ ಹಿಂದಿನ ವೈಭವವನ್ನು ಮರಳಿ ಪಡೆಯಬಹುದಾಗಿದೆ.

*****

ಬಿದ್ರಿ ಕಲೆಯ: ಕುಶಲಕರ್ಮಿಗಳು

ಬಿದ್ರಿ ಕಲೆಯ ಕರಕುಶಲಗಾರರನ್ನು ಮೊದಲಿನಿಂದಲೂ ಹೆಚ್ಚಾಗಿ ಮುಸ್ಲಿಮರನ್ನೇ ಕಾಣುತ್ತೇವೆ. ಕಾರಣ ಹೈದ್ರಾಬಾದ ಕರ್ನಾಟಕ ಪ್ರಾಂತದ ಬೀದರ ಜಿಲ್ಲೆ ಸುಮಾರು ಐದಾರುನೂರು ವರ್ಷಗಳ ಕಾಲ ಮುಸ್ಲೀಮರ ಆಳರಸರ ಆಳ್ವಿಕೆಯಲ್ಲಿದ್ದುದು. ಹಾಗೂ ಈ ಕಲೆಗೆ ಮೂಲ ಪ್ರೇರಣೆ ಸಿರಿಯಾ, ಇರಾನ ಮುಂತಾದ ಕಲೆ ಹಾಗೂ ಕರಕುಶಲ ಕರ್ಮಿಗಳ ಪ್ರಭಾವ ಜೊತೆಗೆ ಆರಂಭದಿಂದಲೂ ಬಿದ್ರಿ ಕಲೆಗೆ ಉಮರ್‌ಖಯಾಮ್, ರುಬಾಯಿಯತ್ ಶಿಲ್ಪ ಮಾದರಿಒಯ ಪರ್ಶಿಯನ್ ಸಂಪ್ರದಾಯವೂ ಅಚ್ಚೊತ್ತಿ ಪ್ರಾಥಮಿಕವಾಗಿ ಮುಸ್ಲೀಮರನ್ನೇ ಆಕರ್ಷಿಸಿದೆ.

ಮುಸ್ಲೀಮರಲ್ಲಿ ಸ್ಥಿರಾಸ್ತಿಯನ್ನು ಹೊಂದಿದವರು ಅತ್ಯಂತ ವಿರಳ. ಹೀಗಾಗಿ ಅವರು ಉದರ ನಿಮಿತ್ತ ಇತರೆ ಉದ್ಯೋಗಗಳನ್ನು, ಆಶ್ರಯಗಳನ್ನು ಹುಡುಕಿಕೊಂಡು ಹೋಗುವುದು ಅನಿವಾರ್ಯವೂ ಸಹ ಆಗಿತ್ತು. ಹೀಗಾಗಿ ಅವರ ಆಯ್ಕೆ ಶ್ರಮ ಸಂಸ್ಕೃತಿಯ ಕಸುಬನ್ನೇ ಹುಡುಕಿಕೊಂಡು ಹೋಗಿದ್ದು. ಬಿದ್ರಿ ಕಲೆಯನ್ನೇ. ಹಿಂದೂಗಳು ಸಹಜವಾಗಿ ಸ್ಥಿರಾಸ್ತಿಯನ್ನು ಹೊಂದಿರುವುದರಿಂದ ಅವರು ಬಿದ್ರಿ ಕಲೆಯಂಥ ಕಸುಬಿನಿಂದ ದೂರವಿರುವುದು ಅಚ್ಚರಿಯೇನಲ್ಲ. ಹೀಗಾಗಿ ಬಿದ್ರಿ ಕಲೆಯ ಕುಶಲಗಾರರಲ್ಲಿ ಶೇ ೮೦ರಷ್ಟು ಮುಸ್ಲೀಮರನ್ನು ಕಂಡರೆ, ಶೇ ೨೦ರಷ್ಟು ಹಿಂದೂಗಳನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಬಿದ್ರಿ ಕಲೆ ಕುಶಲಕರ್ಮಿಗಳು ಎಂದರೆ ಮುಸ್ಲೀಮರು ಮಾತ್ರ ಎನ್ನುವಷ್ಟು ಪ್ರಚಲಿತದಲ್ಲಿದೆ.

ಪ್ರಸ್ತುತ ಹತ್ತು ವರ್ಷದಿಂದ ಎಂಬತ್ತು ವಯಸ್ಸಿನವರೆಗೆ ಸ್ತ್ರೀಯರನ್ನು ಹೊರತುಪಡಿಸಿದಂತೆ ಬಿದ್ರಿ ಕೆಲಸ ಮಾಡುವವರನ್ನು ಕಾಣಬಹುದಾಗಿದೆ. ಸಹಾಯಕರಾಗಿ ಸಣ್ಣಪುಟ್ಟ ಹುಡುಗ ಹುಡುಗಿಯರು ವಿರಳವಾಗಿ ಕಂಡುಬಂದರೂ ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಬಿದ್ರಿ ಕಾಲೋನಿಯಲ್ಲಿರುವ ಫಾತಿಮಾ ಬೇಗಂ ಇವರುಗಳು ಬಿದ್ರಿಕಲೆಯಲ್ಲಿ ಪರಿಪಕ್ವತೆಯನ್ನು ಸಾಧಿಸಿ ರಾಷ್ಟ್ರೀಯವಾಗಿ ಪ್ರಚಲಿತದಲ್ಲಿದ್ದಾರೆ.

ಪ್ರಸ್ತುತ ಬಿದ್ರಿ ಕಲಾವಿದರಲ್ಲಿ ಸುಶೀಕ್ಷಿತರ ಅಪರೂಪ. ಶೇ. ೫-೬ರಷ್ಟು ಜನ ಮಾತ್ರ ಶಿಕ್ಷಣ ಪಡೆದವರಿದ್ದಾರೆ. ತಾವೇ ಸೃಷ್ಟಿಸಿಕೊಂಡ ಶೆಡ್ಡುಗಳನ್ನು ಬಿದ್ರಿ ಕಾರ್ಖಾನೆ ಎಂದು ಅತ್ಯಂತ ಮುಗ್ಧತೆಯಿಂದ ಹೇಳುವ ಈ ಕುಶಲಕರ್ಮಿಗಳು ಬಾಲ್ಯದಿಂದಲೇ ಪರಿಣತರ ಬಳಿ ಸಹಾಯಕರಾಗಿ, ನಂತರ ಸ್ವತಂತ್ರವಾಗಿ ಈ ವೃತ್ತಿಯನ್ನು ಆರಂಭಿಸಿದವರೇ ಬಹಳ. ಹೀಗಾಗಿ ಈ ಕುಶಲಕರ್ಮಿಗಳಲ್ಲಿ ಅನಕ್ಷರತೆ ಎಂಬುದು ಶಾಪವಾಗಿ ಪರಿಣಮಿಸಿದ್ದರೂ ವ್ಯಾವಹಾರಿಕವಾಗಿ ಪಕ್ವವಾಗಿದ್ದಾರೆ.

ಪ್ರಸ್ತುತ ಬಿದ್ರಿಕಲೆಯ ಕುಶಲಕರ್ಮಿಗಳು ಇಂದು ಬೀದರ ನಗರದಲ್ಲಿ ಸುಮಾರು ೬೦೦ಕ್ಕೂ ಹೆಚ್ಚು ಜನ ಇದ್ದಾರೆ. ಇವರಲ್ಲಿ ೨೨೪-೨೫೦ರಷ್ಟು ಜನ ಬಿದ್ರಿವೇರ್ ಕ್ರಾಫ್ಟ್ ಕಾಂಪ್ಲೆಕ್ಸ್‌ನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನುಳಿದ ಕುಶಲಕರ್ಮಿಗಳು ಸ್ವತಂತ್ರವಾಗಿ ಬೀದರ್‌ನಲ್ಲಿ ಮತ್ತು ಹೈದ್ರಾಬಾದ್ ನಗರಗಳಲ್ಲಿ ನೆಲೆಸಿದ್ದಾರೆ.

ಹಿಂದಿನ ಶತಮಾನಗಳಲ್ಲಿ ರಾಜ ಮಹಾರಾಜರುಗಳು ಬಿದ್ರಿ ಕಲೆಯ ಕುಶಲಕರ್ಮಿಗಳನ್ನು ಪೋಷಿಸಿದ್ದು ಕಂಡುಬರುತ್ತದೆ. ಬಿದ್ರಿ ಕುಶಲಕರ್ಮಿಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ರಾಜ ಮನೆತನವೇ ಒದಗಿಸುತ್ತಿದ್ದರಿಂದ ಅವರಿಗೆ ಕಷ್ಟದ ದಿನಗಳು ಬರಲಿಲ್ಲ. ಜೊತೆಗೆ ಉತ್ತಮವಾದ ಕಲಾಕೃತಿಯೊಂದನ್ನು ನಿರ್ಮಿಸಿದರೆ ರಾಜ ಮನ್ನಣೆಯೂ ದೊರಕುವುದರೊಂದಿಗೆ ಮುತ್ತು ರತ್ನಾದಿಗಳನ್ನು ಪಡೆದುಕೊಂಡು ಸತ್ಕರಿಸಲ್ಪಡುತ್ತಿದ್ದರು.

ಆದರೆ ಇಂದಿನ ದಿನಗಳಲ್ಲಿ ಹಾಗಿಲ್ಲ. ಕಚ್ಚಾ ವಸ್ತುಗಳನ್ನು ತಾವೇ ತಂದುಕೊಂಡು. ಕಲಾಕೃತಿಯೊಂದನ್ನು ನಿರ್ಮಿಸಿದ ಮೇಲೆ ಅದನ್ನು ಮಾರಲು ಗ್ರಾಹಕರಿಗಾಗಿ ಪರದಾಡಬೇಕಾಗಿದೆ. ಅಷ್ಟು ಕಷ್ಟಪಟ್ಟು ರಚಿಸಿದ ಕಲಾಕೃತಿಗೆ ಇರುವ ಮೌಲ್ಯದಲ್ಲಿ ಶೇ ೫ರಷ್ಟು ಲಾಭ ಇವರಿಗಾದರೆ, ಬಹುತೇಕ ಲಾಭವನ್ನು ಮಧ್ಯವರ್ತಿಗಳೇ ನುಂಗುವ ಬಗೆಯಿಂದ ಈ ಕುಶಲಕರ್ಮಿಗಳ ಬದುಕು ಬರ್ಬರವಾಗಿರುವುದು ದಿಟ. ಕೇಂದ್ರ ಮತ್ತು ಭಾರತ ಸರಕಾರದ ಕರಕುಶಲ ಮಂತ್ರಾಲಯಗಳು ನೀಡುವ ಪ್ರೋತ್ಸಾಹ, ಸಹಾಯಧನ, ಮಾರಾಟ ಬೆಂಬಲಗಳೇ ಇವರಿಗೇ ಜೀವನಾಧಾರ.

ಹೀಗೆ ಸರಕಾರದ ಪ್ರೋತ್ಸಾಹ ಇವರಿಗೆ ನಿರಂತರವಾಗಿ ಉದರವನ್ನು ತುಂಬಿಸದಿದ್ದರೂ ದೀರ್ಘ ಬದುಕಿನ ಸಾಧನೆಯನ್ನು ಗುರುತಿಸಿ ಗೌರವಿಸಿಕೊಂಡ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ. ಹೀಗೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರ ವಿವರಗಳು ಈ ಕೆಳಗಿನಂತಿವೆ.

ಕರ್ನಾಟಕ ರಾಜ್ಯ ಪ್ರಶಸ್ತಿ ವಿಜೇತರು

ಸಂ.	ವರ್ಷ	ಕಲಾವಿದರ ಹೆಸರು	
೦೧.	೧೯೬೯	ಗುಲಾಂ ಸತ್ತಾರ	ಪ್ರಶಸ್ತಿ (ಮೆರಿಟ್)
೦೨	೧೯೭೦	ಬಸಪ್ಪ	ಪ್ರಶಸ್ತಿ
೦೩.	೧೯೭೧	ಶೇಖ ಅಹ್ಮದ ಸಾಹೇಬ	ಪ್ರಶಸ್ತಿ
೦೪.	೧೯೭೨	ಗುಲಾಂ ಖುದ್ದಾಸ್	ಪ್ರಶಸ್ತಿ
೦೫.	೧೯೭೩-೭೪	ಮಾಣಿಕಪ್ಪ	ಪ್ರಶಸ್ತಿ
೦೬.	೧೯೭೮	ಮೊಹಮ್ಮದ್ ಶರೀಫ್	ಪ್ರಶಸ್ತಿ
೦೭	೧೯೮೪	ಶಾಹ ರಾಷಿದ್ ಅಹ್ಮದ ಖಾದ್ರಿ	ಪ್ರಶಸ್ತಿ
೦೮.	೧೯೮೪	ಖಾಲೀಲ ಅಹ್ಮದ	ಪ್ರಶಸ್ತಿ (ಮೆರಿಟ್)

೦೯.	೧೯೮೫	ಸೈಯದ್ ಶಾ ಅಹ್ಮದ ಶಾ ಖಾದ್ರಿ	ಪ್ರಶಸ್ತಿ
೧೦.	೧೯೮೫	ಅಬ್ದುಲ ರೌಫ	ಪ್ರಶಸ್ತಿ (ಮೆರಿಟ್)
೧೧.	೧೯೮೭	ಅಬ್ದುಲ ಹಕೀಂ	ಪ್ರಶಸ್ತಿ (ಮೆರಿಟ್)
೧೨.	೧೯೮೮	ಮೊಹಮ್ಮದ್ ಅಹ್ಮದ	ಪ್ರಶಸ್ತಿ
೧೩.	೧೯೮೯	ಗುಲಾಂ ಸಮದ ಸಿದ್ದಿಖಿ	ಪ್ರಶಸ್ತಿ (ಮೆರಿಟ್)
೧೪.	೧೯೯೧	ಅಬ್ದುಲ ರೌಫ	ಪ್ರಶಸ್ತಿ
೧೫.	೧೯೯೩	ಅಬ್ದುಲ ಹಕೀಂ	ಪ್ರಶಸ್ತಿ (ಮೆರಿಟ್)
೧೬.	೧೯೯೪	ಮೊಹಮ್ಮದ್ ಶಫಿಯಾದ್ದೀನ್	ಪ್ರಶಸ್ತಿ
೧೭.	೧೯೯೫	ಮೊಹಮ್ಮದ್ ಮಾಯಿಜೂದ್ದೀನ್	ಪ್ರಶಸ್ತಿ (ಮೆರಿಟ್)
೧೮.	೨೦೦೨	ಮೊಹಮ್ಮದ್ ಮಾಯಿಜೂದ್ದೀನ್	ಪ್ರಶಸ್ತಿ
೧೯.	೨೦೦೨	ಶಾಹ ಮಜೀದ್ ಖಾದ್ರಿ	ಪ್ರಶಸ್ತಿ
೨೦.	೨೦೦೩	ಮೊಹಮ್ಮದ್ ಆರೀಫೂದ್ದೀನ್	ಪ್ರಶಸ್ತಿ
೨೧.	೨೦೦೩	ಅಬ್ದುಲ ಹಮೀದ	ಪ್ರಶಸ್ತಿ
೨೨.	೨೦೦೩	ಮೊಹಮ್ಮದ್ ಉಸ್ಮಾನ್	ಪ್ರಶಸ್ತಿ (ಮೆರಿಟ್)
೨೩.	೨೦೦೪-೦೫	ಲಕ್ಷ್ಮಿ ಬಾಯಿ	ಪ್ರಶಸ್ತಿ
೨೪.	೨೦೦೭-೦೮	ಶಾಹ ಮಜೀದ್ ಖಾದ್ರಿ	ಪ್ರಶಸ್ತಿ
೨೫.	೨೦೦೮-೦೯	ರಾಜ್ಕುಮಾರ್	ಪ್ರಶಸ್ತಿ

ರಾಷ್ಟ್ರ ಪ್ರಶಸ್ತಿ ವಿಜೇತರು

ಸಂ.	ವರ್ಷ	ಕಲಾವಿದರ ಹೆಸರು	
೦೧.	೧೯೬೭	ತಸಾದುಕ್ ಹುಸೇನ್	ಪ್ರಶಸ್ತಿ
೦೨.	೧೯೮೪	ಶಾಹ ರಾಷಿದ್ ಅಹ್ಮದ ಖಾದ್ರಿ	ಪ್ರಶಸ್ತಿ
೦೩	೧೯೯೩	ಅಬ್ದುಲ ಹಕೀಂ	ಪ್ರಶಸ್ತಿ (ಮೆರಿಟ್)
೦೪.	೧೯೯೮	ಮೊಹಮ್ಮದ ಅಬ್ದುಲ್ ರಹೀಮ್	ಪ್ರಶಸ್ತಿ (ಮೆರಿಟ್)
೦೫.	೧೯೯೯	ಮೊಹಮ್ಮದ ನಜೀಬ ಖಾನ್	ಪ್ರಶಸ್ತಿ
೦೬	೨೦೦೧	ಶಾಹ ಮಜೀದ ಖಾದ್ರಿ	ಪ್ರಶಸ್ತಿ (ಮೆರಿಟ್)
೦೭	೨೦೦೩	ಮೊಹಮ್ಮದ ಮಾಯಿಜೂದ್ದೀನ್	ಪ್ರಶಸ್ತಿ
೦೮.	೨೦೦೪	ಮೊಹಮ್ಮದ ಅಬ್ದುಲ್ ರೌಫ್	ಪ್ರಶಸ್ತಿ

೦೧. ೨೦೧೨ ಶಾಹ ರಾಷಿದ್ ಅಹ್ಮದ ಖಾದ್ರಿ ಪ್ರಶಸ್ತಿ

ತಮ್ಮ ಬದುಕು ಹಸನಾಗದಿದ್ದರೂ, ಕಲಾಪ್ರೇಮಿಗಳನ್ನು ಸಂತೃಪ್ತಗೊಳಿಸುವ ಬೀದರಿನ ಕುಶಲ ಕರ್ಮಿಗಳ ಕುಶಲಕಲಾ ಬದುಕು, ಸಾಧನೆಗಳ ವಿವರಗಳನ್ನು ಇಲ್ಲಿ ಕೊಡಮಾಡಲಾಗಿದೆ.

ಬೀದರನ ಬಿದ್ರಿ ಕಲೆಯ ಕುಶಲ ಕರ್ಮಿಗಳು

೧. ಮಾಣಿಕಪ್ಪನವರು

ಬೀದರನ ಬಿದ್ರಿ ಕುಶಲಕರ್ಮಿಗಳಾದ ಮಾಣಿಕಪ್ಪನವರು ಬಿದ್ರಿಕಲೆಯಲ್ಲಿ ಪ್ರಸಿದ್ಧಯನ್ನು ಹೊಂದಿದ್ದ ನರಸಪ್ಪನವರ ಮನೆತನದಲ್ಲಿ ಜನಿಸಿದವರು. ರಾಜಾಶ್ರಯದಲ್ಲಿದ್ದ ನರಸಪ್ಪನವರು ಬಿದ್ರಿ ಕಲೆಯ ಕರ್ಮದೊಡನೆ, ಪೋಷಣೆ ಮಾಡಿದವರು. ಬೀದರನಲ್ಲಿ ನೆಲೆಸಿದ್ದ ನರಸಪ್ಪನವರಿಗೆ ನಾಲ್ಕು ಜನ ಮಕ್ಕಳಲ್ಲಿ ಅವರಲ್ಲಿ ಬಸಪ್ಪನವರು ನರಸಪ್ಪನವರ ನೆರಳಲ್ಲಿದ್ದುಕೊಂಡು ಬಿದ್ರಿಕಲೆಯನ್ನು ಕರಗತ ಮಾಡಿಕೊಂಡವರು.

ನಿರಂತರ ಕಲಿಕೆ ಮತ್ತು ಸೃಜನಶೀಲ ನೈಪುಣ್ಯತೆಯನ್ನು ಸಾಧಿಸಿದ್ದ ಬಸಪ್ಪನವರಿಗೆ ಕರ್ನಾಟಕ ಸರಕಾರ ೧೯೭೦ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ದೇಶದಾದ್ಯಂತ ಅನೇಕ ಪ್ರಮುಖ ನಗರಗಳಲ್ಲಿ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿ ಗೌರವಗಳಿಗೆ, ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ. ಬಸಪ್ಪನವರು ದಿವಂಗತರಾದ ನಂತರ ಪತ್ನಿ ಅಡೆಮ್ಮಾ ಅವರಿಗೆ ಸರಕಾರೀ ಪಿಂಚಣಿ ಸೌಲಭ್ಯ ದೊರಕಿದೆ. ಈ ಬಸಪ್ಪನವರಿಗೆ ನಾಲ್ಕು ಜನ ಮಕ್ಕಳಿದ್ದು, ಅವರಲ್ಲಿ ಕುಶಲಕರ್ಮಿ ಮಾಣಿಕಪ್ಪನವರು ದ್ವಿತೀಯ ಪುತ್ರರಾಗಿ ೧೮.೦೯.೧೯೪೧ರಲ್ಲಿ ಬೀದರ ನಗರದಲ್ಲಿ ಜನಿಸುತ್ತಾರೆ.

ತಂದೆ ಬಸಪ್ಪನವರ ಬಿದ್ರಿ ಗರಡಿಯಲ್ಲಿ ಪಳಗಿದ ಮಾಣಿಕಪ್ಪನವರು, ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ, ಕುತೂಹಲಗಳನ್ನು ಮೇಳೈಸಿಕೊಂಡದ್ದರಿಂದ ಬಿದ್ರಿ ಕಲೆಯಲ್ಲಿ ಪರಿಪಕ್ವತೆಯನ್ನು ಹೊಂದುತ್ತಾರೆ. ಕಳೆದ ನಲವತ್ತೇಳು ವರ್ಷಗಳಿಂದ ಬಿದ್ರಿ ಕಲಾವಸ್ತುಗಳನ್ನು ಸಿದ್ಧಪಡಿಸುತ್ತಿರುವ ಇವರು ತಮ್ಮ ಕುಟುಂಬದ ಎಲ್ಲರನ್ನು ತಮ್ಮ ಕಸುಬುಗಳಲ್ಲಿ ಭಾಗಿಗಳನ್ನಾಗಿಸಿ ಅವರನ್ನು ಸಹ ಬಿದ್ರಿ ಕಲೆಯ ಕುಶಲಕರ್ಮಿಗಳನ್ನಾಗಿ ರೂಪಿಸಿದ ಅಗ್ಗಳಿಕೆಗೆ ಪಾತ್ರರಾಗುತ್ತಾರೆ. ಮಾಣಿಕಪ್ಪನವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿಯವರು ಪುರುಷ ಕುಶಲಕರ್ಮಿಗಳಿಗೆ ಸಮಾನವಾಗಿಯೇ ಬಿದ್ರಿ ಕುಶಲ ವಸ್ತುಗಳನ್ನು ರೂಪಿಸುವುದರಲ್ಲಿ ಸಿದ್ಧಹಸ್ತರು! ಹಾಗೆಯೇ ಅವರ ಪುತ್ರ ಮಲ್ಲಿಕಾರ್ಜುನ ಅವರು ಡಿ.ಪಿ.ಸಿ. ಕರಕುಶಲ ಯೋಜನೆಯಲ್ಲಿ ಭಾಗಿಯಾಗಿ ದ್ವಿತೀಯ ಬಹುಮಾನದ ಗೌರವಕ್ಕೆ

ಭಾಜನರಾಗಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ತಂದೆಗೆ ಸಹಕರಿಸುವ ಜೊತೆಗೆ ಬಿದ್ರಿ ಕುಶಲ ವಸ್ತುಗಳನ್ನು ತಯಾರಿಸುವ ಇವರು ಬೀದರಿನ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಇನ್‌ಸ್ಟ್ರಕ್ಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಾಣಿಕಪ್ಪನವರು ಮನುವದರಿಕಲೆ ಮತ್ತು ಜರ್‌ನಿಶಾನ್ ಶೈಲಿಗಳನ್ನು ಕರಗತ ಮಾಡಿಕೊಂಡು ಖಡ್ಗ, ಹುಕ್ಕಾ, ಆಭರಣ ಪೆಟ್ಟಿಗೆ, ನೀರಿನ ಬಟ್ಟಲು, ತಟ್ಟೆ, ಹೂವಿನ ಕುಂಡಲ, ಅಂಗಿಯ ಗುಂಡಿಗಳು, ಕತ್ತರಿ, ಅಜಂತಾ ಮಾದರಿ, ಹುಕ್ಕಾ, ಪೇಪರ್ ಕ್ಲಿಪ್‌ಗಳು ಇನ್ನು ಹಲವಾರು ಬಗೆಯ ಬಿದ್ರಿ ಕಲಾವಸ್ತುಗಳನ್ನು ರಚಿಸಿದ್ದಾರೆ. ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ ಅವರು ೧೯೫೦ರಲ್ಲಿ ಬೀದರಿಗೆ ಭೇಟಿಕೊಟ್ಟಾಗ ಮಾಣಿಕಪ್ಪನವರ ಬಿದ್ರಿ ಕಾರ್ಖಾನೆಗೂ ಬಂದು ಮಾಣಿಕಪ್ಪನವರು ತಯಾರಿಸಿದ ಬಿದ್ರಿ ಕಲಾವಸ್ತುಗಳನ್ನು ನೋಡಿ ಪ್ರಶಂಸಿದ್ದಾರೆ. ೧೯೭೩ರಲಿರಾಜ್ಯ ಪ್ರಶಸ್ತಿ, ೧೯೮೦ರಲ್ಲಿ ಕರ್ನಾಟಕ ಸರಕಾರದ ಜನಪದ ಕ್ಯಾಲೆಂಡರ್‌ನಲ್ಲಿ ಇವರು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಪ್ರಕಟಪಡಿಸಿತ್ತು. ೧೯೮೬ರಲ್ಲಿ ಅಂದಿನ ಭಾರತ ಸರಕಾರದಲ್ಲಿ ಸಚಿವರಾಗಿದ್ದ ಜನಾರ್ಧನ ಪೂಜಾರಿ ಇವರು ಮಾಣಿಕಪ್ಪನವರ ಬಿದ್ರಿ ಕಲಾವಸ್ತುಗಳನ್ನು ನೋಡಿ ಪ್ರಶಂಸಿದ್ದಲ್ಲದೇ, ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯವನ್ನು ಮಾಡಿದರು. ತ್ರೀವೇಂದ್ರಂ, ದೆಹಲಿ, ಮೈಸೂರು ದಸರಾ ವಸ್ತು ಪ್ರದರ್ಶನ, ಮುಂಬಯಿ, ಚೆನ್ನೈ, ಬೆಂಗಳೂರು ಇನ್ನೂ ಮುಂತಾದ ಸ್ಥಳಗಳಲ್ಲಿ ಮಾಣಿಕಪ್ಪನವರು ತಾವು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಮುಂಬಯಿ, ಬೆಂಗಳೂರು, ಹೈದ್ರಾಬಾದ್, ಮೈಸೂರು, ನವದೆಹಲಿಯಲ್ಲಿ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಇಂದಿನ ಪೀಳಿಗೆಗೆ ಬಿದ್ರಿಕಲೆಯ ಅಂದ-ಚೆಂದವನ್ನು ಪ್ರದರ್ಶಿಸುತ್ತಲಿವೆ.

೨. ಮೊಹಮ್ಮದ ಷರೀಫ್

ಮಾಣಿಕಪ್ಪನವರಂತೆಯೇ ಮೊಹಮ್ಮದ ಷರೀಫ್ ಅವರೂ ಸಹ ಪ್ರಮುಖ ಬಿದ್ರಿ ಕುಶಲಕರ್ಮಿಗಳು. ೧೯೩೭ರಲ್ಲಿ ಬೀದರಿನಲ್ಲಿ ಹುಟ್ಟುಪಡೆದ ಇವರ ತಂದೆ ಸುಲ್ತಾನ ಸಾಹೇಬ ಷರೀಫ್. ಸುಲ್ತಾನ ಸಾಹೇಬರ ಕುಟುಂಬ ಆರ್ಥಿಕವಾಗಿ ತುಂಬ ದುರ್ಬಲಾವದ ಕುಟುಂಬ. ಇಂತಹ ಕುಟುಂಬದಲ್ಲಿ ಜನಿಸಿದ ಇವರು ರಾಷ್ಟ್ರೀಯ ಮಟ್ಟದಲ್ಲಿ ಗೋಚರಿಸುವ ಹಿನ್ನಲೆಯಲ್ಲಿ ಅವರು ರಚಿಸಿದ ಬಿದ್ರಿ ಕಲಾವಸ್ತುಗಳೇ ಕಾರಣವೆನ್ನಬಹುದು. ವೃತ್ತಿಯಲ್ಲಿ ಶ್ರದ್ಧೆಯನ್ನಿಟ್ಟಿಕೊಂಡ ಷರೀಫರು ಬಿದ್ರಿ ಕಲೆಯ ತಂತ್ರ, ಶೈಲಿಗಳನ್ನು ಆಳವಾಗಿ ಅಧ್ಯಯನ ಮಾಡಿಕೊಂಡವರು. ಬಾಲ್ಯದಲ್ಲಿಯೇ ಅಬ್ದುಲ್ ಗಫರ್ ಅವರು ಷರೀಫರಿಗೆ ಆಶ್ರಯ ನೀಡಿದವರು. ಅವರಲ್ಲಿಯೇ ಬಿದ್ರಿ ಕಲೆಯ ಪೆಟ್ಟಗಳನ್ನು ಹಂತಹಂತವಾಗಿ ಕಲಿಯುತ್ತ, ೧೫ನೆಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯ ಕಲಾವಸ್ತುಗಳನ್ನು ಪ್ರಬುದ್ಧವಾಗಿ ರಚಿಸಿದ ಇವರು ಮೂರು ಶೈಲಿಯಲ್ಲಿ ಬಿದ್ರಿ ಕಲಾವಸ್ತುಗಳ್ನನು ರಚಿಸುವ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ. ಷರೀಫರ ಜನಪ್ರಿಯ ಬಿದ್ರಿ ಕಲಾವಸ್ತುಗಳೆಂದರೆ ಫುಲ್

ಜಡಿ, ಗೋಲಾಕಾರದ ಸೂರಾಯಿ, ಮಹತಾಬಿ ಇನ್ನೂ ಮುಂತಾದವು. ಉಮರ್ ಖಯಾಂ ದೃಶ್ಯಾವಳಿಗಳನ್ನು ಹೊಂದಿದ ಹೂಜಿಗಳು ಇವರ ಕೀರ್ತಿ ಹೆಚ್ಚಿಸಿದ್ದು, ಇದರಲ್ಲಿ ಬೆಳ್ಳಿಯ ತಂತಿಗಳನ್ನು ಹುದುಗಿಸಿ ರಚಿಸಿದ್ದಾರೆ. ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾಗಿ ರಚಿಸಿದ ಈ ಹೂಜಿ ಇವರ ಸಂಗ್ರಹದಲ್ಲಿದೆ. ಇವರು ತಮ್ಮ ಬಿದ್ರಿ ಕಲಾವಸ್ತುಗಳನ್ನು ಬೆಂಗಳೂರು ಬೆಳಗಾವಿ, ಕನ್ಯಾಕುಮಾರಿ, ಕೋಲ್ಕೋತ್ತಾ, ಭುವನೇಶ್ವರ, ಚೆನ್ನೈ, ಪಾಂಡಿಚೆರಿ, ರಾಜಸ್ಥಾನ, ಮಂಗಳೂರು ಇನ್ನೂ ಮುಂತಾದ ಕಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

೩. ಶ್ರೀಮತಿ ಲಕ್ಷ್ಮೀ ಬಾಯಿ

ಬಿದ್ರಿಕಲೆಯಲ್ಲಿ ಪ್ರಥಮ ಬಾರಿಗೆ ೨೦೦೪-೦೫ರ ರಾಜ್ಯ ಪ್ರಶಸ್ತಿ ಪಡೆದಿರುವ ಲಕ್ಷ್ಮೀಬಾಯಿಗೆ ಈಗ ೫೫ರ ಹರೆಯ. ಬೀದರನಲ್ಲಿ ಜನಿಸಿದ ಇವರು ೫ನೆಯ ತರಗತಿಯವರೆಗೆ ಓದಿದ್ದು, ಕಳೆದ ನಲವತ್ತು ವರ್ಷದಿಂದ ಈ ಬಿದ್ರಿಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಹುತೇಕವಾಗಿ ಬಿದ್ರಿಯ ಎಲ್ಲ ಬಗೆಯ ವಸ್ತುಗಳನ್ನು ಉತ್ಪಾದಿಸುವ ಇವರು ಮಹಿಳೆಯರು ಧರಿಸಿಕೊಳ್ಳುವ ಬಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ೧೯೯೯ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮಮಹಿಳಾ ಮಂಡಲವು ಬೀದರನಲ್ಲಿ ನಡೆಸಿದ ಪ್ರದರ್ಶನ ಭಾಗಿಯಾಗಿದ್ದಾರೆ. ೨೦೦೫ರಲ್ಲಿ ಪಟಿಯಾಲಾ ಹೆರಿಟೇಜ ಫೆಸ್ಟಿವಲ್‌ನ ಕ್ರಾಫ್ಟ್ ಮೇಳದಲ್ಲಿ ತಮ್ಮ ಬಿದ್ರಿ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ೬ ತಿಂಗಳ ಕಾಲ ಭಾರತ ಸರಕಾರದ ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ ಯೋಜನೆಯ ತರಬೇತಿಯನ್ನು ಸಹ ಪಡೆದಿದ್ದಾರೆ. ಲಕ್ಷ್ಮೀ ಬಾಯಿಯವರ ಮಗ ಪ್ರಭಾಕರ್ ರಾವ್ ಪಿಸೆ ಅವರೂ ಸಹ ತಾಯಿಗೆ ಸಹಕರಿಸುತ್ತಾ, ಯುವ ಕಲಾವಿದರ ಸಾಲಿನಲ್ಲಿ ಹೆಸರು ಪಡೆದಿದ್ದಾರೆ. ೩೫ರ ವಯಸ್ಸಿನ ಇವರಿಗೆ ೧೯೯೮ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ವಿಶ್ವಕರ್ಮ ಪ್ರಶಸ್ತಿ ಹಾಗೂ ೨೦೦೦ರಲ್ಲಿ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕದ ಪ್ರಶಸ್ತಿಯನ್ನು ಸಹ ಪಡೆದಿದ್ದಾರೆ. ಪ್ರತೀ ತಿಂಗಳು ೪ರಿಂದ ೫ಸಾವಿರದವರೆಗೆ ಗಳಿಸುತ್ತಾರೆ.

೪. ಶ್ರೀಮತಿ ಲಕ್ಷ್ಮೀದೇವಿ

ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಅತೀವ ಆಸಕ್ತಿಯನ್ನು ಹೊಂದಿದವರು ಲಕ್ಷ್ಮಿದೇವಿ. ತನ್ನ ತಂದೆ-ತಾಯಿಯವರ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿ, ಅವರು ಬಳಸುವ ತಂತ್ರಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳುತ್ತ ಬಿದ್ರಿಕಲೆಯಲ್ಲಿ ಪರಿಣಿತಿಯನ್ನು ಹೊಂದಿದವರು. ನಯೀಕಮಾನಿನ ಬಳಿ ಇರುವ ಕಾರ್ಯಾಗಾರದಲ್ಲಿ ಧಾತುವಿನಲ್ಲಿ ವಿನ್ಯಾಸವನ್ನು ಕೊರೆಯುವ ಇವರ ಪತಿಯ ವೃತ್ತಿಯೂ ಬಿದ್ರಿಕಲೆಯೇ ಆಗಿರುವುದರಿಂದ ಅಲ್ಲಿಯೂ ಸಹ ಪತಿಯ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಇವರು ಅನೇಕ ಬಿದ್ರಿ ಕಲಾಕೃತಿಗಲನ್ನು ರಚಿಸಿ ವಿಶ್ವದ ಗಮನವನ್ನು ಸೆಳೆದಿದ್ದಾರೆ. ಇವರು ರಚಿಸಿರುವ ಕೃತಿಗಳು ಬಿದ್ರಿಕಲೆಯ ಸೂಕ್ಷ್ಮತೆ ಮತ್ತು ಸೌಂದರ್ಯಗಳಿಗೆ ಉತ್ತಮವಾದ ಉದಾಹರಣೆಗಳು

ಕಪ್ಪನೆಯ ಮೇಲು ಹೊದಿಕೆಯಲ್ಲಿ ಬೆಳ್ಳಿಯ ಇನ್‌ಲೇ ಮಾಡಿದ ವಿನ್ಯಾಸಗಳಲ್ಲಿ ಕೊರೆದ ಅಡ್ಡಗೆರೆಗಳ ಅಥವಾ ಕತ್ತರಿಯಾಕಾರದ ವಿನ್ಯಾಸಗಳು ಅರಮನೆಗಳಲ್ಲಿನ ವರ್ಣರಂಜಿತ ಟೈಲ್ಸಗಳ ವಿನ್ಯಾಸವನ್ನು ನೆನಪಿಸುತ್ತವೆ.

ಉತ್ತರಭಾರತದಲ್ಲಿ ಕ್ರಿ.ಶ.೧೫೨೬ರಿಂದ ೧೮೫೭ರವರೆಗೆ ಆಳ್ವಿಕೆ ನಡೆಸಿದ್ದು ಪರ್ಶಿಯಾ ಮೂಲದ ಮೊಗಲ ಬಾದಶಹಾರ ಕಾಲದಲ್ಲಿ ಅವರೊಂದಿಗೆ ಆಗಮಿಸಿದ್ದ ಕಲಾಕಾರರು ಆಮದು ಮಾಡಿಕೊಂಡಿದ್ದ ಅನೇಕ ವಿನ್ಯಾಸಗಳನ್ನು ಲಕ್ಷ್ಮೀದೇವಿಯವರು ಅಳವಡಿಸಿಕೊಂಡಿದ್ದಾರಲ್ಲದೇ ಅವುಗಳನ್ನು ಪುನಃ ಸೃಜಿಸುವಲ್ಲಿ ಅವರ ಶ್ರಮ ಕಾಣುತ್ತದೆ.

೫. ಅಬ್ದುಲ್ ಖಾದೀರ್

ಖ್ಯಾತ ಬಿದ್ರಿ ಕಲಾವಿದ ಮೊಹಮದ್ ಸುಲ್ತಾನ್ ಅವರ ಮಗನಾದ ಅಬ್ದುಲ್ ಖಾದೀರ ಇವರಿಗೆ ೫೦ವರ್ಷ. ಬಿದ್ರಿ ಕಲೆಯ ಬಹುತೇಕ ಕಲಾಕೃತಿಗಳನ್ನು ರಚಿಸುವ ಇವರು ಬುಧಾ ಬಿದ್ರಿಕೃತಿಗಲನ್ನು ರಚಿಸುವಲ್ಲಿ ಪರಿಣಿತರು. ತಂದೆಯೇ ಗುರುವನ್ನಾಗಿಸಿಕೊಂಡು ಬಿದ್ರಿ ಕಲೆಯಲ್ಲಿ ಪಳಗಿದ ಇವರು ಕಳೆದ ೩೦ವರ್ಷಗಳಿಂದ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದು ಅವರಲ್ಲಿ ಸುಲತಾನಾ ಅವಳು ಸಹ ಶಿಟ್ ವರ್ಕ್‌ನಲ್ಲಿ ಪರಿಣಿತಿಯನ್ನು ಹೊಂದಿದ್ದಾಳೆ. ಇವಳು ಬಿದ್ರಿ ಕಲೆಯನ್ನು ರಚಿಸುವಚಿತ್ರವು ವರ್ಲ್ಡ್ ಕ್ರಾಫ್ಟ್ ೧೯೯೯-೨೦೦೦ರ ಸಂಚಿಕೆಯ ಮುಖಪುಟದಲ್ಲಿ ಮುದ್ರಣವಾಗಿದೆ. ಇವಳಂತೆಯೇ ಖಾದೀರ್ ಕುಟುಂಬದ ಪರಿವಾರದವರೆಲ್ಲ ಬಿದ್ರಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೀದರನ ವಾಯುಪಡೆಯ ಕೇಂದ್ರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ನೀಡಿ ಮೆಚ್ಚುಗೆ ಪಡೆದಿದ್ದಾರೆ.

೬. ಮೊಹಮ್ಮದ ಉಸ್ಮಾನ

೧೧ನೆಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯನ್ನು ಅಭ್ಯಸಿಸತೊಡಗಿದ ಮೊಹಮ್ಮದ್ ಉಸ್ಮಾನ ಅವರಿಗೆ ಈಗ ೬೧ ವರ್ಷ. ಬೀದರ ನಗರದಲ್ಲಿ ಜನಿಸಿದ ಇವರು ೭ನೆಯ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ. ಇವರ ಪತ್ನಿ ಸುಫಿಯಾ ಬೇಗಂ ಮನೆಯ ಕಾರ್ಯದಲ್ಲಿ ತೊಡಗಿಸಿಕೊಂಡರೆ, ಇವರಿಗಿರುವ ೮ ಜನ ಮಕ್ಕಳಿದ್ದು ಅವರೆಲ್ಲರೂ ತಂದೆಯ ವೃತ್ತಿಯಲ್ಲಿ ಸಹಾಯಕರಾಗಿ ದುಡಿಯುತ್ತಿದ್ದಾರೆ. ಉಸ್ಮಾನ ಅವರು ಎಲ್ಲ ತರಹದ ಬಿದ್ರಿ ಕಲಾಕೃತಿಗಳನ್ನು ರಚಿಸಬಲ್ಲವರಾಗಿದ್ದು, ಶೀಟ್ ವರ್ಕ್‌ನಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ ಇವರಿಗೆ ೨೦೦೩ರಲ್ಲಿ ರಾಜ್ಯ ಪ್ರಶಸ್ತಿ ದೊರಕಿದೆ. ೧೯೯೧-೯೩ರಲ್ಲಿ ಅಖಿಲ ಭಾರತೀಯ ಕರಕುಶಲ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಅದೇ ರೀತಿ ೨೦೦೭ರಲ್ಲಿ ದಿಲ್ಲಿ ಹಾತ್, ಬೆಂಗಳೂರಿನ ರೀಜನಲ್ ಡಿಸೈನ್ ಅಂಡ್ ಟೆಕ್ನಿಕಲ್ ಡವೆಲಪ್‌ಮೆಂಟ್ ಸೆಂಟರ್‌ನಲ್ಲಿ ನಡೆಯುವ ಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಬೆಂಗಳೂರಿನ ಕಾವೇರಿ ಎಂಪೋರಿಯಮ್ ಮುಖಾಂತರ ಅನೇಕ ಕಲಾಕೃತಿಗಳನ್ನು ಮಾರಾಟ ಮಾಡಿರುವ ಇವರಿಗೆ ಕೆಲಸಕ್ಕೆ

ತಕ್ಕ ಸಂಭಾವನೆ ದೊರಕುವುದಿಲ್ಲ ಎಂಬ ಕೊರತೆ ಕಾಡುತ್ತಿರುವುದು ಬಿದ್ರಿ ಕಲಾವಿದರ ಸ್ಥಿತಿಯ ಪ್ರತಿಬಿಂಬ.

೭. ಮೊಹಮ್ಮದ್ ಫೈಜುದ್ದೀನ್

ಕಳೆದ ೫೫ ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕೆಲಸ ಮಾಡುತ್ತಿರುವ ಮೊಹಮ್ಮದ್ ಫೈಜುದ್ದೀನ ಇವರಿಗೆ ಈಗ ೭೦ರ ವಯೋಮಾನ. ಬಿದ್ರಿ ಕಲೆಯ ಎಲ್ಲ ತಂತ್ರಗಳನ್ನು ಬಲ್ಲಿದ ಇವರು ೪ನೆಯ ತರಗತಿಯವರೆಗೆ ಅಭ್ಯಾಸ ಮಾಡಿ ಬಿದ್ರಿಕಲೆಯ ಕೆಲಸದಲ್ಲಿ ತೊಡಗಿಸಿಕೊಂಡವರು. ಆರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತ ಇವರು, ೪೦ ವರ್ಷದ ಮೊಹಮ್ಮದ್ ಹುಸೇನ್, ೩೬ವರ್ಷದ ಮೊಹಮ್ಮದ್ ಮೋಯೀನ್, ಮೊಹಮ್ಮದ್ ಶಫಿ, ಮೊಹಮ್ಮದ್ ರಫಿ, ಮೊಹಮ್ಮದ್ ಸಲಾವುದ್ದೀನ್, ಮೊಹಮ್ಮದ್ ಖಮರುದ್ದೀನ್ ಇವರುಗಳು ಬಿದ್ರಿ ಕೆಲಸವನ್ನು ತ್ಯಜಿಸಿ ಬೇರೆ ಉದ್ಯೋಗವನ್ನು ಅರಸಿಕೊಂಡು ಹೋಗಿದ್ದಾರೆ. ಫೈಜುದ್ದೀನ್ ಇವರು ೨೦೦೬ರ ಮೈಸೂರು ದಸರಾ, ೨೦೦೪ರಲ್ಲಿ ಮುಂಬಯಿ ಹಾಗೂ ೨೦೦೩ರಲ್ಲಿ ಬೆಂಗಳೂರಿನಲ್ಲಿ ನಡೆದ ಕ್ರಾಫ್ಟ್ ಮೇಳದಲ್ಲಿ ಪಾಲ್ಗೊಂಡಿದ್ದಾರೆ.

೮. ರಮೇಶ್

ತಾತನವರಾದ ರಾಮಚಂದ್ರರಾವ್ ಕಾಂಬಳೆ ಅವರು ೬೦ನೆಯ ವಯಸ್ಸಿನಲ್ಲಿ ಹಾಗೂ ತಂದೆಯವರಾದ ಮೋಹನ್‌ರಾವ ಕಾಂಬಳೆ ಇವರು ೫೦ನೆಯ ವಯಸ್ಸಿನಲ್ಲಿ ನಿಧನರಾದರೂಅವರ ಮಗ ರಮೇಶ್ ಅವರು ಈ ಬಿದ್ರಿ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಜೂನ್ ೧, ೧೯೭೭ರಲ್ಲಿ ಬೀದರದಲ್ಲಿ ಜನಿಸಿದ ಇವರು ೭ನೆಯ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ೧೮ ವರ್ಷಗಳಿಂದ ಈ ಕಲೆಯಲ್ಲಿ ಶ್ರಮಪಟ್ಟ ರಮೇಶ್ ಅವರು ಬಿದ್ರಿ ಕಲೆಯ ಹಲವಾರು ತಂತ್ರಗಳನ್ನು ಅಧ್ಯಯನ ಮಾಡಿದ್ದಾರೆ. ತಮ್ಮ ಮಕ್ಕಳಿಗೆ ಈ ಬಿದ್ರಿ ಕಲೆಯ ಬಲೆಯಲ್ಲಿ ಬೀಳಿಸಿದೇ ಅವರಿಗೆ ಉತ್ತಮವಾದ ವಿದ್ಯೆಯನ್ನು ನೀಡಿ ಯಾವುದಾದರೂ ನೌಕರಿಗೆ ಹಚ್ಚುತ್ತೇನೆ ಎನ್ನುವ ಇವರಿಗೆ ಬಿದ್ರಿ ಕಲಾವಿದರಿಗೆ ದೊರಕುತ್ತಿರುವ ಮಾನ್ಯತೆಯ ಬಗ್ಗೆ ನೋವು ಇದೆ.

೯. ಗುಲಾಮ ಸಮದ್ ಸಿದ್ದಿಕಿ

ಬಿದ್ರಿ ಕಾಲನಿಯಲ್ಲಿರುವ ಗುಲಾಮ ಸಮದ್ ಸಿದ್ದಿಕಿಯವರ ೧೦ನೆಯ ಸಂಖ್ಯೆಯ ಮನೆಗೆ ಒಂದು ವಿಶೇಷತೆ ಇದೆ. ಈ ಮನೆಯಲ್ಲಿರು ೭ರ ಹಿರಿಯ ಜೀವ ಬಿದ್ರಿಕಲೆಯ ಅರಗಿಸಿಕೊಂಡು ಅದನ್ನೇ ಬದುಕಿನ ಮೂಲಾಧಾರವಾಗಿಸಿಕೊಂಡು ಬದುಕಿದ ಪ್ರಸಿದ್ಧ ಕುಶಲಕರ್ಮಿ. ಇವರನ್ನು ಕಾಲನಿಯಲ್ಲಿ "ಆಲ್ ರೌಂಡ ಮಾಸ್ಟರ್" ಎಂದು ಕರೆಸಿಕೊಳ್ಳುವ ಇವರಿಗೆ ಬಿದ್ರಿಯ ಎಲ್ಲ ಪ್ರಕಾರಗಳು, ಅವುಗಳ ರಚನಾ ತಂತ್ರಗಳು ಸಹ ಕರಗತವಾಗಿವೆ.

ಸಿದ್ದಿಕಿಯವರ ತಂದೆಯವರಾದ ಗುಲಾಂ ಅಬ್ಬಾಸ್ ಸಿದ್ದಕಿ ಅವರ ಜೊತೆ ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡ ಸಮದ್ ಅವರು ಈಗಲೂ ಬಿದ್ರಿ ಕೆತ್ತನೆಗೆ ಮುಂಚಿನ ಹಂತವಾದ ಸೂಕ್ಷ್ಮ ರೇಖೆಗಳನ್ನು ಎಳೆದುಕೊಡುತ್ತಾರೆ. ಇವರ ಎಲ್ಲ ಮಕ್ಕಳೂ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. ೨೦೦೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಘಟಿಕೊತ್ಸವದಲ್ಲಿ ಬಿದ್ರಿ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿರುವುದಲ್ಲದೇ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ಸಹ ತಮ್ಮ ಮಗನಾದ ಜಾಫರನೊಂದಿಗೆ ನಾಲ್ಕು ದಿನಗಳ ನಡೆಸಿಕೊಟ್ಟರು. ೧೯೮೯ರಲ್ಲಿ ರಾಜ್ಯ ಪ್ರಶಸ್ತಿ, ಬಿದ್ರಿ ಎನಿಸಿಯೆಂಟ್ ಎಂಬ ಕ್ಯಾಟ್‌ಲಾಗ್‌ನಲ್ಲಿ ಇವರ ಭಾವಚಿತ್ರ ಪ್ರಕಟವಾಗಿದೆ. ಸಿದ್ದಕಿಯವರ ಐದು ಜನ ಗಂಡುಮಕ್ಕಳಲ್ಲಿ ಗುಲಾಂ ಯಾಸಿನ್ ಸಿದ್ದಕಿ ಇವರು ಸ್ವಸಹಾಯ ಗುಂಪಿನ ಸಹಾಯವನ್ನು ಪಡೆದುಕೊಂಡು ತಮ್ಮ ಕಾರ್ಖಾನೆಯಲ್ಲಿ ಅವರ ಅಣ್ಣ ತಮ್ಮ ಹಾಗೂ ಸ್ನೇಹಿತರೊಂದಿಗೆ ಬಿದ್ರಿ ಕಲಾಕೃತಿಗಳನ್ನು ರಚಿಸುತ್ತಾರೆ.

೧೦. ಅಬ್ದುಲ್ ಹಕ್

ಮಹತಾಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಬ್ದುಲ್ ಅವರಿಗೆ ಆರು ಜನ ಗಂಡು ಮತ್ತು ಐದು ಜನ ಹೆಣ್ಣುಮಕ್ಕಳು ಇದ್ದು, ಅವರ ಹಿರಿಯ ಮಗ ಅಬ್ದುಲ ನಜೀಬ ಅವರು ತಂದೆಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ೬೦ರ ಹರೆಯದ ಅಬ್ದುಲ್ ಹಕ್ ಕಳೆದ ೪೭ ವರ್ಷಗಳಿಂದ ಬಿದ್ರಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸ್ವಂತ ಶೋರೂಂ ಹೊಂದಿರುವ ಇವರು ತಾವು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಅಲ್ಲಿ ಪ್ರದರ್ಶಿಸಿ ಮಾರಾಟ ಮಾಡುವ ಇವರು ಪ್ರತೀ ತಿಂಗಳು ೩ರಿಂದ ೪ ಸಾವಿರಗಳವರೆಗೆ ಗಳಿಸುತ್ತಾರೆ. ಇವರು ಸ್ವಂತ ಕಾರ್ಯಾಗಾರವನ್ನು ಸಹ ಹೊಂದಿದ್ದು ಡಬ್ಬಿಗಳನ್ನು ವಿಶೇಷವಾಗಿ ತಯಾರಿಸುತ್ತಾರೆ.

೧೧. ಶಹಾ ಮಜೀದ ಖಾದ್ರಿ

ಖಾದ್ರಿ ಪರಿವಾರ ಬೀದರಿನ ಬಿದ್ರಿ ಪರಂಪರೆಯಲ್ಲಿ ದೊಡ್ಡ ಹೆಸರು. ೧೯೮೦ರಲ್ಲಿ ನಿಧನರಾದ ಮಜೀದ ಅವರ ತಂದೆ ಶಹಾ ಮುಸ್ತಫಾ ಖಾದ್ರಿ ಅವರು ಬಿದ್ರಿ ಕಲೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು. ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿರುವ ಮಜೀದ ಖಾದ್ರಿ ಅವರು ತಮ್ಮ ೧೨ನೆಯ ವಯಸ್ಸಿನಲ್ಲಿಯೇ ವಿಭಿನ್ನ ಬಗೆಯ ವಿನ್ಯಾಸಗಳನ್ನು ಹುಟ್ಟುಹಾಕಿದರು. ಬಿದ್ರಿಕಲೆಯಲ್ಲಿ ಹೊಸಬಗೆಯ ವಿನ್ಯಾಸಗಳಿಗೆ ನಿರಂತರ ಹುಡಕಾಟ ನಡೆಸುವ ಇವರು ದೇಶದ ವಿವಿಧೆಡೆ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಗುವಾಹಾಟಿಯ ಕ್ರುಫಟ್ ಬಜಾರ, ಬೆಂಗಳೂರಿನ ಮಾರ್ಕೆಟ್ ಮೀಟ್, ದೆಹಲಿಯ ಹಾತ್ ಫೆಸ್ಟಿವಲ್‌ನಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದರ್ಶನ ಕಂಡಿವೆ. ೨೦೦೧ರಲ್ಲಿ ಭಾರತ ಸರಕಾರದ ಕರಕುಶಲ ನಿಗಮದಿಂದ ರಾಷ್ಟ್ರೀಯ ಮೆರಿಟ್ ಪ್ರಶಸ್ತಿಯನ್ನೂ ಪಡೆದಿರುವ ಇವರಿಗೆ ೨೦೦೨ ಮತ್ತು ೨೦೦೭-೦೮ ರಲ್ಲಿ ರಾಜ್ಯ ಸರಕಾರದಿಂದ

ರಾಜ್ಯ ಪ್ರಶಸ್ತಿಯೂ ಸಹ ಬಂದಿದೆ. ಸಧ್ಯ ಮಜೀದ ಅವರು ನೋವೆಲ್ ಬಿದ್ರಿ ಕರಕುಶಲ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

೧೨. ಮೊಹಮ್ಮದ್ ಅಬ್ದುಲ್ ರೌಫ್

೫೦ರ ಹರೆಯದ ರೌಫ್ ಅವರು ಕಳೆದ ೪೨ ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೂವರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣುಮಕ್ಕಳನ್ನು ಸಲಹುತ್ತಿರುವ ರೌಫ್ ಅವರು ಮಕ್ಕಳನ್ನು ವಿದ್ಯಾವಂತರಾಗಿಸಿದ್ದಾರೆ. ರೌಫ್ ಅವರ ಮನೆತನದ ವೃತ್ತಿಯೇ ಬಿದ್ರಿ ಕಲೆ. ಅವರ ತಂದೆ ಶೇಕ್ ಅಹಮ್ಮದ ಅವರೇ ಗುರುವಾಗಿದ್ದರು. ತಾತನವರೂ ಸಹ ಬಿದ್ರಿ ಕಲೆಯ ಹಳೆಯ ತಲೆಮಾರುಗಳಲ್ಲಿ ಒಂದಾಗಿದ್ದರು. ಹೀಗಾಗಿ ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದ ಇವರು ತಮ್ಮ ಮುಂದಿನ ದಿನಗಳಲ್ಲಿ ಎತ್ತರದ ವ್ಯಕ್ತಿತ್ವವನ್ನು ಹೊಂದಿದರು. ಬೀದರ ನಗರದ ಕುಲ್‌ಸುಮ್ ಗಲ್ಲಿಯಲ್ಲಿ ನೆಲೆಸಿರುವ ಇವರು ೧೯೭೬–೮೨ರ ಅವಧಿಯಲ್ಲಿ ಎಚ್.ಎಂ.ಟಿ. ಕೈಗಡಿಯಾರ ಕಂಪನಿಗೆ ಹಾಗೂ ೧೯೯೯–೨೦೦೧ರಲ್ಲಿ ಟೈಟನ್ ಕಂಪನಿಗೆ ಕೈಗಡಿಯಾರದ ಕೇಸ್‌ಗಳನ್ನು ಮಾಡಿಕೊಡುವುದರ ಮೂಲಕ ಬಿದ್ರಿ ಕಲೆಯನ್ನು ಆಧುನಿಕವಾಗಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪ್ರಾಥಮಿಕ ಶಿಕ್ಷಣದ ಜೊತಗೆ ಬಿದ್ರಿ ಕಲೆಯನ್ನೂ ಅಧ್ಯಯನ ಮಾಡಿದ ಇವರು ೧೯೯೨ರಲ್ಲಿ ಚೀನಾ ಪ್ರವಾಸವನ್ನು ಕೈಗೊಂಡು ಜೂನ್ ೨೭ರಿಂದ ಜುಲೈ೧೦ರವರೆಗೆ ಬೀಜಿಂಗ್ ನಗರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನಡೆಸಿಕೊಟ್ಟು ವಿಶ್ವದ ಗಮನವನ್ನು ಸೆಳೆದಿದ್ದಾರೆ. ಇವರು ಎರಡು ತಿಂಗಳ ಕಾಲ ಶ್ರಮಿಸಿ ಸಿದ್ಧಪಡಿಸಿದ "ಕಠೋರಿ ಸುರಯಿ ಮತ್ತು ಪ್ಲೇಟ್"ಗಳು ಅವರಿಗೆ ಕರಕುಶಲ ಕ್ಷೇತ್ರದಲ್ಲಿ ನೀಡಲಾಗುವ ರಾಷ್ಟ್ರ ಪ್ರಶಸ್ತಿಯನ್ನು (೨೦೦೪) ತಂದುಕೊಟ್ಟಿತು. ಈ ಪ್ರಶಸ್ತಿಯು ೫೦,೦೦೦ರೂಗಳ ನಗದು ಹಾಗೂ ತಾಮ್ರಪತ್ರವನ್ನು ಒಳಗೊಂಡಿದೆ. ೧೯೯೧ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿ ಪಡೆದ ಇವರು ಮಾಸಿಕವಾಗಿ ೧೦ರಿಂದ ೨೦ ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಾರೆ.

೧೩. ರಾಜಕುಮಾರ

೧೯೭೫ರಲ್ಲಿ ಬೀದರಿನಲ್ಲಿ ಜನಿಸಿದ ರಾಜಕುಮಾರ ಇವರ ತಂದೆ ಹಾಗೂ ತಾತನವರು ಸಹ ಬಿದ್ರಿ ಕುಶಲಕರ್ಮಿಗಳೇ. ಹೀಗಾಗಿ ರಾಜಕುಮಾರ ಸಹ ಬಿದ್ರಿಕಲೆಯಲ್ಲಿ ಆಸಕ್ತಿ ತಳೆದು ವಿಶೇಷವಾಗಿ ಹೂಜಿಗಳ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಿದ್ರಿ ವಸ್ತುಗಳನ್ನು ಸಿದ್ಧಪಡಿಸುವ ಇವರು ಚೌಬಾರಾ ರಸ್ತೆಯಲ್ಲಿ ರಾಜ್ ಬಿದ್ರಿ ಎಂಬ ಸ್ವಂತ ಮಾರಾಟ ಮಳಿಗೆಯನ್ನು ಹೊಂದಿದ್ದಾರೆ. ೧೯೯೯ರಲ್ಲಿ ಕೇರಳದಲ್ಲಿ, ೨೦೦೬ರಲ್ಲಿ ದೆಹಲಿಯ ಹಾತ್‌ನಲ್ಲಿ, ೨೦೦೭ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಕರಕುಶಲ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ೨೦೦೬ರಲ್ಲಿ ಅಂದಿನ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಗೆ ಬೆಂಗಳೂರಿನಲ್ಲಿ ತಾವು ರಚಿಸಿದ ಬಿದ್ರಿ ವಸ್ತುವೊಂದನ್ನು

ಸ್ಮರಣಿಕೆಯ ರೂಪದಲ್ಲಿ ನೀಡಿದ್ದಾರೆ. ಮಾಸಿಕ ಸುಮಾರು ೭೦ರಿಂದ ೧೦ಸಾವಿರ ರೂಪಾಯಿಗಳವರೆಗೆ ಗಳಿಸುವ ಇವರು ಮಕ್ಕಳಿಗೆ ಸುಶೀಕ್ಷಿತರನ್ನಾಗಿಸುವಲ್ಲಿ ಆಸಕ್ತಿ ವಹಿಸಿದ್ದಾರೆ.

೨೦೦೮-೦೯ ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

೧೪. ಮೊಹಮ್ಮದ್ ಷಫಿಯುದ್ದಿನ್

ಸುಪ್ರೀಮ ಬಿದ್ರಿಕಲೆ ಎಂಬ ಮಾರಾಟ ಮಳಿಗೆಯನ್ನು ಚೌಬಾರಾ ರಸ್ತೆಯಲ್ಲಿ ಹೊಂದಿರುವ ಶಫಿಯುದ್ದಿನ್ ಅವರು ೧೯೪೯ರಲ್ಲಿ ಜನಿಸಿದ್ದಾರೆ. ಬಾಲ್ಯದಿಂದಲೇ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡಿದ್ದ ಶಫಿಯುದ್ದಿನ್ ಬೀದರ ನಗರದ ಅಂತರಾಷ್ಟ್ರೀಯ ಮನ್ನಣೆ ಗಳಿಸಿದ ಕುಶಲಕರ್ಮಿಗಳಲ್ಲಿ ಒಬ್ಬರೆನಿಸಿಕೊಡಿದ್ದಾರೆ. ಬಹುತೇಕವಾಗಿ ವಿದೇಶಗಳಲ್ಲಿಯೇ ಇವರ ಪ್ರತಿಭೆಗೆ ಸೂಕ್ತ ವೇದಿಕೆ ದೊರಕಿದ್ದಕ್ಕೆ ಅವರು ನಡೆದ ಹಾದಿಯೇ ಸಾಕ್ಷಿ. ೧೯೮೭ರಲ್ಲಿ ನಾಲ್ಕು ತಿಂಗಳ ಕಾಲ ವಾಷಿಂಗಟನ್‌ನಲ್ಲಿ ಅತಿಥಿಯಾಗಿದ್ದ ಇವರು ಅಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಪ್ರದರ್ಶನಕ್ಕೆ ಆಮಂತ್ರಿತರಾಗಿ ತಮ್ಮ ಬಿದ್ರಿ ಕಲೆಗಳನ್ನು ಪ್ರದರ್ಶಿಸಿದ್ದುಂಟು. ಅಲ್ಲಿ ಅವರಿಗೆ ಪ್ರತಿ ತಿಂಗಳು ೧೨೦೦ ಡಾಲರ್‌ಗಳನ್ನು ಗೌರವ ಸಂಭಾವನೆಯಾಗಿ ನೀಡಿತ್ತು. ಅದೇ ರೀತಿ ಜಪಾನ್ ಮತ್ತು ಕೆನಡಾ ದೇಶಗಳಿಗೂ ಭೇಟಿ ನೀಡಿ ಬಿದ್ರಿ ಕಲೆಯನ್ನು ಅಲ್ಲಿನವರಿಗೆ ಪರಿಚಯಿಸಿದ್ದಾರೆ. ಕೋಲ್ಕೋತ್ತಾದ ನ್ಯಾಷನಲ್ ಕೌನ್ಸಿಲ್ ಆಫ್ ಮ್ಯೂಸಿಯಮ್ಸ್ ಇವರನ್ನು ವಾಷಿಂಗಟನ್‌ಗೆ ಕಳುಹಿಸಿಕೊಡಲು ಶಿಫಾರಸ್ಸು ಮಾಡಿತ್ತು.

೧೯೯೯ರಲ್ಲಿ ಕ್ರಾಫ್ಟ್ ಫೇರ್ ರಿಪಬ್ಲಿಕನಲ್ಲಿ೧೯೯೨ರಲ್ಲಿ ಸಿಟಿ ಕ್ರಾಫ್ಟ್ ಮೇಳಾ, ನಾಗಪುರದ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ, ೨೦೦೧ರಲ್ಲಿ ಸೂರಜಕುಂಡ ಕ್ರಾಫ್ಟ್ ಮೇಳ, ಹರಿಯಾಣ ಪ್ರವಾಸೋದ್ಯಮ ಇಲಾಖೆಯ ಪ್ರದರ್ಶನ ಹಾಗೂ ಚಂಡೀಗಢದಲ್ಲಿ ನಡೆದ ಕ್ರಾಫ್ಟ್ ಮೇಳಗಳಲ್ಲಿ ತಮ್ಮ ಬಿದ್ರಿಕಲೆಗಳನ್ನು ಪ್ರದರ್ಶಿಸಿದ್ದಾರೆ. ೧೯೮೭ರಲ್ಲಿ ಉತ್ತರ ಪ್ರದೇಶ ಮಾರ್ಕೆಟಿಂಗ್ ಹಾಗೂ ಮ್ಯಾನೇಜ ಮೆಂಟ್ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ತರಬೇತಿಯಲ್ಲಿಯೂ ಇವರಿ ಭಾಗವಹಿಸಿದ್ದಾರೆ. ಶಫಿದ್ದಿನ್ ಇವರ ಕಾರ್ಯಾಗಾರದಲ್ಲಿ ನಿತ್ಯವೂ ಬಿದ್ರಿ ಕಲಾವಸ್ತುಗಳ ತಯಾರಿಕೆ ನಿರಂತರವಾಗಿ ನಡೆಯುತ್ತದೆ. ವಿಶೇಷವಾಗಿ ಫುಲಝುಡಿ ಮಹತಾಬಿ ಶೈಲಿಯ ವಿನ್ಯಾಸಗಳನ್ನು ಹೊಂದಿದ ಬಿದ್ರಿ ವಸ್ತುಗಳನ್ನು ಸಿದ್ಧಪಡಿಸುತ್ತಾರೆ. ಈ ವೃತ್ತಿಯಿಂದ ಕೀರ್ತಿಯನ್ನು ಪಡೆದಿರುವ ಶಫಿದ್ದೀನ್ ಇವರು ಬರುವ ಆದಾಯವು ತೃಪ್ತಿಕರವಾಗಿಲ್ಲವೆಂಬುದನ್ನು ನುಡಿಯುತ್ತಾರೆ.

೧೫. ಮೊಹಮ್ಮದ್ ಇಸಾಕ್

ದಿವಂಗತ ಮೊಹಮ್ಮದ್ ಮಸ್ತಾನರ್ ಪುತ್ರರಾದ ೬೫ರ ಹರೆಯದ ಇಸಾಕ್ ಅವರು ಬಾಲ್ಯದಿಂದಲೇ ಬಿದ್ರಿಕಲೆಯಲ್ಲಿ ತೊಡಗಿಸಿಕೊಂಡುವವರು. ಅವರ ತಂದೆಯಿಂದ ಬಂದ ಬಿದ್ರಿ ಬಳುವಳಿಯಿಂದ ಬದುಕುತ್ತಿರುವ ಇವರು ೫೫ವರ್ಷಗಳಿಂದ ಈ ವೃತ್ತಿಯಲ್ಲಿದ್ದರೂ ಸ್ವಂತ

ಅಂಗಡಿಯೊಂದನ್ನು ಹೊಂದಲು ಆಗಿಲ್ಲ. ಬಾಡಿಗೆ ಮಳಿಗೆಯೊಂದರಲ್ಲಿ ಮಾರಾಟ ಮಳಿಗೆಯನ್ನು ಹೊಂದಿರುವ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿದ್ದಾರೆ. ಮಕ್ಕಳೆಲ್ಲರೂ ದೂರವಾಗಿ ಬೇರೆ ಬೇರೆ ಕಾಯಕದಲ್ಲಿ ತೊಡಗಿಸಿಕೊಂಡ ವೇದನೆಯನ್ನು ಬದುಕುತ್ತಿರುವ ಈ ಹಿರಿಯ ಜೀವಕ್ಕೆ ಬಿದ್ರಿ ಕಲೆಯೊಂದೇ ದಾರಿ. ವಿಶೇಷವಾಗಿ ಆಭರಣಗಳ ರಚಿಸುವಲ್ಲಿ ಸಿದ್ಧಹಸ್ತರಾಗಿರುವ ಇವರು ವಸ್ತುವಿನ ಮೇಲೆ ರೇಖೆಯನ್ನು ಪೂರ್ವಭಾವಿಯಾಗಿ ಎಳೆದುಕೊಳ್ಳದೇ ನೇರವಾಗಿ ಚಿತ್ರವನ್ನು ಕೆತ್ತುವಷ್ಟು ಪರಿಣಿತರಾಗಿದ್ದಾರೆ. ತಮ್ಮ ಮಕ್ಕಳಿಗೆ ಬಿದ್ರಿ ಕಲೆಯಲ್ಲಿ ಆಸಕ್ಕತಿ ಇಲ್ಲದೇ ಇರುವುದರಿಂದ ಇಸಾಕ್ ಅವರೇ ಕೊನೆಯ ಕುಶಲಕರ್ಮಿ.

೧೬. ಮೊಹಮ್ಮದ್ ಮೊಯಿಜುದ್ದೀನ್

೨೦೦೩ರಲ್ಲಿ ಭಾರತದ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಂದ ರಾಷ್ಟ್ರಪ್ರಶಸ್ತಿ ಪಡೆದ ಮೊಯಿಜುದ್ದೀನ್ ಅವರಿಗೆ ಈಗ ೪೨ರ ವಯೋಮಾನ. ೧೯೬೫ರಲ್ಲಿ ಜನಿಸಿದ ಇವರಿಗೆ ಬಾಲ್ಯದಿಂದಲೇ ಬಿದ್ರಿಕಲೆಯಲ್ಲಿ ಆಸಕ್ತಿ. ಮಹತಾಬಿ ಶೈಲಿಯ ವಿನ್ಯಾಸಗಳನ್ನು ಆಕರ್ಷಕವಾಗಿ ದುಡಿಸಿಕೊಳ್ಳುವ ಇವರು ಶೀಟ್ ವರ್ಕ್‌ನಲ್ಲಿ ಪರಿಣಿತರು. ಬಿ.ಎ. ಮತ್ತು ಟಿ.ಸಿ.ಎಚ್.ಶೈಕ್ಷಣಿಕ ಅರ್ಹತೆಗಳನ್ನು ಪಡೆದಿರುವ ಇವರು ಸ್ವಯಂ ಸಿದ್ಧಪಡಿಸಿದ ಕಲಾಕೃತಿಗಳನ್ನು ತಾವೇ ಮಾರಾಟ ಮಾಡುವ ವ್ಯವಸ್ಥೆಯನ್ನು ಹೊಂದಿದ್ದಾರೆ. ೧೯೯೬ರಲ್ಲಿ ನವದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಸ್ಮಾಲ್ ಅಂಡ್ ಮಿಡಿಯಮ್ ಎಕ್ಸ್‌ಪೋರ್ಟರ್ಸ್ ಅವರಿಂದ ಎಕ್ಸಲೆನ್ಸ್ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, ೧೯೯೫ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ ಹಾಗೂ ಕರ್ನಾಟಕ ಸರಕಾರದಿಂದ ೨೦೦೨ರಲ್ಲಿ ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೊಯಿಜುದ್ದೀನ್ ಅವರು ರಾಜ್ಯ ಹಾಗೂ ಮಟ್ಟದ ಕರಕುಶಲ ಮೇಳಗಳಲ್ಲಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿ ಅಪಾರ ಜನಮನ್ನಣೆ ಪಡೆದಿದ್ದಾರೆ. ಅದರಲ್ಲಿ ಪ್ರಮುಖವಾದುದು ಇಂಡಿಯನ್/ಮಲೇಸಿಯಾ ಕ್ರಾಫ್ಟ್-ಎಕ್ಸಚೇಂಜ್ ವರ್ಕಶಾಪ್ ಇನ್ ಸರವಾಕ್ ಮಲೇಸಿಯಾ ಬೈ ಸೊಸಾಯಿಟಿ ಅಟೆಲಿಯರ್ ಸರವಾಕ್‌ನಲ್ಲಿ ಭಾಗಿಯಾಗಿದ್ದಾರೆ.

೧೭. ಮೊಹಮ್ಮದ್ ಖುರಮ್

ಬಿದ್ರಿ ಕಾಲನಿಯಲ್ಲಿರುವ ಯುವ ಕುಶಲಕರ್ಮಿ ಖುರ್ರಂ ಇವರು ಬಿ.ಎಸ್ಸಿ.ಪದವೀಧರರು. ತಂದೆ ಮಹಮ್ಮದ್ ಸಿದ್ದಿಕಿ ತಾತ ಮಹಮ್ಮದ್ ಶೇಖ್ ಅವರಲ್ಲಿ ಪಳಗಿದ ಖುರಮ್ ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದು ಈಗ ಪರಿಣಿತರಾಗಿದ್ದಾರೆ. ಬಿದ್ರಿ ಕಲಾಕೃತಿಗಳ ಕೆತ್ತುವಿಕೆ ಮತ್ತು ಬೆಳ್ಳಿ ಹುದುಗಿಸುವಿಕೆಯಲ್ಲಿ ಪರಿಣಿತಿ ಸಾಧಿಸಿರುವ ಇವರು ೧೯೯೭ರಲ್ಲಿ ಕಾನಪುರ, ನಾಗಪುರ, ನವದೆಹಲಿಗಳಲ್ಲಿ ಹಾಗೂ ೧೯೯೯ರಲ್ಲಿ ವಾರಣಾಸಿಯಲ್ಲಿ ತಮ್ಮ ಬಿದ್ರಿ ವಸ್ತುಗಳನ್ನು ಪ್ರದರ್ಶಿಸಿದ್ದಾರೆ.

ಪ್ರತಿ ತಿಂಗಳು ೫ರಿಂದ ೭ ಸಾವಿರ ರೂಪಾಯಿ ಗಳಿಸುವ ಇವರಿಗೆ ಬರುವ ಆದಾಯದ ಕುರಿತು ಅತೃಪ್ತಿಯನ್ನು ಹೊಂದಿದ್ದು, ತಮ್ಮ ಮುಂದಿನ ಪೀಳಿಗೆಯನ್ನು ಈ ವೃತ್ತಿಯಿಂದ ದೂರವಿಡಲು ತೀರ್ಮಾನಿಸಿದ್ದಾರೆ.

೧೮. ಮೊಹಮ್ಮದ್ ಖಾಜಾ ಮೊಯಿನುದ್ದೀನ್

ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದ ಮೊಹಮ್ಮದ್ ಖಾಜಾ ಮೊಯಿನುದ್ದೀನ್ ಅವರಿಗೆ ಮೂವರು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದು ಹಿರಿಯ ಮಗ ಮೊಹಮ್ಮದ್ ಸಲೀಂಮೊದ್ದೀನ್ ಬಿದ್ರಿ ಕಲೆಯಲ್ಲಿ ಮಾಸ್ಟರ್ ಆಗಿದ್ದಾರೆ. ಇವರ ಸ್ವಂತ ಕಾರ್ಖಾನೆ ಹಾಗೂ ಮಾರಾಟ ಮಳಿಗೆಯನ್ನು ಹೊಂದಿದ್ದು ಅವುಗಳಲ್ಲಿ ೧೫ಜನರಿಗಿಂತ ಹೆಚ್ಚು ಕುಶಲಕರ್ಮಿಗಳು ಬಿದ್ರಿ ವಸ್ತುಗಳನ್ನು ರಚಿಸುತ್ತಿದ್ದಾರೆ. ೬೦ರ ಹರೆಯದ ಖಾಜಾ ಅವರಿಗೆ ೧೯೮೮ರಲ್ಲಿ ರಾಜೀವ್ ಗಾಂಧಿ ಪ್ರಶಸ್ತಿ ಬಂದಿದೆ. ಸಲೀಂ ಅವರಿಗೆ ೧೯೯೭ರಲ್ಲಿ ಜಿಲ್ಲಾ ಪ್ರಶಸ್ತಿ, ೧೯೯೮ರಲ್ಲಿ ಕರ್ನಾಟಕ ಸರಕಾರದ ರಾಜ್ಯ ಪ್ರಶಸ್ತಿ, ೧೯೯೯ರಲ್ಲಿ ಭಾರತ ಸರಕಾರದಿಂದ ಯುವ ಕುಶಲಕರ್ಮಿ ರಾಷ್ಟ್ರ ಪ್ರಶಸ್ತಿಗಳಿಗೆ ಪ್ರಾಪ್ತವಾಗಿದ್ದಾರೆ. ಇವರ ಸಹೋದರರಾದ ಸಿರಾಜುದ್ದೀನ್ ವೈದ್ಯರಾಗಿ, ಸೈದುದ್ದೀನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

೧೯. ಶಹಾ ರಷೀದ್ ಅಹಮದ್ ಖಾದ್ರಿ

ಬೀದರ ನಗರದಲ್ಲಿ ಇಂದಿಗೂ ಬಿದ್ರಿ ಕಲೆಯನ್ನು ಪೋಷಿಸುತ್ತ ಬಂದಿರುವ ಸುಪ್ರಸಿದ್ಧ ಕುಶಲಕರ್ಮಿ ಎಂದರೆ ಶಹಾ ರಷೀದ್ ಅಹಮದ್ ಖಾದ್ರಿ ಅವರು. ಇವರು ಮೂರನೆಯ ತಲೆಮಾರಿನ ಕರ್ಮಿ. ಇವರ ತಂದೆ ಶಹಾ ಮುಸ್ತಫಾ ಖಾದ್ರಿ, ತಾತ ಶಹಾ ಮಹಮ್ಮದ್ ಖಾದ್ರಿ ಅವರ ಗರಡಿಯಲ್ಲಿ ಪಳಗಿದ ರಶೀದ್ ಅವರು ಬಾಲ್ಯದಲ್ಲಿಯೇ ಬಿದ್ರಿ ಕಲೆಯ ತಂತ್ರಗಳನ್ನು ಅರಿತುಕೊಂಡವರು. ೧೯೭೦ರಲ್ಲಿಯೇ ಸ್ವಂತ ಘಟಕವನ್ನು ಹೊಂದಿದ ರಶೀದ್ ಅವರು ಕರ್ನಾಟಕದ ಬಿದ್ರಿ ಕಲೆಯನ್ನು ಪ್ರಚುರಗೊಳಿಸುತ್ತಿರುವ ಶ್ರಮಿಕ ಜೀವಿ. ಎಲ್ಲೇ ಪ್ರದರ್ಶನಗಳು, ಮೇಳಗಳು ಇರಲಿ ಅಲ್ಲಿ ರಶೀದ್ ಅವರ ಕಲಾಕೃತಿಗಳು ಪ್ರದರ್ಶನಗೊಳ್ಳುತ್ತವೆ.

ಬಿದ್ರಿ ಕಲೆಯಲ್ಲಿ ಹೊಸತನವನ್ನು ಕಂಡುಕೊಂಡು, ಈ ಕಲೆಯನ್ನು ಜನಪ್ರಿಯಗೊಳಿಸಿರುವ ಇವರ ಬದುಕಿನ ಒಟ್ಟು ಸಾಧನೆಗೆ ದೇಶ ತಲೆದೂಗಿದೆ. ಹಿಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ೧೯೮೪ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, ೧೯೯೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೨೦೧೨ ರ "ಶಿಲ್ಪಗುರು ಪ್ರಶಸ್ತಿ"ಯನ್ನು ಇಂದಿನ ರಾಷ್ಟ್ರಪತಿಗಳಾದ ಪ್ರಣವ್ ಮುಖರ್ಜಿ ಅವರಿಂದ ನವದೆಹಲಿಯ ವಿಜ್ಞಾನ ಭವನದಲ್ಲಿ ಡಿಸೆಂಬರ್ ೯, ೨೦೧೫ ರಲ್ಲಿ ಸನ್ಮಾನಿಸಿರುವದು ಕರ್ನಾಟಕಕ್ಕೆ ಸಂದ ಗೌರವವಾಗಿದೆ.

೧೯೮೭ರಲ್ಲಿ ಅಮೇರಿಕಾದ ಬೋಸ್ಟನ್‌ನಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿ ಬಿದ್ರಿ ಕಲೆಯ ವೈಜ್ಞಾನಿಕ ರಚನಾ ತಂತ್ರವನ್ನು ವಿಶ್ವದ ವಿಜ್ಞಾನಿಗಳಿಗೆ ತಿಳಿಯಪಡಿಸಿದ ಇವರು ಇಟಲಿಯ ರೋಮ್ ನಗರದಲ್ಲಿ ನಡೆದ ಇಂಡಿಯಾ ಪ್ರಮೋಷನ್ ಪ್ರೋಗ್ರಾಮ್‌ನಲ್ಲಿ ಆಹ್ವಾನಿತ ಕುಶಲಕರ್ಮಿಯಾಗಿ ಭಾಗಿಯಾಗಿದ್ದಾರೆ. ಸಿಂಗಾಪುರದಲ್ಲಿ ನಡೆದ "ಸಿಂಗಾಪುರ-ಭಾರತವಾಣಿಜ್ಯೋದ್ಯಮ ಸಂಸ್ಥೆ"ಯ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಹಾಲಂಡ್‌ನಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನೀಡಿ ಅಲ್ಲಿ ಕುಶಲಕರ್ಮಿಗಳಿಗೆ ಗುರುವಾಗಿ ಮೇಳೈಸಿದ್ದಾರೆ.

ದೆಹಲಿಯ ಅಪ್ನಾ ಉತ್ಸವದಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದರ್ಶಿತಗೊಂಡು ಭಾರೀ ಜನಮನ್ನಣೆ ಗಳಿಸಿವೆ. ಓರಿಸ್ಸಾ ಆದಿವಾಸಿ ಉತ್ಸವ, ರಾಷ್ಟ್ರೀಯ ಪ್ರಶಸ್ತಿ ವಿಜೇತರ ಕರಕುಶಲ ಉತ್ಸವದಲ್ಲಿ ಇವರನ್ನು ಸಮ್ಮಾನಿಸಿ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಅಷ್ಟೇ ಅಲ್ಲದೇ ಕ್ರಾಫ್ಟ್ ಸ್ಕಿಲ್ ಉತ್ಸವ್, ವಸಂತ ವಿಝೂ ಸಾಂಸ್ಕೃತಿಕ ಪ್ರದರ್ಶನ ಹೀಗೆ ಹಲವಾರು ಕಡೆಗಳಲ್ಲಿ ನಿರಂತರವಾಗಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಇಷ್ಟೆಲ್ಲ ಪುರಸ್ಕಾರಗಳನ್ನು ಪಡೆದಿದ್ದರೂ ರಶೀದ್ ಅವರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲವೆಂಬುದು ಒಂದೆಡೆಯಾದರೆ, ಇನ್ನೊಂದೆಡೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದರೂ ನಾನು ರಚಿಸಿದ ಬಿದ್ರಿ ಕೃತಿಗಳಿಗೆ ಹೆಚ್ಚಿನ ದರವನ್ನೂ ಯಾರೂ ನೀಡಿ ಕೊಂಡುಕೊಂಡ ಉದಾಹರಣೆಗಳು ಇಲ್ಲವೆನ್ನುತ್ತಾರೆ ರಶೀದ್ ಅವರು. ಹೀಗಾಗಿ ಕನಿಷ್ಠ ಲಾಭದಲ್ಲಿ ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು ಇದು ನನ್ನ ತಲೆಮಾರಿಗೇ ಕೊನೆಯಾಗಲಿದೆ ಎಂದು ಭವಿಷ್ಯವನ್ನು ಸಹ ನುಡಿಯುತ್ತಾರೆ.

೨೦. ಮಧುಕರ್ ಗವಾಯಿ

೨೨ನೆಯ ವಯಸ್ಸಿನಲ್ಲಿ ಖ್ಯಾತ ಕುಶಲಕರ್ಮಿ ಮಹಮ್ಮದ ಹುಸೇನ್‌ರ ಗರಡಿಯಲ್ಲಿ ಪಳಗಿದ ಮಧುಕರ ಅವರು ಬೀದರನ ಬಿದ್ರಿ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಮೂಲತಃ ಮಹಾರಾಷ್ಟ್ರದ ಜಾವಾಖೇಡ ಗ್ರಾಮದವರಾದ ಇವರು ಬೀದರಿನ ಕೆಥೋಲಿಕ್ ಚರ್ಚ್‌ನ ಪಾದ್ರಿಯವರ ಮಾರ್ಗದರ್ಶನದಿಂದ ಈ ಬಿದ್ರಿ ಕಲೆಯಲ್ಲಿ ಪ್ರವೇಶ ಪಡೆದರು. ಎರಡು ವರ್ಷಗಳ ಕಾಲ ಬಿದ್ರಿ ಕಲೆಯಲ್ಲಿ ಅಭ್ಯಾಸ ಮಾಡಿದ ಇವರು ನಂತರ ಸ್ವತಃ ಬಿದ್ರಿ ಉತ್ಪಾದನೆಯನ್ನು ಪ್ರಾರಂಭಿಸಿದರು. ಈ ವೃತ್ತಿಯಲ್ಲಿದ್ದಾಗಲೇ ಆಶಾ ಕೈಗಾರಿಕೆ ಸಂಘದ ಸಂಪರ್ಕದಿಂದ ಅಭಿವೃದ್ಧಿ ಹೊಂದುತ್ತಿದ್ದಾರೆ. ಅವರ ಕೌಶಲ್ಯ ಮತ್ತು ಆಸಕ್ತಿಯನ್ನು ಅಳೆದು ಭಾರತ ಸರಕಾರದ ಕರಕುಶಲ ನಿಗಮದ ಶ್ರೇಷ್ಠ ಕಸಬುದಾರರ ಪಟ್ಟಿಯಲ್ಲಿ ಇವರ ಹೆಸರನ್ನು ಸೇರಿಸಿದೆ.

೨೧. ಮೊಹಮ್ಮದ ಆರಿಫಉದ್ದೀನ್

ದಿವಂಗತ ಮೊಹಮ್ಮದ ರಷಿದ್ದುದ್ದೀನ್‌ರವರ ಪುತ್ರರಾದ ಮೊಹಮ್ಮದ ಆರಿಫ್‌ಉದ್ದಿನ್ ೧೯೬೭ರಲ್ಲಿ ಬಿದರ ನಗರದಲ್ಲಿ ಜನಿಸಿದರು. ೧೧ನೆಯ ತರಗತಿಯವರೆಗೆ ಓದಿದ, ೪೨ರ

ವಯೋಮಾನದ ಈ ಕಲಾವಿದರು ಬಿದ್ರಿಕಲೆಯಲ್ಲಿ ೧೫ವರ್ಷಗಳ ಕಾಲ ತಮ್ಮ ತಂದೆಯ ಜೊತೆಗೆ ದುಡಿದಿದ್ದಾರೆ. ಫೂಲಝುಡಿಯಲ್ಲಿ ವಿನ್ಯಾಸ ಹೊಂದಿರುವ ಹೂಜಿಗೆ ೨೦೦೩ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ೧೯೯೨-೯೩ರಲ್ಲಿ ಬೀದರನಲ್ಲಿ ನಡೆದ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದವರು ಏರ್ಪಡಿಸಿದ ತರಬೇತಿಯಲ್ಲಿ ಸಹ ಪಾಲ್ಗೊಂಡಿದ್ದಾರೆ. ೧೯೯೬ರಲ್ಲಿ ಕಾವೇರಿ ಎಂಪೋರಿಯಮ್‌ನವರು ನವದೆಹಲಿ ಮತ್ತು ಚಂಡೀಗಢದಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿಅದೇ ವರ್ಷ ಪುಣೆಯಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. ೨೦೦೨ರಲ್ಲಿ ಶಂಕರ ಫೌಂಡೇಶನ್‌ಅವರು ಬೆಂಗಳೂರಿನಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಸದರಿಯವರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು

೨೨. ಅಬ್ದುಲ್ ಹಮೀದ್

ಬಿದ್ರಿಕಲೆಯಲ್ಲಿ ಹೆಸರಾಂತರಾದ ಗುಲಾಂ ದಾವರ್ ಸಿದ್ದಿಕಿ ಹಾಗೂ ಅಬ್ದುಲ್ ಗಫಾರ್ ಶಿಷ್ಯರಾದ ಅಬ್ದುಲ್ ಹಮೀದ್ ಬೀದರನಲ್ಲಿ ೧೯೬೭ರಲ್ಲಿ ಜನಿಸಿದವರು. ೮ನೆಯ ತರಗತಿಯವರೆಗೆ ಓದಿದ ಇವರು ಕಿರಿಯ ವಯಸ್ಸಿನಲ್ಲಿಯೇ ಬಿದ್ರಿಕಲೆಗಳನ್ನು ಉತ್ಪಾದಿಸುವ ಕಾರ್ಯಕ್ಕೆ ಮುಂದಾದವರು. ವಿಶೇಷವಾಗಿ ಅಬ್ದುಲ್ ಹಮೀದ್ ಅವರು ಹೊಸ ಹೊಸ ವಸ್ತುಗಳನ್ನು ತಯಾರಿಸುತ್ತಿದ್ದು, ವಿಶೇಷವಾಗಿ ಫೂಲ್ ಝುಡಿ ಹಾಗೂ ಮಹತಾಬಿ ಶೈಲಿಯಲ್ಲಿ ಹೆಚ್ಚಿನ ಒಲವು. ೨೦೦೩ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿಯನ್ನು ಸಹ ಪಡೆದಿರುವ ಇವರು, ೧೯೭೭ರಿಂದ ೧೯೭೯ರವರೆಗೆ ಬಿದ್ರಿಕಲೆಯ ತರಬೇತಿಯನ್ನು ಪಡೆದಿದ್ದಾರೆ. ೨೦೦೬ರಲ್ಲಿ ನೆಹರು ಸೈನ್ಸ್ ಸೆಂಟರ್, ಮುಂಬಯಿನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. ೨೦೦೪ರಲ್ಲಿ ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್ ಅವರು ಆಯೋಜಿಸಿದ್ದ ಶಿಬಿರದಲ್ಲಿ ಸಹ ಪಾಲ್ಗೊಂಡಿದ್ದಾರೆ.

೨೪. ಅಬ್ದುಲ್ ಹಕೀಂ

ಅಬ್ದುಲ್ ಹಕೀಂ ಅವರಿಗೆ ಈಗ ೫೮ರ ಹರೆಯ. ಐದನೇ ತರಗತಿಯವರಗೆ ಓದಿದ ಇವರು ನಂತರದ್ದಲಿ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡವರು. ೩೫ವರ್ಷ ಬಿದ್ರಿಕಲೆಯಲ್ಲಿ ತೊಡಗಿಸಿಕೊಂಡ ಇವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ೧೯೭೭ರಲ್ಲಿ ಬಿದ್ರಿ ವರ್ಕಸ್ ಯುನಿಯನ್‌ದಿಂದ ಬೆಸ್ಟ್ ಕ್ರಾಫ್ಟ್ ಮೆನ್‌ಶಿಪ್ ಪ್ರಮಾಣ ಪತ್ರವನ್ನು ಸಹ ಪಡೆದಿದ್ದಾರೆ. ೧೯೮೭ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ, ೧೯೯೩ರಲ್ಲಿ ರಾಜ್ಯ ಪ್ರಶಸ್ತಿ ಬಂದಿದೆ. ೧೯೯೩ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ೨೦೦೮ರಲ್ಲಿ ಸೂರಜ್‌ಕುಂಡ್‌ದಲ್ಲಿ ನಡೆದ ಕ್ರಾಫ್ಟ ಮೇಲ ಹಾಗೂ ದಿಲ್ಲಿ ಹಾತ್‌ನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ.

೨೫. ಮೊಹಮ್ಮದ್ ಅನಿಸ್ ಅಹ್ಮದ್

ಖ್ಯಾತ ಬಿದ್ರಿ ಕಲಾವಿದರಾದ ಗನಿ ಅಹಮ್ಮದ್‌ರ ಪುತ್ರರಾದ ಅನಿಸ್ ಅಹಮ್ಮದ್ ಹೈದರಾಬಾದನಲ್ಲಿ ಜನಿಸಿದರು. ಬಾಲ್ಯದಿಂದಲೇ ಇವರು ಈ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪದವಿ ಪಡೆದಿರುವ ಇವರು ಬಿದ್ರಿ ಕಲೆಯನ್ನು ತಮ್ಮ ವೃತ್ತಿಯಾಗಿಸಿಕೊಂಡಿದ್ದಾರೆ. ಹೈದರಾಬಾದಿನಲ್ಲಿ

ನೆಲೆಸಿದ ಇವರು ಅಲ್ಲಿಯೇ ತಮ್ಮ ಕಾರ್ಯಾಗಾರವನ್ನು ಸ್ಥಾಪಿಸಿದ್ದಾರೆ. ಅಲ್ಲಿಯೇ ಅನೇಕ ತರಹದ ಬಿದ್ರಿ ವಸ್ತುಗಳನ್ನು ಉತ್ಪಾದಿಸಿ ದೇಶದ ಬೇರೆ ಬೇರೆ ಮಾರಾಟ ಕೇಂದ್ರಗಳಿಗೆ ತಮ್ಮ ಉತ್ಪನ್ನಗಳನ್ನು ಒದಗಿಸುತ್ತಾರೆ. ಹೈದರಾಬಾದಿನ ಪ್ರಸಿದ್ಧ ಕಲಾವಿದಲ್ಲಿ ಇವರೂ ಒಬ್ಬರಾಗಿದ್ದಾರೆ.

ಉಪಸಂಹಾರ

ಬೀದರಿನ ಬಿದ್ರಿ ಕಲೆಯ ಕುಶಲಕಮಿಗಳ ಸಂಖ್ಯೆ ಸುಮಾರು ೬೦೦ರಷ್ಟು, ಆದರೆ ಇಲ್ಲಿ ಕೆಲವೇ ಕೆಲವು ಕುಶಲಕರ್ಮಿಗಳನ್ನು ಆಯ್ದು ಪರಿಚಯಿಸಲಾಗಿದೆ. ಅವರ ಬದುಕಿನ ಸಮಗಸಾಧನೆಯನ್ನೇ ಮಾನದಂಡವನ್ನಾಗಿಸಿಕೊಂಡು ಇಲ್ಲಿ ೨೫ ಕುಶಲಕರ್ಮಿಗಳ ಪರಿಚಯವನ್ನು ಮಾಡಿಕೊಡಲಾಗಿದೆ.

ಬಿದ್ರಿ ಕಲೆಯ ಕುಶಲಕರ್ಮಿಗಳನ್ನು ಸಂದರ್ಶಿಸಿದಾಗ ಶೇಕಡಾ ೯೫ರಷ್ಟು ಕುಶಲಕರ್ಮಿಗಳು ತಮ್ಮ ವೃತ್ತಿಯ ಬಗ್ಗೆ ಕೀಲರಿಮೆಯನ್ನು ಹೊಂದಿದ್ದಾರೆ. ಏಕೆಂದರೆ ತಮ್ಮ ವೃತ್ತಿಯ ಕಠಿಣ ಪರಿಶ್ರಮಕ್ಕೆ ತಕ್ಕ ಹಾಗೆ ಆರ್ಥಿಕ ಬೆಂಬಲ, ಮಾರುಕಟ್ಟೆ ಬೆಂಬಲ ದೊರಕುತ್ತಿಲ್ಲವೆಂದು ಹೇಳುತ್ತಾರೆ. ಇದರಿಂದ ತಮ್ಮ ಕುಟುಂಬದ ನಿರ್ವಹಣೆ ಕೆಳಸ್ತರಕ್ಕೆ ತಲುಪಿದ್ದಲ್ಲದೇ ಬದುಕು ದುಸ್ತರವಾಗುತ್ತಲಿದೆ ಎಂಬ ಅಭಿಪ್ರಾಯವನ್ನೂ ಮಂಡಿಸುತ್ತಾರೆ. ಅವರಿಗೆ ದೊರಕಿರುವ ರಾಜ್ಯಯ ಪ್ರಶಸ್ತಿಗಳಿಂದ ಅಥವಾ ರಾಷ್ಟ್ರಪ್ರಶಸ್ತಿಗಳಿಂದ ಕೇವಲ ಆತ್ಮ ತೃಪ್ತಿ ಅಲ್ಪ ತೃಪ್ತಿಯ ರೂಪದಲ್ಲಿ ದೊರಕಿದ್ದನ್ನು ಹೊರತುಪಡಿಸಿದರೆ, ಇಂತಹ ಪ್ರಶಸ್ತಿಗಳನ್ನು ಪಡೆದ ಮಾತ್ರಕ್ಕೆ ನಾವು ರಚಿಸಿದ ಬಿದ್ರಿ ವಸ್ತುಗಳ ದರ ಮಾತ್ರ ಯಾರೂ ಏರಿಸುತ್ತಿಲ್ಲ ಎಂದು ಹಲಬುತ್ತಾರೆ. ನಮ್ಮಿಂದ ಬಿದ್ರಿ ವಸ್ತುಗಳನ್ನು ಕೊಳ್ಳುವ ಮಧ್ಯವರ್ತಿಗಳು ಶೇಕಡಾ ೮೦ರಷ್ಟು ಲಾಭಾಂಶವನ್ನು ಪಡೆದರೆ ಕುಶಲಕರ್ಮಿಗಳಾದ ನಮಗೆ ಕೇವಲ ಶೇಕಡಾ ೫ರಷ್ಟು ಲಾಭಾಂಶ ದೊರಕುತ್ತದೆ ಎನ್ನುತ್ತಾರೆ ಇಲ್ಲಿ ಬಹುತೇಕ ಬಿದ್ರಿ ಕರ್ಮಿಗಳು.

ಈ ಪರಿಸ್ಥಿತಿಯನ್ನು ಅವಲೋಕಿಸಿದರೆ ಬಿದ್ರಿ ಕಲೆಯ ಕುಶಲಕರ್ಮಿಗಳ ಬದುಕು ಬಿದ್ರಿ ಕಲೆಯಷ್ಟು ಸುಂದರವಾಗಿಲ್ಲವೆಂಬುದು ದಿಟವಾಗುತ್ತದೆ. ಇಂತಹ ಪರಿಸ್ಥಿತಿ ಹೀಗೆಯೇ ಮುಂದುವರೆದಿದ್ದೇ ಆದರೆ ಬಿದ್ರಿ ಕಲೆ ಕೇವಲ ಭೂತಕಾಲದ ಕಥೆಯಾಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಯಪಡಿಸುತ್ತ ಈ ಅಧ್ಯಾಯವನ್ನು ಸಮಾರೋಪಿಸಲಾಗಿದೆ.

*****

ಸಮಾರೋಪ

ಪ್ರಸ್ತುತ ಮಹಾಪ್ರಬಂಧದಲ್ಲಿ ಕರ್ನಾಟಕದ ಬಿದರಿನ ಬಿದ್ರಿ ಕಲೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಬೀದರಿನ ಇತಿಹಾಸ, ಬಿದ್ರಿ ಕಲೆಯ ಇತಿಹಾಸ, ಬಿದ್ರಿ ಕಲೆಯ ರಚನಾ ತಂತ್ರಗಾರಿಕೆ, ಮುಖ್ಯವಾಗಿ ದೇಶ ವಿದೇಶಗಳಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿರುವ ಬಿದ್ರಿ ಕಲೆಗಳನ್ನು ದೃಶ್ಯಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಮಹಾಪ್ರಬಂಧ ರೂಪುತಾಳಿದೆ. ಜೊತೆಗೆ ಸಂಕ್ಷಿಪ್ತವಾಗಿ ಬಿದ್ರಿ ಕುಶಲಕರ್ಮಿಗಳನ್ನು ಸಹ ಪರಿಚಯಿಸುವ ಜೊತೆಗೆ ಬಿದ್ರಿ ಕಲೆಗಿರುವ ಪ್ರಾಧಾನ್ಯತೆಯನ್ನು ಸಹ ಇಲ್ಲಿ ವಿವರಪೂರ್ಣವಾಗಿ ಚರ್ಚಿಸಿರುವುದನ್ನು ಅಧ್ಯಯನ ಸಂದರ್ಭದಲ್ಲಿ ಕಾಣಬಹುದಾಗಿದೆ. ಪ್ರತೀ ಅಧ್ಯಾಯಗಳ ಅಧ್ಯಯನದ ಸಾರ್ಥಕ್ಯ ವಿವರಗಳನ್ನು ಈ ಕೆಳಗಿನಂತೆ ಕೊಡಮಾಡಲಗಿದೆ. ಕೊನೆಯಲ್ಲಿ ಪ್ರಸ್ತುತ ಬಿದ್ರಿ ಕಲೆಯ ಅಧ್ಯಯನದ ಫಲಿತಗಳನ್ನು ಸಹ ಕಂಡುಕೊಳ್ಳಲಾಗಿದೆ.

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಈ ಅಧ್ಯಾಯದಲ್ಲಿ ವಿವರವಾಗಿ ಹೇಳಲಾಗಿದೆ.

ಅಧ್ಯಾಯ : ಎರಡು

ಬಿದ್ರಿ ಕಲೆಯ: ಅರ್ಥಸ್ವರೂಪ ಮತ್ತು ಐತಿಹಾಸಿಕ ಹಿನ್ನೆಲೆ

ಬಿದ್ರಿ ಕಲೆಯ ಶಬ್ದ ನಿಷ್ಪತ್ತಿಯ ಕುರಿತು ವಿದ್ವಾಂಸರಲ್ಲಿ ಅನೇಕ ಬಗೆಯ ಗೊಂದಲಗಳಿವೆ. ಇದು ಸಹಜ. ಪ್ರಾಚೀನ ಕಲೆಯೊಂದರ ಕುರಿತು ಚರ್ಚಿಸಬೇಕಾದ ಸಂದರ್ಭದಲ್ಲಿ ಸೂಕ್ತ ದಾಖಲೆಗಳು, ಸಾಕ್ಷಾಧಾರಗಳು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಇಂತಹ ಗೊಂದಲಗಳು ಹುಟ್ಟುತ್ತವೆ. ಬೀದರನ ನಿಷ್ಪತ್ತಿ 'ಬಿದ್ರಿ' ಎಂಬುದು ಕೆಲ ವಿದ್ವಾಂಸರ ಅಭಿಪ್ರಾಯವಾಗಿದ್ದು ಇಂತಹ ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಷ್ಟೇ ಅಲ್ಲದೇ ಬಿದ್ರಿ ಕಲೆಯ ಪ್ರಾಚೀನತೆ ಮೇಲ್ನೋಟಕ್ಕೆ ಅದು ಆರೇಳು ಶತಮಾನಗಳಿಂದ ನಮ್ಮ ದೇಶದಲ್ಲಿ ನೆಲೆಯೂರಿದ್ದನ್ನು ಇತಿಹಾಸಕಾರರು ಗುರುತಿಸುತ್ತಾರೆ. ಸಾಧ್ಯವಾದಷ್ಟು ಅದರ ಪ್ರಾಚೀನತೆಯನ್ನು ಗುರುತಿಸುವ ಪ್ರಯತ್ನವನ್ನು ಈ ಮಹಾಪ್ರಬಂಧಲ್ಲಿ ಮಾಡಲಾಗಿದೆ. ಜೊತೆಗೆ ಭಾರತದಲ್ಲಿ ಪ್ರಚಲಿತವಿರುವ ಬಿದ್ರಿಕಲೆಯ ಶೈಲಿಗಳನ್ನು ಸಹ ಇಲ್ಲಿ ದಾಖಲಿಸುವ ಪ್ರಯತ್ನವನ್ನು ಆಕರ ಗ್ರಂಥಗಳಿಂದ

ಮಾಡಲಾಗಿದ್ದು, ರಾಜ ಮಹಾರಾಜರ ಪೋಷಣೆ, ಪ್ರೋತ್ಸಾಹದಲ್ಲಿ ಅದು ಹಂತ ಹಂತವಾಗಿ ಬೆಳದು ಬಂದ ಬಗೆಯನ್ನು ಸವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ : ಮೂರು

ಬಿದ್ರಿ ಕಲೆಯ: ರಚನಾ ಪರಿಕರಗಳು ಮತ್ತು ರಚನಾ ವಿಧಿ ವಿಧಾನಗಳು

ಕಲಾಕೃತಿಯೊಂದರ ಹುಟ್ಟಿನ ಹಿಂದೆ ಮೊದಲು ಮಾನವನ ಸೃಜನಶೀಲ ಪ್ರಜ್ಞೆ ಪ್ರಮುಖವಾಗಿ ಕಾರ್ಯನಿರ್ವಹಿಸಿದರೆ, ಎರಡನೆಯದಾಗಿ ಕಲಾಕೃತಿಯೊಂದರ ನಿರ್ಮಾಣಕ್ಕೆ ಬೇಕಾಗುವ ಮಾಧ್ಯಮಗಳು, ಆ ಮಾಧ್ಯಮದ ಹಿಡಿತ ಸಾಧಿಸಿಕೊಳ್ಳಲು ಬೇಕಾಗುವ ಪರಿಕರಗಳು ಬಹಳ ಮುಖ್ಯ ಬಿದ್ರಿ ಕಲೆ ಸುಲಭದಲ್ಲಿ ರಚಿಸಬಹುದಾದ ಕಲೆಯಲ್ಲ. ಅದು ಬೌದ್ಧಿಕ, ಭೌತಿಕ ಮತ್ತು ದೈಹಿಕ ಶಕ್ತಿ-ಯುಕ್ತಿಗಳ ಸಮ್ಮಿಲನದಿಂದ ಹುಟ್ಟುವ ಕಲೆ. ಕಠಿಣತಮವಾದ ಲೋಹದ ಸಲಕರಣೆಗಳನ್ನು ಬಳಸುವುದರ ಜೊತೆಗೆ ಅನೇಕ ರಾಸಾಯನಿಕಗಳನ್ನು ಪ್ರಮಾಣಬದ್ಧವಾಗಿ ದುಡಿಸಿಕೊಂಡಾಗ ಒಂದು ಸುಂದರ ಬಿದ್ರಿ ಕಲಾಕೃತಿ ರಚನೆಯಾಗಬಹುದು. ಈ ಬಿದ್ರಿ ಕಲಾಕೃತಿಯನ್ನು ರಚಿಸುವಾಗ ಬಳಸುವ ಪರಿಕರಗಳನ್ನು ಸಚಿತ್ರವಾಗಿ, ಸವಿವರವಾಗಿ ಈ ಅಧ್ಯಾಯದಲ್ಲಿ ದಾಖಲಿಸಲಾಗಿದೆ. ಎರಡನೆಯದಾಗಿ ಸೂಕ್ತ ಪರಿಕರಗಳನ್ನು ಸಮರ್ಥವಾಗಿ ದುಡಿಸಿಕೊಳ್ಳುವುದರ ಮೂಲಕ ಬಿದ್ರಿ ಕಲಾಕೃತಿ ನಿರ್ಮಾಣವಾಗುವ ಹಂತಗಳನ್ನು ಇಲ್ಲಿ ಚಿತ್ರ ಸಹಿತವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಾಯ : ನಾಲ್ಕು

ಬಿದ್ರಿ ಕಲೆಯ: ದೃಶ್ಯಾತ್ಮಕ ಅಧ್ಯಯನ

ಈ ಮಹಾಪ್ರಬಂಧದಲ್ಲಿ ಪ್ರಸ್ತುತ ಅಧ್ಯಾಯವು ಬಹು ಪ್ರಮುಖವಾದುದು. ವೈವಿಧ್ಯಮಯ ಪ್ರಾಕೃತಿಕ ವಿನ್ಯಾಸಗಳಿಂದ ರಚನೆಗೊಂಡ ಬಿದ್ರಿ ಕಲೆಯಲ್ಲಿ ಹಲವಾರು ಬಗೆಗಳಿವೆ. ವಿಶೇಷವಾಗಿ ಗೃಹ ಅಲಂಕಾರಿಕ ದೃಷ್ಟಿಕೋನದ ಕಲಾವಸ್ತುಗಳು ಮತ್ತು ಸಾಂದರ್ಭಿಕವಾಗಿ ಉಪಯೋಗಿಸುವ ಕಲಾವಸ್ತುಗಳನ್ನು ಬಿದ್ರಿ ಕಲೆಯಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಹೀಗೆ ಗುರುತಿಸಬಹುದಾಗಿದೆ. ಹೂವಿನ ಹೂಜಿಗಳು, ನೀರುದಾನಿಗಳು, ಹುಕ್ಕಾಗಳು, ಆಭರಣ ಪೆಟ್ಟಿಗೆ, ಭಿಕ್ಷಾ ಪಾತ್ರೆ, ದೀಪದ ಲಾಂದ್ರಗಳು, ಭಿತ್ತಿ ಶಿಲ್ಪಗಳು, ಭಿತ್ತಿಚಿತ್ರಗಳು, ಕನ್ನಡಿ, ಸಿಗರೇಟ್ ಪೆಟ್ಟಿಗೆ, ಆಶ್ ಟ್ರೇ, ಎಲೆತಟ್ಟೆ, ಜಾಮ, ಬಹುಪಯೋಗಿ ಪೆಟ್ಟಿಗೆ, ಪಾದರಕ್ಷೆಗಳು, ರಾಶಿಚಕ್ರಗಳು, ತಟ್ಟೆ, ಅಂಗಿಯ ಗುಂಡಿಗಳು, ಕತ್ತರಿ, ಪೇಪರ್ ಕ್ಲಿಪ್‌ಗಳು, ಪೀಠೋಪಕರಣಗಳು ಇನ್ನೂ ಮುಂತಾದ ವಸ್ತುಗಳು ಬಿದ್ರಿ ಕಲೆಯ ವಸ್ತುಗಳು ವಿವಿಧ ಬಗೆಯ ಲೋಹಗಳ ಸಮ್ಮಿಶ್ರಣದಿಂದ ತಯಾರಿಸಿರುತ್ತಾರೆ. ಅಷ್ಟೇ ಅಲ್ಲದೇ ಈಗಾಗಲೇ ಅಪರೂಪವಾದ, ಪ್ರತಿಷ್ಠಿತ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಚಿನ್ನದ, ಬೆಳ್ಳಿಯ, ತಾಮ್ರದ ಬಿದ್ರಿ ಕಲಾ ವಸ್ತುಗಳ ಅಲಂಕಾರಿಕ ವಿನ್ಯಾಸಗಳನ್ನು ಪಾರಂಪರಿಕ ಮತ್ತು ಆಧುನಿಕ

ನೆಲೆಯ ವರ್ಗೀಕರಣದೊಂದಿಗೆ ದೃಶ್ಯಾತ್ಮಕ ನೆಲೆಯಲ್ಲಿ ಈಕೆಳಗಿನಂತೆ ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಬಿದ್ರಿ ಕಲೆ ವರ್ಗೀಕರಣ

೫.೧. ಪ್ರಾಚೀನ ಬಿದ್ರಿ ಕಲೆಗಳು

೦೧. ಅಲಂಕಾರಿಕ ತಟ್ಟೆಗಳು
೦೨. ಆಯುಧಗಳು
೦೩. ಉಗುಳುವ ಪಾತ್ರೆಗಳು (ಪೀಕದಾನಿ)
೦೪. ಊರುಗೋಲು
೦೫. ಕೈತೊಳೆಯುವ ಪಾತ್ರೆಗಳು
೦೬. ನೆಲಹಾಸು ಭಾರದ ವಸ್ತುಗಳು
೦೭ ಪಾನದಾನಗಳು
೦೮. ಬಟ್ಟಲುಗಳು
೦೯. ಭರಣಿಗಳು
೧೦. ಸುರಾಹಿಗಳು
೧೧. ಹುಕ್ಕಾಗಳು
೧೨. ಹೂಜಿಗಳು
೧೩. ಹೂದಾನಿಗಳು

೫.೨. ಆಧುನಿಕ ಬಿದ್ರಿ ಕಲೆಗಳು

೧. ಅಲಂಕಾರಿಕ ವಸ್ತುಗಳ ಸಮೂಹ
ಅ. ಹೂದಾನಿಗಳು
ಬ. ಪ್ರಾಣಿ, ಪಕ್ಷಿ ವಸ್ತುಗಳು

೨. ಕಛೇರಿ ವಸ್ತುಗಳು
ಅ. ಕಾಗದ ಕತ್ತರಿಸುವ ಚಾಕು
ಬ. ಕಾಗದ ಹಿಡಿ (ಕ್ಲಿಪ್)
ಕ. ಕಾಗದದ ಮೇಲಿಡುವ ಭಾರದ ವಸ್ತು (ಪೇಪರ್ ವೇಟ್)
ಡ. ಲೇಖನಿ ಪೆಟ್ಟಿಗೆ (ಪೆನ್ ಬಾಕ್ಸ್)

೩. ಗೃಹೋಪಯೋಗಿ ವಸ್ತುಗಳು
ಅ. ಆಭರಣ ಪೆಟ್ಟಿಗೆ
ಬ. ಕುಂಕುಮ ಭರಣಿಗಳು
ಕ. ಉಮರ್ ಖಯಾಮ್
ಡ. ಬಟ್ಟಲುಗಳು
ಇ. ಮೇಣಬತ್ತಿ ನಿಲುವು
ಈ. ಪೂಜಾ ಸಾಮಗ್ರಿ

೪. ಪುರುಷರು ಬಳಸುವ ವಸ್ತುಗಳು

ಅ. ಅಂಗಿಯ ಗುಂಡಿಗಳು
ಬ. ಸೊಂಟ ಪಟ್ಟಿಗಳು (ಬೆಲ್ಟ್‌ಗಳು)
ಕ. ಕೀ ನಿಲುವು / ಕೀ ಹಿಡಿಗಳು
ಡ. ಸಿಗರೇಟ್ ಬೂದಿಯ ಪೆಟ್ಟಿಗೆ

ಶಿ. ಕ್ರೀಡಾ ಸಾಮಗ್ರಿಗಳು

ಅ. ಚದುರಂಗ ಸಾಮಗ್ರಿ

ಹೀಗೆ ಬಿದ್ರಿ ಕಲೆಗಳನ್ನು ವಿವರವಾಗಿ ವರ್ಗೀಕರಿಸಿಕೊಂಡು ದೃಶ್ಯಾತ್ಮಕ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ : ಐದು

ಬಿದ್ರಿ ಕಲೆಯ: ಪ್ರದರ್ಶನ ಮತ್ತು ಮಾರಾಟ ಹಾಗೂ ಪ್ರೋತ್ಸಾಹ

ಬಿದ್ರಿ ಕಲೆಯ ಕುಶಲ ಕರ್ಮಿಗಳಿಗೆ ಮಾರುಕಟ್ಟೆ ಒದಗಿಸುವ ಅನೇಕ ಸರಕಾರಿ/ಸರಕಾರೇತರ ಸಂಸ್ಥೆಗಳು ಭಾರತದಲ್ಲಿ ಇವೆ. ಆದರೂ ಬಿದ್ರಿ ಕಲಾವಿದರಿಗೆ ಬರುವ ಲಾಭ ಕೇವಲ ಶೇ ಶಿರಷ್ಟು ಮಾತ್ರ. ಇನ್ನುಳಿದಿದ್ದು ಮಧ್ಯವರ್ತಿಗಳ ಪಾಲಾಗುವುದೇ ಹೆಚ್ಚು. ಇಂತಹ ಭಾರತದ ಆರ್ಥಿಕ ನೀತಿಯಿಂದ ಬಿದ್ರಿ ಕಲಾವಿದರು ಸ್ಥಿತಿವಂತರಾಗದೇ ಹಿಂದಿನ ಸ್ಥಿತಿಯಲ್ಲಿಯೇ ಮುಂದುವರೆದಿದ್ದಾರೆ. ರಾಷ್ಟ್ರೀಯ ಕರಕುಶಲ ನಿಗಮ, ಕರ್ನಾಟಕ ಕರಕುಶಲ ನಿಗಮ, ಕಾವೇರಿ ಎಂಪೋರಿಯಮ್‌ನಂಥ ಸಂಸ್ಥೆಗಳು ಬಿದ್ರಿ ಕಲಾವಿದರಿಂದ ಕಲಾವಸ್ತುಗಳನ್ನು ಖರೀದಿಸಿ ಹೆಚ್ಚಿನ ಲಾಭಾಂಶದಲ್ಲಿ ಮಾರಾಟ ಮಾಡಿ ಬಿದ್ರಿ ಕಲಾವಿದರಿಗೆ ಶೇಶಿರಷ್ಟು ಲಾಭಾಂಶ ದೊರಕುವಂತೆ ಆರ್ಥಿಕ ನೆರವನ್ನು ನೀಡುತ್ತಾರೆ. ಇವರು ನೀಡುವ ಲಾಭಾಂಶದಲ್ಲಿ ಬಿದ್ರಿ ಕಲಾವಿದರು ತಮ್ಮ ಕುಟುಂಬ ನಿರ್ವಹಣೆ ಮತ್ತು ಬಿದ್ರಿ ಕಲಾವಸ್ತುಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ ಅಂದದ ಮನೆಗೆ ಚೆಂದದ ವಸ್ತುಗಳನ್ನುನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಬಿದ್ರಿ ಕಲೆಗೆ ಮತ್ತು ಕುಶಲಕರ್ಮಿಗಳಿಗೆ ಇರುವ ಪ್ರದರ್ಶನ, ಮಾರಾಟ ಮತ್ತು ಪ್ರೋತ್ಸಾಹದ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ಆರು

ಬಿದ್ರಿ ಕಲೆಯ: ಕುಶಲಕರ್ಮಿಗಳು

ಬೀದರನ ಬಿದ್ರಿ ಕಲೆಯ ಕುಶಲಕರ್ಮಿಗಳು ಸ್ಥಿತಿವಂತರಾಗದಿದ್ದರೂ ಕೆಲವರು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಗಳಿಸಿದವರು ಇದ್ದಾರೆ. ಬಿದ್ರಿ ಕಲೆಯನ್ನು ಕೇವಲ ವ್ಯಾವಹಾರಿಕ ನೆಲೆಯಲ್ಲಿ ಸ್ವೀಕರಿಸದೇ ಅದನ್ನು ತಮ್ಮ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಅನೇಕ ಮಾದರಿಯ ಸಾಂಪ್ರದಾಯಿಕ ಮತ್ತು ಆಧುನಿಕ ನೆಲೆಯ ಬಿದ್ರಿ ಕಲಾವಸ್ತುಗಳನ್ನು ರಚಿಸಿದವರು ರಾಷ್ಟ್ರೀಯ ಮಟ್ಟದ ಖ್ಯಾತಿಗೆ ಭಾಜನರಾದ ಹಲವರು. ಇನ್ನು ಕೆಲವರು ಇನ್ನೊಬ್ಬರ ಮಾಲಕತ್ವದಲ್ಲಿ

ನಡೆಸಲ್ಪಡುವ ಉದ್ಯಮದಲ್ಲಿ ದಿನಗೂಲಿಗಳಂತೆ ಕೆಲಸ ಮಾಡುವವರೂ ಇದ್ದಾರೆ. ಇಂತಹವರನ್ನು ಹುಡುಕಿ ಅವರ ಬದುಕಿನ ಸಾಧನೆಗಳನ್ನು, ಅವರ ಸ್ಥಿತಿ-ಗತಿಗಳನ್ನು, ಕೌಟುಂಬಿಕ ವಿರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ದಾಖಲಿಸಲಾಗುವುದು.

ಅಧ್ಯಯನದ ಫಲಿತಗಳು

ಪ್ರಸ್ತುತ ಬಿದ್ರಿ ಕಲೆಗಳ ಅಧ್ಯಯನದಿಂದ ಈ ಕೆಳಗಿನಂತೆ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

೦೧. ಬೀದರಿನ ಬಿದ್ರಿ ಕಲೆಯನ್ನೇ ಮೂಲವಾಗಿಟ್ಟುಕೊಂಡು ಅಧ್ಯಯನ ಮಾಡಲು ಕ್ಷೇತ್ರಕಾರ್ಯ ಮಾಡಿದಾಗ ಬಹುತೇಕವಾಗಿ ಆಧುನಿಕ ಬಿದ್ರಿ ಉತ್ಪನ್ನಗಳೇ ಲಭ್ಯವಾದವು. ಆದರೆ ಪಾರಂಪರಿಕ ಬಿದ್ರಿಕಲೆಗಳನ್ನು ಮುಖ್ಯವಾಗಿ ಅಧ್ಯಯನ ಮಾಡಬೇಕೆಂಬ ಹಂಬಲದ ಹಿನ್ನೆಲೆಯಲ್ಲಿ ವಿಶ್ವದ ಅನೇಕ ಸಂಗ್ರಹಾಲಯಗಳನ್ನು ಅಂತರಜಾಲದ ಮೂಲಕ ಸಂದರ್ಶಿಸಿದಾಗ ಅತ್ಯಂತ ಪ್ರಾಚೀನ ಬಿದ್ರಿ ಕಲಾಕೃತಿಗಳು ಲಭ್ಯವಾದವು. ಹೀಗಾಗಿ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಪಾರಂಪರಿಕ ಬಿದ್ರಿ ಕಲೆಗಳು ಮತ್ತು ಆಧುನಿಕ ಬಿದ್ರಿಕಲೆಗಳು ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇಷ್ಟೇ ಅಲ್ಲದೇ ಪಾರಂಪರಿಕ ಬಿದ್ರಿ ಕಲೆಗಳಲ್ಲಿ ಕಂಡು ಬರುವ ಕುಶಲಕರ್ಮಿಯ ಪಾಂಡಿತ್ಯ, ಆಸಕ್ತಿ ಈ ಹೊತ್ತಿನ ಬಿದ್ರಿಕಲೆಯಲ್ಲಿ ಕಂಡು ಬರುವುದಿಲ್ಲ ಎಂಬುದಕ್ಕೆ ಆಧುನಿಕ ಜೀವನ ಪದ್ಧತಿಯೇ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

೦೨. ಕಳೆದ ಆರೇಳು ಶತಮಾನಗಳಿಂದ ಕರ್ನಾಟಕದ ಬೀದರಿನಲ್ಲಿ ಅಸ್ತಿತ್ವದಲ್ಲಿರುವ ಪಾರಂಪರಿಕ ನೆಲೆಯ ಬಿದ್ರಿ ಕಲೆಗಳು ಬಹುತೇಕವಾಗಿ ಬೇರೆ ರಾಜ್ಯದ ಮತ್ತು ವಿದೇಶದ ಸಂಗ್ರಹಾಲಯಗಳಲ್ಲಿ ನೋಡಲು, ಅಧ್ಯಯನ ಮಾಡಲು ಲಭ್ಯವಾಗುತ್ತಿವೆ. ಆದರೆ ಇಲ್ಲಿಯೇ ಹುಟ್ಟಿ-ಬೆಳದ ಪ್ರಾಚೀನವೆನ್ನಬಹುದಾದ ಬಿದ್ರಿ ಕಲೆಯ ಒಂದೇ ಒಂದು ಕಲಾಕೃತಿಯೂ ಸಹ ಕರ್ನಾಟಕದಲ್ಲಿ ನೋಡಲು ಲಭ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಎಷ್ಟರ ಮಟ್ಟಿಗೆ ನಮ್ಮ ಪ್ರಾಚೀನ ತಿಳುವಳಿಕೆ ಇದೆಯೆಂಬುದು ಗೊತ್ತಾಗುತ್ತದೆ.

೦೩. ಅನುಕರಣಾತ್ಮಕ ಕುಶಲತೆಯೇ ಪ್ರಧಾನವಾದ ಬಿದ್ರಿ ಕಲೆಯಲ್ಲಿ ಸಂಯೋಜನೆ ಮತ್ತು ತಂತ್ರಗಾರಿಕೆಯಲ್ಲಿ ಸೃಜನಾತ್ಮಕ ಪ್ರಕ್ರಿಯೆ ಮಹತ್ವದ್ದು. ಏಕೆಂದರೆ ಪ್ರಚಲಿತ ವಿನ್ಯಾಸಗಳನ್ನು ಹಲವು ಬಗೆಯ ತಂತ್ರಗಳಿಂದ ಸಮರ್ಥವಾಗಿ ದುಡಿಸಿಕೊಳ್ಳುವುದರ ಮೂಲಕ ಬಿದ್ರಿ ಕಲೆಯಲ್ಲಿ ಹೊಸ ಪ್ರಕಾರವೊಂದನ್ನು ಹುಟ್ಟು ಹಾಕುವ ಕುಶಲಕರ್ಮಿಯ ಪಾಂಡಿತ್ಯ ಅನನ್ಯವಾದುದು. ಅಂತಹ ಅಪೂರ್ವ ಸೃಜನಾತ್ಮಕ ಪ್ರಜ್ಞೆಗೆ ನಿಲುಕುವಂತಹ ಬಿದ್ರಿ ಕಲಾಕೃತಿ ಹೂಜಿ (ಚಿತ್ರ ೧) ಉತ್ತಮ ನಿದರ್ಶನವಾಗಿದೆ.

೦೪. ಬಿದ್ರಿಕಲೆಗಳಲ್ಲಿ ವಿನ್ಯಾಸಗಳನ್ನು ಪ್ರಕೀರ್ಣಕ ಬಗೆಯಲ್ಲಿ ದುಡಿಸಿಕೊಳ್ಳುವದರ ಮುಖೇನ ಕಲಾಕೃತಿಯ ಅಂದವನ್ನು ಹೆಚ್ಚಿಸುವ ಪರಿ ಅನೂಹ್ಯವಾದುದು. ಬೇರೆ ಕಲಾಕೃತಿಗಳಲ್ಲಿ ವಿನ್ಯಾಸಗಳು

ದಟ್ಟವಾಗಿಸಿದರೆ ಆ ಕಲಾಕೃತಿಯ ಅಂದಗೆಡುತ್ತದೆ. ಆದರೆ ಈ ಬಿದ್ರಿ ಕಲಾಕೃತಿಯಲ್ಲಿ ದಟ್ಟವಾದ ವಿನ್ಯಾಸಗಳು ವಿಶಿಷ್ಟ ರಸಾನುಭವವನ್ನು ನೀಡುವಲ್ಲಿ ಯಶಸ್ವಿಯಾಗುತ್ತವೆ ಎಂಬುದಕ್ಕೆ ಗಂಟೆಯಾಕಾರದ ಹುಕ್ಕಾದ ತಳ (ಚಿತ್ರ ೧೩)

೦೫. ಬಿದ್ರಿ ಕಲೆಯಲ್ಲಿ ಸಸ್ಯಜನ್ಯ ವಿನ್ಯಾಸಗಳೇ ಬಹು ಪ್ರಾಮುಖ್ಯತೆಯನ್ನು ಪಡೆದಿವೆ. ಏಕೆಂದರೆ ಇಸ್ಲಾಂ ಧರ್ಮದಲ್ಲಿ ದೇವರನ್ನು ಅಮೂರ್ತವಾಗಿ ಪೂಜಿಸುವ ಹಿನ್ನೆಲೆಯಲ್ಲಿ ಸಸ್ಯಜನ್ಯ ವಿನ್ಯಾಸಗಳು ಬಹುಬಗೆಯಲ್ಲಿ ಹುಟ್ಟಿಕೊಂಡವು. ಅವು ಇಸ್ಲಾಮಿಕ್ ವಾಸ್ತು ಶಿಲ್ಪದಲ್ಲಿ, ಚಿತ್ರಗಳಲ್ಲಿ ಪ್ರಧಾನ ವಿನ್ಯಾಸಗಳಾಗಿ ಮೇಳೈಸಿವೆ. ಹೀಗಾಗಿ ಮಾನವಾಕೃತಿಗಳು ಅಪರೂಪವಾದರೂ ಚಿತ್ರ ೩ ಬಟ್ಟಲು ಬಿದ್ರಿಕಲೆಯಲ್ಲಿ ರಾಜನೊಬ್ಬ ಬೇಟೆಯಾಡುವ ದೃಶ್ಯವಿದೆ. ತನ್ಮೂಲಕ ಬಿದ್ರಿ ಕಲೆಯಲ್ಲೂ ಚಾರಿತ್ರಿಕ ಕಥೆಯೊಂದನ್ನು ದೃಶ್ಯಾತ್ಮಕವಾಗಿ ನಿರೂಪಿಸುವ ಅಭಿವ್ಯಕ್ತಿಯ ಕ್ರಮ ಅನನ್ಯವಾದುದು.

೦೬. ಬಿದ್ರಿ ಕಲಾಕೃತಿಯಲ್ಲಿ ಸಸ್ಯಜನ್ಯ ವಿನ್ಯಾಸಗಳೇ ಪ್ರಧಾನವಾದವು ಎಂಬ ವಾದದ ಮಧ್ಯೆಯೂ ಕೆಲವೇ ಕೆಲವು ಬಿದ್ರಿ ಕಲಾಕೃತಿಗಳಲ್ಲಿ ಮೀನು, ನವಿಲು, ಜಿಂಕೆ, ಹುಲಿ, ಹಾವು ಇನ್ನೂ ಮೊದಲಾದ ವಿನ್ಯಾಸಗಳನ್ನು ದುಡಿಸಿಕೊಂಡ ಕ್ರಮವಿದೆ. ಈ ಹಿನ್ನೆಲೆಯಲ್ಲಿ ಇಸ್ಲಾಮಿಕ್ ನೆಲೆಯಲ್ಲಿ ನೆಲೆ ಕಂಡುಂಡ ಬಿದ್ರಿ ಕಲೆಯಲ್ಲಿ ಇಂತಹ ನಿದರ್ಶನಗಳು ನಮಗೆ ದೊರಕುತ್ತವೆ. (ಚಿತ್ರ ೩)ತಟ್ಟೆಯ ಕೃತಿ ಒಂದು ಸೂಕ್ತ ನಿದರ್ಶನವಾಗಬಹುದು.

೦೭. ಇದುವರೆಗಿನ ಬಿದ್ರಿ ಕಲೆಗಳ ಕುರಿತು ಬಂದ ಸಂಶೋಧನಾತ್ಮಕ ಪ್ರಬಂಧಗಳಲ್ಲಿ ೧೭ನೆಯ ಶತಮಾನದ ನಂತರದ ಬಿದ್ರಿ ಕಲೆಗಳ ಉಲ್ಲೇಖವಿದೆ. ಆದರೆ ಪ್ರಸ್ತುತ ಮಹಾಪ್ರಬಂಧದಲ್ಲಿ ೧೬ನೆಯ ಶತಮಾನದಲ್ಲಿ ರಚನೆಗೊಂಡ ತಟ್ಟೆಯ ಉಲ್ಲೇಖವನ್ನು ಇಲ್ಲಿ ಮಾಡಲಾಗಿದೆ. (ತಟ್ಟೆ, ಚಿತ್ರ ೩)

೦೮. ಬಿದ್ರಿ ಕಲಾಕೃತಿಯಲ್ಲಿ ಸಸ್ಯಜನ್ಯ ವಿನ್ಯಾಸಗಳೇ ಪ್ರಧಾನವಾದವು ಎಂಬ ವಾದದ ಮಧ್ಯೆಯೂ ಕೆಲವೇ ಕೆಲವು ಬಿದ್ರಿ ಕಲಾಕೃತಿಗಳಲ್ಲಿ ಪ್ರಕೃತಿ ಚಿತ್ರಣದಂತಹ ರಚನೆಗಳು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ದೊರೆತಿವೆ. (ಗಂಟೆಯಾಕಾರದ ಹುಕ್ಕಾ ತಳಗಳು ಚಿತ್ರ ೧೯ ಮತ್ತು ೨೨)

೦೯. ಪ್ರಸ್ತುತ ಅಧ್ಯಯನದಲ್ಲಿ ಬಹುತೇಕ ಉಲ್ಲೇಖಗಳು ಪಾಶ್ಚಾತ್ಯ ಅಧ್ಯಯನಗಳಿಂದ ತೆಗೆದುಕೊಳ್ಳಲಾಗಿದೆ. ಅಂದರೆ ಪಾಶ್ಚಾತ್ಯ ವಿದ್ವಾಂಸರಿಗೆ ಬಿದ್ರಿ ಕಲೆಯ ಮೇಲೆ ಇರುವ ಅಧ್ಯಯನದ ಆಸಕ್ತಿ, ಕುತೂಹಲಗಳ ಪರಿಣಾಮವಾಗಿ ಬಹುಸಂಖ್ಯೆಯ ಸಂಶೋಧನಾತ್ಮಕ ಲೇಖನಗಳು, ಗ್ರಂಥಗಳು ಪ್ರಕಟವಾಗಿವೆ. ಆದರೆ ಹಿತ್ತಲಗಿಡದಲ್ಲೇ ಇರುವ ಪಾರಂಪರಿಕ ಕಲೆಯೊಂದರ ಕುರಿತು ಕರ್ನಾಟಕ ಸರಕಾರವಾಗಲಿ, ಕರ್ನಾಟಕದಲ್ಲಿ ಬಹುಸಂಖ್ಯೆಯಲ್ಲಿರುವ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳು ಒಂದೇ ಒಂದು ಬಿದ್ರಿ ಕಲೆಯ ಪುಸ್ತಕವನ್ನು ಪ್ರಕಟಿಸಿಲ್ಲವೆಂಬುದು ದುರಂತವಲ್ಲವೇ ? (ಗುಲಬರ್ಗಾ ವಿಶ್ವವಿದ್ಯಾಲಯ ಪ್ರಚಾರೋಪನ್ಯಾಸ ಮಾಲೆಯಲ್ಲಿ "ವಿಶ್ವವಿಖ್ಯಾತ ಬಿದ್ರಿಕಲೆ" ಹಾಗೂ

ಕರ್ನಾಟಕ ಲಲಿತಕಲಾ ಅಕಾಡೆಮಿ "ಬಿದರಿ ಕಲೆ" ಎಂಬ ಪರಿಚಯಾತ್ಮಕ ಪುಟ್ಟ ಪುಸ್ತಕಗಳನ್ನು ಪ್ರಕಟಿಸಿ ತಮ್ಮ ಕಲಾಪ್ರೇಮವನ್ನು ಮೆರೆದಿವೆ.)

೧೦. ಪ್ರಾಚೀನರಲ್ಲಿ ಇದ್ದಂತಹ ಅಲಂಕಾರಿಕ ಪ್ರಜ್ಞೆ ಆಧುನಿಕ ಸಂದರ್ಭದಲ್ಲಿ ಗವಣವಾಗುತ್ತಿರುವದಕ್ಕೆ ಇಂದಿನ ಯಾಂತ್ರಿಕ ಬದುಕೇ ಕಾರಣ. ಈ ಯಾಂತ್ರಿಕ ಬದುಕನ್ನು ಮುನ್ನಡೆಸುವ ಜವಾಬ್ದಾರಿ ಮನೆಯ ಯಜಮಾನನಿಗೆ ಇರುವುದರಿಂದ ಅವನು ಸಹಜವಾಗಿ ಅಲ್ಪ ಸಮಯದಲ್ಲಿ ಹೆಚ್ಚು ಗಳಿಕೆ ಮಾಡುವ ತುರಾತುರಿಯಲ್ಲಿ ಪಾರಂಪರಿಕ ವಿನ್ಯಾಸಗಳನ್ನು ಹಿಮ್ಮೆಟ್ಟಿಸಿದ. ಏಕೆಂದರೆ ಪಾರಂಪರಿಕ ವಿನ್ಯಾಸವೊಂದನ್ನು ಬಳಸಿಕೊಂಡು ಒಂದು ಶ್ರೇಷ್ಠವಾದ ಬಿದ್ರಿ ಕಲೆಯೊಂದನ್ನು ಸಿದ್ಧಪಡಿಸಬೇಕಾದರೆ ಹಲವು ದಿನಗಳೇ ಬೇಕಾಗಬಹುದು. ಆದರೆ ಆಧುನಿಕ ಸಂದರ್ಭದ ಜನರ ಅಭಿರುಚಿಗೆ ತಕ್ಕಂತೆ ಕೆಲವೇ ಸಮಯದಲ್ಲಿ ಒಂದು ಬಿದ್ರಿ ಕಲೆಯನ್ನು ಉತ್ಪಾದಿಸಿದರೆ ಹೆಚ್ಚು ಗಳಿಕೆ ಮಾಡಬೇಕೆಂಬ ಅವನ ವಾಣಿಜ್ಯಕ ಭ್ರಮೆಯಿಂದ ಬಿದ್ರಿ ಕಲೆ ತನ್ನ ಮೂಲ ಅಂತಃಸತ್ವವನ್ನು ಕಳೆದುಕೊಳ್ಳುತ್ತಿದೆ.

೧೧. ಬಿದ್ರಿ ಕುಶಲಕರ್ಮಿಗಳ ಬದುಕು ಮತ್ತು ಭಾರತದ ರೈತನ ಬದುಕು ಎರಡೂ ಒಂದೇ. ಏಕೆಂದರೆ ಕಷ್ಟಪಟ್ಟು ದುಡಿಯುವ ಕುಶಲಕರ್ಮಿ ಮತ್ತು ರೈತನಿಗೆ ತನ್ನ ಉತ್ಪನ್ನವನ್ನು ಖರೀದಿಸುವ ದಲ್ಲಾಳಿಗೆ ಕನಿಷ್ಟ ದರದಲ್ಲಿ ನೀಡಿದರೆ, ಉತ್ಪನ್ನವನ್ನು ಹಸ್ತಾಂತರಿಸುವ ದಲ್ಲಾಳಿ ಬಹುಪಾಲು ಲಾಭವನ್ನು ಪಡೆಯುತ್ತಾನೆ. ಇದೇ ಬಗೆಯ ದಲ್ಲಾಳಿ ಕೆಲಸವನ್ನು ಕರ್ನಾಟಕದ ಸರಕಾರದ ಕಾವೇರಿ ಎಂಪೋರಿಯಂ ಸಹ ಮಾಡುತ್ತಿದ್ದು, ಬಿದ್ರಿ ಕುಶಲಕರ್ಮಿಯಿಂದ ೧೦೦ ರೂಪಾಯಿಗಳಿಗೆ ಕಲೆಯೊಂದನ್ನು ಖರೀದಿಸಿ ತನ್ನ ಮಾರಾಟ ಮಳಿಗೆಯಲ್ಲಿ ಅದನ್ನು ಗ್ರಾಹಕನಿಗೆ ನೀಡುವಾಗ ಅದೇ ಕಲೆಯ ಬೆಲೆ ಕನಿಷ್ಟ ೬೦೦ರೂಪಾಯಿಗಳಿಗೂ ಹೆಚ್ಚು ! ಈ ದೇಶದಲ್ಲಿ ಹಸ್ತಾಂತರದಲ್ಲಿ ಇರುವ ಲಾಭ ದುಡಿಯುವವನಿಗೆ ಇಲ್ಲವೆಂಬುದಕ್ಕೆ ಇನ್ನೆಂತಹ ನಿದರ್ಶನಗಳು ಬೇಕು?

೧೨. ದಲ್ಲಾಳಿ ವ್ಯಾಪಾರ ಮಾಡಿ ಬಹು ಲಾಭ ಪಡೆಯುವ ಕರ್ನಾಟಕ ರಾಜ್ಯ ಕರಕುಶಲ ನಿಗಮ ಹಿರಿಯ ಕರಕುಶಲ ಕರ್ಮಿಗಳಿಗೆ ಬದುಕಿಗೆ ಆಸರೆಯಾಗುವಷ್ಟು ಮಾಸಾಶನವನ್ನು, ವಸತಿ ಸೌಲಭ್ಯ ವಂಚಿತ ಕುಶಲಕರ್ಮಿಗಳಿಗೆ ವಸತಿ ವ್ಯವಸ್ಥೆ ಹಾಗೂ ಇತರ ನಾಗರಿಕ ಸೌಲಭ್ಯಗಳನ್ನು ಜರೂರಾಗಿ ನೀಡುವುದರ ಮೂಲಕ ಅವರ ಕೊಡುಗೆಯನ್ನು ಗೌರವಿಸಬೇಕಾಗಿದೆ.

೧೩. ಆಧುನಿಕ ಬದುಕಿನ ಮಜಲಿಗೆ ತಕ್ಕಂತೆ ಬಿದ್ರಿ ಉತ್ಪನ್ನಗಳನ್ನು ತಯಾರಿಸುತ್ತಿರುವ ಕುಶಲಕರ್ಮಿಗಳಿಗೆ ಪ್ರಾಚೀನ ಬಿದ್ರಿ ಕಲೆಗಳನ್ನು ಸಂಗ್ರಹಿಸಿ ಕ್ಯಾಟಲಾಗ್ ಮಾದರಿಯಲ್ಲಿ ಮುದ್ರಿಸಿ ಅವರಿಗೆ ಉಚಿತವಾಗಿ ನೀಡಿ ಪಾರಂಪರಿಕ ವಿನ್ಯಾಸಗಳನ್ನು ತಮ್ಮ ಕಲೆಗಳಲ್ಲಿ ಅಳವಡಿಸಿಕೊಳ್ಳು ಪ್ರೇರೇಪಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಕರಕುಶಲ ನಿಗಮ ತೀವ್ರವಾಗಿ ಮಾಡಬೇಕಾಗಿದೆ.

ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಬಿದ್ರಿಯ ಎಲ್ಲ ಕಲಾಕೃತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿಲ್ಲ. ಸಾವಿರಾರು ಬಿದ್ರಿಕಲೆಯ ಕಲಾಕೃತಿಗಳು ಈಗಲೂ ಇದ್ದು ಮುಂದಿನ ಪೀಳಿಗೆಯ ಉತ್ಸಾಹಿ ಸಂಶೋಧಕರಿಗೆ ಪ್ರಮುಖ ಆಕರಗಳಾಗಿ ಲಭ್ಯವಾಗುವುದರಲ್ಲಿ ಎರಡು ಮಾತಿಲ್ಲ. ಬಿದ್ರಿ ಕಲೆಯ ಅಧ್ಯಯನ **ಕನ್ನೆ ನೆಲ**ವೆಂದು ವಿನಮ್ರವಾಗಿ ತಿಳಿಯಪಡಿಸುತ್ತ ಈ ಮಹಾಪ್ರಬಂಧವನ್ನು ಸಮಾರೋಪಿಸಲಾಗಿದೆ.

****

ಅನುಬಂಧಗಳು

೧. ಬಿದ್ರಿ ಕಲೆಯ ಮಾರಾಟ ಮಳಿಗೆಗಳ ವಿಳಾಸಗಳು

೨. ಅಂತರ್‌ಜಾಲ ತಾಣಗಳ ವಿಳಾಸಗಳು

೩. ಛಾಯಾಚಿತ್ರಋಣ —

೪. ಗ್ರಂಥಋಣ

ಬಿದ್ರಿ ಮಾರಾಟ ಮಳಿಗೆಗಳು

Quddus Bidri works
Mustid pura, D/No:2-2-11/1
Bidar, Karnataka 585401

Gulshan Bidri works
Kulsoomgalli
Bidar, Karnataka 585401

Jahan Bidri works
Kulsoomgalli
Bidar, Karnataka

Karnataka Bidri works
Near D.C.C. Bank
Bidar, Karnataka 585401

Triveni Bidri works,Naikaman
No:9-3-99
Bidar, Karnataka

Supreme Bidri works
Kulsoomgalli
Bidar, Karnataka 585401

Centrel Bidri works
Kulsoomgalli
Bidar, Karnataka 585401

Novel Bidri works
2-1-65,Siddi Taloom,
Bidar, Karnataka 585401

Imperial Bidri Works
H.No.2-2-138
Kulsoomgalli
Bidar, Karnataka 585401

Superna Bidra Works
Kulsoomgalli
Bidar, Karnataka 585401

Shivaraj Bidri Works
Kulsoomgalli
Bidar, Karnataka 585401

M/s Madhu Bidri works
Uttam Nagar, Jawahar Colony,
Aurangabad

Aurangabad fine Bidri work
Ganesh Colony
Opp. Mussa Manzil
Aurangabad, Maharashtra

M/s. Azizia Bidri work
Near Pawan Chakki
Aurangabad, Maharashtra

Sheela's Indian
Handicrafts Specialists
17, Lal Bahadur Stadium
Hyderabad-500 001
Ph: 236944

Society Emporium
1-2-235, S.D. Road,
Secunderabad 500 003

Bidri Crafts
5-9-322/4, Gun foundry
Hyderabad 500 001
Ph : 232657 Fax : 040-233663

Mahboob Bidri Works
10-5-1/2, Masab Tank
Opp. Diamond Sweet House
Hyderabad 500 028
Ph : 221552

Cauvery Karnataka State
Arts & Crafts Emporium
Seven Hills Plaza, S.D. Road,
Secunderbad 500 003

Central Cottage Industries Emporium
94, Minerva Complex
S.D. Road
Secunderbad 500 003

Crafts Museum
Calcutta Emporium
Behind Lepakshi, Gunfoundry,
Hyderabad 500 001

Kalanjali Arts & Crafts
5-10-194, Hill Fort Road, Saifabad,
Hyderabad 500 004
Ph: 231147

Lepakshi Handicrafts Emporium
Gun foundry
Hyderabad 500 001
Ph: 235028

Lepakshi Handicrafts Emporium,
94, Minerva Complex, S.D.Road,
Secunderbad 500 003

Karnataka State Handicrafts
Development Corporation, Bangalore

Web Site Address

1. circatrade.com
2. Hawke's Asian Art.com
3. edecors.com
4. chilongantiques.com
5. malamall.com
6. novica.com
7. heritagearcade.com
8. cauvery.com
9. bidriware.com
10. lepakshi.com
11. bidrihandicraft.com
12. amazon.com
13. christies.com
14. bonhams.com
15. snapdeal.com
16. mirraw.com
17. artsquare.in
18. fizdi.com
19. junglee.com

೨. ಛಾಯಾಚಿತ್ರ ಋಣ

೦೧. ಮೊಹಮ್ಮದ ಅಯಾಜುದ್ದೀನ್, ಗುಲಬರ್ಗಾ
೦೨. ಮೊಹಮ್ಮದ್ ಇಸ್ಮಾಯಿಲ್, ಶಿರಹಟ್ಟಿ
೦೩. ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂ, ಲಂಡನ್
೦೪. ಇಂಡಿಯನ್ ಮ್ಯೂಸಿಯಂ, ಕೋಲ್ಕತ್ತಾ
೦೫. ಮಾರ್ಗ ಪಬ್ಲಿಕೇಶನ್, ಮುಂಬಯಿ
೦೬. ಜಗದೀಶ್ ಮತ್ತು ಕಮಲಾ ಮಿತ್ತಲ್ ಭಾರತೀಯ ಕಲಾ ವಸ್ತು ಸಂಗ್ರಹಾಲಯ, ಹೈದರಾಬಾದ್
೦೭. ಸಾಲಾರ್ ಜಂಗ್ ಮ್ಯೂಸಿಯಂ, ಹೈದರಾಬಾದ್
೦೮. ನ್ಯಾಶನಲ್ ಮ್ಯೂಸಿಯಂ, ನವದೆಹಲಿ
೦೯. ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ, ಮುಂಬಯಿ
೧೦. ಮೆಟ್ರೋಪಾಲಿಟನ್ ಮ್ಯೂಸಿಯಂ ಆರ್ಟ, ನ್ಯೂಯಾರ್ಕ
೧೧. www.google.com

ಗ್ರಂಥಋಣ

೧. ಕಲಾ ಕೋಶ : ಸಂ: ಎನ್.ಮರಿಶಾಮಾಚಾರ್ :ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು. ೧೯೯೪

೧. ಬಿದ್ರಿ ಕಲೆ, ಕಲಾಕೋಶ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

೨. ಅರುಣಕುಮಾರ ಹಬ್ಬು, ಅವಸಾನದ ಅಂಚಿನಲ್ಲಿ ಅಪರೂಪದ ಬಿದರಿ ಕಲೆ, ತರಂಗ ೧೩-೧೦-೨೦೦೫

೩. ಶ್ರೀಧರ್ ಎಸ್. ಚವ್ಹಾಣ "ಬಿದರಿ ಕಲೆ" ವಿಜಯ ಫೈನ್ ಆರ್ಟ್ ಕಾಲೇಜ, ಗದಗ ೨೦೦೨.

೪. ಡಾ.ವಿ.ಎಮ್.ಬಾಗಾಯತ್, ಬಿದರಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು,೨೦೦೪

೫. ಶ್ರೀ ರಾಜೇಂದ್ರ ಯರನಾಳೆ, ವಿಶ್ವ ವಿಖ್ಯಾತ ಬಿದ್ರಿ ಕಲೆ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. ೧೯೯೬

೬. ರವೀಂದ್ರ ಎಸ್.ವ್ಹಿ. ಬಿದರಿ ಕಲೆ ಕುಶಲಕರ್ಮಿಗಳು.

೭. ಕೆ.ಎಂ. ಮೈತ್ರಿ, ಬಿದರಿ ಕಲೆಗಳು, ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ೨

೮. ಡಾ॥ ಎ.ಕೆ.ವಿ.ಎಸ್.ರೆಡ್ಡಿ, ದರ್ಶಿಕಾ ಸಾಲಾರ ಜಂಗ ಮ್ಯೂಸಿಯಂ, ಹೈದ್ರಾಬಾದ.

1) Abul Fazl, The Ain-i-Akbari translated by H. Blochmann, 3rd edition, New Delhi,1977

2) Archer,Mildred, India and British Portraiture 1770 – 1825 London, 1979

3) Arun kumar Biswas, 2001, Minerals and Metals in Pre – Modern India, New Delhi D.K print world (P) Ltd.

4) Arun kumar Biswas, the Primacy of India in Ancient Brass and Zinc Metallurgy, Indian Jouranal of History 28, (4) 1993 PP. 309 – 330

5) Arun kumar Biswas, Sulekha: Minerals and Metals in Ancient India 2 Volumes U.K Print World (P) Ltd 1996 Chapter 18 in Vol – 1 (PP – 384) is Entitled Antiquity of Zinc and Brass in Ancient India

6) Agarwal O.P, Bidri Museum XXVII 1975, PP – 193

7) Arun Kumar Biswas and N.A. Chakhaborty , Archaeo – Material studies in India and Literary Evidences in Historical Archaeology of India, Edited by A. Ray and S. Mukherjee Books and Books , New Delhi 1990. PP – 49 – 66

8) Arun kumar Biswas, Annual Report to Hindustan Zinc Limited, Udaipur Studies on Recovery of Zinc form Floation Tailing and Ancient Slags, Indian Institute of Technology, Kanpur, 1981 – 84

9) Arun kumar Biswas, A .Gangopadhyaa and T.R Ramachandran, Phase Studies On Zinc Residues of Ancient Indian Origin, Trans Indian Inst Metals, 37 (3) June 1984, PP 234 – 241

10) Ali Akbar Saidi, Tarikh- i- Bidari – VI Iranian, Farhang, a news paper in Isfahan, 1879

11) Annual Report of the Archaeological Department, Hyderabad,1914 –15, PP.44 -6

12) Baljit Khurana, Bidar – A Flagship of Indo – Persian Unity, An Illustrated Talk at Oran Culture House, New Delhi, The Economic Times, New Delhi,9, Sept 2001

13) Birdwood Sir George, the Industrial Arts of India, South Kensington Museum Art Handbooks Chapman And Hall. London,1880

14) Burhan – i – Maathir (Persian Text, Hyderabad edition) PP. 49-50

15) Craddock P.T ., The Composition of Copper Alloys used by the Greek, Ertuscan and Roman Civilization – The Origins and Early Use of Brass, J Archaeol . Sci, 5, 1978. PP 1-16

16) Craddock P.T., et al Hellenistic Copper – Base Coilnage and the Origins of Brass in Scientific Studies in Numismatics Edited by W.A Oddy, Occasional Paper no – 18 , British Museum, 1980,PP 53 – 64

17) Craddock P.T., The Copper Alloys of Tibet and their Background, in Aspects of Tibetan Metallurgy, Occasional Paper No.15 British Museum, 198, PP1- 31

18) Craddock P.T., Goat Path Discovery Unlocks Secrets of Medieval Zinc, IAMS News Letter No 6, Institute of Archaeology, London 1984

19) Chandra Moti, "A Brass Jewel Casket of Akbar – Jehangir Period": Roopa – Lekha, Vol. II. No, 3, 1940

20) Chandra Pramod " Two Early Mughal Metal Cups" Bulletin of the Prince of Wales Museum , No 5, 1955 – 57, Bombay

21) Choudhary Anil Roy, 'Bidriware' Salar Jung Museum, Hyderabad, 1961

22) Coomaraswamy Anand K – The India Craftsmen, Prabstrain and Co. London, 1909.

23) Cambridge History of India, Vol,I,P. 600

24) Digby SImon, "The Bhugola of Ksema Karna: A Dated 6th Century Piece of Indian Metalware" Art and Archaeology Research Papers, London, 1973

25) Digby Simon, Some Notes towards the Classification of Muslim Copper and Brass Work in the Museum , Art Bulletin of the Prince of Wales Museum, No 5, 1955 – 57, Bombay

26) Dikshit Moreshwar G., History of India Glass, Bombay, 1969

27) Dr. Jyostna kamat "Mahmud Gawan of Bidar"Biography of a Great Islamic Educationist, Kamats Potpouroi/ www kamat.com

28) Dr. Rehaman Patel, Black and white era links Rajiv Gandhi and Bidri artisans, Karnataka Muslims, Nov.1, 2014

29) Dr. Rehaman Patel, Bidri Kale-Bahmani Sultanara Koduge, Kalyana Karnataka Vishesh Puravane, Samyukta Karnataka, April 19, 2016

30) Dr. Rehaman Patel, Deccan Sultans Artifacts show in New York, Drushya Belaku, Kannada and English quarterly magazine, Gulbarga, Sept-Nov. 2015

31) Fehervari, Geza, Islamic Metalwork of the Eighth to the Fifteenth Century in the Kier Collection, London, 1976

32) Freestone I.C, Craddock P.T, Gurjar L.K, Hedge K.T.M and Taliwal H.V., Analytical Approaches to the Interpretation of Medieval Zinc – Smelting Debris from Zawar Rajasthan ,J. Archaeol Chem. 3, December 1985, PP. 1- 12

33) Farnsworth M,Smith C.S and Rodda J.L, Metallographic Examination of a Sample of Metallic Zinc from Ancient Athens Hesperia (Suppl.3) 126 – 129 PP, 1949

34) Firishta (Persian Text, Bomay lithograph) ,Vol,I

35) Gairola T.R "Bidri Ware" Ancient India 12, 1956, PP. 116 – 123 New Delhi

36) Gowd K.V.N " Bidriware" Census of India 1961, Vol.II Andhra Pradesh , Part VII – A (3) Selected Crafts of Andhra Pradesh, Delhi, 1967,PP. 3 – 4

37) Gowd K.V.N " Bidriware" Census of India 1961 Vol II Part VII – A (3) Selected Craft of Andhra Pradesh New Delhi 1964 PP. 3-21

38) Gulnar K. Bosch, The new book of Knowledge "I" Islamic art and Architecture, Islam, PP 354 – 359

39) G.N. Pant, Indo – Islamic Arms and Armour in An Age of Splendour – Islamic Art in India, Marg Publication Bombay,1983, PP. 52 – 58

40) Hendley T.H., Damascening on Steel or Iron as pacticed in India, London, 1892

41) Heyne Benjamin "An Account of the Biddery (Vidri) Ware in India" Asiatic Journal, No .III, March 1817,PP. 220 – 22 A Short Note on the Industry at Bidar

42) Hirst R.J – Note on the Bidri Ware of Purnea, Journal and Proceedings of the Asiatic Society of Bengal, N.S .Vol, III, 1907, 1908, PP. 539 – 540, Draws largely on Hunter and Buchanan, Calcutta

43) History of Chemistry in Ancient and Medieval India, Edited by P. Ray, Indian Chemical Society, Calcutta, 1956, PP. 94 – 95

44) Hegde K.T.M, Craddock P.T, and Sonavane V.H, - Zinc Distillation in Ancient India Proceedings of the 24th International Archaeometry Symposium, Smith Sonian Institution Press, Washington, 1986, PP .249 – 258

45) Hegde K.T.M., An Introduction to Indian Metallurgy, Geological Society of India, Bangalore, A Special Chapter on "Zinc and Brass Production in Ancient India" 1991 PP. 56 – 83

46) James A Bill, The New Book of Knowledge "I" Iran, The Arts, Page, 307

47) John R. Randall, The New Book of Knowledge "I" Iraq, The Arts, Page. 313

48) Jagdish Mittal, Indo – Islamic Metal and Glassware in An Age of Splendour Islamic Art in India, Marg Publications, Bombay – 1983, PP – 60 – 67

49) Jagdish Mittal, Bidriware and Damascene Work in Jagdish and Kamla Mittal Museum of Indian Art, 2015

50) Kamala Vasudevan, Lose your heart to the dying art, Deccan Herald – Spectrum, Page – 1 February 8, 2005

51) K.N. Reddy, Bidriware finds place in New Your exhibition, The Hindu, August 18, 2015

52) La Niece S and Martin G, The Technical Examination of Bidri Ware, Studies in Conservation, 32, 1987, PP. 97 – 101

53) Lal Kishan, National Museum Collection, Bidriware, New Delhi, 1990

54) Leth Andre,Islamic Arms and Armour from Private Collections, Copenhagen, 1982

55) Lo Bue, E, Statuary Metals in Tibet in Reference 21, P – 38.

56) Lal B.B, An Examination of Some Metal Images from Nalanda, Anc. India, 12, 53- 57, 1956

57) Mahmud Syed Jafar, Metal Technology in Medieval India, Daya Publishing House, Delhi, 1988, Chapter 14 (PP – 115 – 126) is devoted to Bidri Metallurgy

58) Mukherji T.N "Bidriware" The Journal of Indian Art, No 6, 1885, London

59) Mehta Rustam J, The Handicrafts and Industrial Art of India,Taraporevala, Bombay, 1960

60) Mittal T.N "Bidriware "JIAI, Vol, 1, April, No.6, pp 41 – 44 and Plate I – II (Illustratrion of Lucknow Bidri), 1885

61) Navina Najat Haidar & Marika Sardar, Sultans of Deccan India, 1500 1700 – Opulence and Fantasy, Yale University Press, 2015

62) Neogi P, Copper in Ancient India, 1917 reprinted in 1979 by Janaki Prakashan, Patna,pp 10 – 42

63) Nandagopal Choodamani, Edited by M.L. Nigam,The Traditional Jewellary of Karnataka, in Decorative art of India – Salar Jung Museum, Hyderabad, 1987, PP. 195 – 202

64) Narayan Gita, "Crafts India", Crafts Council of India, Madras, 1986

65) Nagvi Shahir M, Bidriware with special reference to its collection in the Sate Museum, Lucknow", Journal of Indian Museums, Vol. XXVII, 1980, New Delhi

66) Pal M.K, Crafts and Craftsmen in Traditional India, Kanak Publication, New Delhi, 1978

67) Pant G.N Catalogue of Edged Arms and Armour in Salar Jung Museum, Salarjung Museum, Hyderabad, 1989

68) Proceedings and Transactions of the VII th All – India Oriental Conference, P.740

69) Rao S.R. Lothal – A Harappan Port – Town (1995 – 62) in 2 Volumes, Archaeological Survey of India, New Delhi,Vol. II 1985, P. 660 ,Chemicals Analyses of the Harappan Level Samples were provided by B.B.Lal

70) Rishikesh Bahadur Desai "Finding a foothold for a houry art, The Hindu, page – 6, July, 2 2004

71) Rishikesh Bahadur Desai "A Briton who introduced Bidriware to the world", The Hindu, Northern page, April 30, 2004

72) Rishikesh Bahadur Desai "Bidriware goes to New York", The Hindu, page – 4, Nov. 6, 2014

73) Srinivas Sirnoorkar, Essentially a Key Issue, Spectrum-Deccan Herald, 29 January 2008

74) Saraf D.N. "Indian Craft" Development and Potential, Vikas Publishing House,New Delhi 1982

75) Sen Sujit Narayan, Catalogue on Damascence and Bidri Art in the Indian Museum Indian Museum, Calcutta. 1983

76) Shanti Swarup, "Mughal Art-A Study in Handicrafts" Agam Kala Prakashan, New Delhi, 1996

77) Speight E.E "Bidriware" M.E.L.I.M .Press, Vaniyambadi,1938

78) Susan Stronge "Bidriware- Inlaid Metal Work from India", Victoria and Albert Museum, London,1985

79) Swarnakamal, Metallie, Art and Technology of Gujrat, Museum and Picture Gallery, Baroda, 1978, PP 36 – 37, 56-57, 104 – 105

80) Savitri Choudhury, Bidar, Bahamani Beauty, Magazine, Oct. 2002, PP. 1-5

81) T.V. Sivanandan, New York exhibition captures vignettes of Deccan's bygone era, The Hindu, April 27, 2015

82) T.V. Sivanandan, Tracing the history of Bidriware, The Hindu, January 24, 2012

83) T.V. Sivanandan, Ancient map of Bidar unearthed in London, The Hindu, Sept. 1, 2014

84) Tarikh – i – Firoz Shahi (Bibl.Ind) P.449

85) Werner O., Spektralanaivusche and Metallurgische Untersuchangen an Indischen Bronzen Lerden, Brill, 1972

86) Willies Lynn, Ancient Zinc – Lead – Silver Mining in Rajasthan, Interim Report, Bull Peak Dist. Mines, Hist. Soc. Ltd. 10(2) Winter PP 81-123, 1987

87) Whitehead's Catalogue of Coins in the Punjab Museum, P. IXXX VIII

88) Yazdani G, "Bidar-Its History and Monuments" Published under the special authority of His Exalted Highness the Nizam's Government, Oxford University Press, London, 1947

89) Zebrowski M, Decorative Art of the Mughal Period, The Arts of India, London, 1981

90) Zebrowski M, Bidri Metalware from Islamic Courts of India, Art East No. 1, 1982